ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಹಮದಾಬಾದ್‌ನಲ್ಲಿ ಐಪಿಎಲ್ ಫೈನಲ್ ಪಂದ್ಯ

ಈ ಬಾರಿಯ ಐಪಿಎಲ್ ಫೈನಲ್ ಪಂದ್ಯವನ್ನು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಸಲು ಬಿಸಿಸಿಐ ನಿರ್ಧರಿಸಿದೆ. ಕ್ವಾಲಿಫೈಯರ್-2 ಪಂದ್ಯಕ್ಕೂ ಅಹಮದಾಬಾದ್ ಆತಿಥ್ಯ ವಹಿಸಲಿದೆ. ಕ್ವಾಲಿಫೈಯರ್-1 ಮತ್ತು ಎಲಿಮಿನೇಟರ್ ಪಂದ್ಯಗಳು ಮುಲ್ಲನಪುರ ಕ್ರೀಡಾಂಗಣದಲ್ಲಿ ಮೇ 29 ಮತ್ತು ಮೇ 30ರಂದು ನಡೆಯಲಿವೆ. ಜೂನ್ 3ಕ್ಕೆ ಫೈನಲ್ ಪಂದ್ಯ ನಡೆಯಲಿದೆ. ಮೇ 23ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ರಾಯಲ್ ಆರ್‌ಸಿಬಿ ಮತ್ತು ಎಸ್‌ಆರ್‌ಎಚ್ ನಡುವಿನ ಪಂದ್ಯವನ್ನು ಮಳೆಯ ಕಾರಣಕ್ಕೆ ಲಖನೌಗೆ ಸ್ಥಳಾಂತರಿಸಲಾಗಿದೆ.

ರಾಜ್ಯದ ಎಲ್ಲ ಕುಟುಂಬಗಳಿಗೆ ಮನೆ, ಭೂಮಿಯ ಹಕ್ಕು ಪತ್ರ ವಿತರಣೆ: ಸಿಎಂ ಭರವಸೆ

ಹೊಸಪೇಟೆ ಸಮರ್ಪಣೆ ಸಂಕಲ್ಪ ಸಮಾವೇಶದಲ್ಲಿ ಸರಕಾರದ ಸಾಧನೆಗಳ ಅನಾವರಣ

ನಾಲ್ಕು ಲಕ್ಷಕ್ಕೂ ಹೆಚ್ಚು ಜನರು ಭಾಗಿ, ಕೇಂದ್ರ ಸರಕಾರದ ವಿರುದ್ಧ ಮುಗಿಬಿದ್ದ ನಾಯಕರು

ಭೂ ಹಕ್ಕು ಪತ್ರ ಆರನೇ ಗ್ಯಾರಂಟಿ

ಬೆಂಗಳೂರು/ವಿಜಯನಗರ: ರಾಜ್ಯ ಸರಕಾರಕ್ಕೆ ಎರಡು ವರ್ಷ ತುಂಬಿದ ಹಿನ್ನೆಲೆಯಲ್ಲಿ 'ಪ್ರಗತಿಯತ್ತ ಕರ್ನಾಟಕ ಸಮರ್ಪಣೆಯ ಸಂಕಲ್ಪ' ಸಮಾವೇಶ ಅಭೂತಪೂರ್ವ ಯಶಸ್ಸು ಕಂಡಿದ್ದು, ಕಾಂಗ್ರೆಸ್ ಹೈಕಮಾಂಡ್ ರಾಜ್ಯ ಸರಕಾರದ ಕಾರ್ಯವೈಖರಿಯನ್ನು ಹಾಡಿ ಹೊಗಳಿದೆ.

ರಾಜ್ಯ ಸರಕಾರಕ್ಕೆ ಎರಡು ವರ್ಷ ತುಂಬಿದ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಮಂಗಳವಾರ ನಡೆದ ಪ್ರಗತಿಯತ್ತ ಕರ್ನಾಟಕ ಸಮರ್ಪಣೆಯ ಸಂಕಲ್ಪ ಸಮಾವೇಶದಲ್ಲಿ ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಮಾತನಾಡಿ, ನಾವು ಚುನಾವಣೆ ಸಂದರ್ಭದಲ್ಲಿ ಕರ್ನಾಟಕ ಜನತೆಗೆ ನೀಡಿದ್ದ ಎಲ್ಲ ಪಂಚ ಗ್ಯಾರಂಟಿ ಯೋಜನೆಯ ಭರವಸೆ ಈಡೇರಿಸಿದ್ದೇವೆ. ಪಂಚ ಗ್ಯಾರಂಟಿ ಯೋಜನೆಯಡಿ ನಾವು ನೀಡುತ್ತಿರುವ ಹಣ ಜನರ ಶಿಕ್ಷಣ, ಆರೋಗ್ಯ ಮುಂತಾದವುಗಳಿಗೆ ಸದ್ಬಳಕೆಯಾಗುತ್ತಿದೆ. ಬಡವರು, ಹಿಂದುಳಿದವರು, ಬುಡಕಟ್ಟು ಸಮುದಾಯದವರಿಗೆ ನೀಡುತ್ತಿರುವ ನಮ್ಮ ಸರಕಾರದ ಹಣ ನೇರ ಖಾತೆ ಸೇರುತ್ತದೆ. ಅದೇ ಹಣ ಮಾರುಕಟ್ಟೆಯಲ್ಲಿ ಉತ್ಪಾದನೆ ಹೆಚ್ಚಿಸುತ್ತದೆ. ಸಾಮಾನ್ಯ ಜನರಿಗೆ ಕೊಂಡುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಿದೆ. ಇದರಿಂದ ಪ್ರತಿ ಗ್ರಾಮದಲ್ಲೂ ಹಣದ ವಹಿವಾಟು ಹೆಚ್ಚಳವಾಗುತ್ತಿದ್ದು, ಸರಕಾರದ ಆರ್ಥಿಕ ಸ್ಥಿತಿ ಸುಧಾರಣೆ ಆಗುತ್ತಿದೆ ಎಂದು ರಾಜ್ಯ ಸರಕಾರವನ್ನು ಕೊಂಡಾಡಿದರು.

ರಾಜ್ಯಸಭೆ ಪ್ರತಿಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ನಮ್ಮ ಪಕ್ಷದ ಸರಕಾರ ಅಧಿಕಾರಕ್ಕೆ ಬರುವಾಗ ಏನೇನು ಭರವಸೆಗಳನ್ನು ನೀಡಿದ್ದೇವೋ, ಅವೆಲ್ಲವುಗಳನ್ನೂ ಈಡೇರಿಸಿ, ಜನರಿಗೆ ಸವಲತ್ತುಗಳನ್ನು ಕೊಟ್ಟಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಹಭಾಗಿತ್ವದಲ್ಲಿ ರಾಜ್ಯ ಸರಕಾರ ಅತ್ಯುತ್ತಮವಾಗಿ ನಡೆಯುತ್ತಿದೆ ಎಂದು ಶಹಬ್ಬಾಸ್‌ಗಿರಿ ನೀಡಿದರು.

ಹೊಸಪೇಟೆಯಲ್ಲಿ ಹಮ್ಮಿಕೊಂಡಿದ್ದ ಪ್ರಗತಿಯತ್ತ ಕರ್ನಾಟಕ ಸಮರ್ಪಣೆಯ ಸಂಕಲ್ಪ ಸಮಾವೇಶದಲ್ಲಿ ಭೂ ಗ್ಯಾರಂಟಿಯ ಹಕ್ಕುಪತ್ರ ಪ್ರದರ್ಶಿಸಿದ ಕಾಂಗ್ರೆಸ್ ನಾಯಕರು.

> ರಾಜ್ಯದ ಜನತೆ ನಮ್ಮ ಮಾಲೀಕರು. ನಮ್ಮ ಮಾಲೀಕರಿಗೆ ನಾವು ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇವೆ. ನಿಮ್ಮ ಆಶೀರ್ವಾದ ಇರುವವರೆಗೂ ಬಿಜೆಪಿಯ ಸುಳ್ಳಿನ ರಾಶಿಗೆ ನಾವು ಹೆದರುವ, ಅಂಜುವ ಪ್ರಶ್ನೆಯೇ ಇಲ್ಲ.
> – ಸಿದ್ದರಾಮಯ್ಯ, ಸಿಎಂ

> ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇವೆ. ಸರಕಾರದ ಸಾಧನೆಯನ್ನು ಪ್ರತಿಪಕ್ಷಗಳು ಕಣ್ಣಲ್ಲಿ ನೋಡಲಾಗದೇ, ಟೀಕೆ ಮಾಡುತ್ತಿದ್ದಾರೆ. ಅವರು ಟೀಕೆ ಮಾಡುತ್ತಿರಲಿ, ನಾವು ಜನರ ಬದುಕು ಉಳಿಸುವ ಕೆಲಸ ಮಾಡಿಕೊಂಡು ಹೋಗುತ್ತೇವೆ.
> – ಡಿ.ಕೆ.ಶಿವಕುಮಾರ್, ಡಿಸಿಎಂ

> ಪಹಲ್ಗಾಮ್‌ನಲ್ಲಿ ದಾಳಿ ಭೀತಿ ಇದ್ದ ಕಾರಣದಿಂದಲೇ ಪ್ರಧಾನಿ ಮೋದಿ ತಮ್ಮ ನಿಗದಿತ ಕಾಶ್ಮೀರ ಭೇಟಿಯನ್ನು ರದ್ದು ಮಾಡಿದ್ದರು. ಮೋದಿ ಸರಕಾರ ಭದ್ರತೆ ನೀಡದಿರುವ ಕಾರಣಕ್ಕೆ ಪಹಲ್ಗಾಮ್‌ನಲ್ಲಿ ಭಾರತದ 26 ಅಮಾಯಕ ನಾಗರಿಕರ ಹತ್ಯೆಯಾಯಿತು. ಪ್ರವಾಸಿಗರಿಗೆ ಪೊಲೀಸ್, ಗಡಿ ಭದ್ರತಾ ಪಡೆಯ ರಕ್ಷಣೆ ನೀಡದೆ ಜೀವ ತೆಗೆದಿದ್ದು ಮೋದಿ ಸರಕಾರ. ಆದರೂ ಮೋದಿ ಇದರ ಬಗ್ಗೆ ಒಂದೂ ಮಾತು ಆಡಲಿಲ್ಲ. ಕೇವಲ ತಮಗೆ ತೋಚಿದ್ದನ್ನು ಹೇಳಿಕೊಂಡು ಹೋದರು. ನಾನು ಕೇಳಿದ ಒಂದೇ ಒಂದು ಪ್ರಶ್ನೆಗೆ ಇದುವರೆಗೂ ಉತ್ತರ ನೀಡಿಲ್ಲ.
> – ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

- ಬಿರುಸಿನ ಮಳೆ ನಡುವೆ ಕಾಂಗ್ರೆಸ್ ಸಮರ್ಪಣಾ ಸಂಕಲ್ಪ ಸಮಾವೇಶ
- ಮಳೆಯಿಂದಾಗಿ ಹೆಲಿಕ್ಯಾಪ್ಟರ್ ಬದಲು ರಸ್ತೆ ಮಾರ್ಗವಾಗಿ ಬಂದ ಸಿಎಂ
- ರಾಜ್ಯದ ಮೂಲೆ ಮೂಲೆಗಳಿಂದ ಬಂದ ಜನ, ವಾಹನ ಸಂಚಾರ ದಟ್ಟಣೆ
- 1,11,111 ಮಂದಿಗೆ ಭೂ ಗ್ಯಾರಂಟಿಯ ಹಕ್ಕುಪತ್ರ ವಿತರಣೆ
- ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಪ್ರತಿಮೆ ಲೋಕಾರ್ಪಣೆ

ಬಿಜೆಪಿ ಕಮಿಷನ್ ಸಾಬೀತು: ಸಿಎಂ

ಹಿಂದಿನ ಬಿಜೆಪಿ ಸರಕಾರ ಮೇಲೆ ಶೇ.40 ಕಮಿಷನ್ ಆರೋಪ ಇತ್ತು. ನಾವು ಇದರ ವಿರುದ್ಧ ಹೋರಾಟ ಮಾಡಿದೆವು. ಅಧಿಕಾರಕ್ಕೆ ಬಂದ ಬಳಿಕ ತನಿಖೆಗೆ ನಾಗಮೋಹನ್ ದಾಸ್ ಸಮಿತಿ ರಚಿಸಿದೆವು. ಸಮಿತಿ ಕೊಟ್ಟಿರುವ ವರದಿಯಲ್ಲಿ ಕಮಿಷನ್ ವ್ಯವಹಾರ ಸಾಬೀತಾಗಿದೆ. 1.22 ಕೋಟಿ ಕುಟುಂಬಗಳ ಯಜಮಾನಿಯರಿಗೆ ಗೃಹಲಕ್ಷ್ಮಿ ಯೋಜನೆಯಡಿ 2000 ರುಪಾಯಿ ಕೊಡುತ್ತಿದ್ದೇವೆ. 1.30 ಕೋಟಿ ಕುಟುಂಬಗಳಿಗೆ ಗೃಹ ಜ್ಯೋತಿ ಯೋಜನೆಯಡಿ ಅನುಕೂಲ ಒದಗಿಸಿದ್ದೇವೆ. ಜತೆಗೆ ಇಡೀ ರಾಜ್ಯದ ಮಹಿಳೆಯರಿಗೆ ಶಕ್ತಿ ಯೋಜನೆಯಡಿ ಉಚಿತ ಪ್ರಯಾಣದ ವ್ಯವಸ್ಥೆ ಮಾಡಿದ್ದೇವೆ. ಚುನಾವಣೆ ವೇಳೆ ನಾವು ಕೊಟ್ಟಿದ್ದ ಭರವಸೆಗಳಲ್ಲಿ ಐದು ಗ್ಯಾರಂಟಿಗಳ ಜತೆಗೆ 142 ಭರವಸೆಗಳನ್ನು ಎರಡು ವರ್ಷಗಳಲ್ಲಿ ಪೂರೈಸಿದ್ದೇವೆ. ಮುಂದಿನ ಮೂರು ವರ್ಷಗಳಲ್ಲಿ ಉಳಿದ ಭರವಸೆ ಈಡೇರಿಸುತ್ತೇವೆ ಎಂದು ಸಿಎಂ ಹೇಳಿದರು.

ಗ್ಯಾರಂಟಿ ಯೋಜನೆ ನಿಲ್ಲದು: ಡಿಕೆಶಿ

ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ನಮಗೆ ಅಧಿಕಾರ ನೀಡಿ ರಾಜ್ಯದ ಸೇವೆ ಮಾಡಲು ಆಶೀರ್ವಾದ ಮಾಡಿದ ಜನರ ಋಣ ತೀರಿಸಲು ನಮ್ಮ ಸರಕಾರ ಆರನೆಯದಾಗಿ ಭೂ ಗ್ಯಾರಂಟಿ ಯೋಜನೆ ನೀಡುತ್ತಿದೆ. ಎಐಸಿಸಿ ಅಧ್ಯಕ್ಷರ ನಿರ್ದೇಶನದಂತೆ ಕಾಂಗ್ರೆಸ್ ಅಧಿಕಾರದಲ್ಲಿರುವವರೆಗೂ ಗ್ಯಾರಂಟಿ ಯೋಜನೆಗಳು ನಿಲ್ಲಿಸುವುದಿಲ್ಲ ಎಂದು ತಿಳಿಸಿದರು. ನಾವಿಂದು ಎರಡು ವರ್ಷಗಳ ಸಂಭ್ರಮಾಚರಣೆ ಮಾಡಲು ಇಲ್ಲಿಗೆ ಬಂದಿಲ್ಲ. ಕರ್ನಾಟಕ ರಾಜ್ಯದ ಜನರ ಋಣ ತೀರಿಸಲು ಸಮರ್ಪಣೆಯ ಸಂಕಲ್ಪ ಕಾರ್ಯಕ್ರಮ ಮಾಡುತ್ತಿದ್ದೇವೆ. ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ರಾಹುಲ್ ಗಾಂಧಿ ಅವರ ನಾಯಕತ್ವದಲ್ಲಿ 136 ಕ್ಷೇತ್ರಗಳಲ್ಲಿ ಶಾಸಕರನ್ನು ಆಯ್ಕೆ ಮಾಡಿ ನಮಗೆ ಆಶೀರ್ವಾದ ಮಾಡಿದಿರಿ. ನಿಮ್ಮ ಋಣ ತೀರಿಸಲು ಕೊಟ್ಟ ಮಾತಿನಂತೆ ಐದು ಗ್ಯಾರಂಟಿ ಯೋಜನೆ ಜಾರಿ ಮಾಡಿ, ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆ ನೀಡುವ ಮೂಲಕ ನಮ್ಮ ಸರಕಾರ ಇತಿಹಾಸ ಬರೆಯುತ್ತಿದೆ ಎಂದರು.

ಬೆಂಗಳೂರಿನಲ್ಲಿ ಭಾರಿ ಮಳೆಗೆ ರಸ್ತೆಗಳು ಜಲಾವೃತ

ಇನ್ನೂ ಒಂದು ವಾರ ಮಳೆ

ಬೆಂಗಳೂರು: ರಾಜ್ಯಾದ್ಯಂತ ಕಳೆದ ಮೂರು ದಿನಗಳಿಂದ ಅಬ್ಬರದ ಮಳೆಯಾಗುತ್ತಿದ್ದು, ಭಾನುವಾರ ರಾತ್ರಿಯಿಂದ ದಾಖಲೆಯ ಮಳೆಯ ಜತೆಗೆ ಭಾರಿ ಅವಾಂತರ ಸೃಷ್ಟಿಯಾಗಿದೆ.

ಭಾನುವಾರ, ಸೋಮವಾರ ಮಾತ್ರವಲ್ಲದೇ ಮಂಗಳವಾರವೂ ರಾಜ್ಯದ ಬಹುತೇಕ ಕಡೆಗಳಲ್ಲಿ ವರುಣ ಅಬ್ಬರಿಸಿ ಬೊಬ್ಬಿರಿಯುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಜನರು ಮಳೆ ಯಾವಾಗ ನಿಲ್ಲುತ್ತದೆ ಎಂದು ಎದುರು ನೋಡುವಂತಹ ಸ್ಥಿತಿ ನಿರ್ಮಾಣವಾಗಿದೆ.

ಹವಾಮಾನ ಇಲಾಖೆ ವರದಿಯ ಪ್ರಕಾರ, ಅರಬ್ಬಿ ಸಮುದ್ರದಲ್ಲಿ ಉಂಟಾಗಿರುವ ವಾಯುಭಾರ ಕುಸಿತದಿಂದಾಗಿ ರಾಜ್ಯಾದ್ಯಂತ ಮುಂದಿನ ಮೂರು ದಿನಗಳ ಕಾಲ ಗಾಳಿ ಸಹಿತ ಭಾರೀ ಮಳೆಯಾಗಲಿದ್ದು, ಚಂಡಮಾರುತವಾಗಿ ಪರಿವರ್ತನೆಯಾಗುವ ಸಾಧ್ಯತೆ ಇದೆ. ಹವಾಮಾನ ಇಲಾಖೆಯು ರಾಜ್ಯದ ವಿವಿಧ ಜಿಲ್ಲೆಗಳಿಗೆ ರೆಡ್, ಆರೆಂಜ್ ಮತ್ತು ಯೆಲ್ಲೋ ಅಲರ್ಟ್ ಘೋಷಿಸಿದೆ. ಕರಾವಳಿ, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ. ಬೆಂಗಳೂರಿನಲ್ಲಿ ಮೇ 21ರಂದು ಭಾರಿ ಮಳೆಯ ಹಿನ್ನೆಲೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಪುಟಿನ್ ಟ್ರಂಪ್ ಮಾತು

ವಾಷಿಂಗ್ಟನ್: ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದು, ಉಕ್ರೇನ್ ವಿರುದ್ಧದ ಯುದ್ಧ ನಿಲ್ಲಿಸುವಂತೆ ಆಗ್ರಹಿಸಿದ್ದಾರೆ. 30 ದಿನಗಳ ಕದನ ವಿರಾಮಕ್ಕೆ ಪುಟಿನ್ ಒಪ್ಪಿಗೆ ಸೂಚಿಸುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದು ಶ್ವೇತಭವನದ ಅಧಿಕಾರಿ ತಿಳಿಸಿದ್ದಾರೆ.

ಮತ್ತೆ ಕೋವಿಡ್ ಭೀತಿ

ದೆಹಲಿ: ಕೋವಿಡ್ -19 ಮತ್ತೊಮ್ಮೆ ತಲೆ ಎತ್ತಿದೆ., ರಾಜ್ಯದಲ್ಲಿ 8 ಸೇರಿ ದೇಶಾದ್ಯಂತ 257 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಮುಂಬೈನ ಆಸ್ಪತ್ರೆಯಲ್ಲಿ 2 ಕೋವಿಡ್ ಸಂಬಂಧಿತ ಸಾವಿನ ಪ್ರಕರಣಗಳು ವರದಿಯಾಗಿವೆ. ಸಿಂಗಾಪುರ, ಹಾಂಗ್‌ಕಾಂಗ್ ಮತ್ತು ಥೈಲ್ಯಾಂಡ್‌ನಲ್ಲೂ ಅತಿ ಹೆಚ್ಚು ಪ್ರಕರಣಗಳು ವರದಿಯಾಗಿವೆ.

ಕೊತ್ತೂರು ವಿರುದ್ಧ ದೂರು

ಬೆಂಗಳೂರು: ಕೋಲಾರ ವಿಧಾನಸಭಾ ಕ್ಷೇತ್ರದ ಶಾಸಕ ಕೊತ್ತೂರು ಮಂಜುನಾಥ್ ಅವರು ಭಾರತೀಯ ಸೇನೆಯ ಆಪರೇಷನ್ ಸಿಂದೂರ ಕಾರ್ಯಾಚರಣೆಯ ಬಗ್ಗೆ ನೀಡಿದ ವಿವಾದಾತ್ಮಕ ಹೇಳಿಕೆಗೆ ಸಂಬಂಧಿಸಿದಂತೆ ಬನಶಂಕರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸ್ಪೀಕರ್ ನಿಲುವಿಗೆ ಬಿಜೆಪಿ ಶಾಸಕರ ಆಕ್ರೋಶ

ಅಮಾನತು ವಿರುದ್ಧ ಹೈಕೋರ್ಟ್‌ಗೆ ಮೊರೆ

ಬೆಂಗಳೂರು: ಕಲಾಪದ ಸಂದರ್ಭದಲ್ಲಿ ಅನುಚಿತವಾಗಿ ವರ್ತನೆ ತೋರಿದ ಆರೋಪದ ಹಿನ್ನೆಲೆಯಲ್ಲಿ ವಿಧಾನಸಭೆ ಯಿಂದ 18 ಶಾಸಕರನ್ನು ಸ್ಪೀಕರ್ ಯು.ಟಿ.ಖಾದರ್ ಅಮಾನತುಗೊಳಿಸಿರುವುದನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಲು ರಾಜ್ಯ ಬಿಜೆಪಿ ನಿರ್ಧರಿಸಿದೆ.

ಮಾರ್ಚ್ 21ರಂದು ವಿಧಾನಸಭೆಯ ಕಲಾಪದ ಕೊನೆಯ ದಿನದ ವೇಳೆ ಆಶಿಸ್ತು ಮತ್ತು ಸ್ಪೀಕರ್‌ಗೆ ಅಗೌರವ ತೋರಿದ ಆರೋಪದ ಮೇಲೆ ಬಿಜೆಪಿ ಶಾಸಕರಾದ ದೊಡ್ಡನಗೌಡ ಪಾಟೀಲ್, ಸಿ.ಎನ್.ಅಶ್ವಥ್ ನಾರಾಯಣ್, ಎಸ್.ಆರ್.ವಿಶ್ವನಾಥ್, ಬಿ.ಎ.ಬಸವರಾಜು, ಎಂ.ಆರ್.ಪಾಟೀಲ್, ಚನ್ನಬಸಪ್ಪ, ಬಿ. ಸುರೇಶ್ ಗೌಡ, ಉಮಾನಾಥ ಕೋಟ್ಯಾನ್, ಶರಣು ಸಲಗರ, ಡಾ.ಶೈಲೇಂದ್ರ ಬೆಲ್ದಾಳೆ, ಸಿ.ಕೆ.ರಾಮಮೂರ್ತಿ, ಯಶ್‌ಪಾಲ್ ಸುವರ್ಣ, ಡಿ.ಲಮಾಣಿ, ಮುನಿರತ್ನ ಮತ್ತು ಬಸವರಾಜ ಮತ್ತಿಮೂಡ್ ಅವರನ್ನು ಆರು ತಿಂಗಳು ಅಮಾನತ್ತುಗೊಳಿಸಿ, ವಿಧಾನಸಭೆಯ ಕಲಾಪಗಳಿಗೆ ಹಾಜರಾಗುವುದನ್ನು ನಿಷೇಧಿಸಲಾಗಿತ್ತು. ಅಲ್ಲದೆ, ಸಮಿತಿಯ ಯಾವುದೇ ಸಭೆಗಳಲ್ಲಿ ಭಾಗವಹಿಸುವುದನ್ನು ನಿರ್ಬಂಧಿಸಲಾಗಿತ್ತು.

> ಸ್ಪೀಕರ್‌ಗೆ ಒಂದಕ್ಕಿಂತ ಹೆಚ್ಚು ಅಧಿವೇಶನಗಳಿಗೆ ಶಾಸಕರನ್ನು ಅಮಾನತುಗೊಳಿಸುವ ಅಧಿಕಾರವಿಲ್ಲ. ಸಮಿತಿ ಸಭೆಗಳಿಗೆ ಹಾಜರಾಗುವುದು ಸೇರಿದಂತೆ ಶಾಸಕರು ತಮ ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದನ್ನು ಸ್ಪೀಕರ್ ನಿರ್ಬಂಧಿಸಲು ಸಾಧ್ಯವಿಲ್ಲ. ನಾವು ಸ್ಪೀಕರ್ ಅವರನ್ನು ಸಂಪರ್ಕಿಸುತ್ತಿದ್ದೇವೆ, ಆದರೆ ಅವರು ಪ್ರತಿಕ್ರಿಯಿಸುತ್ತಿಲ್ಲ. ಸ್ಪೀಕರ್ ಕಾಂಗ್ರೆಸ್ ಪಕ್ಷದ ವಕ್ತಾರರಂತೆ ವರ್ತಿಸುತ್ತಾರೆ. ಸೆಪ್ಟೆಂಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಮೂರು ದಿನಗಳ ಅಖಿಲ ಭಾರತ ಸ್ಪೀಕರ್‌ಗಳ ಸಮ್ಮೇಳನದಲ್ಲಿ ಸ್ಪೀಕರ್ ವಿರುದ್ಧ ಪ್ರತಿಭಟಿಸಲು ಬಿಜೆಪಿ ಯೋಜಿಸುತ್ತಿದೆ.
> – ಅರವಿಂದ್ ಬೆಲ್ಲದ್
> ವಿಧಾನಸಭೆಯ ಪ್ರತಿಪಕ್ಷದ ಉಪನಾಯಕ

ಡಿ ಗ್ಯಾಂಗ್ ವಿರುದ್ಧ ಹೆಚ್ಚುವರಿ ಆರೋಪ

ನ್ಯಾಯಾಲಯದ ಎದುರು ದರ್ಶನ್, ಪವಿತ್ರಾ ಗೌಡ ಸೇರಿ ಆರೋಪಿಗಳು ಹಾಜರು

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಯಾಗಿರುವ ನಟ ದರ್ಶನ್, ನಟಿ ಪವಿತ್ರಾ ಗೌಡ ಸೇರಿ ಆರು ಆರೋಪಿ ಗಳು ನಗರದ 57ನೇ ಸಿಸಿಎಚ್ ನ್ಯಾಯಾ ಲಯಕ್ಕೆ ಮಂಗಳವಾರ ಹಾಜರಾಗಿದ್ದರು. ನ್ಯಾಯಾಲ ಯವು ಜುಲೈ 10ಕ್ಕೆ ವಿಚಾರಣೆ ಮುಂದೂಡಿದೆ. ಪ್ರಕರಣದಲ್ಲಿ ಎ11 ಆರೋಪಿ ನಾಗರಾ ಜುಗೆ ಪ್ರಕರಣದ ಮೇಲೆ ಹೊಸಪೇಟೆಗೆ ತೆರಳಲು ಅನುಮತಿ ನೀಡಿತು. ಪವಿತ್ರಾ ಗೌಡಗೆ 15 ದಿನಗಳ ಕಾಲ ಹೊರರಾಜ್ಯಕ್ಕೆ ತೆರಳಲು ಕೋರ್ಟ್ ಅವಕಾಶ ನೀಡಿದೆ. ಕಳೆದ ಬಾರಿ ಅನಾರೋಗ್ಯದ ಕಾರಣ ಹೇಳಿ ದರ್ಶನ್ ನ್ಯಾಯಾಲಯಕ್ಕೆ ಹಾಜರಾಗಿ ರಲಿಲ್ಲ. ಹಾಜರಾಗದ್ದಕ್ಕೆ ಕೋರ್ಟ್ ದರ್ಶನ್ ಅವರನ್ನು ತರಾಟೆಗೆ ತೆಗೆದುಕೊಂಡಿದೆ.

ಹೆಚ್ಚುವರಿ ಚಾರ್ಜ್‌ಶೀಟ್‌ನಲ್ಲಿ ಏನಿದೆ?

ಜಾಮೀನು ಪಡೆದು ಹೊರಗೆ ಬಂದಿರುವ ದರ್ಶನ್ ಆ್ಯಂಡ್ ಗ್ಯಾಂಗ್‌ಗೆ ಪೊಲೀಸರು ಮತ್ತೊಂದು ಶಾಕ್ ಕೊಟ್ಟಿದ್ದಾರೆ. ರೇಣುಕಾಸ್ವಾಮಿ ಕೊಲೆ ಕೇಸ್‌ಗೆ ಸಂಬಂಧಿಸಿದಂತೆ ಪೊಲೀಸರು ಈಗಾಗಲೇ ಸಾವಿರಾರು ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದ್ದಾರೆ. ಇದೀಗ ತನಿಖಾ ತಂಡ ಕೋರ್ಟ್‌ಗೆ ಮತ್ತೊಂದು ಹೆಚ್ಚುವರಿ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದೆ. ಇದರಿಂದ ನಟ ದರ್ಶನ್‌ಗೆ ಮತ್ತಷ್ಟು ಸಂಕಷ್ಟ ಎದುರಾಗುವ ಸಾಧ್ಯತೆ ಇದೆ. ಆರೋಪಿಗಳ ವಿರುದ್ಧ ಸಿಕ್ಕಿರುವ ಕೆಲವೊಂದು ಸಾಕ್ಷ್ಯಗಳನ್ನು ಈ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿದ್ದು, ಕೃತ್ಯಕ್ಕೆ ಬಳಸಿದ ವಾಹನ ಗಳ ರಿಲೀಸ್ ಪ್ರಕ್ರಿಯೆ ದಾಖಲೆಗಳನ್ನು ಒಳಗೊಂಡ ದೋಷಾರೋಪ ಪಟ್ಟಿ ಇದಾಗಿದೆ ಎಂದು ತಿಳಿದು ಬಂದಿದೆ. ಕೆಲ ಎಫ್‌ಎಸ್‌ಎಲ್ ವರದಿ ಹಾಗೂ ಕೆಲ ಇತರೆ ದಾಖಲಾತಿಗಳ ಸಹಿತ ತನಿಖಾ ತಂಡ ಹೆಚ್ಚುವರಿ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದೆ.

ಫೋನ್ ನಂಬರ್‌ಗೆ ಪವಿತ್ರಾ ಹಠ

ಆರೋಪಿಗಳಾದ ನಟ ದರ್ಶನ್ ಮತ್ತು ಪವಿತ್ರಾಗೌಡ ಕೋರ್ಟ್‌ನಲ್ಲಿ ವಿಚಾರಣೆ ಮುಗಿಸಿ ಲಿಫ್ಟ್‌ನಲ್ಲಿ ಬರುವಾಗ ಇಬ್ಬರೂ ಮುಖಾಮುಖಿಯಾದರು. ಈ ವೇಳೆ ಫೋನ್ ನಂಬರ್ ಕೊಡುವಂತೆ ಪವಿತ್ರಾ ಗೌಡ ಹಠ ಮಾಡಿ ನಂಬರ್ ಬೇಕೇ ಬೇಕು ಎಂದು ದುಂಬಾಲು ಬಿದ್ದರು. ಕೈಹಿಡಿದು ಫೋನ್ ನಂಬರ್ ನೀಡುವಂತೆ ಒತ್ತಾಯಿಸಿದಾಗ ತನ್ನ ಫೋನ್ ನಂಬರ್ ಅನ್ನು ದರ್ಶನ್, ಪವಿತ್ರಾ ಅವರ ಮೊಬೈಲ್ ಪಡೆದುಕೊಂಡು ಡಯಲ್ ಮಾಡಿಕೊಟ್ಟಿದ್ದಾರೆ. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿ ಬಿಡುಗಡೆಯಾದ ಬಳಿಕ ದರ್ಶನ್ ಮತ್ತು ಪವಿತ್ರಾ ಗೌಡ ದೂರವಾಗಿ ಅಂತರ ಕಾಯ್ದುಕೊಂಡಿದ್ದರು.

ಚಿನ್ನ ಕಳ್ಳಸಾಗಣೆ ಆರೋಪದಲ್ಲಿ ಜೈಲು ಸೇರಿದ್ದ ನಟಿ | ಷರತ್ತುಗಳನ್ನು ವಿಧಿಸಿದ ನ್ಯಾಯಾಲಯ

ರನ್ಯಾಗೆ ಜಾಮೀನು, ಬಿಡುಗಡೆ ಇಲ್ಲ

ಬೆಂಗಳೂರು: ದುಬೈನಿಂದ ಚಿನ್ನ ಕಳ್ಳಸಾಗಣೆ ಆರೋಪದಲ್ಲಿ ಬಂಧನವಾಗಿದ್ದ ನಟಿ ರನ್ಯಾ ರಾವ್ ಮತ್ತಿತರರಿಗೆ ನಗರದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯ ಮಂಗಳವಾರ ಜಾಮೀನು ಮಂಜೂರು ಮಾಡಿದೆ. ಹೀಗಿದ್ದರೂ ಕಾಫಿಪೋಸಾ ಕಾಯ್ದೆಯಡಿ ಪ್ರಕರಣವಿರುವುದರಿಂದ ಬಿಡುಗಡೆಯ ಭಾಗ್ಯವಿಲ್ಲದಂತಾಗಿದೆ.

ಅಕ್ರಮ ಚಿನ್ನ ಕಳ್ಳಸಾಗಣೆ ಆರೋಪದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ರನ್ಯಾ ರಾವ್, ತರುಣ್ ಕೊಂಡಾರು ರಾಜು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿರುವ ನ್ಯಾಯಾಧೀಶರು ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿದ್ದಾರೆ. ಆದರೆ, ರನ್ಯಾ ರಾವ್ ವಿರುದ್ಧ ಕೇಂದ್ರೀಯ ಗುಪ್ತಚರ ಬ್ಯೂರೋ (ಸಿಇಐಬಿ) ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯಿದೆ (ಕಾಫಿಪೋಸಾ) ಅಡಿಯಲ್ಲಿ ಬಂಧನ ಆದೇಶ ಹೊರಡಿಸಿರುವುದರಿಂದ ರನ್ಯಾ ರಾವ್ ಸದ್ಯಕ್ಕೆ ಬಿಡುಗಡೆ ಭಾಗ್ಯ ಲಭ್ಯವಾಗಿಲ್ಲ.

ಅಲ್ಲದೆ, ಅಕ್ರಮ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಅಧಿಕಾರಿಗಳು ಆರೋಪಪಟ್ಟಿ ಸಲ್ಲಿಸದ ಹಿನ್ನೆಲೆಯಲ್ಲಿ ಡೀಫಾಲ್ಟ್ ಜಾಮೀನು ಮಂಜೂರು ಮಾಡಲಾಗಿದೆ. ಇಬ್ಬರೂ ಆರೋಪಿಗಳು ತಲಾ ಎರಡು ಲಕ್ಷ ರು.ಗಳ ಬಾಂಡ್, ಶ್ಯೂರಿಟಿ ನೀಡಬೇಕು, ನ್ಯಾಯಾಲಯದ ಅನುಮತಿ ಇಲ್ಲದೇ ದೇಶ ಬಿಟ್ಟು ತೆರಳುವಂತಿಲ್ಲ, ಹಾಗೂ ತನಿಖೆಗೆ ಸಹಕರಿಸಬೇಕು, ಸಾಕ್ಷ್ಯಗಳ ನಾಶಕ್ಕೆ ಮುಂದಾಗಬಾರದು ಎಂಬುದಾಗಿ ಷರತ್ತುಗಳನ್ನು ವಿಧಿಸಿ ನ್ಯಾಯಪೀಠ ಆದೇಶ ಹೊರಡಿಸಿದೆ.

ವಿಚಾರಣೆ ಮುಂದೂಡಿದ್ದ ಹೈಕೋರ್ಟ್
ರನ್ಯಾ ರಾವ್ ವಿರುದ್ಧ ಕಾಫಿಪೋಸಾ ಕಾಯಿದೆಯಡಿ ಬಂಧನ ಆದೇಶ ಹೊರಡಿಸಿರುವ ಕ್ರಮವನ್ನು ಪ್ರಶ್ನಿಸಿ ರನ್ಯಾರಾವ್ ಅವರ ತಾಯಿ ಎಚ್.ಪಿ.ರೋಹಿಣಿ ಅವರು ಹೈಕೋರ್ಟ್‌ಗೆ ಹೆಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿ ಸಂಬಂಧ ಕೇಂದ್ರ ಸರಕಾರ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಕೋರಿದ ಹಿನ್ನೆಲೆಯಲ್ಲಿ ವಿಚಾರಣೆ ಮುಂದೂಡಿತ್ತು.

ಷರತ್ತುಗಳೇನು?

- 2 ಲಕ್ಷ ರು.ಗಳ ಎರಡು ಬಾಂಡ್‌ಗಳು ಹಾಗೂ ಇಬ್ಬರಿಂದ ಶ್ಯೂರಿಟಿ
- ಯಾವುದೇ ಕಾರಣಕ್ಕೂ ದೇಶ ಬಿಟ್ಟು ಹೋಗಬಾರದು
- ಮುಂದೆ ಯಾವತ್ತೂ ಇಂಥ ಪ್ರಕರಣಗಳಲ್ಲಿ ತೊಡಗಿಸಿಕೊಳ್ಳಬಾರದು

ಪ್ರಕರಣದ ವಿವರ

ಮಾ.3ರಂದು ದುಬೈನಿಂದ ಬೆಂಗಳೂರಿಗೆ ಆಗಮಿಸುತ್ತಿದ್ದ ರನ್ಯಾ ರಾವ್ ಅವರನ್ನು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಂದಾಯ ಗುಪ್ತಚರ ನಿರ್ದೇಶನಾಲಯ ಅಧಿಕಾರಿಗಳು ವಶಕ್ಕೆ ಪಡೆದಿದ್ದರು. ಈ ವೇಳೆ ರನ್ಯಾ ಬಳಿ 12.56 ಕೋಟಿ ರು. ಮೌಲ್ಯದ ಚಿನ್ನ ದೊರೆತಿತ್ತು. ಬಳಿಕ ಅವರ ಮನೆಯಲ್ಲಿ ಶೋಧ ಕಾರ್ಯಾಚರಣೆ ನಡೆಸಿದ ಸಂದರ್ಭದಲ್ಲಿ ಕೋಟ್ಯಂತರ ಮೌಲ್ಯದ ಚಿನ್ನಾಭರಣ ಮತ್ತು ಅಪಾರ ಪ್ರಮಾಣದ ನಗದು ಪತ್ತೆಯಾಗಿತ್ತು.

ಸೊಂಪಾದ ಪುಟಗಳು



ಭಯಾನಕ ಸ್ಫೋಟಕವು ನಂಬಿಕೆಯ ಹೃದ್ರೋಗ ಔಷಧವಾದಾಗ...!
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ಆರತಿ ನೆಪದಲ್ಲಾದರೂ ನಮ್ಮ ನದಿಗಳು ಸ್ವಚ್ಛತೆ ಕಾಣಲಿ !
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಜೀವನದಲ್ಲಿ ಏನೇ ಆಗಲಿ, ಯಾವ ಸಂದರ್ಭದಲ್ಲೂ ನಿಮ್ಮ ಮನಸ್ಸಿನ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳಬಾರದು. ಅಂಥ ಪ್ರಸಂಗ ಬಂದೇ ಬರುತ್ತದೆ. ಆಗ ಒತ್ತಡಕ್ಕೆ ಒಳಗಾಗಬಾರದು. ನಿಮ್ಮ ಮನಸ್ಸು ಏನನ್ನು ಹೇಳುತ್ತದೋ ಹಾಗೇ ಮಾಡಿ.

ವಕ್ರತುಂಡೋಕ್ತಿ



ಸ್ವಚ್ಛವಾದ ಬಟ್ಟೆಯನ್ನೇ ಧರಿಸಬೇಕು. ಆದರೆ ಈ ಮಾತು ಜೀನ್ಸ್ ಪ್ಯಾಂಟಿಗೆ ಅನ್ವಯಿಸುವುದಿಲ್ಲ.

ಪರಮಾಣು ವಿಜ್ಞಾನಿ ಶ್ರೀನಿವಾಸನ್ ನಿಧನ

ಮುಂಬೈ: ಭಾರತದ ಪರಮಾಣು ವಿದ್ಯುತ್ ಕ್ಷೇತ್ರದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಪರಮಾಣು ಶಕ್ತಿ ಆಯೋಗದ ಮಾಜಿ ಅಧ್ಯಕ್ಷ ಡಾ. ಎಂ.ಆರ್.ಶ್ರೀನಿವಾಸನ್ (95) ಮಂಗಳವಾರ ನಿಧನರಾಗಿದ್ದಾರೆ.

ಭೌತಶಾಸ್ತ್ರಜ್ಞ ನಾರ್ಲಿಕರ್ ಇನ್ನಿಲ್ಲ

ಮುಂಬೈ: ಖ್ಯಾತ ಭೌತ ವಿಜ್ಞಾನಿ ಮತ್ತು ಲೇಖಕ ಜಯಂತ್ ನಾರ್ಲಿಕರ್ (86) ಮಂಗಳವಾರ ನಿಧನರಾಗಿದ್ದಾರೆ. ನಾರ್ಲಿಕರ್ ಅವರು ಭೌತ ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಅಸಾಧಾರಣ ಕೊಡುಗೆಗಳು, ವಿಜ್ಞಾನವನ್ನು ಜನಪ್ರಿಯಗೊಳಿಸಲು ಮತ್ತು ಮೊದಲ ಹಂತದ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಲು ಶ್ರಮಿಸಿದ್ದರು.

ರಾಜಣ್ಣ, ಚುನಾವಣೆ ರಾಜಕೀಯಕ್ಕೆ ಬೈಬೈ

ಮೈಸೂರು: ಚುನಾವಣಾ ರಾಜಕೀಯಕ್ಕೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ನಿವೃತ್ತಿ ಘೋಷಣೆ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ 75 ವರ್ಷ ಆಯ್ತು, ಮುಂದೆ ಚುನಾವಣೆಗೆ ಸ್ಪರ್ಧೆ ಮಾಡುವುದಿಲ್ಲ. ಆದರೆ ಸಹಕಾರಿ ಕ್ಷೇತ್ರ, ಸಕ್ರಿಯ ರಾಜಕಾರಣದಲ್ಲಿ ಇರುತ್ತೇನೆ ಎಂದು ಹೇಳಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ನಗರದಲ್ಲಿ ಭಾರೀ ಮಳೆ, ಜಲಾವೃತವಾದ ಚಿನ್ನಸ್ವಾಮಿ ಸ್ಟೇಡಿಯಂ
ಸುದ್ದಿ

ಮೇ 23ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು: ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭ ಮೇ 23 ರಂದ ಸಂಜೆ 5 ಗಂಟೆಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ 2022-23 ಮತ್ತು 2023-24ನೇ ಸಾಲಿನ ಗೌರವ ಪ್ರಶಸ್ತಿ, 51-52ನೇ ವಾರ್ಷಿಕ ಕಲಾ ಬಹುಮಾನ, 2022-23ನೇ ಸಾಲಿನ ಪುಸ್ತಕ ಬಹುಮಾನ, 2021-22 ಹಾಗೂ 2022-23 ನೇ ಸಾಲಿನ ವರ್ಣ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ.ಎಸ್. ತಂಗಡಗಿ, ಶಾಸಕ ಡಾ.ಉದಯ್. ಬಿ.ಗರುಡಾ ಚಾರ್, ಸಂಸದ ತೇಜಸ್ವಿ ಸೂರ್ಯ, ಅಕಾಡೆಮಿ ಅಧ್ಯಕ್ಷ ಪ.ಸ.ಕುಮಾರ್, ನಾಡೋಜ ಬರಗೂರು ರಾಮಚಂದ್ರಪ್ಪ, ಹಿಂದೂ ಧಾರ್ಮಿಕ ದತ್ತಿ ಇಲಾಖೆ ಆಯುಕ್ತ ಡಾ.ಎಂ.ವಿ.ವೆಂಕಟೇಶ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 (2002 ರ 54) (''ಹೇಳಿದ ಕಾಯಿದೆ'') ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 (''ಹೇಳಿದ ನಿಯಮಗಳು'')ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **11.11.2021** ರಂದು ಕರೆದು ಸಾಲಗಾರ **ಜೈಶಂಕರ್ ಬಿ ಮತ್ತು ಗಿರಿಜಮ್ಮ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ಸದರಿ ಸೌಲಭ್ಯಕ್ಕೆ ದಿನಾಂಕ **08.11.2021** ರ ವರೆಗೆ **ರೂ. 10,64,448.35 (ಹತ್ತು ಲಕ್ಷ ಅರವತ್ತನಾಲ್ಕು ಸಾವಿರದ ನಾಲ್ಕುನೂರ ನಲವತ್ತೆಂಟು ರೂಪಾಯಿಗಳು ಮತ್ತು ಮೂವತ್ತೈದು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAG00321114** ಸದರಿ ನೋಟಿಸ್ ದೊರೆತ 60 ದಿನಗಳೊಳಗೆ, ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **09.11.2021** ರಿಂದ ಮುಂದಿನ ಬಡ್ಡಿ ಹಾಗೂ ದಂಡದ ಬಡ್ಡಿ ವಿಧಿಸಲಾಗುತ್ತದೆ.

ಅನಂತರ, **ಎಸ್‌ಸಿಎಲ್** ಸಾಲಗಾರ (ರಿಗೆ) / ಗ್ಯಾರಂಟರ್‌ಗೆ(ಗಳಿಗೆ) / ಮಾರ್ಟ್‌ಗೆಜರ್(ಗಳಿಗೆ) ನೀಡಿದ ಸೌಲಭ್ಯಗಳ ಕಾರಣವಾಗಿ ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೆಜರ್(ಗಳು) ಹಿಂದಿರುಗಿಸಬೇಕಾದ ಬಾಕಿ ಸಾಲಗಳಿಗೆ ಸಂಬಂಧಿಸಿದಂತೆ, **ಎಸ್‌ಸಿಎಲ್** ಟ್ರಸ್ಟಿ ಆಗಿ ದಿನಾಂಕ **30.09.2024** ರ ಅಸ್ಸೈನ್‌ಮೆಂಟ್ ಅಗ್ರಿಮೆಂಟ್ ಪ್ರಕಾರ, ತನ್ನ ಎಲ್ಲಾ ಹಕ್ಕುಗಳು, ಹಕ್ಕುಪತ್ರ, ಬಡ್ಡಿ ಮತ್ತು ಪ್ರಯೋಜನಗಳನ್ನು ಹಾಗೂ ಎಲ್ಲಾ ಸೆಕ್ಯುರಿಟಿಗಳನ್ನು ಸೆಕ್ಯುರಿಟಿ ರಸೀದಿಗಳ ಹೋಲ್ಡರ್‌ಗಳ ಪ್ರಯೋಜನಕ್ಕಾಗಿ **ಆರ್ಸಿಲ್-ಟ್ರಸ್ಟ್-2025-007 ('ಆರ್ಸಿಲ್')** ಟ್ರಸ್ಟಿಯಾಗಿ **ಕೆಲಸ ಮಾಡುತ್ತಿರುವ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್‌ಗೆ** ವಹಿಸಿಕೊಟ್ಟಿದೆ. ಆದ್ದರಿಂದ, ಈ ಅಸ್ಸೈನ್‌ಮೆಂಟ್‌ನ ಕಾರಣವಾಗಿ, ಈಗ **ಎಸ್‌ಸಿಎಲ್** ಜಾಗದಲ್ಲಿ **ಆರ್ಸಿಲ್** ಇದೆ ಮತ್ತು ಆರ್ಥಿಕ ದಾಖಲೆಗಳ ಅಡಿಯಲ್ಲಿ ಸನರಿ ಸೌಲಭ್ಯಗಳಿಗಾಗಿ ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೆಜರ್(ಗಳು) ಸಿದ್ಧಪಡಿಸಿ ಕಾರ್ಯಗತಗೊಳಿಸಿದ ಸೆಕ್ಯುರಿಟಿ ಇಂಟ್‌ರೆಸ್ಟ್ ಒಳಗೊಂಡಂತೆ ತನ್ನ ಹಕ್ಕುಗಳು ಮತ್ತು ಪ್ರಯೋಜನಗಳ ಅಧಿಕಾರವನ್ನು ಚಲಾಯಿಸಲು ಸಾಲಗಾರ(ರ) / ಗ್ಯಾರಂಟರ್(ಗಳ) / ಮಾರ್ಟ್‌ಗೆಜರ್(ಗಳ) ವಿರುದ್ಧ ಎಲ್ಲಾ ಮತ್ತು ಯಾವುದೇ ಕ್ರಮಗಳನ್ನು ಆರಂಭಿಸಲು / ಮುಂದುವರಿಸಲು ಹಕ್ಕನ್ನು ಹೊಂದಿರುತ್ತಾರೆ.

ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೆಜರ್(ಗಳು) **ಆರ್ಸಿಲ್‌ಗೆ** ಮೇಲೆ ಹೇಳಿರುವ ಮೊತ್ತವನ್ನು ಈ ತನಕ ಮರುಪಾವತಿ ಮಾಡದೆ ಇರುವ ಕಾರಣ, ಕೆಳಗೆ ಸಹಿ ಮಾಡಿರುವ **ಆರ್ಸಿಲ್‌ನ** ಅಧಿಕೃತ ಅಧಿಕಾರಿಯವರು, ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (4)ರ ಜೊತೆಗೆ ಹೇಳಲಾಗಿರುವ ರೂಲ್‌ಗಳಲ್ಲಿನ ರೂಲ್ 8ರ ಅಡಿಯಲ್ಲಿ ಅವರಿಗೆ ಲಭ್ಯವಿರುವ ಪವರ್‌ಗಳನ್ನು ಚಲಾಯಿಸಿ, **15.05.2025** ರಂದು ಕೆಳಗೆ ವಿವರಿಸಿರುವ ಸೆಕ್ಯುರಿಟಿ ಅಸೆಟ್‌ಗಳನ್ನು **ಸಾಂಕೇತಿಕ ಸ್ವಾಧೀನ** ತೆಗೆದುಕೊಂಡಿದ್ದಾರೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೆಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ನೋಟಿಸ್ ಕೊಡಲಾಗುತ್ತಿದೆ.

ಕೆಳಗೆ ಹೇಳಿರುವ ಸೆಕ್ಯುರಿಟಿಯ ಅಸೆಟ್‌ಗಳ ಬಗ್ಗೆ ಯಾವುದೇ ವ್ಯವಹಾರವನ್ನೂ ಮಾಡಕೂಡದು, ಮತ್ತು ಈ ಸೆಕ್ಯುರಿಟಿಯ ಅಸೆಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡಿದರೂ, ಅದು ಮೇಲೆ ಹೇಳಿರುವ ಸಾಲ ಸೌಲಭ್ಯದ ಕಾರಣವಾಗಿ ದಿನಾಂಕ **17.03.2025** ರ ವರೆಗೆ **ರೂ. 12,26,304.56 (ಹನ್ನೆರಡು ಲಕ್ಷ ಇಪ್ಪತ್ತಾರು ಸಾವಿರದ ಮುನ್ನೂರ ನಾಲ್ಕು ರೂಪಾಯಿಗಳು ಮತ್ತು ಐವತ್ತಾರು ಪೈಸೆ ಮಾತ್ರ)** ಮೊತ್ತಕ್ಕೆ , ಮತ್ತು ನಂತರ ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **18.03.2025** ರಿಂದ ಕರಾರಿನ ದರದ ಪ್ರಕಾರ ಮುಂದಿನ ಬಡ್ಡಿ, ದಂಡ ಹಾಗೂ ಇತರ ಎಲ್ಲಾ ಖರ್ಚುವೆಚ್ಚಗಳು, ಶುಲ್ಕಗಳ ವಸೂಲಿ **ಆರ್ಸಿಲ್‌ನ** ಹಕ್ಕಿಗೆ ಒಳಪಟ್ಟಿರುತ್ತವೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೆಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ಕೊಡಲಾಗುತ್ತಿದೆ

ಕೆಳಗೆ ಹೇಳಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ರಿಡೀಮ್ ಮಾಡಿಕೊಳ್ಳಲು ಲಭ್ಯವಿರುವ ಸಮಯದ ಬಗ್ಗೆ ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (8)ರ ಪ್ರಾವಧಾನಗಳ ಕಡೆಗೆ ಸಾಲಗಾರರ / ಗ್ಯಾರಂಟರ್‌ಗಳ / ಮಾರ್ಟ್‌ಗೆಜರ್‌ಗಳ ಗಮನವನ್ನು ಸೆಳೆಯಲಾಗುತ್ತಿದೆ.

ಸ್ಥಿರಾಸ್ತಿಯ ವರ್ಣನೆ

1ನೇ ಬಿ ಕ್ರಾಸ್ ಮುಖ್ಯ ರಸ್ತೆ ಪ್ರಾಪರ್ಟಿ ನಂ 33 ಎ ಮುನ್ಸಿಪಲ್ ನಂ 33/1, ASST ನಂ 109 ಪಿಐಡಿ ನಂ 38-15-33/1 ವಾರ್ಡ್ ನಂ 38, ಕಲ್ಯಾಣ್ ನಗರ, ಬೆಂಗಳೂರು, ಕರ್ನಾಟಕ - 560020.

ಅಧಿಕಾರವಿರುವ ಅಧಿಕಾರಿ
ದಿನಾಂಕ : 15.05.2025 **ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್**
ಸ್ಥಳ : ಬೆಂಗಳೂರು **(ಆರ್ಸಿಲ್-ಟ್ರಸ್ಟ್‌ನ ಟ್ರಸ್ಟಿ-2025-007)**

ಜಲಮಂಡಳಿಯಿಂದ ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲ ಮಂಡಳಿ ವತಿ ಯಿಂದ ಮೇ.22ರಂದು ಬೆಳಗ್ಗೆ 9.30ರಿಂದ ನೀರಿನ ಅದಾಲತ್ ಆಯೋಜಿಸಲಾಗಿದೆ. ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆಮಾಡಿ ಅಥವಾ ವಾಟ್ ಅಪ್ ಸಂಖ್ಯೆ 8762228888 ದೂರು ದಾಖಲಿಸಬಹುದು.

ಫಾರ್ಮ್ ಸಂಖ್ಯೆ URC-2
ಅಧ್ಯಾಯ XXI ರ ಭಾಗ I ರ ಅಡಿಯಲ್ಲಿ ನೋಂದಣಿ ಕುರಿತು ಸೂಚನೆ ನೀಡುವ ಜಾಹೀರಾತು
[ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 374(b) ಮತ್ತು ಕಂಪನಿಗಳ (ನೋಂದಣಿ ಮಾಡಲು ಅಧಿಕೃತ) ನಿಯಮಗಳು, 2014 ರ ನಿಯಮ 4(1) ರ ಪ್ರಕಾರ]

1. ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 366 ರ ಉಪವಿಭಾಗ (2) ರ ಅನುಸಾರವಾಗಿ, ಬೆಂಗಳೂರಿನ ರಿಜಿಸ್ಟ್ರಾರ್‌ಗೆ TEMERE INDIA LLP ಸೀಮಿತ ಹೊಣೆಗಾರಿಕೆ ಪಾಲುದಾರಿಕೆಯನ್ನು ಕಂಪನಿಗಳ ಕಾಯ್ದೆ, 2013 ರ ಅಧ್ಯಾಯ XXI ರ ಭಾಗ I ರ ಅಡಿಯಲ್ಲಿ TEMERE INDIA PRIVATE LIMITED ಹೆಸರಿನ ಷೇರುಗಳಿಂದ ಸೀಮಿತವಾದ ಕಂಪನಿಯಾಗಿ ನೋಂದಾಯಿಸ ಬಹುದು ಎಂದು ಇಲ್ಲಿ ಸೂಚನೆ ನೀಡಲಾಗಿದೆ.
2. ಪ್ರಸ್ತಾವಿತ ಕಂಪನಿಯ ಪ್ರಮುಖ ಉದ್ದೇಶಗಳು ಈ ಕೆಳಗಿನಂತಿವೆ:
ಕಬ್ಬಿಣ ಮತ್ತು ಉಕ್ಕಿನಿಂದ ಅಥವಾ ಎಲ್ಲಾ ರೀತಿಯ ಲೋಹಗಳು ಅಥವಾ ಪ್ಲಾಸ್ಟಿಕ್ಕಿಂದ ಮಾಡಿದ ಉತ್ಪನ್ನಗಳು ಮತ್ತು ವಿವರಣೆಗಳನ್ನು ಒಳಗೊಂಡಂತೆ ಎಲ್ಲಾ ರೀತಿಯ ಕೇಬಲ್ಗಳು ಮತ್ತು ಅದರ ಉಪಕರಣಗಳಲ್ಲಿ ವಿನ್ಯಾಸ, ತಯಾರಿಕೆ, ಫ್ಯಾಬ್ರಿಕೇಶನ್ ಮತ್ತು ಜೋಡಣೆ, ಖರೀದಿ, ಮಾರಾಟ, ನಿರ್ಮಾಣ ಮತ್ತು ಆಯೋಗದ ವ್ಯವಹಾರವನ್ನು ಮುಂದುವರಿಸಲು ಮತ್ತು ಭಾರತದ ಯಾವುದೇ ಭಾಗದಲ್ಲಿ ಮತ್ತು ಜಾಗತಿಕವಾಗಿ ಮೇಲೆ ತಿಳಿಸಿದ ವಸ್ತುಗಳಿಗೆ ಏಜೆಂಟ್ಗಳಾಗಿ ಕಾರ್ಯನಿರ್ವಹಿಸಲು. ಕಚ್ಚಾ ವಸ್ತುಗಳು, ಅರೆ-ಸಿದ್ಧ ಸರಕುಗಳು, ಭಾಗಗಳು ಮತ್ತು ವಸ್ತುಗಳು ಸೇರಿದಂತೆ ಸಿದ್ಧಪಡಿಸಿದ ಸರಕುಗಳನ್ನು ಆಮದು ಮಾಡಿಕೊಳ್ಳಲು ಮತ್ತು ರಫ್ತು ಮಾಡಲು ಮತ್ತು ಸಿದ್ಧಪಡಿಸಿದ ಮತ್ತು ಅರೆ-ಸಿದ್ಧ ಉತ್ಪನ್ನಗಳನ್ನು ಸಂಗ್ರಹಿಸಲು ಗೋದಾಮು, ಸಂಗ್ರಹಣಾ ಸೌಲಭ್ಯಗಳು, ಗೋ-ಡೌನ್ಗಳನ್ನು ಸ್ಥಾಪಿಸಲು ಮತ್ತು ಕಂಪನಿಯ ಮುಖ್ಯ ವ್ಯವಹಾರ ಅಥವಾ ವ್ಯವಹಾರದ ವರ್ಗಕ್ಕೆ ಸಂಬಂಧಿಸಿದ ವೈಜ್ಞಾನಿಕ ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ಉತ್ತೇಜಿಸಲು.
3. ಪ್ರಸ್ತಾವಿತ ಕಂಪನಿಯ ಕರಡು ಜ್ಞಾಪಕ ಪತ್ರ ಮತ್ತು ಸಂಘದ ಲೇಖನಗಳ ಪ್ರತಿಯನ್ನು ನಂ 36 ಸರ್ವೆ ಸಂಖ್ಯೆ 198 ಬ್ಲಾಕ್ ಸಂಖ್ಯೆ 78 ರಸ್ತೆ ಸಂಖ್ಯೆ 5 ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್, ಹಾರ್ಡ್‌ವೇರ್ ವಲಯ ಕೈಗಾರಿಕಾ ಪ್ರದೇಶ, ಮಹಾದೇವಕೊಡಿಗೆಹಳ್ಳಿ, ಜಲ ಹೋಬಳಿ, ಬೆಂಗಳೂರು - 562149 ಕರ್ನಾಟಕ, ಭಾರತ ನಲ್ಲಿರುವ ಕಚೇರಿಯಲ್ಲಿ ಪರಿಶೀಲಿಸಬಹುದು.
4. ಈ ಅರ್ಜಿಗೆ ಆಕ್ಷೇಪಣೆ ಸಲ್ಲಿಸುವ ಯಾವುದೇ ವ್ಯಕ್ತಿಯು ಈ ಸೂಚನೆ ಪ್ರಕಟವಾದ ದಿನಾಂಕದಿಂದ ಇಪ್ಪತ್ತೊಂದು ದಿನಗಳ ಒಳಗೆ, ROC CRC, IICA, MANESAR, ಪ್ಲಾಟ್ ಸಂಖ್ಯೆ 6, 7 & 8, ಸೆಕ್ಟರ್-5, IMT MANESAR, ಗುರಗಾಂವ್ (ಹರಿಯಾಣ), ಪಿನ್ ಕೋಡ್- 122050 ರಲ್ಲಿರುವ ರಿಜಿಸ್ಟ್ರಾರ್‌ಗೆ ಲಿಖಿತವಾಗಿ ತಮ್ಮ ಆಕ್ಷೇಪಣೆಯನ್ನು ತಿಳಿಸಬಹುದು ಎಂದು ಇಲ್ಲಿ ಸೂಚನೆ ನೀಡಲಾಗಿದೆ. ಕಂಪನಿಯು ತನ್ನ ನೋಂದಾಯಿತ ಕಚೇರಿಯಲ್ಲಿ ಪ್ರತಿಯನ್ನು ಹೊಂದಿರಬೇಕು.

ದಿನಾಂಕ: 21-ಮೇ-2025

ಅರ್ಜಿದಾರರ ಹೆಸರುಗಳು
1. ನಿಕೋಲಸ್ ಕ್ರಿಸ್ಟೋಫರ್ ಡೈಕಿನ್ಸ್
2. ಅಂಗಶುಮನ್ ರಾಯ್

ಬೆಂಗಳೂರಿಗೆ ಕೇವಲ ಗ್ರೇಟರ್ ಹೆಸರು ಸೇರಿಸಿದರೆ ಸಾಕಾಗುವುದಿಲ್ಲ: ವಿಜಯೇಂದ್ರ

ಸರಕಾರ ಮೋಜು ಮಾಡುತ್ತಿರುವುದು ಅಪರಾಧ

ಬೆಂಗಳೂರು: ರಾಜ್ಯದ ಕಾಂಗ್ರೆಸ್ ಸರಕಾರವು ಬೆಂಗಳೂರಿನಲ್ಲಿ ಮಳೆಗಾಲಕ್ಕೆ ಸಂಬಂಧಿಸಿದ ಪೂರ್ವಭಾವಿ ಕೆಲಸ ಮಾಡಿಸು ವುದನ್ನು ಬಿಟ್ಟು ಹೊಸಪೇಟೆಯಲ್ಲಿ ಮೋಜು ಮಾಡುತ್ತಿದೆ. ಎರಡು ವರ್ಷ ಪೂರ್ಣಗೊಳಿಸಿ ದ್ದನ್ನು ತಿಳಿಸಿ ಮೋಜು ಮಾಡುತ್ತಿರುವುದು ಅಕ್ಷಮ್ಯ ಅಪರಾಧ ಎಂದು ಬಿಜೆಪಿ ರಾಜ್ಯಾ ಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.

ಬಿಜೆಪಿ ನಿಯೋಗವು ಸಿಲ್ಕ್ ಬೋರ್ಡಿನ ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿತ್ತು. ಮಳೆ ಹಾನಿಗೆ ಕಾರಣಗಳು, ಆಗಿರುವ ಹಾನಿ ಕುರಿತು ನಿಯೋಗವು ಪರಿಶೀಲಿಸಿ ಸುದ್ದಿಗಾರ ರೊಂದಿಗೆ ಮಾತನಾಡಿ, ಬೆಂಗಳೂರಿನ ಅಭಿವೃದ್ಧಿ ಕಾಮಗಾರಿಗಳ ಕಡೆ ಮುಖ್ಯ ಮಂತ್ರಿಗಳು ಗಮನ ಕೊಡಬೇಕು. ಕೆಲಸ ಗಳನ್ನು ತ್ವರಿತ ಗತಿಯಲ್ಲಿ ಮುಗಿಸಬೇಕು. ರಾಜ್ಯ ಸರಕಾರವು ಒಂದು ಅಯೋಗ್ಯ ಸರಕಾರ. ಈ ಸರಕಾರಕ್ಕೆ ಮಾನ ಮರ್ಯಾದೆ ಯಾವುದೂ ಇಲ್ಲ ಎಂದು ಟೀಕಿಸಿದರು.

> ಯುದ್ಧಕ್ಕೆ ಸಾಕ್ಷಿ ಕೇಳುವ ಇವರು, ಜನರು ಸಾಯುತ್ತಿರುವುದನ್ನು ಬಂದು ನೋಡಲಿ. ಇದಕ್ಕೆ ಯಾವುದೇ ಸಾಕ್ಷಿ ಬೇಕಿಲ್ಲ. ಬಿಜೆಪಿ ಅವಧಿಯಲ್ಲಿ ಪ್ರತಿ ವರ್ಷ ಏಳೆಂಟು ಸಾವಿರ ಕೋಟಿ ರು. ನೀಡಲಾಗುತ್ತಿತ್ತು. ಕಾಂಗ್ರೆಸ್ ಸರಕಾರ ಬೆಂಗಳೂರಿಗೆ ನೀಡಿರುವ ಹಣವೆಲ್ಲವನ್ನೂ ಸುರಂಗ ನಿರ್ಮಿಸಲು ಬಳಸಲಾಗುತ್ತಿದೆ. ಬೆಂಗಳೂರು ಮುಳುಗುತ್ತಿರುವ ಬಗ್ಗೆ ಸರಕಾರಕ್ಕೆ ಯಾವುದೇ ಕಾಳಜಿ ಇಲ್ಲ. ಗ್ರೇಟರ್ ಬೆಂಗಳೂರು ಹೋಗಿ ವಾಟರ್ ಬೆಂಗಳೂರು ಆಗಿದೆ.
> -**ಆರ್.ಅಶೋಕ್**, ಪ್ರತಿಪಕ್ಷ ನಾಯಕ

ಕೆಲವೇ ಕೆಲವು ಗಂಟೆ ಮಳೆ ಬಂದ ಸಂದರ್ಭದಲ್ಲಿ ಇಡೀ ಬೆಂಗಳೂರು ಮಹಾ ನಗರವು ಜಲಾವೃತವಾಗಿದೆ. ನಾಲ್ಕು ಜನರು ಪ್ರಾಣ ಕಳೆಕೊಂಡಿದ್ದಾರೆ. ಡಿ.ಕೆ. ಶಿವ ಕುಮಾರ್, ಸಿದ್ದರಾಮಯ್ಯ ಗ್ರೇಟರ್ ಬೆಂಗ ಳೂರು ಬಗ್ಗೆ ಮಾತನಾಡುತ್ತಾರೆ. ಬೆಂಗಳೂ ರಿಗೆ ಕೇವಲ ಗ್ರೇಟರ್ ಹೆಸರು ಸೇರಿಸಿದರೆ ಸಾಕಾಗುವುದಿಲ್ಲ ಸ್ವಾಮೀ.. ಎಂದರಲ್ಲದೆ, ಬೆಂಗಳೂರಿನ ಅಭಿವೃದ್ಧಿಗೆ ಎಷ್ಟು ಸಾವಿರ ಕೋಟಿ ಅನುದಾನ ಕೊಡಲಾಗಿದೆ ಎಂದು ಪ್ರಶ್ನಿಸಿದರು. ಹೂಳು ತೆಗೆಯುವಂತೆ ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು ನಿನ್ನೆ ಅಧಿಕಾರಿಗಳಿಗೆ ಹೇಳುತ್ತಿದ್ದರು. ಯಾಕೆ ಮಳೆ ಬರುವುದು ಗೊತ್ತಿಲ್ಲವೇ? ಮಳೆ ಯಾವ ತಿಂಗಳಲ್ಲಿ ಬರುತ್ತದೆಂದು ಇವರಿಗೆ ತಿಳಿದಿಲ್ಲವೇ ಎಂದು ಪ್ರಶ್ನಿಸಿದರು. ಅಧಿಕಾರಿಗಳಿಗೆ ಸರಿಯಾಗಿ ತಿಳಿಸಿ ಮುಂಗಾರು ಮಳೆಗೆ ಮೊದಲು ಕೆಲಸ ಯಾಕೆ ಮಾಡಿಸಿಲ್ಲ ಎಂದು ಪ್ರಶ್ನಿಸಿದರು.

ನಿಯೋಗದಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ಶಾಸಕ ಸತೀಶ್ ರೆಡ್ಡಿ, ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷ ಮತ್ತು ಶಾಸಕ ಸಿ.ಕೆ. ರಾಮಮೂರ್ತಿ ಮತ್ತು ಪಕ್ಷದ ಮುಖಂಡರು ಇದ್ದರು.

ಬಿಜೆಪಿ ನಿಯೋಗವು ಸಿಲ್ಕ್ ಬೋರ್ಡಿನ ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಮಳೆ ಹಾನಿಗೆ ಕಾರಣಗಳು, ಆಗಿರುವ ಹಾನಿ ಕುರಿತು ನಿಯೋಗವು ಪರಿಶೀಲನೆ ನಡೆಸಿತು.

ಸರಕಾರ ಗುತ್ತಿಗೆದಾರರಿಗೆ ಹಣ ಪಾವತಿಸಿಲ್ಲ

ಹಿಂದೆ ಬಿಜೆಪಿ ಸರಕಾರ ಅಧಿಕಾರದಲ್ಲಿ ಇದ್ದಾಗ ಸಾವಿರಾರು ಕೋಟಿ ಅನುದಾನದಲ್ಲಿ ಅನೇಕ ಕಾಮಗಾರಿಗಳು ನಡೆಯುತ್ತಿತ್ತು. ಆ ಗುತ್ತಿಗೆದಾರರಿಗೆ ಹಣ ಪಾವತಿಸದ ಕಾರಣ ಇವತ್ತು ಕೆಲಸ ಕಾರ್ಯಗಳು, ಅಭಿವೃದ್ಧಿ ಕಾಮಗಾರಿಗಳು ಹಾಗೇ ನಿಂತಿವೆ. ಡಿ.ಕೆ.ಶಿವಕುಮಾರ್ ಟಾಲೆಸ್ಟ್ ಟವರ್, ಸುರಂಗ ರಸ್ತೆ ಕುರಿತು ಮಾತನಾಡುತ್ತಾರೆ. ಬೆಂಗಳೂರಿನ ಮಹಾಜನತೆ, ಜನ ಸಾಮಾನ್ಯರು ಇವುಗಳನ್ನು ಕೇಳುತ್ತಿಲ್ಲ. ಬಂದ ಮಳೆಯ ನೀರು ಸರಿಯಾಗಿ ಹೋಗುವ ವ್ಯವಸ್ಥೆ ಆಗಬೇಕು. ರಾಜಕಾಲುವೆ ಸರಿಪಡಿಸಬೇಕು. ಕೆರೆಗಳ ಒತ್ತುವರಿ ಸರಿಪಡಿಸಲು ಬಯಸುತ್ತಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಈಗ ವಾಟರ್ ಬೆಂಗಳೂರು

ಬಿಜೆಪಿ ಅವಧಿಯಲ್ಲಿ 1,600 ಕೋಟಿ ರು. ಹಣವನ್ನು ಬೆಂಗಳೂರಿನ ಅಭಿವೃದ್ಧಿಗೆ ನೀಡಿದ್ದು, ಆ ಕಾಮಗಾರಿ ಗಳನ್ನು ಕಾಂಗ್ರೆಸ್ ಸರಕಾರ ರದ್ದು ಮಾಡಿದೆ. ಆ ಕಾಮ ಗಾರಿಗಳು ನಡೆ ದಿದ್ದರೆ ಇಂತಹ ಪ್ರವಾಹದ ಸ್ಥಿತಿ ಬರುತ್ತಿರಲಿಲ್ಲ. ಬೆಂಗಳೂರಿಗೆ ಕಳೆದ 2 ವರ್ಷ ಗಳಲ್ಲಿ ಏನು ಮಾಡಿದ್ದೀರಿ ಎಂದು ತಿಳಿಸಿ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದರು.

ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಪ್ರವಾಹ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಇಡೀ ಬೆಂಗಳೂರು ಮಳೆಯಿಂದಾಗಿ ಮುಳುಗುತ್ತಿದ್ದು, ಜನರು ಪರದಾಡುತ್ತಿದ್ದಾರೆ. ಮಳೆ ಯಿಂದಾಗಿ 5 ಜನರು ಸತ್ತಿದ್ದಾರೆ. ಇಂಥವರ ಸಾವಿನ ಮೇಲೆ ಕಾಂಗ್ರೆಸ್ ಸಾಧನೆಯ ಸಮಾವೇಶ ಮಾಡು ತ್ತಿದೆ. ಸರಕಾರಕ್ಕೆ ಮಾನ ಮರ್ಯಾದೆ ಇದ್ದರೆ ಸಮಾ ವೇಶ ರದ್ದು ಮಾಡಬೇಕಿತ್ತು. ಕಾಂಗ್ರೆಸ್‌ನ ತಪ್ಪಿ ನಿಂದಲೇ ಜನರು ಸತ್ತಿದ್ದಾರೆ. ಇಂತಹ ಸಮಾವೇಶ ಮಾಡುವ ನೈತಿಕ ಅರ್ಹತೆ ಸರಕಾರ ಇಲ್ಲ ಎಂದು ಟೀಕಿಸಿದರು.

ಬೆಂಗಳೂರಿನ ಸಾಯಿ ಬಡಾವಣೆಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಭೇಟಿ ನೀಡಿ, ಅಭಿವೃದ್ಧಿ ಮಾಡುತ್ತೇ ನೆಂದು ಹೇಳಿದ್ದರು. ಸಿಲ್ಕ್ ಬೋರ್ಡ್ ಬಳಿ ಕಳೆದ ಸಲವೂ ಪ್ರವಾಹವಾಗಿತ್ತು. ಇಷ್ಟಾದರೂ ಅಭಿವೃದ್ಧಿಗೆ ನಯಾಪೈಸೆ ಬಿಡುಗಡೆ ಯಾಗಿಲ್ಲ. ಬಿಜೆಪಿ ಅವಧಿಯಲ್ಲಿ ರಾಜ ಕಾಲುವೆ, ರಸ್ತೆ ಅಭಿವೃದ್ಧಿಗೆ 1,600 ಕೋಟಿ ರು. ನೀಡಲಾಗಿತ್ತು. ಅದನ್ನು ಕಾಂಗ್ರೆಸ್ ರದ್ದು ಮಾಡಿದೆ. ಆ ಅಭಿವೃದ್ಧಿ ಕಾರ್ಯ ನಡೆದಿ ದ್ದರೆ, ಈ ರೀತಿ ಪ್ರವಾಹ ಆಗುತ್ತಿರಲಿಲ್ಲ. ಬೆಂಗಳೂರಿಗೆ ಪ್ರಗತಿಗೆ ಹಣ ನೀಡದೆ ಲೂಟಿ ಮಾಡಲು ಆ ಹಣವನ್ನು ಬಳಸ ಲಾಗಿದೆ. ಎಲ್ಲ ಹಣ ವನ್ನು ಸುರಂಗ ಮಾರ್ಗ ಯೋಜನೆಗೆ ಮೀಸಲಿಟ್ಟಿ ದ್ದಾರೆ. ಈಗ ಎಲ್ಲ ರಸ್ತೆಗಳಲ್ಲಿ ಸುರಂಗ ಆಗಿದೆ ಎಂದು ದೂರಿದರು.

ಲಂಚ: ಶಾಸಕ ಮುನಿರತ್ನ ವಿರುದ್ಧ ತನಿಖೆಗೆ ಅನುಮತಿ

ಬೆಂಗಳೂರು: ಕೊಲೆ ಮತ್ತು ಜಾತಿ ನಿಂದನೆ ಪ್ರಕರಣದಲ್ಲಿ ಜೈಲಿಗೆ ಹೋಗಿ ಬಂದಿರುವ ಬಿಜೆಪಿ ಶಾಸಕ ಮುನಿರತ್ನ ಅವರಿಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ಬಿಬಿಎಂಪಿ ಗುತ್ತಿಗೆದಾರ ಚಲುವರಾಜುಗೆ ಲಂಚಕ್ಕೆ ಬೇಡಿಕೆ ಇಟ್ಟ ಪ್ರಕರಣದ ತನಿಖೆಗೆ ಸಕ್ಷಮ ಪ್ರಾಧಿಕಾರ ಅನುಮತಿ ನೀಡಿದೆ. ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆ 1988 ರ ಅಡಿ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾ ಗಿತ್ತು. ಎಂಎಲ್‌ಎ ಮುನಿರತ್ನ ವಿರುದ್ಧ ತನಿಖೆಗೆ ಸಿಐಡಿ ಪೊಲೀಸ್ ಮಹಾ ನಿರ್ದೇಶಕರು ಸಕ್ಷಮ ಪ್ರಾಧಿಕಾರಕ್ಕೆ ಅನುಮತಿ ಕೋರಿ ದ್ದರು. ಸಕ್ಷಮ ಪ್ರಾಧಿಕಾರ ತನಿಖೆಗೆ ಅನುಮತಿ ನೀಡಿದೆ. ಇದರಿಂದ ಶಾಸಕ ಮುನಿರತ್ನಗೆ ಮತ್ತಷ್ಟು ಸಂಕಷ್ಟ ಎದುರಾಗಿದೆ.

ಏನಿದು ಪ್ರಕರಣ?: ಬಿಬಿಎಂಪಿ ಗುತ್ತಿಗೆದಾರ ಚಲುವರಾಜುಗೆ ಕಸ ವಿಲೇವಾರಿ ಗುತ್ತಿಗೆ ನೀಡಲು ಶಾಸಕ ಮುನಿರತ್ನ ಅವರು 36 ಲಕ್ಷ ರು. ಲಂಚ ಕೇಳಿದ್ದು, 20 ಲಕ್ಷ ರು. ಈಗಾಗಲೆ ಸ್ವೀಕರಿಸಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಮುನಿರತ್ನ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆ 1988ರ ಅಡಿ ಬೆಂಗಳೂರಿನ ವೈಯಾಲಿ ಕಾವಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮುನಿರತ್ನ ವಿರುದ್ಧ ಜೀವ ಬೆದರಿಕೆ ಆರೋಪ

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಲಕ್ಷ್ಮಿದೇವಿನಗರ ವಾರ್ಡ್‌ನ ಡಿ.ದೇವರಾಜು ಅರಸು ಟ್ರಕ್ ಟರ್ಮಿನಲ್ ಪ್ರದೇಶದ ಘನ ತ್ಯಾಜ್ಯ ಸಂಗ್ರಹಣ ಮತ್ತು ವಿಲೇವಾರಿ ಗುತ್ತಿಗೆ ಪಡೆದು ಕೆಲಸ ಮಾಡುತ್ತಿದ್ದೆ. ಶಾಸಕ ಮುನಿರತ್ನ 36 ಲಕ್ಷ ರು. ಲಂಚ ನೀಡುವಂತೆ ಬೇಡಿಕೆ ಇಟ್ಟು ಕಿರುಕುಳ ನೀಡಿದ್ದಾರೆ. ಅಲ್ಲದೆ, ಹಣ ಕೊಡಲು ನಿರಾಕರಿಸಿದ್ದಕ್ಕೆ ಕಚೇರಿಗೆ ಕರೆಸಿಕೊಂಡು ಶಾಸಕ ಮುನಿರತ್ನ ಅಸಹ್ಯ ಪದಗಳಿಂದ ನಿಂದಿಸಿದ್ದಾರೆ. ಹಲವು ಬಾರಿ ಹಲ್ಲೆ ನಡೆಸಿದ್ದಾರೆ ಎಂದು ಚಲುವರಾಜು ಆರೋಪ ಹೊರಿಸಿದ್ದರು. ಇನ್ನು, ಶಾಸಕ ಮುನಿರತ್ನ ಆಪ್ತ ಸಹಾಯಕ ವಸಂತಕುಮಾರ್ ಹಾಗೂ ಇತರರು ರೇಣುಕಾಸ್ವಾಮಿಯನ್ನು ಕೊಂದ ರೀತಿಯಲ್ಲೇ ನಿನ್ನನ್ನು ಕೂಡ ಕೊಲೆ ಮಾಡುವುದಾಗಿ ಬೆದರಿಸಿದ್ದಾರೆ ಎಂದು ಚಲುವರಾಜು ಸ್ವಾಮಿ ದೂರಿದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಕಳ್ಳತನದ ಹಣದಲ್ಲಿ ಟ್ಯೂಷನ್ ಫೀ ಪಾವತಿ

ಬೆಂಗಳೂರು: ಕಳ್ಳತನ ಮಾಡಿ 20 ಮಕ್ಕಳ ಶಾಲಾ, ಕಾಲೇಜು ಶುಲ್ಕ ಕಟ್ಟಿದ್ದ ಮನೆಗಳ್ಳರನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ. ಬೇಗೂರು ನಿವಾಸಿ ಶಿವು ಶಿವರಪ್ಪನ್ ಈ ಕಳ್ಳತನದ ಮಾಸ್ಟರ್ ಮೈಂಡ್. ಹೆಂಡತಿ, ಮಕ್ಕಳಿಲ್ಲದ ಶಿವು ಆತ್ಮಹತ್ಯೆ ಮಾಡಿಕೊಳ್ಳಲು ಯೋಚಿಸುತ್ತಿದ್ದಾಗ ಏರಿಯಾದಲ್ಲಿ ಸ್ನೇಹಿತರು ಮಕ್ಕಳ ಸ್ಕೂಲ್ ಫೀಸ್ ಕಟ್ಟಲು ಪರದಾಡುತ್ತಿರುವುದನ್ನು ನೋಡಿದ್ದ. ಬಳಿಕ ಶಿವು ಬ್ಯಾಡರಹಳ್ಳಿ ಸೇರಿದಂತೆ ಹಲವೆಡೆ ಮನೆಗಳಿಗೆ ಕನ್ನ ಹಾಕಿದ್ದು, ಕದ್ದ ಚಿನ್ನಾಭರಣವನ್ನು ಸ್ನೇಹಿತರಾದ ಅನಿಲ್, ಜಗ್ಗ ಮತ್ತು ವಿವೇಕ್ ಎಂಬಾತನ ಸಹಾಯದಿಂದ ಮಾರಾಟ ಮಾಡಿದ್ದಾನೆ. ತಮಿಳುನಾಡಿನಲ್ಲಿ 22 ಲಕ್ಷಕ್ಕೆ ಚಿನ್ನ ಮಾರಾಟ ಮಾಡಿಸಿದ್ದ ಶಿವು ಬಂದ ಹಣದಲ್ಲಿ ವಿವೇಕ್‌ಗೆ 4 ಲಕ್ಷ, ಅನಿಲ್‌ಗೆ 4 ಲಕ್ಷ ರು. ಮೌಲ್ಯದ ಆಟೋ ಕೊಡಿಸಿದ್ದ. ಉಳಿದ 14 ಲಕ್ಷ ರು. ಹಣದಲ್ಲಿ ಏರಿಯಾದ 20 ಮಕ್ಕಳಿಗೆ ಶಾಲಾ ಹಾಗೂ ಕಾಲೇಜ್ ಫೀಸ್ ಕಟ್ಟಿದ್ದಾನೆ. ಮನೆಗಳ್ಳರ ಬೆನ್ನತ್ತಿದ್ದ ಬ್ಯಾಡರಹಳ್ಳಿ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಶಿವು, ಅನಿಲ್ ಹಾಗು ವಿವೇಕ್ನನ್ನು ಬಂಧಿಸಿದ ಪೊಲೀಸರು 24 ಲಕ್ಷ ಮೌಲ್ಯದ 260 ಗ್ರಾಂ ಚಿನ್ನದ ಗಟ್ಟಿಯನ್ನು ಜಪ್ತಿ ಮಾಡಿದ್ದಾರೆ.

ಹೈಸ್ಕೂಲ್ ಗೆಳೆಯನಿಗಾಗಿ ಮೊದಲ ಪತಿಗೆ ಡಿವೋರ್ಸ್ | ಪಿಎಸ್‌ಐ ಜತೆ ಶಾಲಿನಿ 2ನೇ ಮದುವೆ

ಹಠಕ್ಕೆ ಬಿದ್ದು ಮದುವೆ, ವರ್ಷದೊಳಗೆ ಆತ್ಮಹತ್ಯೆ

ಬೆಂಗಳೂರು: ಸಬ್ ಇನ್ಸ್‌ಪೆಕ್ಟರ್ ಪತ್ನಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿ ಕೊಂಡಿರುವ ಘಟನೆ ಎಚ್‌ಬಿಆರ್ ಬಡಾವಣೆಯಲ್ಲಿ ನಡೆದಿದೆ.

ಕೆ.ಜಿ.ಹಳ್ಳಿ ಸಬ್ ಇನ್ಸ್‌ಪೆಕ್ಟರ್ ನಾಗರಾಜ್ ಪತ್ನಿ ಶಾಲಿನಿ ಆತ್ಮಹತ್ಯೆ ಮಾಡಿಕೊಂಡ ಮಹಿಳೆ. ಸೋಮವಾರ ರಾತ್ರಿ ತಮ್ಮ ಮನೆಯಲ್ಲೇ ಶಾಲಿನಿ ನೇಣು ಬಿಗಿದುಡಿದ್ದಾರೆ. ಕೆ.ಜಿ. ಹಳ್ಳಿ ಪೊಲೀಸ್ ಠಾಣೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿರುವ ನಾಗರಾಜ್ ಅವರನ್ನು ಮದುವೆಯಾಗಲು ಶಾಲಿನಿ ಮೊದಲ ಪತಿಗೆ ವಿಚ್ಛೇದನ ನೀಡಿದ್ದರು. ಹೈಸ್ಕೂಲ್‌ನಲ್ಲಿ ಟ್ಯೂಷನ್‌ಮೇಟ್‌ನನ್ನು ಬಯಸಿ 2ನೇ ಮದುವೆಯಾಗಿದ್ದ ಶಾಲಿನ ಆತ್ಮಹತ್ಯೆ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಮೃತ ಶಾಲಿನಿ ಮತ್ತು ಪಿಎಸ್‌ಐ ನಾಗರಾಜ್ ಇಬ್ಬರೂ ಇಳಕಲ್ ಮೂಲದವರು. ಹೈಸ್ಕೂಲ್‌ನಲ್ಲಿ ಟ್ಯೂಷನ್ ಮೇಟ್ಸ್ ಆಗಿದ್ದರು. ಶಾಲಿನಿ ಎಂಎಸ್‌ಸಿ ಹಾಗೂ ನಾಗರಾಜ್ ಎಂಜಿನಿಯರಿಂಗ್ ವ್ಯಾಸಂಗ ಮಾಡಿದ್ದರು. ಇದಾದ ಬಳಿಕ ನಾಗರಾಜ್ ಬೆಂಗಳೂರಿನಲ್ಲಿ ಪಿಎಸ್‌ಐ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದರು. ಅದೇ ವೇಳೆ ಶಾಲಿನಿ ಬೆಂಗಳೂರಿನ ಪ್ರತಿಷ್ಠಿತ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ನಾಗರಾಜ್‌ಗೆ ಪಿಎಸ್‌ಐ ಪರೀಕ್ಷೆ ತಯಾರಿಗೆ ಆರ್ಥಿಕ ಸಹಾಯ ಕೂಡ ಮಾಡುತ್ತಿದ್ದರು. ಹೀಗೆ ಮುಂದುವರಿಯುತ್ತಾ ಇಬ್ಬರ ಸ್ನೇಹ ಪ್ರೀತಿಗೆ ತಿರುಗಿತ್ತು. ಮೊದಲ ಪತಿಗೆ ವಿಚ್ಛೇದನ ನೀಡಿ ನಾಗರಾಜ್‌ನನ್ನು ಶಾಲಿನಿ 2ನೇ ಮದುವೆಯಾಗಿದ್ದು, ಮೃತ ಶಾಲಿನಿಗೆ 7 ವರ್ಷದ ಮಗು ಇದೆ. ಪಿಎಸ್‌ಐ ಆದ ನಂತರ ನಾಗರಾಜ್, ಶಾಲಿನಿಯನ್ನು ದೂರ ಮಾಡಲು ಶುರು ಮಾಡಿದ್ದ. ಮದುವೆ ಆಗದೆ ಮೋಸ ಮಾಡುತ್ತಿದ್ದಾನೆಂದು ಕೋಣನಕುಂಟೆ ಠಾಣೆಯಲ್ಲಿ ನಾಗರಾಜ್ ಮೇಲೆ ಶಾಲಿನಿ ದೂರು ನೀಡಿದ್ದರು. ಆಗ ಹಿರಿಯ ಅಧಿಕಾರಿಗಳು ಸಮಸ್ಯೆ ಬಗೆಹರಿಸಿದ್ದರು. ಬಳಿಕ ಶಾಲಿನಿ ಕುಟುಂಬಸ್ಥರ ವಿರೋಧದ ನಡುವೆ 2024ರ ಆಗಸ್ಟ್‌ನಲ್ಲಿ ಮದುವೆಯಾಗಿದ್ದರು. 2 ತಿಂಗಳಿನಿಂದ ದಾಂಪತ್ಯದಲ್ಲಿ ಬಿರುಕು ಉಂಟಾಗಿತ್ತು. ಇದರಿಂದ ಬೇಸತ್ತು ನಾಗರಾಜ್ ಬೇರೆಡೆ ವಾಸವಿದ್ದ. ಪತಿ ಮನೆಗೆ ಬರುತ್ತಿಲ್ಲವೆಂದು ಶಾಲಿನಿ ಸೋಮವಾರ ರಾತ್ರಿ ಕರೆ ಮಾಡಿ ರೈಲಿಗೆ ಸಿಕ್ಕಿ ಸಾಯುತ್ತೇನೆಂದು ಹೇಳಿ ಮನೆಯಿಂದ ಹೊರಟ್ಟಿದ್ದರು. ಈ ವೇಳೆ ಹೊಯ್ಸಳ ಸಿಬ್ಬಂದಿ ರಕ್ಷಿಸಿ ಮನೆಗೆ ಬಿಟ್ಟು ತೆರಳಿದ್ದರು. ಹೊಯ್ಸಳ ಸಿಬ್ಬಂದಿ ಮನೆಗೆ ಬಿಟ್ಟು ತೆರಳುತ್ತಿದ್ದಂತೆ ಶಾಲಿನಿ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗೋವಿಂದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 (2002 ರ 54) (''ಹೇಳಿದ ಕಾಯಿದೆ'') ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 (''ಹೇಳಿದ ನಿಯಮಗಳು'')ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **28.08.2024** ರಂದು ಕರೆದು ಸಾಲಗಾರ **ಜೈಶಂಕರ್ ಬಿ ಮತ್ತು ಗಿರಿಜಮ್ಮ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ಸದರಿ ಸೌಲಭ್ಯಕ್ಕೆ ದಿನಾಂಕ **28.08.2024** ರ ವರೆಗೆ **ರೂ. 36,61,958.37 (ಮೂವತ್ತಾರು ಲಕ್ಷ ಅರವತ್ತೊಂದು ಸಾವಿರದ ಒಂಭೈನೂರ ಐವತ್ತೆಂಟು ರೂಪಾಯಿಗಳು ಮತ್ತು ಮೂವತ್ತೇಳು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAG00265506** ಸದರಿ ನೋಟಿಸ್ ದೊರೆತ 60 ದಿನಗಳೊಳಗೆ, ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **29.08.2024** ರಿಂದ ಮುಂದಿನ ಬಡ್ಡಿ ಹಾಗೂ ದಂಡದ ಬಡ್ಡಿ ವಿಧಿಸಲಾಗುತ್ತದೆ.

ಅನಂತರ, **ಎಸ್‌ಸಿಎಲ್** ಸಾಲಗಾರ (ರಿಗೆ) / ಗ್ಯಾರಂಟರ್‌ಗೆ(ಗಳಿಗೆ) / ಮಾರ್ಟ್‌ಗೆಜರ್(ಗಳಿಗೆ) ನೀಡಿದ ಸೌಲಭ್ಯಗಳ ಕಾರಣವಾಗಿ ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೆಜರ್(ಗಳು) ಹಿಂದಿರುಗಿಸಬೇಕಾದ ಬಾಕಿ ಸಾಲಗಳಿಗೆ ಸಂಬಂಧಿಸಿದಂತೆ, **ಎಸ್‌ಸಿಎಲ್** ಟ್ರಸ್ಟಿ ಆಗಿ ದಿನಾಂಕ **30.09.2024** ರ ಅಸ್ಸೈನ್‌ಮೆಂಟ್ ಅಗ್ರಿಮೆಂಟ್ ಪ್ರಕಾರ, ತನ್ನ ಎಲ್ಲಾ ಹಕ್ಕುಗಳು, ಹಕ್ಕುಪತ್ರ, ಬಡ್ಡಿ ಮತ್ತು ಪ್ರಯೋಜನಗಳನ್ನು ಹಾಗೂ ಎಲ್ಲಾ ಸೆಕ್ಯುರಿಟಿಗಳನ್ನು ಸೆಕ್ಯುರಿಟಿ ರಸೀದಿಗಳ ಹೋಲ್ಡರ್‌ಗಳ ಪ್ರಯೋಜನಕ್ಕಾಗಿ **ಆರ್ಸಿಲ್-ಟ್ರಸ್ಟ್-2025-007 ('ಆರ್ಸಿಲ್')** ಟ್ರಸ್ಟಿಯಾಗಿ **ಕೆಲಸ ಮಾಡುತ್ತಿರುವ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್‌ಗೆ** ವಹಿಸಿಕೊಟ್ಟಿದೆ. ಆದ್ದರಿಂದ, ಈ ಅಸ್ಸೈನ್‌ಮೆಂಟ್‌ನ ಕಾರಣವಾಗಿ, ಈಗ **ಎಸ್‌ಸಿಎಲ್** ಜಾಗದಲ್ಲಿ **ಆರ್ಸಿಲ್** ಇದೆ ಮತ್ತು ಆರ್ಥಿಕ ದಾಖಲೆಗಳ ಅಡಿಯಲ್ಲಿ ಸನರಿ ಸೌಲಭ್ಯಗಳಿಗಾಗಿ ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೆಜರ್(ಗಳು) ಸಿದ್ಧಪಡಿಸಿ ಕಾರ್ಯಗತಗೊಳಿಸಿದ ಸೆಕ್ಯುರಿಟಿ ಇಂಟ್‌ರೆಸ್ಟ್ ಒಳಗೊಂಡಂತೆ ತನ್ನ ಹಕ್ಕುಗಳು ಮತ್ತು ಪ್ರಯೋಜನಗಳ ಅಧಿಕಾರವನ್ನು ಚಲಾಯಿಸಲು ಸಾಲಗಾರ(ರ) / ಗ್ಯಾರಂಟರ್(ಗಳ) / ಮಾರ್ಟ್‌ಗೆಜರ್(ಗಳ) ವಿರುದ್ಧ ಎಲ್ಲಾ ಮತ್ತು ಯಾವುದೇ ಕ್ರಮಗಳನ್ನು ಆರಂಭಿಸಲು / ಮುಂದುವರಿಸಲು ಹಕ್ಕನ್ನು ಹೊಂದಿರುತ್ತಾರೆ.

ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೆಜರ್(ಗಳು) **ಆರ್ಸಿಲ್‌ಗೆ** ಮೇಲೆ ಹೇಳಿರುವ ಮೊತ್ತವನ್ನು ಈ ತನಕ ಮರುಪಾವತಿ ಮಾಡದೆ ಇರುವ ಕಾರಣ, ಕೆಳಗೆ ಸಹಿ ಮಾಡಿರುವ **ಆರ್ಸಿಲ್‌ನ** ಅಧಿಕೃತ ಅಧಿಕಾರಿಯವರು, ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (4)ರ ಜೊತೆಗೆ ಹೇಳಲಾಗಿರುವ ರೂಲ್‌ಗಳಲ್ಲಿನ ರೂಲ್ 8ರ ಅಡಿಯಲ್ಲಿ ಅವರಿಗೆ ಲಭ್ಯವಿರುವ ಪವರ್‌ಗಳನ್ನು ಚಲಾಯಿಸಿ, **15.05.2025** ರಂದು ಕೆಳಗೆ ವಿವರಿಸಿರುವ ಸೆಕ್ಯುರಿಟಿ ಅಸೆಟ್‌ಗಳನ್ನು **ಸಾಂಕೇತಿಕ ಸ್ವಾಧೀನ** ತೆಗೆದುಕೊಂಡಿದ್ದಾರೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೆಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ನೋಟಿಸ್ ಕೊಡಲಾಗುತ್ತಿದೆ.

ಕೆಳಗೆ ಹೇಳಿರುವ ಸೆಕ್ಯುರಿಟಿಯ ಅಸೆಟ್‌ಗಳ ಬಗ್ಗೆ ಯಾವುದೇ ವ್ಯವಹಾರವನ್ನೂ ಮಾಡಕೂಡದು, ಮತ್ತು ಈ ಸೆಕ್ಯುರಿಟಿಯ ಅಸೆಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡಿದರೂ, ಅದು ಮೇಲೆ ಹೇಳಿರುವ ಸಾಲ ಸೌಲಭ್ಯದ ಕಾರಣವಾಗಿ ದಿನಾಂಕ **17.03.2025** ರ ವರೆಗೆ **ರೂ. 39,64,998.84 (ಮೂವತ್ತೊಂಬತ್ತು ಲಕ್ಷ ಅರವತ್ನಾಲ್ಕು ಸಾವಿರದ ಒಂಭೈನೂರ ತೊಂಬತ್ತೆಂಟು ರೂಪಾಯಿಗಳು ಮತ್ತು ಎಂಬತ್ತನಾಲ್ಕು ಪೈಸೆ ಮಾತ್ರ)** ಮೊತ್ತಕ್ಕೆ , ಮತ್ತು ನಂತರ ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **18.03.2025** ರಿಂದ ಕರಾರಿನ ದರದ ಪ್ರಕಾರ ಮುಂದಿನ ಬಡ್ಡಿ, ದಂಡ ಹಾಗೂ ಇತರ ಎಲ್ಲಾ ಖರ್ಚುವೆಚ್ಚಗಳು, ಶುಲ್ಕಗಳ ವಸೂಲಿ **ಆರ್ಸಿಲ್‌ನ** ಹಕ್ಕಿಗೆ ಒಳಪಟ್ಟಿರುತ್ತವೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೆಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ಕೊಡಲಾಗುತ್ತಿದೆ

ಕೆಳಗೆ ಹೇಳಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ರಿಡೀಮ್ ಮಾಡಿಕೊಳ್ಳಲು ಲಭ್ಯವಿರುವ ಸಮಯದ ಬಗ್ಗೆ ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (8)ರ ಪ್ರಾವಧಾನಗಳ ಕಡೆಗೆ ಸಾಲಗಾರರ / ಗ್ಯಾರಂಟರ್‌ಗಳ / ಮಾರ್ಟ್‌ಗೆಜರ್‌ಗಳ ಗಮನವನ್ನು ಸೆಳೆಯಲಾಗುತ್ತಿದೆ.

ಸ್ಥಿರಾಸ್ತಿಯ ವರ್ಣನೆ

ಪುರಸಭೆ ಸಂ. 33/1, ಹಳೆಯ ಸಂ. 33ಅ, ಮೌಲ್ಯಮಾಪನ ಸಂ. 109, ಪಿಐಡಿ ಸಂ. 38-15-33/1 ರ ಎಲ್ಲಾ ತುಣುಕು ಮತ್ತು ಪಾರ್ಸೆಲ್, 1-ಬಿ ನಲ್ಲಿದೆ, ಮುಖ್ಯ ರಸ್ತೆ ಕಲ್ಯಾಣ ನಗರ ಬೆಂಗಳೂರು ಹೊಸದು ಬಿಬಿಎಂಪಿ ವಾರ್ಡ್ ಸಂಖ್ಯೆ 38 ರ ಅಡಿಯಲ್ಲಿ ಬರುತ್ತದೆ, ಪ್ರಸ್ತುತ ಬಿಬಿಎಂಪಿಯಲ್ಲಿನ ಮಿತಿಗಳಲ್ಲಿದೆ ಮತ್ತು ಇವುಗಳಿಗೆ ಬದ್ಧವಾಗಿದೆ:

ಪೂರ್ವದಲ್ಲಿ : ಆಸ್ತಿ ಸಂ. 33 ಪಶ್ಚಿಮದಲ್ಲಿ : ಆಸ್ತಿ ಸಂ. 32
ಉತ್ತರದಲ್ಲಿ : ಆಸ್ತಿ ಸಂ. 34 ದಕ್ಷಿಣದಲ್ಲಿ : ರಸ್ತೆ
ಪೂರ್ವದಿಂದ ಪಶ್ಚಿಮಕ್ಕೆ 20 ಅಡಿ, ಉತ್ತರದಿಂದ ದಕ್ಷಿಣಕ್ಕೆ 30 ಅಡಿ ಅಳತೆ

ಅಧಿಕಾರವಿರುವ ಅಧಿಕಾರಿ
ದಿನಾಂಕ : 15.05.2025 **ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್**
ಸ್ಥಳ : ಬೆಂಗಳೂರು **(ಆರ್ಸಿಲ್-ಟ್ರಸ್ಟ್‌ನ ಟ್ರಸ್ಟಿ-2025-007)**

ಫಾರಂ ಎ
ಸಾರ್ವಜನಿಕ ಪ್ರಕಟಣೆ
(ನಿಯಮ 14 ರ ಭಾರತೀಯ ಪಾಪರಿಕೆ ಮತ್ತು ದಿವಾಳಿತನ ಮಂಡಳಿಯ (ಸ್ವಯಂ ಪ್ರೇರಿತ ಪರಿಸಮಾರ್ಪಣೆ ಪ್ರಕ್ರಿಯೆ) ನಿಬಂಧನೆಗಳು, 2017
ಅಬಾಕೊ ಸಿಸ್ಟಮ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಸ್ಟೇಕ್ ಹೊಲ್ಡರ್ಗಳ ಗಮನಕ್ಕೆ

1	ಕಾರ್ಪೊರೇಟ್ ವ್ಯಕ್ತಿಯ ಹೆಸರು	ಅಬಾಕೊ ಸಿಸ್ಟಮ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
2	ಕಾರ್ಪೊರೇಟ್ ವ್ಯಕ್ತಿಯ ನೋಂದಣಿ ಮಾಡಿದ ದಿನಾಂಕ	22ನೇ ಆಗಸ್ಟ್, 2016
3	ಯಾವ ಅಧಿಕಾರದ ಅಡಿಯಲ್ಲಿ ಕಾರ್ಪೊರೇಟ್ ವ್ಯಕ್ತಿಯನ್ನು ನೋಂದಣಿ ಮಾಡಲಾಗಿದೆ	ಕಂಪನಿಗಳ ರಿಜಿಸ್ಟ್ರಾರ್, ಬೆಂಗಳೂರು ಇವರಲ್ಲಿ
4	ಕಾರ್ಪೊರೇಟ್ ವ್ಯಕ್ತಿಯ ಕಾರ್ಪೊರೇಟ್ ಗುರುತು ಸಂಖ್ಯೆ	U74999KA2016FTC095905
5	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಚೇರಿ ಹಾಗೂ ಪ್ರಧಾನ ಕಚೇರಿ (ಒಂದು ವೇಳೆ ಇದ್ದಲ್ಲಿ) ಯ ವಿಳಾಸ	ನೋಂದಾಯಿತ ಕಚೇರಿ: ಭೋರುಕಾ ಟೆಕ್ ಪಾರ್ಕ್, 3&4 ಮಹಡಿ, ಮಹಾದೇವಪುರ, ಹುಡಿ, ಸರ್ವೆ ನಂ .27/1 (ಪಿ), 27/2 (ಪಿ) & 31 (ಪಿ), ವಾರ್ಡ್ ನಂ .1, ಕೆ.ಆರ್ ಪುರಂ, ಬೆಂಗಳೂರು - 560048
6	ಕಾರ್ಪೊರೇಟ್ ವ್ಯಕ್ತಿಯ ಪರಿಸಮಾರ್ಪಣೆ ಪ್ರಾರಂಭವಾದ ದಿನಾಂಕ	19ನೇ ಮೇ 2025
7	ಪರಿಸಮಾಪಕರ ಹೆಸರು, ವಿಳಾಸ, ಇ-ಮೇಲ್, ದೂರವಾಣಿ ಸಂಖ್ಯೆ ಮತ್ತು ನೋಂದಾಯಿತ ಸಂಖ್ಯೆ	ಸಿ. ದ್ವಾರಕನಾಥ್ ವಿಳಾಸ: ನಂ. 31, ವಿದ್ಯಾಭವನ, 3 ನೇ ಮಹಡಿ, ಹಿಂಬದಿಯ ವಿಭಾಗ, ಕಾರಂಜಿ ಆಂಜನೇಯ ದೇವಸ್ಥಾನ ಎದುರು, ಪಶ್ಚಿಮ ಆಂಜನೇಯ ದೇವಸ್ಥಾನ ಬೀದಿ, ಬಸವನಗುಡಿ, ಬೆಂಗಳೂರು-560004 ಇ-ಮೇಲ್ : dwarakanath.c@gmail.com ದೂರವಾಣಿ ಸಂಖ್ಯೆ : 080-41203012 ನೋಂದಣಿ ಸಂಖ್ಯೆ: IBBI/IPA-002/IP-N00711/2018-2019/12318
8	ಹಕ್ಕು ಕೋರಿಕೆ ಸಲ್ಲಿಸಲು ಕೊನೆಯ ದಿನಾಂಕ	20ನೇ ಜೂನ್ 2025

ಈ ಮೂಲಕ ತಿಳಿಯಪಡಿಸುವುದೇನೆಂದರೆ, **ಅಬಾಕೊ ಸಿಸ್ಟಮ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್** ರವರು ಸ್ವಯಂ ಪ್ರೇರಿತ ಪರಿಸಮಾರ್ಪಣೆಯನ್ನು **19ನೇ ಮೇ 2025** ರಂದು ಪ್ರಾರಂಭಿಸಿದ್ದಾರೆ.
ಅಬಾಕೊ ಸಿಸ್ಟಮ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಸ್ಟೇಕ್ ಹೋಲ್ಡರ್ ರವರಿಗೆ ಈ ಮೂಲಕ ತಮ್ಮ ಹಕ್ಕುಗಳನ್ನು ಸೂಕ್ತ ಪುರಾವೆಗಳನ್ನೊಳಗೊಂಡು ದಿನಾಂಕ **20ನೇ ಜೂನ್ 2025** ಒಳಗಾಗಿ ಮೇಲ್ಕಂಡ ಪರಿಸಮಾಪಕರ ವಿಳಾಸಕ್ಕೆ ಕಳುಹಿಸಲು ಕೋರಲಾಗಿದೆ.
ಹಣಕಾಸಿನ ಸಾಲದಾತರು ವಿದ್ಯುನ್ಮಾನ ವಿಧಾನದಿಂದ ಮಾತ್ರ ತಮ್ಮ ಹಕ್ಕುಗಳನ್ನು ಸಲ್ಲಿಸಬೇಕು. ಎಲ್ಲಾ ಇತರ ಸ್ಟೇಕ್ ಹೋಲ್ಡರ್ ಗಳು ಸ್ವತಃ, ಅಂಚೆಯ ಮೂಲಕ ಅಥವಾ ವಿದ್ಯುನ್ಮಾನ ವಿಧಾನದಿಂದ ತಮ್ಮ ಹಕ್ಕುಗಳನ್ನು ಸಲ್ಲಿಸಬಹುದು.
ಸುಳ್ಳು ಅಥವಾ ತಪ್ಪುದಾರಿಗೆಳೆಯುವ ಪುರಾವೆಗಳನ್ನು ಸಲ್ಲಿಸಿದರೆ ದಂಡಕ್ಕೆ ಒಳಪಡಿಸಲಾಗುವುದು.

ಸಹಿ/- ಸಿ. ದ್ವಾರಕನಾಥ್,
ದಿನಾಂಕ : 21.05.2025 ಪರಿಸಮಾಪಕರು, ಅಬಾಕೊ ಸಿಸ್ಟಮ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
ಸ್ಥಳ : ಬೆಂಗಳೂರು **ನೋಂದಣಿ ಸಂಖ್ಯೆ: IBBI/IPA-002/IP-N00711/2018-2019/12318**

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 214/2025

ಅರ್ಜಿದಾರರು: 1. ಶ್ರೀ ಬಿ.ಆರ್ ವಿಶ್ವೇಶ್ವರ್ ಬಿನ್ ಲೇಟ್ ಬಿ.ಸಿ. ರಾಜಶೇಖರ್ ವಯಸ್ಸು 45 ವರ್ಷ ವಾಸ : ನಂ. 202/112, ಮಾರಸಂದ್ರ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಹಾಲಿ ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ 562117 ಮತ್ತು ಇನ್ನೊಬ್ಬರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ಮತ್ತು ಇನ್ನೊಬ್ಬರು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರಾದ 1 ಮತ್ತು 2 ರವರ ತಂದೆಯವರಾದ ಬಿ.ಸಿ ರಾಜಶೇಖರ್ ಬಿನ್ ಚೆಂಗಪ್ಪ ರವರು, ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಮಾರಸಂದ್ರ ಗ್ರಾಮದಲ್ಲಿ ದಿನಾಂಕ 19.07.2023 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 30/06/2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಮೇ 20ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎಸ್.ಮಂಜುನಾಥ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 09.05.2025

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 213/2025

ಅರ್ಜಿದಾರರು: 1. ಶ್ರೀ ಬಿ.ಆರ್ ವಿಶ್ವೇಶ್ವರ್ ಬಿನ್ ಲೇಟ್ ಬಿ.ಸಿ. ರಾಜಶೇಖರ್ ವಯಸ್ಸು 45 ವರ್ಷ ವಾಸ : ನಂ. 202/112, ಮಾರಸಂದ್ರ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಹಾಲಿ ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ 562117 ಮತ್ತು ಇನ್ನೊಬ್ಬರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ಮತ್ತು ಇನ್ನೊಬ್ಬರು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರಾದ 1 ಮತ್ತು 2 ರವರ ತಾಯಿಯವರಾದ ಬಿ.ಆರ್.ಸರ್ವಾಣಿ ಕೋಂ ಲೇಟ್ ಬಿ.ಸಿ ರಾಜಶೇಖರ್ ರವರು, ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಮಾರಸಂದ್ರ ಗ್ರಾಮದಲ್ಲಿ ದಿನಾಂಕ 21.04.2022 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 30/06/2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಮೇ 20ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎಸ್.ಮಂಜುನಾಥ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 09.05.2025

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 216/2025

ಅರ್ಜಿದಾರರು: ಶ್ರೀ. ತಿಮ್ಮಯ್ಯ ಬಿನ್ ಲೇಟ್ ವೆಂಕಟಪ್ಪ @ ವೆಂಕಟಬೋವಿ ವಯಸ್ಸು 77 ವರ್ಷ ವಾಸ: ವಾರ್ಡ್ ನಂ. 26, ಜಾಲಮಂಗಲ ರಸ್ತೆ, ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ, 2ನೇ ಕ್ರಾಸ್, ಇಂದಿರಾ ನಗರ ಬಿಡದಿ ಟೌನ್, ವಿಟಿಸಿ ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇನ್ನೊಬ್ಬರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇನ್ನೊಬ್ಬರು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆಯವರಾದ ಶ್ರೀ ವೆಂಕಟಪ್ಪ @ ವೆಂಕಟಾ ಬೋವಿ ಬಿನ್ ಲೇಟ್ ಜವರಾ ಬೋವಿರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಹಾಲಿ ಹಾರಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ತೋಕಸಂದ್ರ ಗ್ರಾಮದಲ್ಲಿ ದಿನಾಂಕ 04-02-1950 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 30/06/2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಮೇ 20ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎಂ.ಕಾಳಯ್ಯ, ವಕೀಲರು
ಸ್ಥಳ : ಕನಕಪುರ
ದಿನಾಂಕ: 15/5/25

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 922/2024

ಅರ್ಜಿದಾರರು: ಶ್ರೀ ಕರಿಯಪ್ಪ ಬಿನ್ ಲೇಟ್ ಕರೀಈ-ರಯ್ಯ, ವಯಸ್ಸು 75 ವರ್ಷ ವಾಸ: ಕತ್ತಳೆ ಪಾಳ್ಯ ಗ್ರಾಮ ಕೊಡಿಯಾಲ ಕರೇನಹಳ್ಳಿ ಬಿಡದಿ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು. ರಾಮನಗರ ಜಿಲ್ಲೆ ಮತ್ತು ಇನ್ನೊಬ್ಬರು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 5ನೇ ಅರ್ಜಿದಾರರ ತಾಯಿಯವರಾದ ಶ್ರೀಮತಿ ಚನ್ನಮ್ಮ ಕೋಂ ಲೇಟ್ ಕರಿ ಈರಯ್ಯರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಬಳಿ, ಹೇರಿಂದ್ಯಾಪನಹಳ್ಳಿ ಅಂಚೆ, ಗುಳಗಾನಹಳ್ಳಿ ಗ್ರಾಮದಲ್ಲಿ ದಿನಾಂಕ 05.08.2004 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 27/06/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಮೇ 15ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎ. ಗೋವಿಂದರಾಜು
ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 921/2024

ಅರ್ಜಿದಾರರು: ಶ್ರೀ ಕರಿಯಪ್ಪ ಬಿನ್ ಲೇಟ್ ಕರೀಈ-ರಯ್ಯ, ವಯಸ್ಸು 75 ವರ್ಷ ವಾಸ: ಕತ್ತಳೆ ಪಾಳ್ಯ ಗ್ರಾಮ ಕೊಡಿಯಾಲ ಕರೇನಹಳ್ಳಿ ಬಿಡದಿ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು. ರಾಮನಗರ ಜಿಲ್ಲೆ ಮತ್ತು ಇನ್ನೊಬ್ಬರು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 5ನೇ ಅರ್ಜಿದಾರರ ತಂದೆಯವರಾದ ಶ್ರೀ ಕರಿ ಈರಯ್ಯ ಬಿನ್ ಲೇಟ್ ಸಿದ್ದಯ್ಯರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಬಳಿ, ಹೇರಿಂದ್ಯಾಪನಹಳ್ಳಿ ಅಂಚೆ, ಗುಳಗಾನಹಳ್ಳಿ ಗ್ರಾಮದಲ್ಲಿ ದಿನಾಂಕ 07/02/1995 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 27/06/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2025ರ ಮೇ 15ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎ. ಗೋವಿಂದರಾಜು
ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ:

ಪ.ಜಾತಿ ಸಮೀಕ್ಷಾ ಅವಧಿ ವಿಸ್ತರಣೆ

ಬೆಂಗಳೂರು: ನ್ಯಾ.ಎಚ್.ಎನ್. ನಾಗಮೋಹನದಾಸ್ ಅವರ ಏಕ ಸದಸ್ಯ ವಿಚಾರಣಾ ಆಯೋಗದಿಂದ ಪರಿಶಿಷ್ಟ ಜಾತಿ ಒಳ ಮೀಸಲಾತಿ ಕುರಿತು ದತ್ತಾಂಶಗಳನ್ನು ಸಂಗ್ರ ಹಿಸುವ ಕಾರ್ಯವನ್ನು ಮೇ 5 ರಿಂದ ಪ್ರಾರಂಭಿಸಲಾಗಿದ್ದು ಈ ಸಮೀಕ್ಷಾ ಅವಧಿ ಮೇ 28 ರವರೆಗೆ ವಿಸ್ತರಿಸಲಾಗಿದೆ.

ಮೇ 25 ರವರೆಗೆ ಗಣತಿದಾರ ರಿಂದ ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ನಡೆಸಿ ದತ್ತಾಂಶ ಸಂಗ್ರಹಣೆ ಮಾಡಲಾಗುತ್ತದೆ. ಮೇ 26 ರಿಂದ ಮೇ 28 ವರೆಗೆ ಮತಗಟ್ಟೆ ಪ್ರದೇಶ ದಲ್ಲಿ ಆಯೋಜಿಸಿರುವ ವಿಶೇಷ ಶಿಬಿರಗಳಲ್ಲಿ ಪರಿಶಿಷ್ಟ ಜಾತಿ ಜನಾಂಗದವರು ಜಾತಿಯ ಕುರಿತು ಮಾಹಿತಿ ಸಲ್ಲಿಸಲು ಅವಕಾಶ ಕಲ್ಪಿಸ ಲಾಗಿದೆ. ಸಮೀಕ್ಷೆಯಲ್ಲಿ ಭಾಗವಹಿ ಸಲು ಸಾಧ್ಯವಾಗದವರು ಮೇ.19 ರಿಂದ ಮೇ. 28 ರವರೆಗೆ ಆನ್ ಲೈನ್ ಮೂಲಕ ಸ್ವಯಂ ಘೋಷಣೆ ಮಾಡಿ ಕೊಳ್ಳಬಹುದಾಗಿದೆ.

ಜೆಸಿಬಿ ಮೂಲಕ ಪ್ರವಾಹದಲ್ಲಿ ಸಿಲುಕಿದ ಜನರ ರಕ್ಷಣೆ.

ಮಂಗಳವಾರದ ಮಳೆ ವಿವರ

ನಗರದ ರಾಜರಾಜೇಶ್ವರಿ ನಗರ ಒಂದರಲ್ಲೇ ಬರೋಬ್ಬರಿ 135 ಮಿ.ಮೀ ಮಳೆ ಆಗಿದೆ. ಉಳಿದಂತೆ ಕೆಂಗೇರಿ 134.5 ಮಿ.ಮೀ, ನಾಯಂಡಹಳ್ಳಿ 115 ಮಿ.ಮೀ, ವಿದ್ಯಾಪೀಠ 110 ಮಿ.ಮೀ, ಆರ್ ಆರ್ ನಗರ ಕೆಂಗೇರಿ 80.5ಮಿ.ಮೀ, ಹಂಪಿನಗರ 80.5 ಮಿ.ಮೀ, ರಾಜರಾಜೇಶ್ವರಿ ನಗರ 77 ಮಿ.ಮೀ, ಎಚ್ ಗೊಲ್ಲಹಳ್ಳಿ 70.5 ಮಿ.ಮೀ, ದೊರೆಸಾನಿಪಾಳ್ಯ 70.5 ಮಿ.ಮೀ, ಬಿಳೆಕಹಳ್ಳಿ 70 ಮಿ.ಮೀ, ಹೆಮ್ಮಿಗೆಪುರ 62.5 ಮಿ.ಮೀ, ಹೆಮ್ಮಿಗೆಪುರ-2 61 ಮಿ.ಮೀ, ಹೆರೋಹಳ್ಳಿ 61 ಮಿ.ಮೀ, ಅರಕೆರೆ 46.5 ಮಿ.ಮೀ, ಪಟ್ಟಾಭಿರಾಮನಗರ 44 ಮಿ.ಮೀ, ಬಸವೇಶ್ವರ ನಗರ 43ಮಿ.ಮೀ, ಕೋರಮಂಗಲ 33 ಮಿ.ಮೀ, ನಾಗಪುರ 27 ಮಿ.ಮೀ. ಮಳೆ ದಾಖಲಾಗಿದೆ.

ಚಿತ್ರ: ಸುಧಾಕರ್ ದೇವರಾಜ್
ಮಹಾಮಳೆಗೆ ಕೆರೆಯಂತಾಗಿರುವ ಬೆಂಗಳೂರಿನ ಮುಖ್ಯ ರಸ್ತೆ.

ನೀರಿನಲ್ಲಿ ಬೈಕ್ ಸವಾರ ಪರದಾಟ

ಮಳೆಯ ಪರಿಣಾಮ ಮೆಟ್ರೋ ನಿಲ್ದಾಣದ ಬಳಿ ಟ್ರಾಫಿಕ್ ಜಾಮ್

ಬಡಾವಣೆಗಳು ಜಲಾವೃತ | ಕೆರೆಯಾದ ರಸ್ತೆಗಳು | ಜನ-ಜೀವನ ಅಲ್ಲೋಲ ಕಲ್ಲೋಲ | ವಾಹನ ಸವಾರರ ಪರದಾಟ

ಮಳೆ ಅಬ್ಬರಕ್ಕೆ ಸಿಲಿಕಾನ್ ಸಿಟಿ ಜನ ತತ್ತರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರಾದ್ಯಂತ ಪೂರ್ವ ಮುಂಗಾರು ಮಳೆಯ ಅಬ್ಬರವಿನ್ನೂ ಮುಂದುವರಿದಿದ್ದು, ಕಳೆದ 3 ದಿನಗಳಿಂದ ಸುರಿದಿರುವ ಮಳೆ ಹಲವು ಅವಾಂತರ ಸೃಷ್ಟಿಸಿದೆ.

ಮಂಗಳವಾರ ಮುಂಜಾನೆಯಿಂದಲೇ ನಗರದಲ್ಲಿ ಮಳೆಯ ಅಬ್ಬರ ಆರಂಭವಾಗಿದ್ದು, ಬರೋಬ್ಬರಿ 135 ಮಿ.ಮೀ ಮಳೆಯಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ತಿಳಿಸಿದೆ. ತಮಿಳುನಾಡು ಕರಾವಳಿ ಭಾಗದ ಸಮೀಪ ಹವಾಮಾನ ವೈಪರೀತ್ಯ ಉಂಟಾಗಿರುವುದರಿಂದ ಅರಬ್ಬಿ ಸಮುದ್ರಲ್ಲೂ ಇದೇ ರೀತಿಯವಾತಾವರಣ ಉಂಟಾಗಿದೆ. ಸಮುದ್ರದ ಮೇಲ್ಮೈನಲ್ಲಿ ಚಂಡ ಮಾರುತ ಪರಿಚಲನೆ ಉಂಟಾಗಿರುವುದರಿಂದ ಬೆಂಗಳೂರು ಹಾಗೂ ರಾಜ್ಯಾದ್ಯಂತ ಭಾರಿ ಪ್ರಮಾಣದಲ್ಲಿ ಮಳೆಯಾಗುತ್ತಿದೆ.

ನಗರದಲ್ಲಿ ಸಾಲು ಸಾಲು ಸಮಸ್ಯೆಗಳು: ಮಳೆಯಿಂದಾಗಿ 500ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದ್ದು, 20 ಕೆರೆಗಳು ಉಕ್ಕಿ ಹರಿದು ಬಡಾವಣೆಗಳನ್ನು ಜಲಾವೃತವಾಗಿಸಿವೆ. ಮಧುವನ ಅಪಾರ್ಟ್‌ಮೆಂಟ್, ಡಾಲರ್ಸ್ ಕಾಲೋನಿ, ಬಿಟಿಎಂ ಲೇಔಟ್‌ನಲ್ಲಿ ಎಲ್ಲಿ ನೋಡಿದರೂ ನೀರಿನ ಹೊರತಾಗಿ ಬೇರೇನೂ ಕಾಣದಂತಾಗಿದೆ. ವರುಣನ ಆರ್ಭಟಕ್ಕೆ ಸಾಯಿ ಲೇಔಟ್‌ನ ಜನರು ಹೈರಾಣಾಗಿ ಹೋಗಿದ್ದಾರೆ. ಮನೆಗಳಿಗೆ ಮಳೆ ನೀರು ನುಗ್ಗಿದ್ದು, ಹೊರಬರಲಾಗದೆ ಪರದಾಡುತ್ತಿದ್ದಾರೆ. ಅಲ್ಲದೆ ಶ್ವಾನಗಳು, ಹಸುಗಳು ಮಳೆ ನೀರಿನಲ್ಲಿ ಪರದಾಡುವಂತಹ ದೃಶ್ಯಗಳು ಹೃದಯ ವಿದ್ರಾವಕವಾಗಿವೆ. ಅಲ್ಲದೆ ಮಳೆ ನೀರಿನಲ್ಲಿ ವಿಷಜಂತುಗಳು ಕೂಡ ಮನೆಯೊಳಗೆ ನುಗ್ಗುತ್ತಿದ್ದು, ಬಿಬಿಎಂಪಿ ಸಿಬ್ಬಂದಿ ಬೋಟ್‌ನಲ್ಲಿ ತೆರಳಿ ಮನೆಯಲ್ಲಿ ಸಿಲುಕಿಕೊಂಡವರನ್ನು ರಕ್ಷಣೆ ಮಾಡುವುದರ ಜತೆಗೆ ಅಗತ್ಯ ವಸ್ತುಗಳನ್ನು ಪೂರೈಕೆ ಮಾಡುತ್ತಿದ್ದಾರೆ.

ಮಳೆಯಬ್ಬರಕ್ಕೆ ನಂದಗೋಕುಲ ಲೇಔಟ್‌ನಲ್ಲಿ ಅಕ್ಷರಶಃ ನಲುಗಿ ಹೋಗಿದೆ. ನಾಗವಾರ ಎಲಿಮೆಂಟ್ಸ್ ಮಾಲ್ ಎದುರು ಕೆರೆಯಂತಾಗಿದ್ದು ಜನರು ಓಡಾಡಲು ಪರದಾಡುತ್ತಿದ್ದಾರೆ. ನಗರದ ಪ್ರತಿಷ್ಠಿತ ಎಚ್‌ಎಸ್‌ಆರ್ ಲೇಔಟ್‌ನಲ್ಲೂ ಜಲಪ್ರವಾಹ ಉಂಟಾಗಿದೆ. ಧಾರಾಕಾರ ಮಳೆಯಿಂದಾಗಿ ಕಟ್ಟಡಗಳಿಗೆ ಮಳೆ ನೀರು ನುಗ್ಗಿದೆ.

ಈಜುಕೊಳದಂತಾದ ಹೊಸೂರು ರಸ್ತೆ: ಹೊಸೂರು ರಸ್ತೆಯಲ್ಲಿ ಭಾರೀ ಮಳೆಯಿಂದಾಗಿ ವಾಹನ ಸಂಚಾರ ಸ್ಥಗಿತಗೊಂಡಿದ್ದು, ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ರೂಪೇನ ಅಗ್ರಹಾರವರೆಗೆ ಸಂಚಾರ ಸ್ಥಗಿತಗೊಳಿಸಲಾಗಿದೆ. ಅಲ್ಲದೇ ಸಂಚಾರ ಪೊಲೀಸರು ಎಲಿವೇಟೆಡ್ ಫ್ಲೈಓವರ್‌ನ್ನು ಕೂಡಾ ಬಂದ್ ಮಾಡಿದ್ದು, ಪರ್ಯಾಯ ಮಾರ್ಗ ಬಳಸುವಂತೆ ವಾಹನ ಸವಾರರಿಗೆ ಸೂಚನೆ ನೀಡಿದ್ದಾರೆ. ಹೆಣ್ಣೂರು ಸೇರಿದಂತೆ ಅನೇಕ ಕಡೆಗಳಲ್ಲಿ ಅಪಾರ್ಟ್‌ಮೆಂಟ್‌ಗಳಿಗೆ ನೀರು ನುಗ್ಗಿದ್ದು, ಅನಧಿಕೃತ ಒತ್ತುವರಿ, ಸಮರ್ಪಕ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಈ ರೀತಿಯ ಅವಾಂತರಗಳಿಗೆ ಕಾರಣ ಎನ್ನಲಾಗಿದೆ. ಬಿಡಿಎ ನಿರ್ಮಾಣ ಮಾಡುತ್ತಿರುವ ನಾಡಪ್ರಭು ಕೆಂಪೇಗೌಡ ಲೇಔಟ್ ಪರಿಸ್ಥಿತಿಯೂ ಇದಕ್ಕಿಂತ ಹೊರತಾಗಿಲ್ಲ.

2011ರ ಬಳಿಕ ಬೆಂಗಳೂರಿನಲ್ಲಿ ದಾಖಲೆ

ಮೇ.18-19 ರಂದು ಬೆಂಗಳೂರು ಮಳೆಯಲ್ಲಿ ದಾಖಲೆ ಬರೆದಿದೆ. 2011ರ ಬಳಿಕ ಮೇ ತಿಂಗಳಲ್ಲಿ ಬೆಂಗಳೂರಲ್ಲಿ ಸುರಿದ 2ನೇ ಗರಿಷ್ಠ ಪ್ರಮಾಣದ ಮಳೆ ಇದಾಗಿದೆ. ಮೇ.18ರ ಬೆಳಗ್ಗೆ 8.30ರಿಂದ ಸೋಮವಾರ ಬೆಳಗ್ಗೆ 8.30ರ ವರೆಗೆ 105.5 ಎಂಎಂ ಮಳೆಯಾಗಿದೆ. ಇದು 2011ರ ಬಳಿಕ ಮೇ ತಿಂಗಳಲ್ಲಿ ಕಂಡ 2ನೇ ಅತ್ಯಧಿಕ ಮಳೆಯಾಗಿದೆ. 2022ರ ಮೇ ತಿಂಗಳಲ್ಲಿ ಬೆಂಗಳೂರಿನಲ್ಲಿ 114.6 ಎಂಎಂ ಮಳೆ ದಾಖಲಾಗಿತ್ತು. ಇನ್ನು ಬೆಂಗಳೂರು ಇತಿಹಾಸದಲ್ಲಿ ಮೇ ತಿಂಗಳಲ್ಲಿ ಗರಿಷ್ಠ ಮಳೆ ದಾಖಲಾದ ದಿನ 1909ರ ಮೇ.6. ಅಂದು 153.9 ಎಂಎಂ ಮಳೆ ದಾಖಲಾಗಿತ್ತು.

ಜೆಸಿಬಿ ಮೂಲಕ ಟೆರೆಸ್‌ಗೆ ಊಟ

ಜೆಸಿಬಿ ಮೂಲಕ ಟೆರಸ್‌ಗೆ ಊಟ, ನೀರನ್ನು ಬಿಬಿಎಂಪಿ ಸಿಬ್ಬಂದಿಗಳು ಸರಬರಾಜು ಮಾಡುತ್ತಿದ್ದಾರೆ. ನಗರದ ಬಹುತೇಕ ಪ್ರದೇಶಗಳಲ್ಲಿ ರಾತ್ರಿಯಿಡಿ ಮಳೆಯಾದ ಪರಿಣಾಮ ಎಲ್ಲಿ ನೋಡಿದ್ರು ಕೆರೆ, ನದಿಗಳು ಉದ್ಭವವಾಗಿವೆ. ಕೇವಲ ಎರಡು ದಿನ ಸುರಿದ ಮಳೆಗೆ ನಗರದ ರಾಜಕಾಲುವೆಗಳು ನದಿಯಂತೆ ಉಕ್ಕಿ ಹರಿಯುತ್ತಿವೆ. ಯಲಚೇನ ಹಳ್ಳಿಯ ಉಮರ್ ರಸ್ತೆಯಂತೂ ಥೇಟ್ ಕೆರೆಯಂತೆ ಪರಿವರ್ತನೆಯಾಗಿತ್ತು.

ಭಾನುವಾರದಿಂದ ಬಿಡದೇ ಸುರಿಯುತ್ತಿರುವ ಮಳೆಗೆ ನಾಡಪ್ರಭು ಕೆಂಪೇಗೌಡ ಲೇಔಟ್‌ನ ಬಹುತೇಕ ಭಾಗಗಳಲ್ಲಿ ಪ್ರವಾಹದ ಪರಿಸ್ಥಿತಿ ಉಂಟಾಗಿದೆ. ಕೆಂಪೇಗೌಡ ಲೇಔಟ್ ಕಾಮಗಾರಿ ಶೇ.90ರಷ್ಟು ಪೂರ್ಣಗೊಂಡಿದೆ ಎಂದು ಅಧಿಕಾರಿಗಳು ಹೇಳಿದ್ದು, ಆದರೆ ಇದು ಶೇ. 1 ರಷ್ಟು ಕೂಡ ವಾಸಯೋಗ್ಯವಾಗಿಲ್ಲ ಎಂಬುದು ಮಳೆಯಿಂದ ಸಾಬೀತಾಗಿದೆ ಎಂದು ಸಾರ್ವಜನಿಕರು ಆಕ್ಷೇಪಿಸಿದ್ದಾರೆ.

ಮಡಿವಾಳದ ಅಯ್ಯಪ್ಪ ಅಂಡರ್ ಪಾಸ್ ಜಲಾವೃತಗೊಂಡಿದೆ. ಹೊಸೂರು ಮುಖ್ಯರಸ್ತೆಯಲ್ಲಿ ಬೆಂಗಳೂರಿನ ಹೊರಭಾಗಕ್ಕೆ ಹೋಗುವ ಮತ್ತು ನಗರದ ಒಳಭಾಗದ ಸಂಚಾರಕ್ಕೆ ತೀವ್ರ ತೊಂದರೆ ಎದುರಾಗಿದೆ. ಅಂಡರ್ ಪಾಸ್‌ನಲ್ಲಿ ಸಂಚರಿಸಲಾಗದೆ ದ್ವಿಚಕ್ರ ವಾಹನ ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮಳೆಯ ನಡುವೆಯೇ ದ್ವಿಚಕ್ರ ಸವಾರರು ಸಂಚಾರ ಮಾಡಬೇಕಾಯಿತು. ರಸ್ತೆಗಳಲ್ಲಿ ನಿಂತ ನೀರಿನಿಂದಾಗಿ ಕೆಲವು ಕಡೆ ಗುಂಡಿಗಳಿದ್ದರೂ ಗೊತ್ತಾಗದೆ ವಾಹನ ಸವಾರರು ತಮ್ಮ ವಾಹನಗಳನ್ನು ಗುಂಡಿಗಿಳಿಸಿ ಹೈರಾಣಾದರು.

ಸ್ಥಳದಲ್ಲೇ ಬೀಡುಬಿಟ್ಟ ರಕ್ಷಣಾ ಸಿಬ್ಬಂದಿ: ಸಾಯಿ ಲೇಔಟ್‌ನಲ್ಲಿ ಇನ್ನು ಕೆಲವೆಡೆ ರಾಜಕಾಲುವೆಗಳು ತುಂಬಿ ಹರಿಯುತ್ತಿವೆ. ಮತ್ತೆ ಮಳೆ ಬರುತ್ತಿರುವುದರಿಂದ ನೀರಿನ ಮಟ್ಟ ಏರಿಕೆಯಾಗುವ ಆತಂಕದಲ್ಲಿ ನಿವಾಸಿಗಳು ಕಾಲ ಕಳೆಯುವಂತಾಗಿದೆ. ಹೀಗಾಗಿ ಸ್ಥಳದಲ್ಲೇ ಅಗ್ನಿಶಾಮಕ ದಳ, ಆಂಬ್ಯುಲೆನ್ಸ್, ರಾಜ್ಯ ವಿಪತ್ತು ನಿರ್ವಹಣಾ ತಂಡ, ಬೋಟ್‌ಗಳ ಸಹಿತ ಬಿಬಿಎಂಪಿ ಸಿಬ್ಬಂದಿ ಸ್ಥಳದಲ್ಲೇ ಬೀಡುಬಿಟ್ಟಿದ್ದಾರೆ.

ಕೆ.ಆರ್ ಮಾರ್ಕೆಟ್‌ನಲ್ಲಿ ಭಾರಿ ಮಳೆಯಿಂದಾಗಿ ಹೂವು ವ್ಯಾಪಾರಿಗಳ ಪರಿಸ್ಥಿತಿ ಚಿಂತಾಜನಕವಾಗಿತ್ತು. ಸಾವಿರ ಸಾವಿರ ಮೌಲ್ಯದ ಹೂವು ಮಳೆಯಿಂದ ಹಾನಿಗೊಳಗಾಗಿ ವ್ಯಾಪಾರಿಗಳು ತಲೆ ಮೇಲೆ ಕೈ ಹೊತ್ತು ಕುಳಿತುಕೊಳ್ಳುವಂತಾಗಿತ್ತು. ಕಳೆದ ಹತ್ತಾರು ವರ್ಷಗಳಿಂದ ನಾವು ಹೂ ವ್ಯಾಪಾರ ಮಾಡುತ್ತೇವೆ. ಪ್ರತೀ ಬಾರಿ ಈ ಪರಿಸ್ಥಿತಿ ಎದುರಾದರೂ ಯಾವುದೇ ಪರಿಹಾರವಿಲ್ಲ. ಹೀಗಾದಾರೆ ನಾವು ಹೊಟ್ಟೆ ಮೇಲೆ ತಣ್ಣಿರು ಬಟ್ಟೆ ಹಾಕಿಕೊಳ್ಳಬೇಕಾಗುತ್ತದೆ ಎಂದು ವ್ಯಾಪಾರಿಗಳು ಗೋಳಾಡುತ್ತಿದ್ದಾರೆ.

ಕೆ.ಆರ್ ಮಾರ್ಕೆಟ್ ಪಾರ್ಕಿಂಗ್ ಜಾಗದಲ್ಲಿ ಎದೆ ಮಟ್ಟದ ನೀರು ನಿಂತಿರುವುದರಿಂದ ನೂರಕ್ಕೂ ಹೆಚ್ಚು ವಾಹನಗಳು ನೀರಿನಲ್ಲಿ ಮುಳುಗಿ ಹೋಗಿವೆ. ವಾಹನಗಳು ಪಾರ್ಕಿಂಗ್ ಲಾಟ್‌ನಲ್ಲೇ ಸಿಲುಕಿಕೊಂಡಿವೆ. ನೀರಲ್ಲಿ ಬೈಕ್‌ಗಳು ಕೆಟ್ಟು ನಿಂತಿದ್ದು,ಹೊರ ತೆಗೆಯಲಾಗದ ಸ್ಥಿತಿ ಎದುರಾಗಿದೆ. ವ್ಯಾಪಾರಸ್ಥರ ತಳ್ಳುಗಾಡಿ ಸೇರಿದಂತೆ ಎಲ್ಲವೂ ಜಲಾವೃತವಾಗಿವೆ. ಮಾರುಕಟ್ಟೆಯ ಎಲ್ಲ ಕಡೆ ನೀರು ನಿಂತ ಪರಿಣಾಮ ಇಡಿ ಪ್ರದೇಶ ಕೊಳಚೆ ಪ್ರದೇಶವಾಗಿ ಪರಿವರ್ತನೆಯಾಗಿದೆ.

ಕೆಂಗೇರಿಯ ಗುರುಕುಲ ಅನಾಥಾಶ್ರಮಕ್ಕೆ ಜಲಬಂಧನವೇ ಸೃಷ್ಟಿಯಾಗಿದೆ. ಮಕ್ಕಳು ಮಲಗಿದ್ದ ವೇಳೆ ಭಾರೀ ಮಳೆಯಾಗಿದ್ದು, ಗುರುಕುಲ ಆಶ್ರಮಕ್ಕೆ ನೀರು ನುಗಿದೆ. ತಕ್ಷಣವೇ ಆಶ್ರಮದ ಸಿಬ್ಬಂದಿ ಸ್ಥಳೀಯ ಕಟ್ಟಡಕ್ಕೆ ಸುಮಾರು 40ಕ್ಕೂ ಹೆಚ್ಚು ಮಕ್ಕಳನ್ನು ಸ್ಥಳಾಂತರ ಮಾಡಿದ್ದಾರೆ.

ಗಿರಿನಗರದ 80 ಅಡಿ ರಸ್ತೆಯಲ್ಲಿ ಮರವೊಂದು ಧರೆಗುರುಳಿದೆ. ಕಾರಿನ ಮೇಲೆ ಮರ ಬಿದ್ದು ಕಾರು ಸಂಪೂರ್ಣ ಜಖಂ ಆಗಿದೆ. ಕಾರು ಇಳಿದು ಹೋದ ಅರ್ಧ ಗಂಟೆಯಲ್ಲೇ ಮರ ನೆಲಕ್ಕುರುಳಿದೆ. ಅದೃಷ್ಟವಶಾತ್ ಯಾರಿಗೂ ತೊಂದರೆಯಾಗಿಲ್ಲ. ಇಂದಿರಾನಗರದಲ್ಲಿ ಕೆಲ ಮನೆಗಳಿಗೆ ನೀರು ನುಗ್ಗಿದೆ. ಸೋಮವಾರದಿಂದಲೂ ರಸ್ತೆ ಮೇಲೆ ಮಳೆ ನೀರು ನಿಂತಿದೆ. ಸರಿಯಾದ ಕಾಮಗಾರಿ ನಡೆಸದ ಹಿನ್ನೆಲೆ ಈ ಪರಿಸ್ಥಿತಿ ಎದುರಾಗಿದೆ ಎಂದು ಬಿಬಿಎಂಪಿ,ಜಲಮಂಡಳಿ ಅಧಿಕಾರಿಗಳ ವಿರುದ್ಧ ಜನ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ಸಂಜೆ ಬೆಂಗಳೂರಿನ ಕಸ್ತೂರಿ ನಗರದ ಮುಖ್ಯ ರಸ್ತೆಯಲ್ಲಿ ಬೃಹತ್ ಮರ ಧರಶಾಹಿಯಾಗಿದೆ. ಅದೃಷ್ಟವಶಾತ್ ಈ ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಮರ ಧರೆಗುರುಳುವ ವೇಳೆ ಸ್ಥಳದಲ್ಲಿ ಯಾರೂ ಇಲ್ಲದ ಕಾರಣ ದುರಂತ ತಪ್ಪಿದೆ. ಆದ್ರೆ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ 2 ಕಾರು ಹಾಗೂ ಟೆಂಪೋ ಮರದ ಕೆಳಗೆ ಸಿಲುಕಿ ಸಂಪೂರ್ಣ ಜಖಂ ಆಗಿದ್ದು ರಸ್ತೆ ಸಂಚಾರಕ್ಕೆ ಅಡಚಣೆಯಾಗಿದೆ.

ಇ-ಸಿಟಿ ಸಂಚಾರ ಬಂದ್

ಎಲೆಕ್ಟ್ರಾನಿಕ್ ಸಿಟಿ ಸಮೀಪದ ಮೇಲ್ಸೆತುವೆಯಲ್ಲಿ ನೀರು ನಿಂತಿರುವುದರಿಂದ ಈ ಭಾಗದ ಸಂಚಾರ ಬಂದ್ ಮಾಡಲಾಗಿದೆ. ಎಲೆಕ್ಟ್ರಾನಿಕ್ ಸಿಟಿ, ಬೊಮ್ಮನಹಳ್ಳಿ ಸಂಪರ್ಕ ಕಲ್ಪಿಸುವ ಮೇಲ್ಸೆತುವೆ ಬಂದ್ ಆಗಿರುವುದರಿಂದ ಮೇಲ್ಸೇತುವೆ ಕೆಳಗಡೆ ಕಿ.ಮೀಗಟ್ಟಲೆ ಸಂಚಾರ ದಟ್ಟಣೆ ಉಂಟಾಗಿದೆ.

ಪವರ್ ಕಟ್: ಸೋಮವಾರ ಕರೆಂಟ್ ಶಾಕ್‌ನಿಂದ ಇಬ್ಬರು ಮೃತಪಟ್ಟಿರುವ ಬಿಟಿಎಂ ಬಡಾವಣೆಯ ಮಧುವನ ಅಪಾರ್ಟ್‌ಮೆಂಟ್‌ಗೆ ಕಲ್ಪಿಸುವ ವಿದ್ಯುತ್ ಸಂಪರ್ಕವನ್ನು ಸ್ಥಗಿತಗೊಳಿಸಲಾಗಿದೆ. ಸ್ಥಳದಲ್ಲಿ ಮೈಕೋ ಲೇಔಟ್ ಪೊಲೀಸರು ಬ್ಯಾರಿಕೇಡ್ ಅಳವಡಿಸಿದ್ದಾರೆ.

ಮಳೆಯ ಪರಿಣಾಮ ಮೆಟ್ರೋ ನಿಲ್ದಾಣದ ಬಳಿ ಟ್ರಾಫಿಕ್ ಜಾಮ್



ಮಳೆ ಕಡಿಮೆಯಾದ ನಂತರ ಇದರ ಬಗ್ಗೆ ಕಾರ್ಯಸೂಚಿ ಬಿಡುಗಡೆ : ಡಿಸಿಎಂ

ತಗ್ಗು ಪ್ರದೇಶಗಳಲ್ಲಿ ಅಂಡರ್ ಗ್ರೌಂಡ್ ವಾಹನ ನಿಲ್ದಾಣ ನಿರ್ಮಾಣಕ್ಕೆ ಅವಕಾಶವಿಲ್ಲ

ಬೆಂಗಳೂರು: ಕೆರೆಗಳ ಹತ್ತಿರ ಹಾಗೂ ತಗ್ಗು ಪ್ರದೇಶಗಳಲ್ಲಿ ಅಂಡರ್ ಗ್ರೌಂಡ್ ನಿರ್ಮಾಣ ಮಾಡಿ ವಾಹನ ನಿಲ್ದಾಣಕ್ಕೆ ಅವಕಾಶ ನೀಡದಂತೆ ಭವಿಷ್ಯದಲ್ಲಿ ಕಾನೂನು ತರಲಾಗುವುದು. ಮಳೆ ಕಡಿಮೆಯಾದ ನಂತರ ಇದರ ಬಗ್ಗೆ ಕಾರ್ಯಸೂಚಿ ಬಿಡುಗಡೆ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಬೆಂಗಳೂರಿನಲ್ಲಿ ಸುರಿದ ಮಳೆಯಿಂದ ಉಂಟಾದ ವಿದ್ಯುತ್ ಅವಘಡದಲ್ಲಿ ಬಿಟಿಎಂ 2ನೇ ಹಂತದ ಡಾಲರ್ಸ್ ಕಾಲೋನಿ ಬಳಿಯ ಎಂ.ಎಸ್. ಪಾಳ್ಯದಲ್ಲಿ ಮನಮೋಹನ್ ಕಾಮತ್ ಹಾಗೂ ದಿನೇಶ್ ಎಂಬುವರು ಮೃತಪಟ್ಟಿರುವ ಹಿನ್ನೆಲೆಯಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಘಟನಾ ಸ್ಥಳಕ್ಕೆ ಅಧಿ ಕಾರಿಗಳ ಜತೆ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಅಂಡರ್ ಗ್ರೌಂಡ್ ಹೊರತು ಪಡಿಸಿ ನೆಲ ಮಹಡಿಯಲ್ಲಿ ವಾಹನಗಳನ್ನು ನಿಲ್ಲಿಸುವ ರೀತಿ ಯೋಜನೆ ರೂಪಿಸುವ ಆಲೋಚನೆಯಿದೆ. ಅದರ ಮೇಲೆ ಜನರು ವಾಸಕ್ಕೆ ಮನೆ ನಿರ್ಮಾಣ ಮಾಡಿಕೊಳ್ಳಲಿ. ಅಂಡರ್ ಗ್ರೌಂಡ್‌ನಲ್ಲಿ ಸಂಗ್ರಹವಾಗಿದ್ದ ನೀರನ್ನು ಪಂಪ್ ಹಾಕಿ ಖಾಲಿ ಮಾಡುವಾಗ ಅಧಿಕಾರಿಗಳು, ಪೊಲೀಸ್ ಹಾಗೂ ಸಹಾಯ ಮಾಡಲು ಬಂದ ವ್ಯಕ್ತಿಗಳಿಗೂ ವಿದ್ಯುತ್ ಆಘಾತವಾಗಿದೆ. ಈ ವೇಳೆ ಮೃತಪಟ್ಟ ನಾಗರಿಕರಿಗೂ ಪರಿಹಾರ ನೀಡಲಾಗುವುದು. ಮಳೆ ಅವಘಡದಿಂದ ಮೃತಪಟ್ಟವರಿಗೆ 5 ಲಕ್ಷ ಪರಿಹಾರ ನೀಡಲಾಗುತ್ತಿದೆ. ಜಾನುವಾರುಗಳು ಸಹ ಮೃತಪಟ್ಟಿದ್ದು ಇದಕ್ಕೂ ಪರಿಹಾರ ನೀಡಲಾಗುವುದು. ನಮ್ಮ ಅಧಿಕಾರಿಗಳಿಗೆ ದಿನಪೂರ್ತಿ ಎಚ್ಚರವಹಿಸುವಂತೆ ಸೂಚನೆ ನೀಡಲಾಗಿದೆ ಎಂದರು.

ವಿದ್ಯುತ್ ಅವಘಡದಲ್ಲಿ ಬಿಟಿಎಂ 2ನೇ ಹಂತದ ಡಾಲರ್ಸ್ ಕಾಲೋನಿ ಬಳಿಯ ಎಂ.ಎಸ್. ಪಾಳ್ಯದಲ್ಲಿ ಮನಮೋಹನ್ ಕಾಮತ್ ಹಾಗೂ ದಿನೇಶ್ ಎಂಬುವರು ಮೃತಪಟ್ಟಿರುವ ಹಿನ್ನೆಲೆಯಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಘಟನಾ ಸ್ಥಳಕ್ಕೆ ಅಧಿಕಾರಿಗಳ ಜತೆ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ಆಚರಣೆ ಮಾಡಲು ನಮಗೆ ಹಕ್ಕಿಲ್ಲವೇ?

ಬಿಜೆಪಿಯವರು ಮಳೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ನಿಮ್ಮ ಫೋಟೋ ಹಿಡಿದು ವ್ಯಂಗ್ಯ ಮಾಡಿರುವ ಬಗ್ಗೆ ಕೇಳಿದಾಗ, ಅವರಿಂದ ಇನ್ನೇನು ಮಾಡಲು ಸಾಧ್ಯವಾಗುತ್ತದೆ, ಮಾಡಲಿ ಬಿಡಿ. ನಾವು ಎರಡು ವರ್ಷದ ಸಂಭ್ರಮಾಚರಣೆ ಮಾಡಿದ್ದೇವೆ. ಮೋದಿಯವರ ಸರಕಾರಕ್ಕೆ 5 ವರ್ಷ ತುಂಬಿದಾಗ ಸಂಭ್ರಮ ಮಾಡಿರಲಿಲ್ಲವೇ? ಸಂತೋಷ ಪಡಬೇಡ ಎಂದು ಹೇಳಿದರೆ ಹೇಗೆ, ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇವೆ. ಆಚರಣೆ ಮಾಡಲು ನಮಗೆ ಹಕ್ಕಿಲ್ಲವೇ? ಕಾರ್ಯಕ್ರಮ ಮೊದಲೇ ನಿಗದಿಯಾಗಿತ್ತು, ಆಗ ಮಳೆ ಬಂದಿದೆ. ಈಗ ಉಂಟಾಗಿರುವ ಸಮಸ್ಯೆಗಳನ್ನು ಬಗೆಹರಿಸಲು ನಾವಿದ್ದೇವೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಬಿಬಿಎಂಪಿ ಹಾಗೂ ಬಿಡಬ್ಲ್ಯೂಎಸ್‌ಎಸ್ ಬಿಯವರಿಂದ ಸರಿಯಾದ ಪ್ರತಿಕ್ರಿಯೆ ದೊರೆಯುತ್ತಿಲ್ಲ ಎನ್ನುವ ಸಾರ್ವಜನಿಕರ ದೂರಿನ ಬಗ್ಗೆ ಕೇಳಿದಾಗ, ಬೆಂಗಳೂರಿನ ಜನಸಂಖ್ಯೆ 1.40 ಕೋಟಿಯಿದೆ. ವಾರ್ ರೂಮಲ್ಲಿ ಹೇಗೆ ಕೆಲಸ ನಡೆಯುತ್ತದೆ ಎಂದು ಒಮ್ಮೆ ಬಂದು ನೋಡಿ. ಎಲ್ಲರು ತಂಡವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು. ಮಳೆ ಬಂದು ಅವಘಡ ಉಂಟಾಗಿರುವ ಭಾಗದಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಸಾರ್ವಜನಿಕರು ಸಹ ಸಹಕಾರ ನೀಡುತ್ತಿದ್ದಾರೆ. ವಾರ್ ರೂಮ್ ಮೂಲಕವೂ ಪರಿಸ್ಥಿತಿಯನ್ನು ಅವಲೋಕಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಟೀಕೆ ಮಾಡುತ್ತಿರುವವರು ಬೆಂಗಳೂರಿನ ಹೆಸರನ್ನು ಹಾಳು ಮಾಡುತ್ತಿದ್ದಾರೆ ಎಂದರು.

ಮಳೆಯಿಂದ ನಗರದಲ್ಲಿ ಸಮಸ್ಯೆ: ಅಧಿಕಾರಿಗಳಿಗೆ ತರಾಟೆ

ಬೆಂಗಳೂರು: ನಗರದಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ಸಮಸ್ಯೆಗೀಡಾಗಿರುವ ಸಿಲ್ಕ್ ಬೋರ್ಡ್ ಸರ್ಕಲ್‌ನಲ್ಲಿ ಸ್ಥಳ ಪರಿಶೀಲನೆ ನಡೆಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಂಬಂಧಿಸಿದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಪರಿಶೀಲನೆ ಬಳಿಕ ಅಧಿಕಾರಿಗಳ ಜತೆ ಮಾತನಾಡಿ, ಮೆಟ್ರೊ ಕಾಮಗಾರಿಯಿಂದಾಗಿ ನೀರಿನ ಹರಿವಿಗೆ ತಡೆಯುಂಟು ಮಾಡಲಾಗಿತ್ತು. ಕಳೆದ ವರ್ಷ ಇದೇ ಜಾಗದಲ್ಲಿ ಒಬ್ಬ ವ್ಯಕ್ತಿ ಮಳೆಯಿಂದಾಗಿ ಮೃತಪಟ್ಟಿದ್ದರು. ಆದರೂ ನೀವು ಎಚ್ಚೆತ್ತುಕೊಂಡಿಲ್ಲ. ನೀರಿನ ಹರಿವಿಗೆ ಅಡ್ಡಲಾಗಿರುವ ತಡೆಗಳ ತೆರವುಕಾರ್ಯ ಏಕೆ ನಡೆದಿಲ್ಲ. ಇದರಿಂದಾಗಿ ಜನ ಸಮಸ್ಯೆ ಅನುಭವಿಸುವಂತಾಗಿದೆ, ಕೂಡಲೇ ನೀರಿನ ಹರಿವು ಸರಾಗವಾಗಿ ಆಗಲು ರಾಜಕಾಲುವೆ, ಒಳಚರಂಡಿ ಹಾಗೂ ಇತರೆ ವ್ಯವಸ್ಥೆಗಳನ್ನು ಮುಕ್ತಗೊಳಿಸಬೇಕು ಎಂದು ಆದೇಶಿಸಿದರು.

ಸ್ಥಳೀಯ ಜನಪ್ರತಿನಿಧಿಗಳು ಮೆಟ್ರೋ ಅಧಿಕಾರಿಗಳ ವಿರುದ್ಧ ದೂರಿದ್ದು, ನೀರು ನಿಂತು ಸಾರ್ವಜನಿಕರು ಪರದಾಡುತ್ತಿದ್ದರೆ ಮೆಟ್ರೋ ಅಧಿಕಾರಿಗಳು ಯಾವುದಕ್ಕೂ ಸ್ಪಂದಿಸುತ್ತಿಲ್ಲ. ಕೊನೆಗೆ ನಾವೇ ಜೆಸಿಬಿ ತಂದು ಅಡೆತಡೆಗಳನ್ನು ತೆರವು ಮಾಡಬೇಕಾದ ಪರಿಸ್ಥಿತಿಯಿದೆ. ಅದಕ್ಕೂ ಸಹಕಾರ ನೀಡುವುದಿಲ್ಲ. ಫೋನ್ ಕರೆಗಳಿಗೂ ಸಿಗುವುದಿಲ್ಲ ಎಂದು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಒಂದು ಹಂತದಲ್ಲಿ ಸಿಟ್ಟಾದ ಸಚಿವ ರಾಮಲಿಂಗಾರೆಡ್ಡಿ, ಏನು ಕೆಲಸ ಮಾಡುತ್ತೀರಾ? ನಿಮ್ಮ ಉದ್ದೇಶಗಳೇನು?, ಕಾಮನ್ ಸೆನ್ಸ್ ಇಲ್ಲವೇ ಎಂದು ಕಿಡಿಕಾರಿದರು. ನಿಮ್ಮ ಬೇಜವಾಬ್ದಾರಿಯಿಂದ ಒಬ್ಬ ವ್ಯಕ್ತಿ ಮೃತಪಟ್ಟ ಬಳಿಕವೂ ನೀವು ಎಚ್ಚೆತ್ತುಕೊಂಡಿಲ್ಲ ಎಂದರೆ ನಿಮ ಉದ್ದೇಶವೇನು? ರಾಜಕಾಲುವೆಗಳನ್ನು ಅಡ್ಡ ಹಾಕಿ ಏಕೆ ತೊಂದರೆ ಕೊಡುತ್ತಿದ್ದೀರಾ ಎಂದು ಮೆಟ್ರೋ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ಸಮಸ್ಯೆಗೀಡಾಗಿರುವ ಸಿಲ್ಕ್ ಬೋರ್ಡ್ ಸರ್ಕಲ್‌ನಲ್ಲಿ ಸ್ಥಳ ಪರಿಶೀಲನೆ ನಡೆಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಂಬಂಧಿಸಿದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಮೆಟ್ರೋ ನಿಲ್ದಾಣ ಒಳಗೆ ಮಳೆ ನೀರು ನುಗ್ಗಿರುವುದು.

ಜೆಸಿಬಿ ಮೂಲಕ ಮಳೆ ನೀರು ತೆರವು ಮಾಡುತ್ತಿರುವುದು.

ಸಮಾಚಾರ ಸಣ್ಣದಲ್ಲ

ಸಾಲೂರು ಶ್ರೀ ಲಿಂಗೈಕ್ಯ

ಚಾಮರಾಜನಗರ: ಮಲೆ ಮಹದೇಶ್ವರ ಬೆಟ್ಟದ ಸಾಲೂರು ಮಠದ ಹಿರಿಯ ಶ್ರೀ ಗುರು ಸ್ವಾಮೀಜಿ (69) ದೀರ್ಘ ಕಾಲದ ಅನಾರೋಗ್ಯ ದಿಂದ ಮಂಗಳವಾರ ಬೆಳಗ್ಗೆ ಲಿಂಗೈಕ್ಯರಾಗಿದ್ದಾರೆ. ಸಾಲೂರು ಮಠದಲ್ಲಿ ಮಂಗಳವಾರ ಸಂಜೆ ಅಂತ್ಯಕ್ರಿಯೆ ನಡೆಯಿತು.

ಹನೂರು ತಾಲೂಕಿನ ಜಿಕೆ ಹೊಸೂರು ಗ್ರಾಮದಲ್ಲಿ ಪೂರ್ವಾಶ್ರಮದ ತಂದೆ ರುದ್ರಪ್ಪ ಮತ್ತು ತಾಯಿ ಪುಟ್ಟ ಮಾದಮ್ಮ ಅವರ ಪುತ್ರರಾಗಿ 1956 ಆಗಸ್ಟ್ 2 ರಂದು ಗುರು ಸ್ವಾಮೀಜಿ ಜನಿಸಿದರು. 1995ರ ಜನವರಿ 26ರಂದು ಸಾಲೂರು ಮಠದ ಪೀಠಾಧ್ಯಕ್ಷ ರಾಗಿ ಅಧಿಕಾರ ಸ್ವೀಕರಿಸಿದ್ದರು. ಅವರು ಪಟ್ಟಕ್ಕೆ ಬಂದ ನಂತರ ಸಾಲೂರು ಮಠದಲ್ಲಿ ನಿತ್ಯ ದಾಸೋಹ ಸೇವೆ ಮಲೆ ಮಾದೇಶ್ವರ ದೇವಸ್ಥಾನದ ಅಭಿವೃದ್ಧಿ ಮಠದ ಅಭಿವೃದ್ಧಿ ಸಾಲೂರು ಸ್ವಾಮಿ ಟ್ರಸ್ಟ್ ರಚಿಸಿದರು ದೀನ ದಲಿತರ ಹಿಂದುಳಿದ ವರಿಗಾಗಿ ಪ್ರೌಢಶಾಲೆ ಮತ್ತು ಉಚಿತ ಹಾಸ್ಟೆಲ್ ಸ್ಥಾಪನೆ ಮಾಡಿದರು. ಕೊಳ್ಳೇಗಾಲ ತಾಲೂಕಿನ ಕೆಂಪನ ಪಾಳ್ಯದಲ್ಲಿ ಪ್ರೌಢಶಾಲೆ, ವೃದ್ಧರಿಗೆ ಆಶ್ರಯ ನೀಡಲು ಎಕರೆ ವಿಸ್ತೀರ್ಣದಲ್ಲಿ ಹನೂರು ಸಮೀಪ ವೃದ್ಧಾಶ್ರಮವನ್ನು ಸ್ಥಾಪಿಸಿದ್ದರು.

ವಿಶ್ವವಾಣಿ ಕ್ಲಬ್ ಹೌಸ್
21.05.2025
ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಶ್ರೀಮತಿ ನಾಗರತ್ನ ಸಾಲಗಾಮೆ
ವಿಷಯ
ಗೌರಮ್ಮನ ವಚನಗಳು
vishwavani.news

ಇನ್ನು 2 ದಿನ ರಾಜ್ಯಕ್ಕೆ ಭಾರೀ ಮಳೆ | ನೀರು ನುಗ್ಗಿ ಜನ-ಜೀವನ ಅಸ್ತವ್ಯಸ್ತ | ಮೀನುಗಾರಿಕೆಗೆ ತೆರಳದಂತೆ ಸೂಚನೆ

ವರುಣಾರ್ಭಟ, ಸಿಡಿಲಿಗೆ 5 ಬಲಿ

ಬೆಂಗಳೂರು: ರಾಜ್ಯದಲ್ಲಿ ಕಳೆದ 3 ದಿನಗಳಿಂದ ಎಡೆ ಬಿಡದೇ ಸುರಿಯುತ್ತಿರುವ ಪೂರ್ವ ಮುಂಗಾರು ಮಳೆ ಹಲವಾರು ಅವಾಂತರಗಳನ್ನು ಸೃಷ್ಟಿಸಿದೆ. ಕಳೆದ 24 ಗಂಟೆಯಲ್ಲಿ ರಾಜ್ಯದಲ್ಲಿ ಸಿಡಿಲಿನ ಪ್ರತ್ಯೇಕ ಪ್ರಕರಣಗಳಲ್ಲಿ ಐವರು ಮೃತಪಟ್ಟಿದ್ದಾರೆ. ಬೆಂಗಳೂರು ಸೇರಿ ಬೀದರ್, ಕಲಬುರಗಿ, ವಿಜಯಪುರ ರಾಯಚೂರು, ಉತ್ತರ ಕನ್ನಡ ಜಿಲ್ಲೆಯಲ್ಲಿ ಭಾರೀ ಮಳೆ ಸುರಿದಿದೆ. ಇನ್ನು 2 ದಿನ ರಾಜ್ಯಕ್ಕೆ ಭಾರೀ ಮಳೆ ಮುನ್ಸೂಚನೆ ನೀಡಲಾಗಿದೆ.

ರಾಯಚೂರು, ಹಾವೇರಿ, ಕಲಬುರಗಿ, ವಿಜಯಪುರ, ಹುಬ್ಬಳ್ಳಿಯಲ್ಲಿ ಸಿಡಿಲು ಬಡಿದು ತಲಾ ಒಬ್ಬರು ಮೃತಪಟ್ಟಿದ್ದಾರೆ. ಕಲಬುರಗಿ ಜಿಲ್ಲೆಯಲ್ಲಿ ನಿರಂತರ ಮಳೆ ಸುರಿಯುತ್ತಿದ್ದು, ಬಿರುಗಾಳಿ, ಗುಡುಗು, ಮಿಂಚಿನ ಆರ್ಭಟಕ್ಕೆ ಜನಜೀವನ ಅಸ್ತವ್ಯಸ್ತಗೊಂಡಿದೆ. ಧಾರಕಾರ ಮಳೆಯಿಂದಾಗಿ ವಿವಿಧೆಡೆ ಭಾರಿ ಮರಗಳು ಧರೆಗೆ ಉರುಳಿದ್ದು, ಜಮೀನುಗಳಲ್ಲಿ ನೀರು ನಿಂತಿದೆ.

ಸಿಡಿಲಿಗೆ ರೈತ ಸಾವು: ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ನಬಿಲಾಲ್ ಚೌಧರಿ (70) ಮೃತ ರೈತ ಸಿಡಿಲು ಬಡಿದು ಸಾವನೊಪ್ಪಿರುವ ಘಟನೆ ಜಿಲ್ಲೆಯ ಅಫಜಲಪುರ ತಾಲೂಕಿನ ಕರಜಗಿ ಗ್ರಾಮದಲ್ಲಿ ನಡೆದಿದೆ. ಕಲಬುರಗಿ, ಕಮಲಾಪುರ, ಅಜಲಪುರ, ಚಿತ್ತಾಪುರ, ಚಿಂಚೋಳಿ, ಜೇವರ್ಗಿ ಸೇರಿ ಇಡೀ ಜಿಲ್ಲೆಯ ಎಲ್ಲ ತಾಲೂಕಿನಲ್ಲಿ ಉತ್ತಮ ಮಳೆ ಸುರಿದಿದೆ. ಅಲ್ಲಲ್ಲಿ ಮನೆ, ಮರಗಳು ಉರುಳಿದ ಟನೆಗಳು ಸಂಭವಿಸಿದೆ. ಗುಡುಗು ಸಹಿತ ಭಾರಿ ಮಳೆಗೆ ಬಿದ್ದಾಪುರ ಕಾಲನಿ, ವಿಠಲ್ ನಗರ ಸೇರಿ ವಿವಿಧೆಡೆ ಬೃಹತ್ ಮರಗಳು ಧರೆಗೆ ಉರುಳಿವೆ.

ಇಬ್ಬರು ಕುರಿಗಾಯಿಗಳು ಸಾವು: ರಾಯಚೂರಿನ ಅರಕೇರಾ ತಾಲೂಕಿನ ಭೋಗಿರಾಮನಗುಂಡದಲ್ಲಿ ಸಿಡಿಲು ಬಡಿದು ಕುರಿಗಾಯಿ ಬಾಲಕ ಸಾವನ್ನಪ್ಪಿದ್ದಾನೆ. ಹನುಮಗೌಡ ನಾಯಕ (16) ಸಿಡಿಲು ಬಡಿದು ಮೃತಪಟ್ಟ ಬಾಲಕ. ಗ್ರಾಮದ ಹೊರ ವಲಯದಲ್ಲಿ ಕುರಿ ಮೇಯಿಸುತ್ತಿರುವ ಸಂದರ್ಭದಲ್ಲಿ ಸಿಡಿಲು ಬಡಿದಿದೆ. ಈ ಬಗ್ಗೆ ದೇವದುರ್ಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಿಂಧನೂರು, ಮಾನವಿ, ಮಸ್ಕಿ, ದೇವದುರ್ಗ, ಸಿರವಾರ ತಾಲೂಕಿನಲ್ಲಿ ಸುರಿದ ಧಾರಾಕಾರ ಮಳೆಯಿಂದ ಅಪಾರ ಪ್ರಮಾಣದ ಭತ್ತ ನಷ್ಟ ಆಗಿದೆ. ಕೊಯ್ಲು ಮಾಡಿ ಹೊಣಗಲು ಹಾಕಿದ್ದ ಭತ್ತ ಕೊಚ್ಚಿ ಹೋಗಿದ್ದು, ರೈತರು ಕಂಗಾಲಾಗಿದ್ದಾರೆ.

ಮುಂಡಗೋಡು ತಾಲೂಕಿನ ಬಾಚಣಕಿ ಸಮೀಪ ರಾಜ್ಯ ಹೆದ್ದಾರಿ.

ಮೂಡಿಗೆರೆ ತಾಲೂಕಿನ ಸುಂಕಸಾಲೆ ಬಳಿ.

ಹಾವೇರಿ ತಾಲೂಕು ಹೊಸರಿತ್ತಿಯಲ್ಲಿ ಕೂಡ ಸಿಡಿಲು ಬಡಿದು ಕುರಿಗಾಯಿ ಸಾವನ್ನಪ್ಪಿದ ಘಟನೆ ನಡೆದಿದೆ. 38 ವರ್ಷದ ಹನುಮಂತ ರಾಮನಗೌಡರ ಸಾವನ್ನಪ್ಪಿದ ಕುರಿಗಾಯಿ. ಕುರಿಗಳಿಗೆ ಮೇವು ತರಲು ಹೋದಾಗ ಸಿಡಿಲು ಬಡಿದು ಹನುಮಂತ ಮೃತಪಟ್ಟಿದ್ದಾರೆ.

ಸಿಡಿಲು ಬಡಿದು ವೃದ್ಧ ಸಾವು: ವಿಜಯಪುರ ಜಿಲ್ಲೆಯಲ್ಲೂ ಸಿಡಿಲು ಬಡಿದು ವೃದ್ಧ ಸಾವನ್ನಪ್ಪಿದ್ದಾರೆ. ಮುದ್ದೇಬಿಹಾಳ ತಾಲೂಕಿನ ಕೊಳೂರ ಗ್ರಾಮದ ರೈತ ಬಸನಗೌಡ ಬಿರಾದಾರ್ ಸಿಡಿಲು ಹೊಡೆತಕ್ಕೆ ಉಸಿರು ಚೆಲ್ಲಿದ್ದಾರೆ. ಮಳೆ ಬರುವ ವೇಳೆ ತೋಟದ ಮನೆಯ ಗಿಡದ ಕೆಳಗೆ ನಿಂತಿದ್ದಾಗ ದುರಂತ ಸಂಭವಿಸಿದೆ. ಒಂದು ಎಮ್ಮೆಯೂ ಸಾವನ್ನಪ್ಪಿದೆ.

ಕಲಬುರಗಿಯ ವೆಂಕಟಾಪುರ ಗ್ರಾಪಂ ವ್ಯಾಪ್ತಿಯ ಲಿಂಗಾನಗರ ತಾಂಡಾದಲ್ಲಿ ಕುಸಿದಿರುವ ಮನೆ.

ಹಸು ತೊಳೆಯಲು ಹೋಗಿದ್ದ ಯುವಕ ಸಾವು: ಕಳೆದ ರಾತ್ರಿಯಿಂದ ಧಾರವಾಡ, ಹುಬ್ಬಳ್ಳಿಯಲ್ಲೂ ಧಾರಾಕಾರ ಮಳೆ ಆಗಿದೆ. ಸಿಡಿಲು ಬಡಿದು ಯುವಕ ಸಾವನ್ನಪ್ಪಿದ ಘಟನೆ ಕುಂದಗೋಳ ತಾಲೂಕು ಹೀರೆನರ್ತಿ ಗ್ರಾಮದಲ್ಲಿ ನಡೆದಿದೆ. ಮೈಲಾರಪ್ಪ ಬಸಪ್ಪ ಉಣಕಲ್ (20) ಮೃತ ದುರ್ದೈವಿ.

ಆಕಳು ಮೈ ತೊಳೆಯಲು ಕೆರೆ ಬಳಿ ಹೋಗಿದ್ದಾಗ ದುರ್ಘಟನೆ ಸಂಭವಿಸಿದೆ. ಸ್ಥಳಕ್ಕೆ ಪೊಲೀಸರು, ಕಂದಾಯ ಅಧಿಕಾರಿಗಳ ಭೇಟಿ, ಪರಿಶೀಲನೆ ನಡೆಸಿದ್ದಾರೆ. ಇನ್ನು ಹುಬ್ಬಳ್ಳಿಯಲ್ಲಿ ಮಳೆ ನೀರಿನಲ್ಲಿ ಹಾವುಗಳು ಕಂಡು ಬರುತ್ತಿವೆ. ಹುಬ್ಬಳ್ಳಿಯ ಪ್ರೆಸಿಡೆಂಟ್ ಹೋಟೆಲ್ ಸೇರಿ ಹಲವು ತಗ್ಗು ಪ್ರದೇಶಗಳು ಜಲಾವೃತ ಆಗಿದ್ದು, ಹಾವುಗಳು ಕಂಡು ಬಂದಿವೆ.

ಉಡುಪಿ-ಮಣಿಪಾಲ ಹೆದ್ದಾರಿ ಟ್ರಾಫಿಕ್ ಜಾಮ್: ಉಡುಪಿಯಲ್ಲಿ ಜಿಲ್ಲೆಯಲ್ಲೂ ಭಾರೀ ಮಳೆಯಾಗುತ್ತಿದ್ದು, ಅಂಗಡಿಗಳಿಗೆ ಕೆಸರು ನೀರು ನುಗ್ಗಿದೆ. ನಗರ ಅಪ್ಸರಾ ಐಸ್‌ಕ್ರೀಮ್ ಮಳಿಗೆಗೆ ಮಳೆ ನೀರು ಮತ್ತು ಕೆಸರು ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿದೆ. ಲಕ್ಷಾಂತರ ರು. ಫ್ರಿಡ್ಜ್, ಕೂಲರ್‌ಗಳಿಗೆ ಹಾನಿಯಾಗಿದೆ. ಅವೈಜ್ಞಾನಿಕ ಚರಂಡಿ ನಿರ್ಮಾಣ ಮತ್ತು ಏಕಾಏಕಿ ಗಾಳಿ ಮಳೆ ಜತೆ ಕೆಸರು ಮಿಶ್ರಿತ ನೀರು ಹರಿದು ಬಂದು ತಗ್ಗು ಪ್ರದೇಶದ ಅಂಗಡಿಗಳು, ಮನೆಗಳು ಜಲಾವೃತ ಆಗಿದ್ದವು. ಎಡೆಬಿಡದೇ ಸುರಿಯುತ್ತಿರುವ ಮಳೆಗೆ ಮಣಿಪಾಲ ಭಾಗದಲ್ಲಿ ಹಾನಿಯಾಗಿದ್ದು, ಪರ್ಕಳ ಭಾಗದಲ್ಲಿ ಬೆಟ್ಟದ ಮೇಲಿಂದ ಹರಿದ ಭಾರೀ ಪ್ರಮಾಣದ ನೀರು ರಾಷ್ಟ್ರೀಯ ಹೆದ್ದಾರಿಗೆ ನುಗ್ಗಿದೆ.

ದಾವಣಗೆರೆಯಲ್ಲಿ ಕೃಷಿ ಚಟುವಟಿಕೆ ಆರಂಭ: ದಾವಣಗೆರೆ ಜಿಲ್ಲೆಯಾದ್ಯಂತ ಮಂಗಳವಾರ ಮಧ್ಯಾಹ್ನ ಗಂಟೆಗೂ ಹೆಚ್ಚುಕಾಲ ಮಳೆ ಸುರಿದಿದೆ. ಚರಂಡಿಗಳು ತುಂಬಿ ರಸ್ತೆ ತುಂಬೆಲ್ಲಾ ನೀರು ಹರಿದಿದ್ದು, ಸಂಚಾರಕ್ಕೆ ವಾಹನ ಸವಾರರು ಪರದಾಡಿದ್ದಾರೆ. ಹರಿಹರ, ದಾವಣಗೆರೆ,ನ್ಯಾಮತಿ, ಹೊನ್ನಾಳಿ, ಮಾಯಕೊಂಡ, ಚನ್ನಗಿರಿ ಸಹಿತ ಬಹುತೇಕ ಕಡೆ ಮಳೆಯಾಗಿದೆ. ಪೂರ್ವ ಮುಂಗಾರು ಮಳೆ ಉತ್ತಮವಾಗಿ ಆಗಿದ್ದರಿಂದ ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳು ಆರಂಭಗೊಂಡಿವೆ.

ಬಸ್ ಜಖಂ

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ 3 ದಿನಗಳಿಂದ ಭಾರೀ ಮಳೆ ಆಗುತ್ತಿದೆ. ಗಾಳಿ-ಮಳೆ ಹಿನ್ನೆಲೆ, ಬೃಹತ್ ಮರವೊಂದು ಮಿನಿ ಬಸ್ ಹಾಗೂ ಬೈಕ್ ಮೇಲೆ ಬಿದ್ದ ಘಟನೆ ಮೂಡಿಗೆರೆ ತಾಲೂಕಿನ ಸುಂಕಸಾಲೆ ಬಳಿಯ ಮುಖ್ಯ ರಸ್ತೆಯಲ್ಲಿ ನಡೆದಿದೆ. ಬೈಕ್ ಸವಾರನಿಗೆ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಇನ್ನು ಮಿನಿಬಸ್ ಮುಂಭಾಗ ಪೂರ್ಣ ಜಖಂಗೊಂಡಿದ್ದು, ಮರ ಬಿದ್ದಿದ್ದರಿಂದ ಕಿ.ಮೀ.ಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಕರಾವಳಿ ರೆಡ್ ಅಲರ್ಟ್

ಕರಾವಳಿ ಜಿಲ್ಲೆಗಳಲ್ಲಿ ಪೂರ್ವ ಮುಂಗಾರು ಮಳೆ ಅಬ್ಬರ ಜೋರಾಗಿದ್ದು, ಇಂದು ರೆಡ್ ಅಲರ್ಟ್ ಘೋಷಿಲಾಗಿದ್ದು, ಇನ್ನು 2 ದಿನ ಮೀನುಗಾರಿಕೆಗೆ ಸಮುದ್ರಕ್ಕೆ ಇಳಿಯದಂತೆ ಜಿಲ್ಲಾಡಳಿತ ಸೂಚನೆ ನೀಡಿದೆ. ಜಿಲ್ಲೆಯಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆಯಿದ್ದು, ಸಮುದ್ರದಲ್ಲಿ ಜೋರಾಗಿ ಗಾಳಿ ಬೀಸುವುದರಿಂದ ಮೀನುಗಾರಿಕೆ ಸಮುದ್ರಕ್ಕೆ ತೆರಳದಂತೆ ಆದೇಶ ನೀಡಲಾಗಿದೆ. ಮಂಗಳೂರು ಬಂದರಿನಲ್ಲಿ ಮೀನುಗಾರಿಕೆ ಬೋಟ್‌ಗಳು ಲಂಗರು ಹಾಕಿವೆ.

ಗೋವಿನಜೋಳ ಮೊಳಕೆ ಒಡೆಯುವ ಆತಂಕ

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕಿನಲ್ಲಿ ಮಂಗಳವಾರ ಗುಡುಗು ಸಹಿತ ಬಿರುಸಿನ ಮಳೆ ಆಗಿದ್ದು, ಗದ್ದೆಗಳಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡಿದೆ. ಬಾಚಣಕಿ ಸನಿಹ ಮುಂಡಗೋಡ ಹುಬ್ಬಳ್ಳಿ ರಾಜ್ಯ ಹೆದ್ದಾರಿಯ ಮೇಲೆ ಮರವೊಂದು ಬಿದ್ದ ಪರಿಣಾಮ, ಕೆಲವು ಗಂಟೆ ಸಂಚಾರ ಬಂದ್ ಆಗಿತ್ತು. ವಾಹನಗಳು ಅರಿಶಿಣಗೇರಿ ಮಾರ್ಗವಾಗಿ ಸಂಚರಿಸಿದವು. ಹಿಂಗಾರು ಗೋವಿನಜೋಳ ಕಟಾವು ಕಾರ್ಯ ಮುಗಿದಿದ್ದು, ರೈತರು ಬೆಳೆಯನ್ನು ಬಯಲು ಪ್ರದೇಶ, ರಾಜ್ಯ ಹೆದ್ದಾರಿ ಮೇಲೆ ಒಣಹಾಕಿದ್ದಾರೆ. ಮಳೆಯಿಂದ ಒಣಹಾಕಿದ್ದ ಗೋವಿನಜೋಳ ಬೆಳೆಗೆ ಹಾನಿಯಾಗಿದೆ. ಮಳೆ ನೀರಿನಿಂದ ರಕ್ಷಿಸಲು ಪ್ಲಾಸ್ಟಿಕ್ ತಾಡಪತ್ರಿ ಮುಚ್ಚಿದ್ದು, ಅದರಲ್ಲಿಯೇ ಗೋವಿನಜೋಳ ಮೊಳಕೆ ಒಡೆಯುವ ಆತಂಕ ಎದುರಾಗಿದೆ.

ಭಾರತೀಯ ಸ್ಟೇಟ್ ಬ್ಯಾಂಕ್
ಪ್ರಕಟಣೆ
SBI The banker to every indian

ಭಾರತೀಯ ಸ್ಟೇಟ್ ಬ್ಯಾಂಕ್, ಬ್ಯಾಂಕಿನ ಪ್ಯಾನಲ್‌ನಲ್ಲಿ ರೆಸಲ್ಯೂಷನ್ ಏಜೆಂಟ್ ಆಗಿ ಎಂಪ್ಯಾನಲ್ ಮಾಡುವ ಉದ್ದೇಶಕ್ಕಾಗಿ ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಹತಾ ಮಾನದಂಡಗಳು, ನಿಯಮಗಳು ಮತ್ತು ಷರತ್ತುಗಳು ಬಾಧ್ಯತೆಗಳು, ಅರ್ಜಿ ನಮೂನೆ ಮತ್ತು ಇತರ ವಿವರಗಳನ್ನು ತಿಳಿದುಕೊಳ್ಳಲು ಆಸಕ್ತಿಯುಳ್ಳ ವ್ಯಕ್ತಿಗಳು ಹತ್ತಿರದ ಬ್ಯಾಂಕಿನ ಶಾಖೆಯನ್ನು ಸಂಪರ್ಕಿಸಬಹುದು ಅಥವಾ ಬ್ಯಾಂಕಿನ ವೆಬ್ ಸೈಟ್ https://bank.sbi ಗೆ ಭೇಟಿ ನೀಡಬಹುದು.

ಬ್ಯಾಂಕಿಗೆ ಅದರ ವಸೂಲಾತಿ ಪ್ರಯತ್ನಗಳಲ್ಲಿ ಸಹಾಯ ಮಾಡಲು ಮತ್ತು ಸಾಲಗಾರರು ಖಾತರಿದಾರರಿಂದ ಬ್ಯಾಂಕಿನ ಬಾಕಿಯನ್ನು ವಸೂಲಿ ಮಾಡಲು ಎಂಪ್ಯಾನಲ್ ಮಾಡಿದ ವ್ಯಕ್ತಿಗಳ ಗುಂಪುಗಳು/ವ್ಯಕ್ತಿಗಳು ಜವಾಬ್ದಾರರಾಗಿರುತ್ತಾರೆ. ಎಂಪ್ಯಾನಲ್ ಮಾಡಿದ ಏಜೆಂಟರಿಗೆ ಕಮಿಷನ್ / ಪರಿಗಣನೆಯನ್ನು ನೀಡಲಾಗುತ್ತದೆ. ಇದು ಕೆಲವು ನಿಗದಿತ ವೆಚ್ಚಗಳ ಪುನರ್ಭರಿಸುವ ಹೊರತಾಗಿ ವಸೂಲಿಯ ಶೇಕಡಾವಾರು ಆಗಿರುತ್ತದೆ. ನಿಬಂಧನೆಗಳು ಮತ್ತು ಷರತ್ತುಗಳನ್ನು ಪ್ರಕರಣದಿಂದ ಪ್ರಕರಣಗಳ ಆಧಾರದ ಮೇಲೆ ಏಜೆಂಟರಿಗೆ ತಿಳಿಸಲಾಗುವುದು ಮತ್ತು ಎಂಪ್ಯಾನಲ್ ಮೆಂಟ್‌ನ ವಿಧಿ-ವಿಧಾನದ ಬಗ್ಗೆ ಲಿಖಿತವಾಗಿ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.

ಬ್ಯಾಂಕಿನ ವೆಬ್ ಸೈಟ್ https://bank.sbi ನಲ್ಲಿ ಹೇಳಲಾದ ಅರ್ಹತಾ ಮಾನದಂಡಗಳೇ ಅಂತಿಮವಲ್ಲ ಮತ್ತು ಬ್ಯಾಂಕಿನ ವಿವೇಚನೆಯನ್ನು ಮಿತಿಗೊಳಿಸುತ್ತವೆ ಮತ್ತು ಎಂಪ್ಯಾನಲ್‌ಮೆಂಟ್‌ಗಾಗಿ ಇತರ ಗುಣಾತ್ಮಕ ಮತ್ತು ಪ್ರಖ್ಯಾತಿಯ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲು ಬ್ಯಾಂಕ್ ಹಕ್ಕನ್ನು ಹೊಂದಿದೆ.

ಬ್ಯಾಂಕ್ ತನ್ನ ವಿವೇಚನೆಯ ಮೇರೆಗೆ ಯಾವುದೇ ವ್ಯಕ್ತಿಗಳ ಗುಂಪು / ವ್ಯಕ್ತಿಯನ್ನು ಎಂಪ್ಯಾನಲ್ ಮಾಡುವ ಹಕ್ಕನ್ನು ಕಾಯ್ದಿರಿಸಿದೆ. ಯಾವುದೇ ಕಾರಣವನ್ನು ನೀಡದೇ ಯಾವುದೇ ಪ್ರಸ್ತಾಪವನ್ನು ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ.

ಆಸಕ್ತ ವ್ಯಕ್ತಿಗಳ ಗುಂಪು/ವ್ಯಕ್ತಿಗಳು ತಮ್ಮ ಪ್ರಸ್ತಾವನೆಗಳನ್ನು ಹತ್ತಿರದ ಬ್ಯಾಂಕಿನ ಶಾಖೆಯಲ್ಲಿ 30.06.2025 (ದಿನಾಂಕ) ಒಳಗೆ ಸಲ್ಲಿಸಬಹುದು. ಪ್ರಸ್ತಾವನೆಗಳ ಜೊತೆಗೆ ವ್ಯಕ್ತಿ ವಿವರಗಳು / ವ್ಯವಹಾರ ವಿವರಗಳು ಮತ್ತು ಸಂಬಂಧಿತ ಕ್ಷೇತ್ರಗಳ ವೃತ್ತಿಪರ / ವ್ಯವಹಾರ ಅನುಭವದ ವಿವರಗಳನ್ನು ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ವೆಬ್ ಸೈಟ್ https://bank.sbi ಗೆ ಭೇಟಿ ನೀಡಿ.

ಉಪ ಪ್ರಧಾನ ವ್ಯವಸ್ಥಾಪಕರು ಮತ್ತು ವೃತ್ತ ಉದರಿ ಅಧಿಕಾರಿ
ಎಸ್. ಬಿ. ಐ. ಸ್ಥಳೀಯ ಪ್ರಧಾನ ಕಚೇರಿ, ಬೆಂಗಳೂರು

ಧರ್ಮಸ್ಥಳ ಯುವತಿ ಸಾವು ಕೇಸ್: ಆರೋಪಿ ಬಂಧನ

ಮಂಗಳೂರು: ಪಂಜಾಬ್‌ನಲ್ಲಿ ಧರ್ಮಸ್ಥಳ ಮೂಲದ ಏರೋಸ್ಪೇಸ್ ಎಂಜಿನಿಯರ್ ಆಕಾಂಕ್ಷ ಸಾವು ಪ್ರಕರಣದಲ್ಲಿ ಪ್ರೊಫೆಸರ್ ಒಬ್ಬನನ್ನು ಜಲಂಧರ್ ಪೊಲೀಸರು ಬಂಧಿಸಿದ್ದಾರೆ. ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿಯ ಪ್ರೊಫೆಸರ್ ಬಿಜಿಲ್ ಮ್ಯಾಥ್ಯೂ (45) ಬಂಧಿತ ಆರೋಪಿ. ಆಕಾಂಕ್ಷ ಸಾವಿಗೆ ಯೂನಿ ವರ್ಸಿಟಿಯ ಪ್ರಾಧ್ಯಾಪಕ ಬಿಜಿಲ್ ಮ್ಯಾಥ್ಯೂ ಕಾರಣ ಎಂದು ಜಲಂಧರ್ ಪೊಲೀಸ್ ಠಾಣೆಗೆ ಆಕಾಂಕ್ಷ ಪೋಷಕರು ದೂರು ನೀಡಿದ್ದರು. ಆಕಾಂಕ್ಷ ಮೊಬೈಲ್ ಪಡೆದು ತನಿಖೆ ನಡೆಸಿರುವ ಪೊಲೀಸರಿಗೆ ಸಾವಿಗೂ ಮುನ್ನ ಆಕಾಂಕ್ಷ, ಬಿಜಿಲ್ ಮಾಥ್ಯೂಗೆ ತಾನು ಆತ್ಮಹತ್ಯೆ ಮಾಡಿಕೊಳ್ಳೊದಾಗಿ ಮೆಸೇಜ್ ಮಾಡಿರುವ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಆಕಾಂಕ್ಷ ಆತ್ಮಹತ್ಯೆಯ ಬಳಿಕ ತಲೆಮರಿಸಿಕೊಂಡಿದ್ದ ಬಿಜಿಲ್ ಮ್ಯಾಥ್ಯೂನನ್ನು ಜಲಂಧರ್ ಪೊಲೀಸರು ಬಂಧಿಸಿದ್ದಾರೆ. ಅಲ್ಲದೇ ಪ್ರಾಧ್ಯಾಪಕ ಹುದ್ದೆಯಿಂದ ಮ್ಯಾಥ್ಯೂನನ್ನ ಅಮಾನತು ಮಾಡಲಾಗಿದೆ.

ಸಾಮೂಹಿಕ ಅತ್ಯಾಚಾರ ಪೊಲೀಸ್ ಪುತ್ರ ಭಾಗಿ ಶಂಕೆ

ಬೆಳಗಾವಿ: ಅಪ್ರಾಪ್ತ ಬಾಲಕಿಯನ್ನು ರೆಸಾರ್ಟ್‌ಗೆ ಕರೆದೊಯ್ದು ಮೂವರು ಬಾಲಕರು ಸಾಮೂಹಿಕ ಅತ್ಯಾಚಾರ ನಡೆಸಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದ್ದು, ಇಬ್ಬರು ಆರೋಪಿಗಳನ್ನು ಬೆಳಗಾವಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಬಗ್ಗೆ ಮೇ 11 ರಂದು ನಗರದ ಟಿಳಕವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇಬ್ಬರು ಅಪ್ರಾಪ್ತ ಬಾಲಕರನ್ನು ಪೊಲೀಸರು ಬಂಧಿಸಿದ್ದಾರೆ. ನಗರದ ಹೊರವಲಯದ ರೆಸಾರ್ಟ್ ನಲ್ಲಿ ಸಾಕಿಬ್ ಎಂಬಾತನ ಹೆಸರಿನಲ್ಲಿ ರೂಂ ಬುಕ್ ಮಾಡಿ ಅತ್ಯಾಚಾರ ಎಸಗಿದ್ದಾರೆ. ಕೆಲ ದಿನಗಳ ನಂತರ ಹೊಟ್ಟೆನೋವು ಹಿನ್ನಲೆ ಬಾಲಕಿಯನ್ನು ಆಸ್ಪತ್ರೆಗೆ ಕರೆದೊಯ್ದಾಗ ಘಟನೆ ಬೆಳಕಿಗೆ ಬಂದಿದ್ದು, ಟಿಳಕವಾಡಿ ಠಾಣೆಯಲ್ಲಿ ಪೋಕ್ಸೋ ದಾಖಲಾಗಿದೆ.

ಪೊಲೀಸ್ ಅಧಿಕಾರಿ ಪುತ್ರನ ರಕ್ಷಣೆ?

ಈ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಮೂವರು ಬಾಲಕರ ಪೈಕಿ ಓರ್ವ ಪೊಲೀಸ್ ಅಧಿಕಾರಿ ಪುತ್ರ ಎನ್ನಲಾಗಿದೆ. ಇಬ್ಬರು ಆರೋಪಿಗಳನ್ನು ಬಂಧಿಸಿ ಓರ್ವನ ಹೆಸರನ್ನು ಮರೆಮಾಚುವ ಪ್ರಯತ್ನ ನಡೆದಿದೆ ಎಂಬ ಆರೋಪ ಕೇಳಿ ಬಂದಿದೆ. ತನ್ನ ಪ್ರಭಾವ ಬಳಸಿ ಮಗನನ್ನು ಪ್ರಕರಣದಿಂದ ರಕ್ಷಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ ಎನ್ನುವ ಆರೋಪ ಪೊಲೀಸ್ ಅಧಿಕಾರಿ ಮೇಲೆ ಕೇಳಿ ಬಂದಿದೆ.

ಆಪರೇಷನ್ ಸಿಂದೂರ ಅವಹೇಳನ ಶಾಸಕ ಕೊತ್ತೂರು ವಿರುದ್ಧ ದೂರು

ಬೆಂಗಳೂರು: ಶಾಸಕ ಕೊತ್ತೂರು ಮಂಜುನಾಥ್ ವಿರುದ್ಧ ಬೆಂಗಳೂರಿನ ಬನಶಂಕರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ನಾಗರಿಕ ಹಕ್ಕು ಹೋರಾಟ ಸಮಿತಿ ಉಪಾಧ್ಯಕ್ಷ ಗಣೇಶ್ ಸಿಂಗ್ ಎಂಬುವರು ದೂರು ನೀಡಿದ್ದಾರೆ. ಶಾಸಕ ಕೊತ್ತೂರು ಮಂಜುನಾಥ್ ದೇಶದ ಜನರ ಭಾವನೆಗೆ ಧಕ್ಕೆ ತಂದಿದ್ದಾರೆ. ಆಪರೇಷನ್ ಸಿಂದೂರ್ ಬಗ್ಗೆ ಅವಹೇಳನವಾಗಿ ಮಾತಾಡಿದ್ದಾರೆ. ನಾಲ್ಕು ವಿಮಾನ ಹಾರಿಸಿ ಬಡಾಯಿಕೊಚ್ಚಿಕೊಳ್ಳುತ್ತಿದೆ ಅಂದಿದ್ದಾರೆ. ಭಾರತೀಯ ಸೇನೆ ಬಗ್ಗೆ ಮಾತಾಡಿದ್ದಾರೆ ಎಂದು ಗಣೇಶ್ ದೂರು ನೀಡಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯ ಪ್ರತೀಕಾರವಾಗಿ ಭಾರತೀಯ ಸೇನೆ ಆಪರೇಷನ್ ಸಿಂದೂರ್ ಕಾರ್ಯಾಚರಣೆ ನಡೆಸಿದೆ. ಈ ಆಪರೇಷನ್ ಸಿಂದೂರ್ ಕಾರ್ಯಾಚರಣೆ ಮೂಲಕ ಭಾರತೀಯ ಸೇನೆ ಉಗ್ರರ ನೆಲೆಗಳನ್ನು ಧ್ವಂಸಗೊಳಿಸಿದೆ. ಭಾರತೀಯ ಸೇನೆ ನಡೆಸಿದ ಕಾರ್ಯಾಚರಣೆಯಲ್ಲಿ 100 ಮಂದಿ ಉಗ್ರರು ಹತರಾಗಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ. ಆದರೆ, ಈ ಆಪರೇಷನ್ ಸಿಂದೂರ್ ಕಾರ್ಯಾಚರಣೆ ಕುರಿತು ಕಾಂಗ್ರೆಸ್ ಶಾಸಕ ಕೊತ್ತೂರು ಮಂಜುನಾಥ್ ವಿವಾದಾತ್ಮಕವಾಗಿ ಹೇಳಿಕೆ ನೀಡಿದ್ದರು.

ಕೊತ್ತೂರು ಹೇಳಿದ್ದೇನು?

ಭಾರತ ಬೂಟಾಟಿಕೆಗೆ ನಾಲ್ಕು ವಿಮಾನಗಳನ್ನು ಮೇಲೆ ಕಳುಹಿಸಿದ್ದು ಬಿಟ್ಟರೆ ಏನೂ ಮಾಡಿಲ್ಲ. 26 ಜನ ಮಹಿಳೆಯರ ಅರಿಶಿನ ಕುಂಕುಮಕ್ಕೆ ಬೆಲೆ ಇಷ್ಟೆಯಾ? ಸಾಮಾನ್ಯ ಪ್ರಜೆಗಳ ಮೇಲೆ ಯುದ್ಧ ಮಾಡುವುದಕ್ಕೆ ನಮ್ಮ ವಿರೋಧವಿದೆ. ಆದರೆ, ನಮ್ಮ ದೇಶದೊಳಗೆ ಬಂದು ಪತ್ನಿಯರ ಎದುರೇ ಪತಿಯರನ್ನು ಹೊಡೆದರೆ ಹೇಗೆ ಸಹಿಸುವುದು? ಆ ಹೆಣ್ಣು ಮಕ್ಕಳು ಗಟ್ಟಿಯಾಗಿರುವುದಕ್ಕೆ ಪರವಾಗಿಲ್ಲ. ಇಲ್ಲಾ ಅಂದರೆ ಹಾರ್ಟ್ ಅಟ್ಯಾಕ್ ಆಗಿ ಸಾಯುತ್ತಿದ್ದರು. ಅಂತಹದಕ್ಕೆ ಪರಿಹಾರ ಇದಲ್ಲ. ಬೇರಿನಿಂದ ಕೊಂಬೆ ತನಕ ಎಲ್ಲವನ್ನೂ ಹೊಡೆಯಬೇಕು. ಈ ಬಾರಿ ಒಳ್ಳೆಯ ಅವಕಾಶ ಇತ್ತು, ಆದರೆ ಏನೂ ಮಾಡಿಲ್ಲ ಎಂಬುದು ಬೇಸರ ತಂದಿದೆ ಎಂದು ಶಾಸಕ ಕೊತ್ತೂರು ಮಂಜುನಾಥ್ ವಿವಾದಾತ್ಮ ಹೇಳಿಕೆ ನೀಡಿದ್ದರು.

ದೇಶದ್ರೋಹಿ ಹೇಳಿಕೆ ನೀಡಿದರೆ ಗುಂಡಿಕ್ಕಿ

ವಿಜಯಪುರ: ಆಪರೇಷನ್ ಸಿಂದೂರದ ಬಗ್ಗೆ ಟೀಕೆ ಮಾಡುವವರಿಗೆ ಗುಂಡು ಹೊಡಿಬೇಕು ಎಂದು ಮಾಜಿ ಡಿಸಿಎಂ ಕೆ.ಎಸ್ ಈಶ್ವರಪ್ಪ ಕಿಡಿಕಾರಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಕೊತ್ತೂರು ಮಂಜುನಾಥ್, ದಿನೇಶ್ ಗುಂಡೂರಾವ್‌ಗೆ ಗುಂಡು ಹೊಡೆಯಬೇಕು. ಇವರಿಗೆಲ್ಲಾ ಗುಂಡು ಹಾಕಿದರೆ ಮಾತ್ರ ಸರಿ ಹೋಗುತ್ತದೆ. ಇವರೆಲ್ಲಾ ದೇಶ ದ್ರೋಹಿಗಳು ಗುಂಡು ಹಾಕಬೇಕು. ಎಷ್ಟು ವಿಮಾನ ಪತನ ಆದವು ಎಂದು ಯುದ್ಧದ ಬಗ್ಗೆ ಸಾಕ್ಷಿ ಕೇಳ್ತಾರೆ, ಜೂನಿಯರ್ ಕಾಂಗ್ರೆಸ್ ನಾಯಕರು ಮಾತ್ರ ಟೀಕೆ ಮಾಡುತ್ತಿದ್ದಾರೆ. ಸೀನಿಯರ್ ಖರ್ಗೆ ವಿಧಿ ಇಲ್ಲದೆ ಅಲ್ಲೊಂದು ಇಲ್ಲೊಂದು ಮಾತನಾಡುತ್ತಾರೆ. ಎಂದು ಕಿಡಿಕಾರಿದರು.

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ,
ಕ್ರಮಾಂಕ:ಶಿಮನಪಾಶಿ:ಕಾವಿ:ಟೆಂಡರ್: 07/2025–26 ದಿನಾಂಕ:19.05.2025
ಟೆಂಡರ್ ಪ್ರಕಟಣೆ (KPP PORTAL ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ KPP PORTAL ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. KPP PORTAL ಟೆಂಡರ್ ನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

1) ಗುತ್ತಿಗೆದಾರರ ದರ್ಜೆ: ಇಂಡೆಂಟ್ ಸಂಖ್ಯೆ:38273/CALL-2 ರ ಕಾಮಗಾರಿಗೆ Class 3 and above ಹಾಗೂ ಇಂಡೆಂಟ್ ಸಂಖ್ಯೆ:39739 & 40358 ಕಾಮಗಾರಿಗಳಿಗೆ Class 4 and above 2) KPP PORTAL ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:27.05.2025 (ಸಂಜೆ:4.00 ಗಂಟೆಗೆ) 3) KPP PORTAL ಮೂಲಕ ಟೆಂಡರ್ ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:28.05.2025 (ಸಂಜೆ 4.30 ಗಂಟೆಗೆ) 4) ಇಂಡೆಂಟ್ ಸಂಖ್ಯೆ:38273/CALL-2 ರ ಕಾಮಗಾರಿಗೆ KPP PORTAL ಮೂಲಕ ಟೆಂಡರ್ ನ ಆರ್ಥಿಕ ಬಿಡ್ ತೆರೆಯುವ ದಿನಾಂಕ:30.05.2025 (ಸಂಜೆ 4.30 ಗಂಟೆಗೆ) 5) ಅನುದಾನ: 2021–22ನೇ ಸಾಲಿನ 15ನೇ ಹಣಕಾಸು ಆಯೋಗದ MPC (Million Plus Challenge) ಮತ್ತು ಪಾಲಿಕೆ ಸಾಮಾನ್ಯ ನಿಧಿ ಸೂಚನೆ: ಹೆಚ್ಚಿನ ವಿವರಗಳನ್ನು KPP PORTAL ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ಸೂಚನಾ ಫಲಕದಲ್ಲಿ ಪಡೆಯಬಹುದಾಗಿದೆ. ಹಾಗೂ ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದು ಪಡಿಯನ್ನು KPP PORTAL ಮುಖಾಂತರ ಸೂಚಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/25–26/113/05/279

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್‌ರಸ್ತೆ, ಮೈಸೂರು–570001
Ph: +91-0821-2520512 (Off.), 2520803 (Fax)
Website : www.mmcri.karnataka.gov.in/
E-mail : mmcrimysore@yahoo.com
ಸಂಖ್ಯೆ: ಉಪಕರಣ/35/2024–25 ದಿನಾಂಕ: 17.05.2025
ಅಲ್ಪಾವಧಿ ಟೆಂಡರ್ ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಪಿ.ಕೆ.ಟಿ.ಬಿ ಮತ್ತು ಸಿ.ಡಿ ಆಸ್ಪತ್ರೆಯ ರೆಸ್ಪಿರೇಟರಿ ಮೆಡಿಸಿನ್ ವಿಭಾಗಕ್ಕೆ ವಿವಿಧ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲು ವಿದ್ಯುನ್ಮಾನ ವೇದಿಕೆ ಮುಖಾಂತರ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ದಿ: 19.05.2025 ರಿಂದ ಪಡೆಯಬಹುದಾಗಿದ್ದು, ದಿ: 02.06.2025 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್
DIPR/DDMYS/215/KSMCA/184/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಡೆತನದ್ದು)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ,
ಕೃಭಾಜನಿನಿ. ಮುಏನೀ ವಿಭಾಗ ನಂ–3 ಟಕ್ಕಳಕಿ–586216
ತಾ॥ ಬ.ಬಾಗೇವಾಡಿ ಇ–ಮೇಲ್: eemli3bb@gmail.com
ಸಂ:ಕೃಭಾಜನಿನಿ/ಮುಏನೀ/ವಿ–3/ಟೆಂಡರ್/2025–26/114
ದಿನಾಂಕ:17.05.2025
ಟೆಂಡರ್ ಪ್ರಕಟಣೆ (ಕೆ.ಪಿ.ಪಿ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಭಾಜನಿನಿ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಆಧಾರದ ಮೇಲೆ ಇಂಡೆಂಟ್ ಸಂಖ್ಯೆ KBJNL/2025-26/CN/WORK_INDENT1558 (ಹೂವಿನ ಹಿಪ್ಪರಗಿ ಶಾಖಾ ಕಾಲುವೆಯಡಿಯಲ್ಲಿ ಬರುವ 17 ರಿಂದ 34 ರ ವಿತರಣಾ ಕಾಲುವರಯ ಜಾಲ) ಕಾಮಗಾರಿಗೆ ಎರಡು ಕವರ್‌ಗಳಲ್ಲಿ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್) ಟೆಂಡರ್ ಕರೆಯಲಾಗಿರುತ್ತದೆ. **ಟೆಂಡರ್‌ಗಿಟ್ಟ ಮೊತ್ತ ರೂ.8488.20 ಲಕ್ಷಗಳು.**

ಸದರಿ ಟೆಂಡರಗಳನ್ನು ದಿನಾಂಕ: **19.05.2025** ರಿಂದ ಕೆ.ಪಿ.ಪಿ–ಪ್ರೋಕ್ಯುರಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದಾಗಿದ್ದು, ಪೂರ್ಣಗೊಳಿಸಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 09.06.2025** ಸಾಯಂಕಾಲ 5.30 ಗಂಟೆಯಾಗಿರುತ್ತದೆ. ಕಾಮಗಾರಿಯ ಕುರಿತು ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ **29.05.2025** ಬೆಳಿಗ್ಗೆ 11.00 ಗಂಟೆಯಾಗಿರುತ್ತದೆ. ಸದರಿ ಕಾಮಗಾರಿಯ ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **30.05.2025 ರಂದು** ಬೆಳ್ಳಿಗ್ಗೆ **11.00 ಗಂಟೆಗೆ** ಮುಖ್ಯ ಇಂಜಿನಿಯರರ ಕಚೇರಿ, ಕೃ.ಭಾ.ಜ.ನಿ.ನಿ. ಆಣೆಕಟ್ಟು ವಲಯ ಆಲಮಟ್ಟಿಯಲ್ಲಿ ನಡೆಸಲಾಗುವುದು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:**11.06.2025** ಬೆಳಿಗ್ಗೆ 11.00 ಗಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಾಲತಾಣ (ವೆಬ್‌ಸೈಟ್) https://kppp.karnataka.gov.in/#/portal/portal-home ದಲ್ಲಿ ಹಾಗೂ ಈ ಕೆಳಗೆ ಸಹಿ ಮಾಡಿದದವರ ಕಛೇರಿಯ ಕೆಲಸದ ಅವಧಿಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಕೃಭಾಜನಿನಿ, ಮುಏನೀ ವಿಭಾಗ–03,ಟಕ್ಕಳಕಿ.
ವಾಸಾಸಂಇ/ವಿಜಯಪುರ/85/ಕೆಎಸ್ಎಂಸಿಎ/2025–26

ಕರ್ನಾಟಕ ಸರ್ಕಾರ – ಚಿಕ್ಕಮಗಳೂರು ಜಿಲ್ಲಾ ಪಂಚಾಯತ್
ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ,
ಜಿಲ್ಲಾ ಪಂಚಾಯತ್, 2ನೇ ಮಹಡಿ, ಕೆ.ಎಂ ರಸ್ತೆ, ಚಿಕ್ಕಮಗಳೂರು ಜಿಲ್ಲೆ
e-mail-dswo.ckm@gmail.com Ph:: 08262-295128
ಸಂ:ಉನಿಕ/ಸಕಇ/ಚಿಮ/ಸಿಬ್ಬಂದಿ/ಹೊ.ಗು.ಟೆಂಡರ್/ಸಿಆರ್–01/2025–26 ದಿನಾಂಕ: 16.05.2025

2025–26ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳಲ್ಲಿ ಖಾಲಿ ಇರುವ ಭೋದಕ/ಭೋದಕೇತರ ಹುದ್ದೆಗಳಿಗೆಸಿಬ್ಬಂದಿಗಳನ್ನು ಹೊರಸಂಪನ್ಮೂಲ ಏಜೆನ್ಸಿ ಮುಖಾಂತರ ಪಡೆಯುವ ಬಗ್ಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
E-Procurement ನಲ್ಲಿ ವಿವಿಧ ಹಂತದ ಘಟನಾವಳಿಗಳನ್ನು ಜರುಗಿಸಲು ಅಂದಾಜು ವೇಳಾಪಟ್ಟಿ
1. ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ: ಸಂ:ಉನಿ/ಸಕಇ/ಲೆಪ/ಚಿಕ್ಕಮಗಳೂರು/ಹೊರಸಂಪನ್ಮೂಲ/ಸಿಆರ್–01/2025–26 ದಿನಾಂಕ: 16.05.2025 **2.** ಟೆಂಡರ್ ಬಿಡ್ ಮೊತ್ತ : ರೂ.499.84ಲಕ್ಷ (ರೂ. ನಾಲ್ಕು ಕೋಟಿ ತ್ತೊಂಬತ್ತೊಂಬತ್ತು ಲಕ್ಷದ ಎಂಬತ್ನಾಲ್ಕು ಸಾವಿರ ರೂಗಳು) **3.** e-portal ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಬಹುದಾದ ದಿನಾಂಕ: 16/05/2025 ರಿಂದ 13/06/2025 **4.** Pre-Bid ಸಮಿತಿ ಸಭೆ ದಿನಾಂಕ ಮತ್ತು ಸಮಯ :ದಿನಾಂಕ 30.05.2025 ರಂದು ಬೆಳಿಗ್ಗೆ 11.00 ಗಂಟೆಗೆ (ಅವಶ್ಯವಿದ್ದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ ಮತ್ತು ಮುಂಚಿತವಾಗಿ ತಿಳಿಸಲಾಗುವುದು) **5.** e-portal ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ: 13/06/2025 ರಂದು ಸಂಜೆ 5.30 ಗಂಟೆಯವರೆಗೆ **6.** e-portal ಟೆಂಡರ್ ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ: ದಿನಾಂಕ 18/06/2025 ರಂದುಬೆಳಗ್ಗೆ 11.00 ಗಂಟೆಗೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ) (ಬದಲಾವಣೆಗೆ ಒಳಪಟ್ಟಿರುತ್ತದೆ) **7.** ಇ.ಎಂ.ಡಿ ಮೊತ್ತ.: ರೂ.7.49ಲಕ್ಷ (ರೂ ಏಳು ಲಕ್ಷದ ನಲವತ್ತೊಂಬತ್ತು ಸಾವಿರ ರೂ ಗಳು ಮಾತ್ರ) **8.** e-portal ಟೆಂಡರ್ ಆರ್ಥಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ : 21/06/2025 ರಂದು ಬೆಳಗ್ಗೆ 11.00 ಗಂಟೆಗೆ (ಅವಶ್ಯವಿದ್ದಲ್ಲಿ ಬದಲಾವಣೆಗೆ ಒಳವಡುತ್ತದೆ.) **9.** ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : Website: https //kppp.karnataka.gov.in ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಪಂಚಾಯತ್ 2ನೇ ಮಹಡಿ, ಚಿಕ್ಕಮಗಳೂರು ಜಿಲ್ಲೆ, ದೂರವಾಣಿ ಸಂಖ್ಯೆ: 08262–295128 Email: dswo.ckm@gmail.com

ಸಹಿ/– ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಚಿಕ್ಕಮಗಳೂರು.
ವಾ.ಸಾ.ಸಂ.ಇ/ಕೆಎಸ್ಎಂಸಿಎ/ಚಿ/25–26/26/282

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ
ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ, ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ ಬಾಗಲಕೋಟ – 587104.
ಸಂ:ಆ.ಅ./ತೋವಿವಿಬಾ/ಸಖಕ/ಟೆ.ನಂ–201/2025–26 ದಿನಾಂಕ:20–05–2025
ಮರು ಟೆಂಡರ ಪ್ರಕಟಣೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಡಿಯಲ್ಲಿ ಬರುವ ವಿವಿಧ ಮಹಾವಿದ್ಯಾಲಯಗಳಿಗೆ ಬೇಕಾಗಿರುವ ವೈಜ್ಞಾನಿಕ ಉಪಕರಣಗಳು, ಪಿಠೋಪಕರಣಗಳು, ಜೆರಾಕ್ಸ ಮಶಿನ್ & ಗಣಕಯಂತ್ರಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮರುಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಟೆಂಡರ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಂಡು ಟೆಂಡರನ್ನು ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಫೋ : 08354–230258.

ಟೆಂಡರನ ಘಟಣಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟಿಕರಣಕ್ಕಾಗಿ ಕೊನೆಯ ದಿನಾಂಕ	30–05–2025	@	14.00 ಘಂ
2	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ	06–06–2025	@	16.00 ಘಂ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	09–06–2025	@	11.00 ಘಂ
4	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	11–06–2025	@	12.00 ಘಂ

ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ corrigendum/addendum ಬಗ್ಗೆ ಮಾಹಿತಿ ಪಡೆಯಬೇಕು
ಸಹಿ/–ಆಸ್ತಿ ಅಧಿಕಾರಿಗಳು
ತೋ.ವಿ.ವಿ, ಬಾಗಲಕೋಟ
DIPR/BGK/RO-NO-77/KSMCA/2025-26

ಬಸ್‌ಗಳ ಮಧ್ಯೆ ಡಿಕ್ಕಿ 35 ಮಂದಿಗೆ ಗಾಯ

ಮೈಸೂರು: ಸಾರಿಗೆ ಬಸ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಇಬ್ಬರು ಬಸ್ ಚಾಲಕರು ಸೇರಿದಂತೆ 35ಕ್ಕೂ ಹೆಚ್ಚು ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿರುವ ಘಟನೆ ಜಿಲ್ಲೆಯ ನಂಜನಗೂಡು ತಾಲೂಕಿನ ಗೋಳೂರು ಗ್ರಾಮದ ವಿದ್ಯಾಪೀಠ ಬಳಿ ನಡೆದಿದೆ. ಬಸ್ ಚಾಲಕ ಕೆಂಪಣ್ಣ ಎಂಬುವರಿಗೆ ಗಂಭೀರ ಗಾಯಗಳಾಗಿದ್ದು, ಮತ್ತೊಬ್ಬ ಬಸ್ ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತಮಿಳುನಾಡಿನ ಕೊಯಮತ್ತೂರು ಕಡೆಯಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಮತ್ತು ನಂಜನಗೂಡು ಮಾರ್ಗವಾಗಿ ಚಾಮರಾಜನಗರ ಕಡೆಗೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಮುಖಾಮುಖಿ ಡಿಕ್ಕಿಯಾಗಿವೆ. ಬಸ್ಸುಗಳ ಚಾಲಕರಿಗೆ ಗಂಭೀರ ಗಾಯಗಳಾಗಿವೆ.

ಸಮರ್ಪಣೆ ಸಂಕಲ್ಪ ಸಮಾವೇಶ

ಎಲ್ಲ ವೃತ್ತದಲ್ಲೂ ಜಾನಪದ ಕಲಾತಂಡ

ಸಮರ್ಪಣಾ ಸಮಾವೇಶ ನಡೆ ಹೊಸಪೇಟೆ ನಗರದಾದ್ಯಂತ ಕಾಂಗ್ರೆಸ್ ಮುಖಂಡರ ಬ್ಯಾನರ್ ರಾರಾಜಿಸಿದ್ದು ಕಂಡು ಬಂತು. ನಗರದ ಪ್ರಮುಖ ವೃತ್ತದಲ್ಲಿ ಜಾನಪದ ಕಲಾ ತಂಡಗಳು ಮೇಳೈಸಿ, ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರು ಮತ್ತು ಸಾರ್ವಜನಿಕರನ್ನು ಸ್ವಾಗತಿಸಿದರು. ಕನಕದಾಸ ವೃತ್ತ, ಡಾ.ಪುನೀತ್ ರಾಜಕುಮಾರ ವೃತ್ತ, ಅಂಬೇಡ್ಕರ್ ವೃತ್ತ ಸೇರಿ ಎಲ್ಲ ಪ್ರಮುಖ ವೃತ್ತದಲ್ಲಿ ಹಗಲು ವೇಷಗಾರರು, ನಂದಿ ಕೋಲು, ಮೋಜಿನ ಬೊಂಬೆ ಸೇರಿ ನಾನಾ ಜಾನಪದ ಕಲಾ ತಂಡಗಳು ಜನರನ್ನು ರಂಜಿಸಿದರು.

ಧೋ ಎಂದು ಸುರಿದ ಮಳೆ

ಕಾರ್ಯಕ್ರಮಕ್ಕೆ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ ಸೇರಿ ಪ್ರಮುಖ ನಾಯಕರು ಬರುವ ಮೊದಲೇ ಧೋ ಎಂದು ಮಳೆ ಸುರಿಯಿತು. ಸುಮಾರು 11.30ಕ್ಕೆ ಶುರುವಾದ ಮಳೆ 12.30ರ ವರೆಗೆ ಭಾರಿ ಪ್ರಮಾಣದಲ್ಲಿ ಸುರಿಯಿತು. ಈ ಹಿನ್ನೆಲೆ ನಿರೀಕ್ಷಿತ ಮಟ್ಟದಲ್ಲಿ ಫಲಾನುಭವಿಗಳು ವೇದಿಕೆ ಕಡೆಗೆ ಬರಲು ಸಾಧ್ಯವಾಗಲಿಲ್ಲ. ಮಳೆ ಆರಂಭ ಆಗುವ ಹೊತ್ತಿಗೆ ಬಹುತೇಕ ಕುರ್ಚಿಗಳು ಭರ್ತಿ ಆಗಿದ್ದವು. ಮಳೆಯನ್ನೂ ಲೆಕ್ಕಿಸದೇ ಕಾರ್ಯಕ್ರಮಕ್ಕೆ ಬಂದ ದೃಶ್ಯ ಕಂಡು ಬಂದವು. ಮಳೆ ಶುರುವಾದ ಹಿನ್ನೆಲೆ ದೂರದ ಊರುಗಳಿಂದ ಬಂದಿದ್ದ ನೂರಾರು ಜನರಿಗೆ ವೇದಿಕೆಗೆ ಬರಲು ಸಾಧ್ಯವಾಗಲಿಲ. ಕಾರ್ಯಕ್ರಮ ಮುಕ್ತಾಯದ ನಂತರ ಮತ್ತೇ ಆರಂಭವಾದ ಮಳೆ ಸಂಜೆ ವರೆಗೂ ಮುಂದುವರಿದಿತ್ತು.

ಗಣ್ಯರಿಗೆ ಅದ್ದೂರಿ ಸ್ವಾಗತ

ಮುಖ್ಯ ಅತಿಥಿಗಳಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ, ಕಾರ್ನಾಟಕ ಉಸ್ತುವಾರಿ ರಣದೀಪಸಿಂಗ್ ಸುರ್ಜೇವಾಲ ಅವರು ಬರೋಬ್ಬರಿ 12.30ಕ್ಕೆ ವೇದಿಕೆಗೆ ಆಗಮಿಸಿದರು. ಗಣ್ಯರನ್ನು ಅತ್ಯಂತ ಅದ್ದೂರಿಯಾಗಿ ವೇದಿಕೆಗೆ ಸ್ವಾಗತಿಸಲಾಯಿತು. ಜಾನ ಪದಾ ಕಲಾ ತಂಡಗಳಾದ ಡೊಳ್ಳು ಕುಣಿತ, ಲಂಬಾಣಿ ನೃತ್ಯ ಚಂಡೆ ಮದ್ದಳೆ ನುಡಿಸುವ ಮೂಲಕ ಸ್ವಾಗತಿಸಲಾಯಿತು. ಈ ವೇಳೆ ಫೈರ್ ರಾಕೆಟ್ ಸಿಡಿಸಿದ್ದು ವೇದಿಕೆ ಕಲರ್ ಫುಲ್ ಆಗಿ ಕಂಡಿತು.

ಜೈ ಕಾಂಗ್ರೆಸ್ ಘೋಷಣೆ

ಹೊಸಪೇಟೆಯಲ್ಲಿ ನಡೆದಿದ್ದು ಸರಕಾರಿ ಕಾರ್ಯಕ್ರಮ. ಆದರೆ, ಜೈ ಕಾಂಗ್ರೆಸ್ ಘೋಷಣೆ ಮೊಳಗಿದವು. ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ ಸೇರಿ ಕೊಪ್ಪಳ-ರಾಯಚೂರು, ವಿಜಯನಗರ- ಬಳ್ಳಾರಿ ಡಿಸಿ, ಎಸ್ಪಿ, ಕಂದಾಯ ಇಲಾಖೆ ಆಯು ಕ್ತರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಆದರೆ, ಕಾರ್ಯ ಕ್ರಮ ಮಾತ್ರ ಪಕ್ಕಾ ಕಾಂಗ್ರೆಸ್ ಸಮಾವೇಶದಂತೆ ನಡೆಯಿತು. ಸ್ವತಃ ಡಿಸಿಎಂ ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಅವರು ವೇದಿಕೆ ಮೇಲೆ ನಿಂತು, ಕಾಂಗ್ರೆಸ್ ನಾಯಕಿ ದಿ.ಇಂದಿರಾ ಗಾಂಧಿ ಹಾಗೂ ಸೋನಿಯ ಗಾಂಧಿ ಪರ ಘೋಷಣೆ ಕೂಗಿದರು.

ಸಮರ್ಪಣೆ ಸಂಕಲ್ಪ ಸಮಾವೇಶದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗಂಭೀರ ಆರೋಪ

ಪಹಲ್ಗಾಮ್ ದಾಳಿ ಬಗ್ಗೆ ಮೋದಿಗೆ ಮಾಹಿತಿಯಿತ್ತು

ಹೊಸಪೇಟೆ: ಜಮ್ಮು-ಕಾಶಿರದಲ್ಲಿ ಪಹಲ್ಗಾಮ್ ದಾಳಿಗೂ ಮುನ್ನ ಮೋದಿಯವರಿಗೆ ಗುಪ್ತಚರ ಇಲಾಖೆ ಮುನ್ಸೂಚನೆ ನೀಡಿತ್ತು. ಆದರೂ ಕೇಂದ್ರ ಸರಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳದೆ 26 ಮಂದಿ ಅಮಾಯಕ ಪ್ರವಾಸಿಗರ ಹತ್ಯೆಗೆ ಕಾರಣವಾಗಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

ಸಮರ್ಪಣೆ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, ಪಹಲ್ಗಾಮ್‌ನಲ್ಲಿ ಪೊಲೀಸರಾಗಲೀ, ಗಡಿಭದ್ರತೆಯ ಪಡೆಯಾಗಲೀ ಅಥವಾ ಸೇನೆಯಾಗಲೀ ಪ್ರವಾಸಿಗರಿಗೆ ರಕ್ಷಣೆ ಒದಗಿಸದೇ ಇದ್ದುದ್ದಕ್ಕಾಗಿ 26 ಜೀವಗಳ ಹತ್ಯೆಯಾಗಿದೆ ಎಂದು ಹೇಳಿದರು. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಏ.17 ರಂದು ಜಮು-ಕಾಶಿರ ಪ್ರವಾಸ ನಿಗದಿಯಾಗಿತ್ತು. ಗುಪ್ತಚರ ಇಲಾಖೆ ಅಲ್ಲಿ ಗಲಾಟೆಯಾಗುತ್ತಿದೆ, ಪ್ರವಾಸವನ್ನು ರದ್ದು ಮಾಡಿ ಎಂದು ಸಲಹೆ ನೀಡಿತ್ತು. ಹೀಗಾಗಿ ಪ್ರವಾಸ ರದ್ದುಗೊಂಡಿತ್ತು. ಇವರಿಗೆ ಮೊದಲೇ ಮುನ್ಸೂಚನೆ ಇದ್ದರೂ ಪ್ರವಾಸಿಗರಿಗೆ ಪೊಲೀಸರ ಮೂಲಕ ಏಕೆ ಎಚ್ಚರಿಕೆ ಕೊಡಲಿಲ್ಲ ಎಂದು ಖರ್ಗೆ ಪ್ರಶ್ನಿಸಿದರು.

ಪಾಕಿಸ್ತಾನ ಪ್ರತಿಬಾರಿಯೂ ಭಾರತದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತದೆ. ಸ್ವಂತಶಕ್ತಿ ಇಲ್ಲದೇ ಪಾಕಿಸ್ತಾನವು ಚೀನಾ ಬೆಂಬಲದಿಂದ ನಮ್ಮ ಮೇಲೆ ದಾಳಿ ಮಾಡುವ ಯತ್ನ ನಡೆಸುತ್ತಿದೆ. ನಾವೆಲ್ಲಾ ಒಟ್ಟಾಗಿ ಯಾರೇ ನಮ್ಮ ಮೇಲೆ ಯುದ್ಧಕ್ಕೆ ಬಂದರೂ ಅದನ್ನು ಎದುರಿಸುವುದಾಗಿ ಸಂಕಲ್ಪ ತೊಟ್ಟಿದ್ದೇವೆ. ಇಲ್ಲಿ ಜಾತಿ, ಧರ್ಮ, ಪಕ್ಷ ಮುಖ್ಯವಲ್ಲ ಎಂದರು.

ದೇಶದ ರಕ್ಷಣೆಗಾಗಿ 2 ಬಾರಿ ಸರ್ವಪಕ್ಷಗಳ ಸಭೆ ಕರೆಯಲಾಗಿತ್ತು. ಮೋದಿ ಅದರಲ್ಲಿ ಭಾಗವಹಿಸದೇ ಬಿಹಾರದಲ್ಲಿ ಚುನಾವಣಾ ಪ್ರಚಾರಕ್ಕೆ ಹೋದರು. ಒಂದು ವೇಳೆ ನಾವು ಗೈರುಹಾಜರಾಗಿದ್ದರೆ ದೇಶ ದ್ರೋಹಿಗಳು ಎನ್ನುತ್ತಿದ್ದರು. ಮೋದಿ ಗೈರುಹಾಜರಾದರೆ ದೇಶಪ್ರೇಮಿ ಎನ್ನುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಾಂಗ್ರೆಸ್‌ನಿಂದ ಮಹತ್ಮಾಗಾಂಧಿ, ಇಂದಿರಾಗಾಂಧಿ, ರಾಜೀವ್‌ಗಾಂಧಿ ದೇಶಕ್ಕಾಗಿ ಪ್ರಾಣ ತೆತ್ತಿದ್ದಾರೆ. ನಮ ಮೇಲೆ ಬಿಜೆಪಿಯವರು ಗೂಬೆ ಕೂರಿಸುತ್ತಾರೆ. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ಮೇಲೆ ಇ.ಡಿ. ಪ್ರಕರಣ ದಾಖಲಿಸಲಾಗಿದೆ. ಆದಾಯ ತೆರಿಗೆ ನೋಟಿಸ್ ನೀಡಲಾಗಿದೆ. ನಾವು ಇದ್ಯಾವುದಕ್ಕೂ ಜಗ್ಗುವುದಿಲ್ಲ ಎಂದು ಗುಡುಗಿದರು.

ಚುನಾವಣೆಯಲ್ಲಿ ಭರವಸೆ ನೀಡಿದಂತೆ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿ ಜತೆಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುನ್ನಡೆಸುತ್ತಿರುವುದಕ್ಕೆ ಸಿಎಂ ಸಿದ್ದ ರಾಮಯ್ಯ ಸರಕಾರವನ್ನು ಅಭಿನಂದಿಸುವುದಾಗಿ ತಿಳಿಸಿದರು.

ಸಮರ್ಪಣಾ ಸಂಕಲ್ಪ ಸಮಾವೇಶ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಫಲಾನುಭವಿಗಳಿಗೆ ಮನೆ ಹಕ್ಕುಪತ್ರ ವಿತರಿಸಿದರು.

ಎಸ್ಸಿ ವರ್ಗಕ್ಕೆ ಬೇಡಜಂಗಮರು ಬೇಡ: ಖರ್ಗೆ

ರಾಜ್ಯ ಸರಕಾರ ಎಸ್ಸಿ ವರ್ಗದಲ್ಲಿನ ಜನಗಣತಿ ಮಾಡುತ್ತಿರುವುದು ಶ್ಲಾಘನೀಯ. ಆದರೆ, ವೀರಶೈವ ಲಿಂಗಾಯತರು ಬೇಡ ಜಂಗಮ ಎಂದು ನೋಂದಣಿ ಮಾಡಿಕೊಳ್ಳುತ್ತಿರುವುದು ಸರಿಯಲ್ಲ . ಎಸ್ಸಿ ವರ್ಗದ ಜಾತಿಗಳಿಗೆ ಒಳ ಮೀಸಲಾತಿ ನೀಡಲು ರಾಜ್ಯ ಸರಕಾರ ಗಣತಿ ಮಾಡುತ್ತಿದೆ. ರಾಜ್ಯದಲ್ಲಿ ಕೇವಲ ಐದು ನೂರು ಜನ ಇದ್ದ ಬೇಡ ಜಂಗಮರು, ಈಗ 4.5 ಲಕ್ಷ ಆಗಿದ್ದಾರೆ. ರಾಜ್ಯದಲ್ಲಿನ ಲಿಂಗಾಯತ ಜಂಗಮರು, ತಾವು ಬೇಡ ಜಂಗಮ ಎಂದು ಗಣತಿಯಲ್ಲಿ ಬರೆಯಿಸುತ್ತಿದ್ದಾರೆ. ಲಿಂಗಾಯತರಿಗೆ ವಿಶೇಷ ಯೋಜನೆ ರೂಪಿಸೋಣ. ಆದರೆ, ಅವರು ಎಸ್ಸಿ ಪಟ್ಟಿಯಲ್ಲಿ ಸೇರುವುದು ಸರಿಯಾದ ಕ್ರಮವಲ್ಲ. ಈ ಮೂಲಕ ಎಸ್ಸಿ ಹಕ್ಕು ಕಿತ್ತಿಕೊಳ್ಳಲು ಬಂದರೆ ನಾವು ಬಿಡುವುದಿಲ್ಲ. ಇಂಥ ಜಟಿಲ ಸಮಸ್ಯೆಯನ್ನು ಸರಕಾರ ಕೂಡಲೇ ಸರಿ ಮಾಡಬೇಕು. ಇದು ರಾಜ್ಯಕ್ಕೆ ಒಳ್ಳೆಯದಲ್ಲ.ದೇಶಕ್ಕೆ ಒಳ್ಳೆಯದಲ್ಲ ಎಂದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಾಕೀತು ಮಾಡಿದರು.

ಸಮರ್ಪಣಾ ಸಂಕಲ್ಪ ಸಮಾವೇಶ ಕಾರ್ಯಕ್ರಮವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿಕೆ

ಮುಂದಿನ 6 ತಿಂಗಳಲ್ಲಿ ಬಾಕಿ ಹಕ್ಕುಪತ್ರ ವಿತರಣೆ

ತಾಂಡಾ, ಹಟ್ಟಿ ಹಾಗೂ ಹಾಡಿಗಳನ್ನು ಕಂದಾಯ ಗ್ರಾಮಗಳಾಗಿ ಘೋಷಿಸಿ ಬರೋಬ್ಬರಿ 1,11,111 ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಣೆ ಮಾಡಿರುವ ಸರಕಾರದ ಕೆಲಸ ಅತ್ಯಂತ ಶ್ಲಾಘನೀಯ. ಬಾಕಿ 50 ಸಾವಿರ ಫಲಾನುಭವಿಗಳಿಗೆ ಮುಂದಿನ 6 ತಿಂಗಳಲ್ಲಿ ಬಾಕಿ ಹಕ್ಕುಪತ್ರ ನೀಡುತ್ತೇವೆ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭರವಸೆ ನೀಡಿದರು.

ಸಮರ್ಪಣಾ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿ, ಲಂಬಾಣಿ ತಾಂಡಾಗಳು, ಆದಿವಾಸಿಗಳು ವಾಸವಿದ್ದ ಹಟ್ಟಿಗಳು ಕಂದಾಯ ಗ್ರಾಮಗಳಾಗಿರಲಿಲ್ಲ. ಈ ಕಾರಣಕ್ಕೆ ಅವರು ವಾಸವಿದ್ದ ಮನೆಯ ಜಾಗದ ಮೇಲೆ ಅವರ ಹಕ್ಕು ಇರಲಿಲ್ಲ. ಇಂಥ ಗ್ರಾಮದಲ್ಲಿ ಇದ್ದವರಿಗೆ ಸರಕಾರದ ಸೌಲಭ್ಯ ಸಿಗುತ್ತಿರಲಿಲ್ಲ. ಈ ಬಗ್ಗೆ ಜನರು ನನಗೆ ಮನವಿ ಸಲ್ಲಿಸಿದ್ದರು. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರಿಂದ, ಕಾಂಗ್ರೆಸ್ ಸರಕಾರ ಅತ್ಯಂತ ಉತ್ತಮ ಕೆಲಸ ಮಾಡಿದೆ. ಹತ್ತಾರು ವರ್ಷ ಜಾಗ ಅನುಭವಿಸುತ್ತಿದ್ದರೂ ಅದು ಅವರದ್ದಾಗಿರಲಿಲ್ಲ. ಇಂಥ ಜಾಗಕ್ಕೆ ಅಲ್ಲಿದ್ದವರಿಗೆ ಹಕ್ಕು ಪತ್ರ ಕೊಡುವುದು ನನ್ನ ಉದ್ದೇಶ ಆಗಿತ್ತು. ಇಂದಿರಾ ಗಾಂಧಿ ಕನಸು ನನಸು ಮಾಡಲು ಇಂಥ ಹೆಜ್ಜೆ ಇಡಲಾಗಿದೆ ಎಂದರು.

ಸದ್ಯ ಸರಕಾರ 2 ಸಾವಿರ ಜನ ವಸತಿ ಪ್ರದೇಶಗಳನ್ನು ಕಂದಾಯ ಗ್ರಾಮ ಎಂದು ಘೋಷಣೆ ಮಾಡಿರುವುದು ಒಳ್ಳೆಯ ಕೆಲಸ. ಹಕ್ಕು ಪತ್ರ ಭದ್ರವಾಗಿ ಇಟ್ಟುಕೊಳ್ಳಲು ಸಮಸ್ಯೆ ಆಗಬಾರದು ಅಂತಾ ಡಿಜಿಟಲ್ ಹಕ್ಕು ಪತ್ರ ನೀಡಿದ್ದೇವೆ. ಇದು ಕರ್ನಾಟಕ ಸರಕಾರದ 6ನೇ ಗ್ಯಾರಂಟಿ ಆಗಿದ್ದು, ಲಕ್ಷಾಂತರ ಕುಟುಂಬಕ್ಕೆ ಸಹಾಯ ಆಗಿದೆ. ರಾಜ್ಯದ ಜಿಲ್ಲಾ ಮತ್ತು ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷರು ಸೂರು ರಹಿತ ಹಕ್ಕು ಪತ್ರ ಕೊಡಿಸಬೇಕು ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಯಿಂದ ಗ್ರಾಮೀಣ ಭಾಗದಲ್ಲಿ ಹಣದ ವಹಿವಾಟು ಆರಂಭವಾಗಿದೆ. ಆದರೆ, ಬಿಜೆಪಿ ಉದ್ದೇಶ ಈ ಹಣವನ್ನು ದೇಶದ ಇಬ್ಬರು, ಮೂವರು ಉದ್ಯಮಿಗಳ ಬಳಿಗೆ ಸೇರಿಸುವುದು ಆಗಿತ್ತು. ದೇಶ ತೆರಿಗೆ ಹಣದಲ್ಲಿ ಈ ಉದ್ಯಮಿಗಳು ಲಂಡನ್ ನಲ್ಲಿ ಆಸ್ತಿ ಮಾಡುತ್ತಿದ್ದಾರೆ. ಬಿಜೆಪಿ ಯೋಜನೆಗ ಳಿಂದ ಜನರು ಅನಾರೋಗ್ಯಕ್ಕೆ ತುತ್ತಾಗಿ, ಸಾಲ ಮಾಡಿಕೊಳ್ಳುತ್ತಾರೆ. ಆದರೆ,ಜನರು ಆರೋಗ್ಯಕ್ಕಾಗಿ ಹಣ ಖರ್ಚು ಮಾಡಲು ಸರಕಾರವೇ ಹಣ ಕೊಡುತ್ತಿದೆ.

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ನರೇಂದ್ರ ಮೋದಿಯವರು 28 ಗ್ಯಾರಂಟಿಗಳನ್ನು ನೀಡಿದರು. ಚುನಾವಣಾ ವೇಳೆ ತಾವು ಅಧಿಕಾರಕ್ಕೆ ಬಂದರೆ ವಿದೇಶದಲ್ಲಿದ್ದ ಕಪ್ಪುಹಣ ತಂದು ಪ್ರತಿಯೊಬ್ಬರ ಖಾತೆಗೆ 15 ಲಕ್ಷ ರು.ಗಳನ್ನು ಹಾಕುವುದಾಗಿ ಭರವಸೆ ನೀಡಿದ್ದರು. 2 ಕೋಟಿ ನೌಕರಿ ಸೃಷ್ಟಿಸುವುದಾಗಿ ಹೇಳಿದರು. ಯಾವುದೂ ಈಡೇರಿಲ್ಲ. ನೋಟು ಅಮಾನ್ಯ ಮಾಡಿ ಬಡವರ ಸಂಸಾರಗಳನ್ನು ಬೀದಿಗೆ ತಂದರು.

ಮಲ್ಲಿಕಾರ್ಜುನ ಖರ್ಗೆ , ಎಐಸಿಸಿ ಅಧ್ಯಕ್ಷ

ತಾಂಡಾ, ಹಾಡಿ, ಹಟ್ಟಿಯ ಸೂರು ಇಲ್ಲದ ಒಂದು ಲಕ್ಷಕ್ಕೂ ಹೆಚ್ಚು ಬಡವರಿಗೆ ಹಕ್ಕು ಪತ್ರ ನೀಡುವ ಮೂಲಕ ಅವರ ಕನಸು ಈಡೇರಿಸುವ ಸಮರ್ಪಣಾ ಸಮಾವೇಶ. ಸರಕಾರ 2 ವರ್ಷದಲ್ಲಿ ಮಾಡಿದ ಕೆಲಸಗಳನ್ನು ಜನರಿಗೆ ತಿಳಿಸುವ ಸಮಾವೇಶ. ಪೋಡಿ ಮುಕ್ತ ಗ್ರಾಮ ಮಾಡಿರುವುದು ಕಾಂಗ್ರೆಸ್ ಸರಕಾರ ಪ್ರಮುಖ ಸಾಧನೆಯಲ್ಲಿ ಒಂದು. ನಾವು ನುಡಿದಂತೆ ನಡೆದಿದ್ದೇವೆ.

- ಶಿವರಾಜ ತಂಗಡಗಿ, ಸಚಿವ



ಕಳೆದ ಎರಡು ವರ್ಷದ ಹಿಂದೆ ರಾಜ್ಯದ ಜನರು ನಿರೀಕ್ಷೆಗೂ ಮೀರಿ ಕಾಂಗ್ರೆಸ್ ಕೈ ಬಲಪಡಿಸಿದ್ದರು. ಈ ಎರಡು ವರ್ಷದಲ್ಲಿ ಕಾಂಗ್ರೆಸ್ ಸರಕಾರ ಸರಕಾರ ಮಾಡಿದ ಕೆಲಸದ ಬಗ್ಗೆ ಹೇಳುವುದು ನಮ್ಮ ಜವಾಬ್ದಾರಿ. ಮುಂದಿನ ಮೂರು ವರ್ಷ ಮಾಡಬೇಕಾದ ಕೆಲಸಗಳ ಬಗ್ಗೆ ರಾಜ್ಯ ಜನರ ಮುಂದೆ ಸಂಕಲ್ಪ ಕೈಗೊಳ್ಳುತ್ತಿದ್ದೇವೆ.

- ಕೃಷ್ಣ ಬೈರೇಗೌಡ, ಕಂದಾಯ ಸಚಿವ

ದೇಶದಲ್ಲಿ ಭಯೋತ್ಪಾದಕ ದಾಳಿಗಳು ಆಗಿದ್ದು ಬಿಜೆಪಿ ಸರಕಾರದಲ್ಲಿಯೇ ಹೆಚ್ಚು. ಈ ದೇಶದ ಅಖಂಡತೆ, ಸಮಗ್ರತೆ ಉಳಿಸಿಕೊಳ್ಳಲು ಕಾಂಗ್ರೆಸ್ ಪಕ್ಷದ ಸರಕಾರದಿಂದ ನಿಂದ ಮಾತ್ರ ಸಾಧ್ಯ. ರಾಜ್ಯದಲ್ಲಿನ ಸದೃಢ ಕಾಂಗ್ರೆಸ್ ಸರಕಾರ ಬಡವರ ಪರ ಸಾಕಷ್ಟು ಕೆಲಸ ಮಾಡುತ್ತಿದೆ. ನನ್ನ ಅರಣ್ಯ ಇಲಾಖೆಯಲ್ಲಿ ಆಮೂಲಾಗ್ರ ಬದಲಾಗಣೆ ಆಗಿವೆ. ಪರಿಸರ ಸಂರಕ್ಷಣೆಗೆ ಸರಕಾರ ಕಂಕಣ ಬದ್ಧವಾಗಿ ನಿಂತಿದೆ.

- ಈಶ್ವರ ಖಂಡ್ರೆ, ಅರಣ್ಯ ಸಚಿವ

ಗ್ಯಾರಂಟಿ ಯೋಜನೆ ಮೂಲಕ ಕರ್ನಾಟಕ ಸರಕಾರ ಸುಮಾರು 1.25 ಕೋಟಿ ಕುಟುಂಬಗಳನ್ನು ಬಡತನ ರೇಖೆಗಿಂತ ಮೇಲೆ ಎತ್ತಿದ್ದೇವೆ. ಅತ್ಯಂತ ಕಡಿಮೆ ಅವಧಿಯಲ್ಲಿ ಇಂಥದ್ದೊಂದು ಯೋಜನೆ ಯಶಸ್ವಿಯಾಗಿ ಜಾರಿ ಮಾಡಿದ ಉದಾಹರಣೆ ಜಗತ್ತಿನಲ್ಲಿ ಎಲ್ಲೂ ಇಲ್ಲ. ಇಂಥದ್ದನ್ನು ಕರ್ನಾಟಕ ಸರಕಾರ ಮಾಡಿ ತೋರಿಸಿದೆ. ರಾಜ್ಯ ಸರಕಾರ ಸರ್ವರಿಗೂ ಸಾಮಾಜಿಕ ನ್ಯಾಯ ಕೊಟ್ಟಿದೆ.

- ಎಚ್.ಕೆ.ಪಾಟೀಲ್, ಸಚಿವ

ನೂತನ ವಿಜಯನಗರ ಜಿಲ್ಲೆಗೆ ಅಗತ್ಯ ಇರುವ ಜಿಲ್ಲಾಡಳಿತ ಭವನ, ಆಸ್ಪತ್ರೆ ಮೇಲ್ದರ್ಜೆಗೆ ಏರಿಸಲು ಅನುದಾನ ಕೊಡುವುದಾಗಿ ಸಿಎಂ ಹೇಳಿದ್ದಾರೆ. ವಿಜಯನಗರ ಜಿಲ್ಲೆ ಜನರ ಬಹು ನಿರೀಕ್ಷಿತ ಸಕ್ಕರೆ ಕಾರ್ಖಾನೆಗೆ ಮುಂದಿನ ಎರಡು ತಿಂಗಳಲ್ಲಿ ಭೂಮಿ ಪೂಜೆ ಮಾಡುತ್ತೇವೆ. ತುಂಗಭದ್ರಾ ಕ್ರಸ್ಟ್ ಗೇಟ್ ನಿರ್ಮಾಣ ಶೀಘ್ರದಲ್ಲೇ ಆಗಲಿದೆ. ಸಮಗ್ರ ಅಭಿವೃದ್ಧಿಯೇ ನಮ್ಮ ಗುರಿ.

-ಜಮೀರ್ ಅಹ್ಮದ್ ಖಾನ್, ಸಚಿವ

ಕಾಂಗ್ರೆಸ್ ಅಧಿಕಾರದಲ್ಲಿರುವವರೆಗೂ ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ: ಡಿಸಿಎಂ

ಜನರ ಋಣ ತೀರಿಸಲು 6ನೇ ಭೂ ಗ್ಯಾರಂಟಿ ಯೋಜನೆ

ಹೊಸಪೇಟೆ: ನಮಗೆ ಅಧಿಕಾರ ನೀಡಿ ರಾಜ್ಯದ ಸೇವೆ ಮಾಡಲು ಆಶೀರ್ವಾದ ಮಾಡಿದ ಜನರ ಋಣ ತೀರಿಸಲು ನಮ್ಮ ಸರಕಾರ ಆರನೆಯದಾಗಿ ಭೂ ಗ್ಯಾರಂಟಿ ಯೋಜನೆ ನೀಡುತ್ತಿದೆ. ಎಐಸಿಸಿ ಅಧ್ಯಕ್ಷರ ನಿರ್ದೇಶನದಂತೆ ಕಾಂಗ್ರೆಸ್ ಅಧಿಕಾರದಲ್ಲಿರುವವರೆಗೂ ಗ್ಯಾರಂಟಿ ಯೋಜನೆಗಳು ನಿಲ್ಲಿಸುವುದಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ರಾಜ್ಯ ಸರಕಾರಕ್ಕೆ ಎರಡು ವರ್ಷ ತುಂಬಿರುವ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆ ಹೊಸಪೇಟೆಯಲ್ಲಿ ಮಂಗಳವಾರ ನಡೆದ ಪ್ರಗತಿಯತ್ತ ಕರ್ನಾಟಕ ಸಮರ್ಪಣೆಯ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿ, ನಾವಿಂದು ಎರಡು ವರ್ಷಗಳ ಸಂಭ್ರಮಾಚರಣೆ ಮಾಡಲು ಇಲ್ಲಿಗೆ ಬಂದಿಲ್ಲ, ಕರ್ನಾಟಕ ರಾಜ್ಯದ ಜನರ ಋಣ ತೀರಿಸಲು ಸಮರ್ಪಣೆಯ ಸಂಕಲ್ಪ ಕಾರ್ಯಕ್ರಮ ಮಾಡುತ್ತಿದ್ದೇವೆ. ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ರಾಹುಲ್ ಗಾಂಧಿ ಅವರ ನಾಯಕತ್ವದಲ್ಲಿ 136 ಕ್ಷೇತ್ರಗಳಲ್ಲಿ ಶಾಸಕರನ್ನು ಆಯ್ಕೆ ಮಾಡಿ ನಮಗೆ ಆಶೀರ್ವಾದ ಮಾಡಿದಿರಿ. ನಿಮ್ಮ ಋಣ ತೀರಿಸಲು ಕೊಟ್ಟ ಮಾತಿನಂತೆ ಐದು ಗ್ಯಾರಂಟಿ ಯೋಜನೆ ಜಾರಿ ಮಾಡಿ, ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆ ನೀಡುವ ಮೂಲಕ ನಮ್ಮ ಸರಕಾರ ಇತಿಹಾಸ ಬರೆಯುತ್ತಿದೆ ಎಂದರು.

ಗ್ರಾಮೀಣ ಪ್ರದೇಶದ ಬಡ ಜನರು, ಕಳೆದ ಐವತ್ತು ವರ್ಷಗಳಿಂದ ಪಟ್ಟಾ ಖಾತೆ ಇಲ್ಲದವರಿಗೆ ಇಂದು ಈ ಯೋಜನೆ ಮೂಲಕ ದಾಖಲಾತಿ ನೀಡುತ್ತಿದ್ದೇವೆ. ಇಂತಹ ಐತಿಹಾಸಿಕ ಯೋಜನೆ ನೀಡಿರುವ ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ಹಾಗೂ ಅವರ ಅಧಿಕಾರಿಗಳ ಕಾರ್ಯಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ನಗರ ಪ್ರದೇಶಗಳಲ್ಲಿ ನಾನು, ಬೈರತಿ ಸುರೇಶ್, ರಹೀಂ ಖಾನ್ ಅವರು ಸೇರಿ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸಿ ಖಾತೆಗಳನ್ನು ಸರಿಪಡಿಸಿ ಜನರಿಗೆ ನೀಡುವ ಏಳನೇ ಗ್ಯಾರಂಟಿ ಘೋಷಣೆ ಮಾಡುತ್ತಿದ್ದೇವೆ. ಕಾಂಗ್ರೆಸ್ ಶಕ್ತಿ, ದೇಶದ ಶಕ್ತಿ, ಕಾಂಗ್ರೆಸ್ ಇತಿಹಾಸ ದೇಶದ ಇತಿಹಾಸ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲಾ ವರ್ಗದವರು ಅಧಿಕಾರಕ್ಕೆ ಬಂದಂತೆ ಎಂದು ಹೇಳಿದರು.

ನಮ್ಮ ಸರಕಾರದ ಎರಡು ವರ್ಷಗಳ ಅವಧಿಯಲ್ಲಿ ಭ್ರಷ್ಟಾಚಾರಕ್ಕೆ ಬೇಡಿ ಹಾಕಿದೆ. ಇಂದಿರಾ ಗಾಂಧಿ ಅವರು ಈ ಜಿಲ್ಲೆಯಲ್ಲಿ ವಿಜಯನಗರ ಸ್ಟೀಲ್ ಆರಂಭಿಸಿದರು. ಸೋನಿಯಾ ಗಾಂಧಿ ಅವರು ಇಲ್ಲಿ ಬಂದು ವಿದ್ಯುತ್ ಶಕ್ತಿಯ ಆರ್‌ಟಿಪಿಎಸ್ ಆರಂಭಿಸಿದರು. ರಾಹುಲ್ ಗಾಂಧಿ ಅವರು ನಮ್ಮ ರಾಜ್ಯದಲ್ಲಿ ಭಾರತ ಜೋಡೋ ಯಾತ್ರೆ ಮಾಡಿದ ಬಹುತೇಕ ಎಲ್ಲಾ ಕಡೆಗಳಲ್ಲಿ ಕಾಂಗ್ರೆಸ್ ಪಕ್ಷ ಗೆದ್ದಿಗೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 6 ಸಂಸದರನ್ನು ಆಯ್ಕೆ ಮಾಡಿದ್ದೀರಿ. ನಮ್ಮ ಸರ ಕಾರ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ವರ್ಷಕ್ಕೆ 5 ಸಾವಿರ ಕೋಟಿ ನೀಡುತ್ತಿದ್ದೇವೆ ಎಂದರು.

ನಮ್ಮ ಸರಕಾರದ ಆಡಳಿತದಲ್ಲಿ ರಾಜ್ಯದಲ್ಲಿ 10 ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ ಉದ್ಯಮಿಗಳು ಮುಂದಾಗಿದ್ದಾರೆ. ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಲಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯ ಮೂಲಕ ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಗೆ ಕಲ್ಯಾಣ ಪಥ ಯೋಜನೆ ರೂಪಿಸಲಾಗಿದೆ. ಇದರ ಜತೆಗೆ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ಎಲ್ಲಾ ಇಲಾಖೆಗಳಲ್ಲಿ ನಮ್ಮ ಸಚಿವರು ಹೊಸ ಯೋಜನೆ ತಂದು ಜನರ ಸೇವೆ ಮಾಡುತ್ತಿದ್ದಾರೆ ಎಂದರು.

ರಾಜ್ಯ ಸರಕಾರ ಎರಡು ವರ್ಷ ಪೂರ್ಣಗೊಳಿಸಿದ ನಿಮಿತ್ತ ಹೊಸಪೇಟೆ ನಗರದಲ್ಲಿ ಹಮ್ಮಿಕೊಂಡಿದ್ದ ಸಮರ್ಪಣೆ ಸಂಕಲ್ಪ ಸಮಾವೇಶದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಾಜಿ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರ ಪುತ್ಥಳಿ ಅನಾವರಣಗೊಳಿಸಿದರು.

- ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲಾ ವರ್ಗದವರು ಅಧಿಕಾರಕ್ಕೆ ಬಂದಂತೆ
- ಸರಕಾರದ ಎರಡು ವರ್ಷಗಳ ಅವಧಿಯಲ್ಲಿ ಭ್ರಷ್ಟಾಚಾರಕ್ಕೆ ಬೇಡಿ ಹಾಕಿದೆ
- ಭಾರತ ಜೋಡೋ ಯಾತ್ರೆಯ ಬಹುತೇಕ ಕಡೆಗಳಲ್ಲಿ ಕಾಂಗ್ರೆಸ್ ಗೆದ್ದಿಗೆ
- ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ವರ್ಷಕ್ಕೆ 5 ಸಾವಿರ ಕೋಟಿ

ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ

ವಿರೋಧ ಪಕ್ಷಗಳು ನಮ್ಮ ವಿರುದ್ಧ ಟೀಕೆಗಳನ್ನು ಮಾಡುತ್ತಿವೆ. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ. ಅದಕ್ಕೆ ನಮ್ಮ ಯೋಜನೆಗಳೇ ಸಾಕ್ಷಿ. ರೈತರ ಬವಣೆ ನೀಗಿಸಲು ರಾಜ್ಯದ ಕೆರೆಗಳನ್ನು ತುಂಬಿಸಲು ಕಾರ್ಯಕ್ರಮ ರೂಪಿಸಲಾಗಿದೆ. ನವಲಿ ಅಣೆಕಟ್ಟು ಯೋಜನೆ ಮಾಡಲು ಚರ್ಚೆ ಮಾಡುತ್ತಿರುವ ಹೊತ್ತಿನಲ್ಲಿಯೇ. ನಮ್ಮ ಪಾಲಿನ 24 ಟಿಎಂಸಿ ನೀರನ್ನು ಏತ ನೀರಾವರಿ ಮೂಲಕ ಕೆರೆಗಳಿಗೆ ತುಂಬಿಸುವ ಕಾರ್ಯಕ್ರಮ ರೂಪಿಸಲಾಗಿದೆ. ಈ ವಿಚಾರವಾಗಿ ಆಂಧ್ರ ಪ್ರದೇಶ ರಾಜ್ಯದ ಜತೆ ಚರ್ಚೆ ಮಾಡಬೇಕಿದೆ. ಈ ಯೋಜನೆ ಮೂಲಕ ನಿಮ್ಮ ರಕ್ಷಣೆ ಮಾಡಲು ನಾವು ಬದ್ಧ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

ನಮ್ಮ ಸರಕಾರ ಬಸವಣ್ಣನವರ ಮಾರ್ಗದರ್ಶನದಂತೆ ನಾವು ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇವೆ. ನಮ್ಮ ಸರಕಾರದ ಕಾರ್ಯ ಸಾಧನೆಯನ್ನು ವಿರೋಧ ಪಕ್ಷಗಳು ಕಣ್ಣಲ್ಲಿ ನೋಡಲಾಗದೇ, ಟೀಕೆ ಮಾಡುತ್ತಿದ್ದಾರೆ. ಅವರು ಟೀಕೆ ಮಾಡುತ್ತಿರಲಿ, ನಾವು ಜನರ ಬದುಕು ಉಳಿಸುವ ಕೆಲಸ ಮಾಡಿಕೊಂಡು ಹೋಗುತ್ತೇವೆ.

ಡಿ.ಕೆ.ಶಿವಕುಮಾರ್, ಡಿಸಿಎಂ

ಜನರು ನೀಡಿದ ಅಧಿಕಾರ ಜನರ ಸೇವೆಗಾಗಿ ಮುಡಿಪು ಇಟ್ಟಿದ್ದೇವೆ: ಕೃಷ್ಣಬೈರೇಗೌಡ

ಇದೊಂದು ಐತಿಹಾಸಿಕ ಕಾರ್ಯಕ್ರಮ

ಹೊಸಪೇಟೆ: ಲಂಬಾಣಿ, ಬೋವಿ, ಗೊಲ್ಲ, ಕಾವಲಿ, ಸೋಲಿಗ, ಕಾಡು ಕುರುಬ, ನಾಯಕ ವಾಸ ಮಾಡುವ ತಾಂಡ, ಹಾಡಿ, ಹಟ್ಟಿ, ಮಜಿರೆ, ಕ್ಯಾಂಪ್‌ಗಳು ಸೇರಿದಂತೆ ದಾಖಲೆ ರಹಿತ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿಸಲು 1,11,111 ಕುಟುಂಬಗಳಿಗೆ ಮನೆ ಹಕ್ಕುಪತ್ರ ನೀಡಲಾಗುತ್ತಿದೆ. ಇದೊಂದು ಐತಿಹಾಸಿಕ ಕಾರ್ಯಕ್ರಮ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಪ್ರಗತಿಯತ್ತ ಕರ್ನಾಟಕ-ಸಮರ್ಪಣೆ ಸಂಕಲ್ಪ ಕಾರ್ಯಕ್ರಮದಲ್ಲಿ ಮಾತನಾಡಿ, ದಾಖಲೆಗಳು ಇಲ್ಲದೆ ಇರುವ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನು ಪರಿವರ್ತಿಸಿ, ಅಲ್ಲಿ ವಾಸಿಸುವ ಕುಟುಂಬಗಳಿಗೆ ಮನೆಗಳಿಗೆ ಹಕ್ಕುಪತ್ರ ನೀಡಿ, ಊರಿಗೊಂದು ಗೌರವ, ಮನೆಗೊಂದು ವಿಳಾಸ, ಬದುಕಿಗೊಂದು ನೆಮ್ಮದಿಯನ್ನು ಸರಕಾರ ನೀಡಿದೆ. ಶತಮಾನಗಳಿಂದ ಜನವಸತಿ ಇದ್ದರೂ, ಗ್ರಾಮ ಎನ್ನುವ ಮಾನ್ಯತೆ ಇಲ್ಲದ ಕಾರಣ ಈ ಊರುಗಳಿಗೆ ಸೌಕರ್ಯ ನೀಡಲು ಸಾಧ್ಯವಾಗದ ಪರಿಸ್ಥಿತಿ ಇತ್ತು. ಕುಟುಂಬಗಳು ಆಶ್ರಯ ಯೋಜನೆಯ ಲಾಭವನ್ನು ಸಹ ಪಡೆಯಲಾಗುತ್ತಿರಲಿಲ್ಲ. ಮನೆ ಆಸ್ತಿ ವರ್ಗಾವಣೆಯು ಸಾಧ್ಯವಿರಲಿಲ್ಲ. ಈ ಸಮಸ್ಯೆಗಳಿಗೆ ಸರಕಾರ ಅಂತ್ಯ ಹಾಡಿದೆ ಎಂದರು.

ತಹಸೀಲ್ದಾರ್ ಮನೆ ಆಸ್ತಿಯನ್ನು ವಾರಸುದಾರರಿಗೆ ನೋಂದಣಿ ಮಾಡಿಕೊಡುತ್ತಾರೆ. ಗ್ರಾಮ ಪಂಚಾಯಿತಿಯಿಂದ ಫಾರಂ-11ಇ ಖಾತೆ ದಾಖಲೆಗಳನ್ನು ಸಹ ನೀಡಲಾಗುತ್ತದೆ. ಅನಿಶ್ಚಿತತೆಯ ಬದುಕಿಗೆ ನಿಶ್ಚಿತತೆಯ ಆಧಾರ ಕಲ್ಪಿಸಿ ಇಂದು ಜನರಿಗೆ ಸಮರ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಜನರು ನೀಡಿದ ಅಧಿಕಾರವನ್ನು ಜನರ ಸೇವೆಗಾಗಿಯೇ ಮುಡಿಪು ಇಟ್ಟಿದ್ದೇವೆ. ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಇದುವರೆಗೂ 90 ಸಾವಿರ ಕೋಟಿಯಷ್ಟು ಹಣವನ್ನು, ರಾಜ್ಯದ 5 ಕೋಟಿ ಜನರಿಗೆ ನೇರವಾಗಿ ತಲುಪಿಸುವ ಮೂಲಕ ಜನರಿಗೆ ಶಕ್ತಿ ತುಂಬಲಾಗಿದೆ. ಕಂದಾಯ ಇಲಾಖೆಯ ದಶಕಗಳ ಸಮಸ್ಯೆಗಳಿಗೆ ಪರಿಹಾರ ನೀಡಿದ್ದೇವೆ. ಜನರನ್ನು ಕಚೇರಿಗೆ ಅಲೆದಾಡಿಸದೇ ಮನೆ ಬಾಗಿಲಿಗೆ ತೆರಳಿ ಸೇವೆ ನೀಡುತ್ತಿದ್ದೇವೆ.

ಕೃಷ್ಣಬೈರೇಗೌಡ, ಕಂದಾಯ ಸಚಿವ

ಸ್ವಪಕ್ಷ ನಾಯಕರೇ ನನಗೆ ಪ್ರೇರಣೆ

ಕಂದಾಯ ಗ್ರಾಮ ಘೋಷಿಸುವಲ್ಲಿ ಸ್ವಪಕ್ಷ ನಾಯಕರಾದ ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಪ್ರೇರಣೆಯಾಗಿದ್ದನ್ನು ಸಚಿವ ಕೃಷ್ಣ ಬೈರೇಗೌಡ ಸ್ಮರಿಸಿದರು. 2015ರಲ್ಲಿ ರಾಹುಲ್ ಗಾಂಧಿ ಹಾವೇರಿಗೆ ಭೇಟಿ ನೀಡಿದ್ದಾಗ ತಾಂಡಾಗಳ ಜನರ ಕಷ್ಟ ಆಲಿಸಿ, ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವ ಭರವಸೆ ನೀಡಿದ್ದರು. ಇದೇ ರೀತಿ 1990ರಲ್ಲಿ ಅಂದು ರಾಜ್ಯದ ಕಂದಾಯ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆಯವರು ಸಹ ಈ ಯೋಜನೆಗೆ ತಳಪಾಯ ಹಾಕಿದ್ದರು ಎಂದು ಸಚಿವ ಕೃಷ್ಣಬೈರೇಗೌಡ ಹೇಳಿದರು.

ವಿಶ್ವವಾಣಿ

ಸಂಪಾದಕೀಯ

ನಿಜಕ್ಕೂ ತಪ್ಪಾಗಿರುವುದು ಎಲ್ಲಿ?

ಮಳೆಗಾಲ ಸನ್ನಿಹಿತವಾದಂತೆ ಬೆಂಗಳೂರು ಮಹಾನಗರಿಯ ಜನರನ್ನು ಒಂದು ತೆರನಾದ ಆತಂಕ ಆವರಿಸುತ್ತದೆ. ಅದೆಂದರೆ, ಮಾರುಕಟ್ಟೆಗೋ ಕಚೇರಿಗೋ ಹೋಗುತ್ತಿರುವಾಗ, ಭೀಕರ ಮಳೆಯಿಂದಾಗಿ ಅದ್ಯಾವ ಚರಂಡಿಯಲ್ಲಿ ಕೊಚ್ಚಿಹೋಗಬೇಕಾಗುತ್ತೋ? ಅದ್ಯಾವ ಮರ ತಲೆಯ ಮೇಲೆ ಬೀಳುತ್ತದೋ? ಎಂಬುದು. ಇನ್ನು ಭಾರಿ ವರ್ಷಧಾರೆಯ ಫಲವಾಗಿ ಬೆಂಗಳೂರಿನ ಬಹಳಷ್ಟು ಕಡೆಯಲ್ಲಿ ರಸ್ತೆಗಳು ಕೆರೆ-ಕಾಲುವೆಗಳೇ ಆಗಿಬಿಡುವುದು ಸಾಮಾನ್ಯವಾಗಿ ಕಾಣಬರುವ ದೃಶ್ಯ. ಇಂಥ ಸಂದರ್ಭದಲ್ಲಿ ಕೆಲವರು, ''ಬೆಂಗಳೂರಿನಲ್ಲಿ ಮಳೆಗಾಲದ ಸಮಯದಲ್ಲಿ ಸಾರಿಗೆ ಬಸ್ಸುಗಳನ್ನು ರದ್ದು ಮಾಡಿ, ವೆನಿಸ್ ನಗರದಲ್ಲಿರುವಂತೆ ದೋಣಿ ಸಂಚಾರವನ್ನು ಶುರುಮಾಡಬೇಕು'' ಎಂದು ಹಾಸ್ಯಮಾಡುವುದಿದೆ. ಇದು ಅತಿಶಯೋಕ್ತಿಯೇನಲ್ಲ, ಅಪ್ಪಟ ಹದಿನಾರಾಣೆ ಸತ್ಯ. ಆದರೆ, ಇಷ್ಟು ವರ್ಷಗಳಲ್ಲಿ ಮಳೆನೀರಿನ ಸಮಸ್ಯೆಯು ಜನರನ್ನು ಸತತವಾಗಿ ಕಾಡುತ್ತಿದ್ದರೂ, ಅದಕ್ಕೊಂದು ನಿರ್ಣಾಯಕ ಪರಿಹಾರೋಪಾಯವನ್ನು ಕಂಡುಕೊಳ್ಳಲಾಗದಿರುವುದು ಆಳುಗರ ವೈಫಲ್ಯವಲ್ಲದೆ ಮತ್ತೇನು? ಇದ್ದಬದ್ದ ಕೆರೆಗಳನ್ನೆಲ್ಲ ಮುಚ್ಚಿ ಬಡಾವಣೆಗಳನ್ನು ನಿರ್ಮಿಸುವುದಕ್ಕೆ ಅನುವುಮಾಡಿಕೊಟ್ಟಿದ್ದೇ ಈ ಸಮಸ್ಯೆ ತಾರಕಕ್ಕೇರಲು ಕಾರಣ ಎನ್ನುತ್ತಾರೆ ಬಲ್ಲವರು. ಜತೆಗೆ, ಇನ್ನೂ ಹಲವು ಕಾರಣಗಳು ಇದ್ದಿರಬಹುದು. ಇವನ್ನೆಲ್ಲಾ ಕೂಲಂಕಷವಾಗಿ ಅವಲೋಕಿಸಿ, ನಿಜಕ್ಕೂ ತಪ್ಪಾಗಿರುವುದೆಲ್ಲಿ ಎಂಬುದನ್ನು ಕಂಡುಕೊಂಡು ಆಳುಗರು ಪರಿಹಾರ ಕ್ರಮಕ್ಕೆ ಮುಂದಾಗಬೇಕಿದೆ. ರಸ್ತೆ ತೆರಿಗೆ ಸೇರಿದಂತೆ ಬಗೆಬಗೆಯ ತೆರಿಗೆಗಳನ್ನು ಜನರು ಕಾಲಾನುಕಾಲಕ್ಕೆ ಪಾವತಿಸಿದ್ದರ ಹೊರತಾಗಿಯೂ ಸಮರ್ಪಕ ಮೂಲಸೌಕರ್ಯವನ್ನು ಕಲ್ಪಿಸಿಕೊಡುವಲ್ಲಿ ವ್ಯವಸ್ಥೆಯು ವಿಫಲವಾದರೆ ಅದೊಂದು ವಿಷಾದನೀಯ ಸಂಗತಿಯಷ್ಟೇ. ಈಗಲೂ ಕಾಲ ಮಿಂಚಿಲ್ಲ, ವಿವಿಧ ಕ್ಷೇತ್ರಗಳ ತಜ್ಞರನ್ನು ಒಂದೆಡೆ ಕಲೆಹಾಕಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಜತೆಗೆ ಸಾರ್ವಜನಿಕರ ಅಭಿಮತವನ್ನೂ ಪಡೆದು ಈ ಸಮಸ್ಯೆಗೆ ಇತಿಶ್ರೀ ಹಾಡಬೇಕಿದೆ. ಇಲ್ಲವಾದಲ್ಲಿ ಬೆಂಗಳೂರಿಗರ ಬಾಳು ಮತ್ತಷ್ಟು ಅಸಹನೀಯವಾಗುವುದರಲ್ಲಿ ಮತ್ತು ಅದರಿಂದಾಗಿ ಅವರು ವ್ಯವಸ್ಥೆಯನ್ನು ಶಪಿಸುವಂತಾಗವುದರಲ್ಲಿ ಯಾವ ಅನುಮಾನವೂ ಇಲ್ಲ!

ಸೊಂಪಾದಕೀಯ

ಗ್ರೇಟರ್ ವಾಟರ್ ಮ್ಯಾಟರ್

ಅದ್ಯಾವ ಗಳಿಗೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ 'ಗ್ರೇಟರ್ ಬೆಂಗಳೂರು' ಅನ್ನೋ ಕಾನ್ಸೆಪ್ಟ್ ಬಗ್ಗೆ ಮಾತಾಡಿದ್ರೋ ಗೊತ್ತಿಲ್ಲ ಆಗಿಂದಲೇ ಬೆಂಗಳೂರಿನಲ್ಲಿ ಮಳೆಯಿಂದಾಗಿ ವಾಟರ್ ಸಮಸ್ಯೆ ತಲೆದೋರಿದೆ. ನೀರಿನ ಸಮಸ್ಯೆ ಅಂದ್ರೆ ಅದು ನೀರು ಬಾರದ ಬರದ ಸುದ್ದಿ ಅಲ್ಲ, ಬದಲಾಗಿ ನೀರು ಹೆಚ್ಚಾಗಿರುವ ಸಮಸ್ಯೆ. ಮಳೆಯಿಂದಾಗಿ ಬೆಂಗಳೂರಿನ ರಸ್ತೆಗಳು ಮುಳುಗಡೆ ಆಗಿವೆ. ರಸ್ತೆ ದಾಟುವಾಗ ಬರೀ ಎಡಗಡೆ, ಬಲಗಡೆ ಅಷ್ಟೇ ನೋಡಬೇಕಾಗಿದ್ದ ಜನ ಈಗ ಎಡ, ಬಲ ಅಷ್ಟೇ ಅಲ್ಲದೆ ಆಳ ಕೂಡಾ ನೋಡಬೇಕಾದ ಪರಿಸ್ಥಿತಿ ಬಂದೊದಗಿದೆ. ಹಾಗಾಗಿ

ಇದು ಕಾಂಗ್ರೆಸ್ ಸರಕಾರವನ್ನು ಆಡಿಕೊಳ್ಳುವವರಿಗೆ ಹಬ್ಬದ ವಿಷಯ ಆಗಿ ಬಿಜೆಪಿಗರು ಕಾಂಗ್ರೆಸ್ ಸರಕಾರದ ಮೇಲೆ ಮುಗಿಬಿದ್ದಿರೋದ್ರಿಂದ ಇದು ರಾಜಕೀಯದ ವಿಷಯದಲ್ಲೂ ಎಡಬಲದ ಸಮಸ್ಯೆ ಆಗಿ ಪರಿಣಮಿಸಿದೆ. ಇರೋ ಬೆಂಗಳೂರನ್ನೇ ಸರಿಯಾಗಿ ನಿಭಾಯಿಸೋಕೆ ಆಗದೇ ಬಾಯಿ ಬಾಯಿ ಬಿಡ್ತಾ ಇರೋ ಸರಕಾರ ಜನರಿಗೆ ಗ್ರೇಟರ್ ಬೆಂಗಳೂರು ಅಂತ ಟೋಪಿ ಹಾಕಲು ಹೊರಟಿದೆ ಎನ್ನುವ ಟೀಕೆಯ ಮಾತುಗಳು ಕೇಳಿ ಬರುತ್ತಿವೆ ಅನ್ನೋದಕ್ಕಿಂತ ಬೆಂಗಳೂರು ರಸ್ತೆಗಳ ಮೇಲಿನ ನೀರಿನಲ್ಲಿ ತೇಲಿ ಬರುತ್ತಿವೆ ಅನ್ನೋದು ಸೂಕ್ತ. ಪ್ರತಿಬಾರಿ ಭಾರಿ ಮಳೆ ಬಂದಾಗಲೂ ಬೆಂಗಳೂರು ಎದುರಿಸುವ ಸಮಸ್ಯೆ ಇದು. ಹೆಸರಿಗೆ ದೊಡ್ಡ ದೊಡ್ಡ ಏರಿಯಾಗಳು ಎಂದು ಪೋಸು ಕೊಡುವ ಬಡಾವಣೆಗಳೇ ನೀರಿನ ಬವಣೆಯಿಂದಾಗಿ ಮುಳುಗಡೆ ಭಯ ಎದುರಿಸುತ್ತಿವೆ. ರಿಯಲ್ ಎಸ್ಟೇಟ್ ಲೆಕ್ಕದಲ್ಲಿ ಇವು ದುಬಾರಿ ಏರಿಯಾಗಳು. ಆದರೆ ರಿಯಾಲಿಟಿ ವಿಷ್ಯ ಬಂದ್ರೆ ಇಲ್ಲಿ ಮಳೆ ನೀರಿಗೆ ಸರಿಯಾದ ವ್ಯವಸ್ಥೆ ಇಲ್ಲ. ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳ ಬೇಸ್‌ಮೆಂಟ್‌ಗಳು ನೀರಿನಿಂದ ತುಂಬಿಹೋಗಿವೆ. ಇನ್ನು ಸ್ಲಮ್‌ಗಳ ವಿಷಯ ಕೇಳಲೇಬೇಡಿ. ಬಿಸಿಲು ಇದ್ದಾಗ ನಿರಾಳವಾಗಿರುವ ಜನ, ಮಳೆ ಬರುತ್ತೆ ಅಂದ್ರೆ ಟೆರರಿಸ್ಟ್ ಅಟ್ಯಾಕ್ ಆಗುತ್ತದೆ ಎನ್ನುವಂತೆ ಗಾಬರಿ ಬೀಳುತ್ತಾರೆ. ಹಾಗಾಗಿ ಮೊದಲು ಮಳೆ ನೀರಿನ ಅನಾಹುತಗಳಿಗೆ ಒಂದು ಪರ್ಮನೆಂಟ್ ಪರಿಹಾರ ಕಂಡುಕೊಳ್ಳಿ, ನಂತರ ಗ್ರೇಟರ್ ಬೆಂಗಳೂರಿನ ಕನಸು ಕಾಣುವಿರಂತೆ ಅಂತ ಸಾಮಾನ್ಯ ಜನ ಕೂಡಾ ಕಾಂಗ್ರೆಸ್ ಸರಕಾರಕ್ಕೆ ಮಂಗಳಾರತಿ ಎತ್ತುತ್ತಿದ್ದಾರೆ.

ಸಂಪಾದಕರ ಸದ್ಯಶೋಧನೆ

ಟೈಮ್ ಮ್ಯಾಗಜಿನ್ ಮುಖಪುಟ

ಜಗತ್ತಿನಲ್ಲಿ ಯಾವುದಾದರೂ ಒಂದು ಮ್ಯಾಗಜಿನ್‌ನ ಮುಖಪುಟ ಅತಿ ಹೆಚ್ಚು ಜನರನ್ನು ಆಕರ್ಷಿಸಿದ್ದರೆ, ಅದು ನಗ್ನಚಿತ್ರಗಳುಳ್ಳ 'ಪ್ಲೇ ಬಾಯ್' ಪತ್ರಿಕೆಯದ್ದು ಎಂದು ಅನೇಕರು ಭಾವಿಸಿರಬಹುದು. ಆದರೆ ನಿಜಕ್ಕೂ ಈ ವಿಷಯದಲ್ಲಿ ಅತಿ ಹೆಚ್ಚು ಜನರ ಗಮನ ಸೆಳೆದಿದ್ದು 'ಟೈಮ್' ಮ್ಯಾಗಜಿನ್ ಅಂದ್ರೆ ಆಶ್ಚರ್ಯವಾಗಬಹುದು. 'ಟೈಮ್' ಮ್ಯಾಗಜಿನ್‌ನ ಮೊದಲ ಸಂಚಿಕೆ ಬಂದಿದ್ದು 1923 ರ ಮಾರ್ಚ್ 3 ರಂದು. ತರುವಾಯದ ಇಷ್ಟು ವರ್ಷಗಳಲ್ಲಿ 'ಟೈಮ್' ಮುಖಪುಟದ ವೈಶಿಷ್ಟ್ಯ ಅಂದ್ರೆ ಮುಖಪುಟದ ಕೆಂಪು ಚೌಕಟ್ಟು. ಈ ಚೌಕಟ್ಟು ಇಲ್ಲದೇ ಆ ಪತ್ರಿಕೆಯ ಮುಖಪುಟವನ್ನು ಊಹಿಸಿಕೊಳ್ಳುವುದೂ ಕಷ್ಟ. ಟೈಮ್ ಮ್ಯಾಗಜಿನ್‌ನ ಯಾವುದೇ ಮುಖಪುಟಕ್ಕೆ ಒಂದು ಉತ್ತಮ 'ಆರ್ಟ್'ಗೆ ಇರುವ ಬೆಲೆಯಿದೆ. ಅದನ್ನು ಸಂಗ್ರಹಿಸುವುದು ಅತ್ಯುತ್ತಮ ಹವ್ಯಾಸಗಳಲ್ಲೊಂದು ಎಂಬ ಅಭಿಪ್ರಾಯವೂ ಇದೆ. ಮೂರು-ನಾಲ್ಕು ತಲೆಮಾರುಗಳಿಂದ 'ಟೈಮ್' ಮ್ಯಾಗಜಿನ್‌ಗಳನ್ನು ಸಂಗ್ರಹಿಸಿದ ಅವೆಷ್ಟೋ ಓದುಗರಿದ್ದಾರೆ. 'ಟೈಮ್' ಮ್ಯಾಗಜಿನ್ 16 ಲಕ್ಷ ಪ್ರತಿಗಳನ್ನು ಪ್ರಕಟಿಸಿದರೆ, ಆ ಪೈಕಿ ಕನಿಷ್ಠ ಒಂದು ಲಕ್ಷ ಪ್ರತಿಗಳನ್ನು ಮಾರಾಟ ಮಾಡದೇ ಕಾದಿಡುತ್ತದೆ. ಅದಕ್ಕೆ ಮುಂದಿನ ನೂರು ವರ್ಷಗಳವರೆಗೂ ಬೇಡಿಕೆ ಇರುತ್ತದೆ. ಒಂದಿಲ್ಲೊಂದು ಕಾರಣದಿಂದ ಪ್ರತಿ ಸಂಚಿಕೆಯೂ 'ಸಂಗ್ರಹಯೋಗ್ಯ'. 'ಟೈಮ್' ಮ್ಯಾಗಜಿನ್ ಮುಖಪುಟದ ಬಗ್ಗೆ ಅನೇಕ ಪುಸ್ತಕಗಳೂ ಪ್ರಕಟವಾಗಿವೆ. ಆ ಪೈಕಿ ನನಗೆ ನೆನಪಿರುವ ಉತ್ತಮ ಕೃತಿ ಅಂದ್ರೆ Inside The Red Border: A history of our world, told through the pages of TIME Magazine. ಈ ಕೃತಿಯನ್ನು ಓದಿದರೆ ಪ್ರತಿ ಮುಖಪುಟಕ್ಕೂ ಒಂದು ಐತಿಹಾಸಿಕ ಮಹತ್ವವಿದೆಯೇನೋ ಎಂಬ ಭಾವನೆ ಮೂಡಿಸುವ ಪ್ರಯತ್ನ ಎದ್ದು ಕಾಣುತ್ತದೆ. ಒಟ್ಟಾರೆಯಾಗಿ 'ಟೈಮ್' ಮ್ಯಾಗಜಿನ್‌ನ ಮುಖಪುಟಗಳಿಗೆ ಎಲ್ಲಿಲ್ಲದ ಪ್ರಾಮುಖ್ಯ. ಅಮೆರಿಕದ ಪ್ರಸಿದ್ಧ ನ್ಯಾಷನಲ್ ಪೋರ್ಟ್ರೈಟ್ ಗ್ಯಾಲರಿಯಲ್ಲೊಂದೇ 'ಟೈಮ್' ಮ್ಯಾಗಜಿನ್‌ನ ಎರಡು ಸಾವಿರಕ್ಕೂ ಅಧಿಕ ಮುಖಪುಟಗಳು ಪ್ರದರ್ಶನಕ್ಕಿವೆ. ಅಲ್ಲಿನ ಪ್ರತಿ ಮುಖಪುಟವೂ ಬೆಲೆ ಕಟ್ಟಲಾಗದಷ್ಟು ಅಮೂಲ್ಯ. ಇಲ್ಲಿ ತನಕ ಪ್ರಕಟವಾದ ಸಾವಿರಾರು ಮುಖಪುಟಗಳ ಪೈಕಿ ಪ್ರತಿಯೊಂದೂ ಒಂದಿಲ್ಲೊಂದು ಕಾರಣಕ್ಕೆ ಮಹತ್ವದ್ದೆನಿಸಿದೆ. ಅಮೆರಿಕದ ಅಧ್ಯಕ್ಷರಾಗಿದ್ದ ದಿವಂಗತ ರಿಚರ್ಡ್ ನಿಕ್ಸನ್‌ಗೂ, 'ಟೈಮ್' ಮ್ಯಾಗಜಿನ್‌ಗೂ ಅದ್ಯಾವ ಅವಿನಾಭಾವ ಸಂಬಂಧವೋ? ಕಾರಣ ನಿಕ್ಸನ್ ಅವರಷ್ಟು 'ಟೈಮ್' ಮುಖಪುಟದಲ್ಲಿ ಯಾರೂ ಕಾಣಿಸಿಕೊಂಡಿಲ್ಲ. ಅವರು 55 ಸಲ ಮುಖಪುಟಕ್ಕೆ ವಸ್ತುವಾಗಿದ್ದರು. ಮಹಿಳೆಯರ ಪೈಕಿ, ಅತಿ ಹೆಚ್ಚು ಕಾಣಿಸಿಕೊಂಡವರೆಂದರೆ ಹಿಲರಿ ಕ್ಲಿಂಟನ್. 2013ರವರೆಗೆ ಅವರು 19 ಸಲ ಮುಖಪುಟಕ್ಕೇರಿದ್ದರು. ಕಳೆದ ಇಷ್ಟು ವರ್ಷಗಳಲ್ಲಿ ಅತಿ ಹೆಚ್ಚು ಮಾರಾಟವಾದ ಸಂಚಿಕೆಯೆಂದರೆ 2001ರ ಸೆಪ್ಟೆಂಬರ್ 14ರಂದು ಪ್ರಕಟವಾಗಿದ್ದು. ಭಯೋತ್ಪಾದಕ ದಾಳಿಗೆ ನ್ಯೂಯಾರ್ಕಿನ ವಿಶ್ವ ವ್ಯಾಪಾರ ಕೇಂದ್ರದ ಅವಳಿ ಕಟ್ಟಡ ಧ್ವಂಸವಾದ ಚಿತ್ರವುಳ್ಳ ಸಂಚಿಕೆಯದು. ಇಡೀ ಮುಖಪುಟದಲ್ಲಿ ಅವಳಿ ಕಟ್ಟಡಗಳಿಂದ ಬೆಂಕಿಯ ಉಂಡೆ ಸಿಡಿಯುತ್ತಿರುವ ಚಿತ್ರ. ಯಾವುದೇ ಹೆಡ್‌ಲೈನ್ ಇಲ್ಲ. ಸಣ್ಣ ಅಕ್ಷರಗಳಲ್ಲಿ 'ಸೆಪ್ಟೆಂಬರ್ 11, 2001' ಎಂದಷ್ಟೇ ಮುದ್ರಿತವಾಗಿತ್ತು. ಅದೊಂದೇ ಸಂಚಿಕೆಯ 34 ಲಕ್ಷ ಪ್ರತಿಗಳು ಮಾರಾಟವಾಗಿದ್ದವು! ಮುಖಪುಟದಲ್ಲಿ 'ಟೈಮ್' ಮ್ಯಾಗಜಿನ್ ಮಾಡದ ಪ್ರಯೋಗಗಳಿಲ್ಲ. 1966ರ ಏಪ್ರಿಲ್ 8ರ ಸಂಚಿಕೆಯಲ್ಲಿ ಮೊದಲ ಬಾರಿಗೆ ಇಡೀ ಮುಖಪುಟದಲ್ಲಿ ಕಪ್ಪು ಬಣ್ಣದ ಹಿನ್ನೆಲೆಯಲ್ಲಿ ಬರೀ ಮೂರು (Is God Dead ?) ಪದಗಳನ್ನಷ್ಟೇ ಪ್ರಕಟಿಸಿತ್ತು. ಮುಖಪುಟಕ್ಕೆ ಯಾವತ್ತೂ ಕೆಂಪು ಚೌಕಟ್ಟೇ ಏಕೆ? ಇದಕ್ಕೆ ಹಿಂದೊಮ್ಮೆ ಮ್ಯಾಗಜಿನ್ ನೀಡಿದ ಕಾರಣ- 'ಸುಂದರವಾದ ಯುವತಿ, ಪುಟಾಣಿ ಮಕ್ಕಳು ಅಥವಾ ಕೆಂಪು ಮತ್ತು ಹಳದಿ ಬಣ್ಣಗಳು ಎಲ್ಲಿದ್ದರೂ ಗಮನ ಸೆಳೆಯುತ್ತವೆ. ನಾವು ಕೆಂಪು ಬಣ್ಣದ ಚೌಕಟ್ಟನ್ನು ಆಯ್ದುಕೊಂಡೆವು'.

ಭಯಾನಕ ಸ್ಫೋಟಕವು ನಂಬಿಕೆಯ ಹೃದ್ರೋಗ ಔಷಧವಾದಾಗ!

ಡೈನಮೈಟ್, ಮನುಕುಲವು ಕಂಡರಿಯದ ಸರ್ವನಾಶಕವಾಗಿರುವ ಹಾಗೆ, ಮನುಷ್ಯರ ಆರೋಗ್ಯವನ್ನು ರಕ್ಷಿಸುವ ಸಂಜೀವಿನಿಯೂ ಆಗಿದೆ ಎಂದರೆ ಆಶ್ಚರ್ಯವಾಗುತ್ತದೆ. 19ನೆಯ ಶತಮಾನದಲ್ಲಿ ನೈಟ್ರೋಗ್ಲಿಸರಿನ್ ಆವಿಷ್ಕಾರವಾದ ದಿನದಿಂದ ಅದು ಮೃತ್ಯು ಪ್ರತೀಕವಾಗಿ ಬೆಳೆದು, ಕೊನೆಗೆ ಹೃದ್ರೋಗಕ್ಕೆ ರಾಮಬಾಣವಾಗಿ ತ್ರಿವಿಕ್ರಮೋಪಾದಿಯಲ್ಲಿ ಬೆಳೆದು, ಇಂದಿಗೂ ಉಪಯುಕ್ತವಾಗಿದೆ.

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ದಿ ಮರ್ಚೆಂಟ್ ಆಫ್ ಡೆತ್ ಈಸ್ ಡೆಡ್!
ಸಾವಿನ ವ್ಯಾಪಾರಿಯ ಸಾವು!

ಇದು 1888ರ ಫ್ರೆಂಚ್ ಪತ್ರಿಕೆಯಲ್ಲಿ ಪ್ರಕಟವಾದ 'ನಿಧನ ವಾರ್ತೆ'ಯ ಶೀರ್ಷಿಕೆ. ಆಲ್‌ಫ್ರೆಡ್ ನೊಬೆಲ್‌ನ ಹಿರಿಯ ಅಣ್ಣನಾದ ಲಡ್ವಿಗ್ ಇಮಾನ್ಯುಯಲ್ ನೊಬೆಲ್ ತೀರಿಕೊಂಡಿದ್ದ. ಫ್ರೆಂಚ್ ಪತ್ರಿಕೆಯು, ಆಲ್‌ಫ್ರೆಡ್ ನೊಬೆಲ್ ತೀರಿಕೊಂಡಿದ್ದಾನೆ ಎಂದು ತಪ್ಪಾಗಿ ಭಾವಿಸಿ, ಅವನ ನಿಧನ ವಾರ್ತೆಗೆ, ಯಾರೇ ಆಗಲಿ ಬೆಚ್ಚಿಬೀಳುವಂಥ ಶೀರ್ಷಿಕೆಯನ್ನು ಕೊಟ್ಟಿತು. ಆಲ್‌ಫ್ರೆಡ್ ನೊಬೆಲ್, ಡೈನಮೈಟನ್ನು ಕಂಡುಹಿಡಿದಿದ್ದ. ಮೂಲತಃ ಕಟ್ಟಡಗಳನ್ನು ಕಟ್ಟಲು ಬೇಕಾದ ಚಪ್ಪಡಿ ಕಲ್ಲು ಹಾಗೂ ಜಲ್ಲಿಕಲ್ಲನ್ನು ಪಡೆಯಲು ಕಲ್ಲು ಬಂಡೆಗಳನ್ನು ಸಿಡಿಸಲು ಡೈನಮೈಟನ್ನು ಬಳಸುತ್ತಿದ್ದರು. ಆದರೆ ಮನುಷ್ಯರಲ್ಲಿ ವಕ್ರಬುದ್ಧಿಯವರು ಸಾಕಷ್ಟು ಇರುತ್ತಾರಲ್ಲ! ಡೈನಮೈಟ್ ಹಾಗೂ ಅದರಿಂದ ರೂಪಿಸಿದ ಸಿಡಿಮದ್ದಿನಿಂದ ಶತ್ರುಗಳಿರುವ ತಾಣಗಳನ್ನು, ಅವರ ವಾಹನಗಳನ್ನು ಹಾಗೂ ಸೈನಿಕರ ತುಕಡಿಗಳನ್ನು ಕ್ಷಣದಲ್ಲಿ ಸರ್ವನಾಶವನ್ನು ಮಾಡಬಹುದು ಎಂದು ಕಂಡುಕೊಂಡರು! ಹಾಗಾಗಿ ಡೈನಮೈಟ್ ಹಾಗೂ ಸಿಡಿಮದ್ದಿಗೆ ವಿಪರೀತ ಬೇಡಿಕೆ ಬಂದಿತು. ಬೇಡಿಕೆಯನ್ನು ಸಮರ್ಥವಾಗಿ ಪೂರೈಸಿದ ಆಲ್‌ಫ್ರೆಡ್ ನೊಬೆಲ್ ಕೈತುಂಬಾ ಹಣವನ್ನು ಸಂಪಾದಿಸಿದ, ನಿಜ. ಆದರೆ... ಇಷ್ಟು ತ್ವರಿತವಾಗಿ ಜನರನ್ನು ಕೊಲ್ಲುವ ನವನವೀನ ವಿಧಾನವನ್ನು ಕಂಡುಹಿಡಿದ ಸಾವಿನ ವ್ಯಾಪಾರಿ ಸತ್ತುಹೋದುದಕ್ಕೆ ಆ ಪತ್ರಿಕೆಯು ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟಿತ್ತು.

ಫ್ರೆಂಚ್ ಪತ್ರಿಕೆಯ ಈ ವರದಿಯು ಆಲ್‌ಫ್ರೆಡ್ ನೊಬೆಲ್‌ನನ್ನು ತುಂಬಾ ನೋಯಿಸಿತು. ಡೈನಮೈಟಿನ ಕಾರಣ, ಅವನು ಈಗಾಗಲೇ ತನ್ನ ಕಿರಿಯ ತಮ್ಮ ಎಮಿಲ್ ಆಸ್ಕರ್ ನೊಬೆಲ್‌ನನ್ನು ಕಳೆದುಕೊಂಡಿದ್ದ. ಸೆಪ್ಟೆಂಬರ್ 3, 1864. ಸ್ಟಾಕ್‌ಹೋಮಿನ ಹೆಲೀನೆಬೋರ್ಗ್ ಪ್ರಯೋಗಾಲಯ. ಅದಕ್ಕೆ ಹೊಂದಿಕೊಂಡಂತೆ ನೊಬೆಲ್ ಕುಟುಂಬದ ಶಸ್ತ್ರಾಗಾರಗಳ ಕಾರ್ಖಾನೆಯಿತ್ತು. ಎಮಿಲ್ ನೈಟ್ರೋಗ್ಲಿಸರಿನ್‌ನನ್ನು ಹೇಗೆ ಸುರಕ್ಷಿತವಾಗಿ ಬಳಸಬಹುದು ಎನ್ನುವುದರ ಬಗ್ಗೆ ಪ್ರಯೋಗಗಳನ್ನು ನಡೆಸುತ್ತಿದ್ದ. ಇದ್ದಕ್ಕಿದ್ದಹಾಗೆ ನೈಟ್ರೋಗ್ಲಿಸರಿನ್ ಸಂಯುಕ್ತವು ಸ್ಫೋಟಿಸಿತು. ಆ ಸ್ಫೋಟವು ಎಷ್ಟು ತೀವ್ರವಾಗಿತ್ತು ಎಂದರೆ ಪ್ರಯೋಗಾಲಯವು ಕಾರ್ಖಾನೆಯ ಸಮೇತ ಛಿದ್ರವಾಯಿತು. ಜತೆಗೆ ಎಮಿಲ್ ಆಸ್ಕರ್ ನೊಬೆಲ್ ಹಾಗೂ ಹಲವು ಕಾರ್ಮಿಕರೂ ಮರಣಿಸಿದರು. ಇದರಿಂದ ತೀವ್ರವಾಗಿ ನೊಂದಿದ್ದ ಆಲ್‌ಫ್ರೆಡ್ ನೊಬೆಲ್, ಪತ್ರಿಕೆಯು ತನ್ನನ್ನು 'ಸಾವಿನ ವ್ಯಾಪಾರಿ' ಎಂದು ಕರೆದದ್ದನ್ನು ನೋಡಿ, ಭವಿಷ್ಯದಲ್ಲಿ ಈ ಜಗತ್ತು ತನ್ನನ್ನು ಏನೆಲ್ಲ ಹೀಗಳೆಯಬಹುದು ಎನ್ನುವುದನ್ನು ಊಹಿಸಿಕೊಂಡು ತಲ್ಲಣಿಸಿಹೋದ. ಕೂಡಲೇ ತನ್ನ ಅಪಾರ ಸಂಪತ್ತಿನ ಶೇ.94ರಷ್ಟು ಭಾಗವನ್ನು ಬಳಸಿಕೊಂಡು ನೊಬೆಲ್ ಪ್ರತಿಷ್ಠಾನವನ್ನು ಆರಂಭಿಸಿದ. ನೊಬೆಲ್ ಪಾರಿತೋಷಕಗಳನ್ನು ಘೋಷಿಸಿದ. ಶಾಂತಿ, ಸಾಹಿತ್ಯ, ಭೌತವಿಜ್ಞಾನ, ರಸಾಯನ ವಿಜ್ಞಾನ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ, ಹಿಂದಿನ ವರ್ಷ ಯಾರು ಮನುಕುಲದ ಪ್ರಗತಿಗೆ ಅತ್ಯುನ್ನತ ಕಾಣಿಕೆಯನ್ನು ನೀಡಿರುತ್ತಾರೋ, ಅವರಿಗೆ ಬಹುದೊಡ್ಡ ಮೊತ್ತದ ಹಣವನ್ನು ಬಹುಮಾನವನ್ನಾಗಿ ನೀಡಬೇಕೆಂದು ಘೋಷಿಸಿದ. ಅದು ಇಂದಿನವರೆಗೂ ನಡೆದುಕೊಂಡು ಬಂದಿದೆ.

ಡೈನಮೈಟ್, ಅದುವರೆಗೂ ಮನುಕುಲವು ಕಂಡರಿಯದ ಸರ್ವನಾಶಕವಾಗಿರುವ ಹಾಗೆ, ಮನುಷ್ಯರ ಆರೋಗ್ಯವನ್ನು ರಕ್ಷಿಸುವ ಸಂಜೀವಿನಿಯೂ ಆಗಿದೆ ಎಂದರೆ ಆಶ್ಚರ್ಯವಾಗುತ್ತದೆ. 19ನೆಯ ಶತಮಾನದಲ್ಲಿ ನೈಟ್ರೋಗ್ಲಿಸರಿನ್ ಆವಿಷ್ಕಾರವಾದ ದಿನದಿಂದ ಅದು ಮೃತ್ಯು ಪ್ರತೀಕವಾಗಿ ಬೆಳೆದು, ಕೊನೆಗೆ ಹೃದ್ರೋಗಕ್ಕೆ ರಾಮಬಾಣವಾಗಿ ತ್ರಿವಿಕ್ರಮೋಪಾದಿಯಲ್ಲಿ ಬೆಳೆದು, ಇಂದಿಗೂ ಉಪಯುಕ್ತವಾಗಿದೆ. ಸಾವಿನ ವ್ಯಾಪಾರಿ ಎಂದು ಕುಖ್ಯಾತನಾದ ಆಲ್‌ಫ್ರೆಡ್ ನೊಬೆಲ್‌ನ ಹೃದ್ರೋಗವನ್ನೂ ನೈಟ್ರೋಗ್ಲಿಸರಿನ್ ಸುಧಾರಿಸಿತು ಎನ್ನುವುದು ಒಂದು ವಿಪರ್ಯಾಸಕರ ಇತಿಹಾಸವಾಗಿದೆ.

1847. ಅಸ್ಕಾನಿಯೋ ಸೋಬ್ರಿನೊ (1812-1888) ಎಂಬ ಇಟಾಲಿಯನ್ ರಸಾಯನ ಶಾಸ್ತ್ರಜ್ಞ. ಟ್ಯೂರಿನ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನವನ್ನು ಮಾಡಿದ. ಅಲ್ಲಿನ ಪ್ರಯೋಗಾಲಯದಲ್ಲಿ ಗ್ಲಿಸರಿನ್ ತೆಗೆದುಕೊಂಡ. ಅದಕ್ಕೆ ನೈಟ್ರಿಕ್ ಮತ್ತು ಸಲ್ಫ್ಯೂರಿಕ್ ಆಸಿಡ್ ಬೆರೆಸಿದ. ಸಾವಯವ ರಾಸಾಯನಿಕ ವಸ್ತುಗಳನ್ನು ನೈಟ್ರೀಕರಿಸಿದರೆ ಏನಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳುವ ಕುತೂಹಲವಿತ್ತು. ಆದರೆ ಅವನು ತಯಾರಿಸಿದ ಈ ಹೊಸ ವಸ್ತುವು ಯಾವುದೇ ಪೂರ್ವಭಾವಿ ಸೂಚನೆಯನ್ನು ನೀಡದೆ ಹಠಾತ್ತನೇ ಸ್ಫೋಟಿಸಿತು. ಆನಂತರ ಹಲವು ಬಾರಿ ಎಚ್ಚರಿಕೆಯಿಂದ ಅತ್ಯಲ್ಪ ಪ್ರಮಾಣದಲ್ಲಿ ತನ್ನ ಪ್ರಯೋಗವನ್ನು ಪುನರಾವರ್ತಿಸಿದ. ಸ್ವಲ್ಪ ಶಾಖ ಹೆಚ್ಚಾದರೆ, ಸ್ವಲ್ಪ ಘರ್ಷಣೆ ಏರ್ಪಟ್ಟರೆ ಅಥವಾ ಸ್ವಲ್ಪ ಒತ್ತಡ ಬಿತ್ತೆಂದರೆ ತಕ್ಷಣವೇ ಅದು ಉಗ್ರ ಸ್ವರೂಪದಲ್ಲಿ ಸ್ಫೋಟಿಸುತ್ತಿತ್ತು. ಸೋಬ್ರೆರೊ ತುಂಬಾ ನಿರಾಶನಾದ. ಹಾಗೆಯೇ 'ಇದು ಅತ್ಯಂತ ಅಪಾಯಕಾರಿ ವಸ್ತು. ಇದರಿಂದ ಯಾವ ಉಪಯೋಗವೂ ಇಲ್ಲ, ಇದು ಜೀವವನ್ನು ತೆಗೆಯುವಷ್ಟು ಆಘಾತಕಾರಿ. ಇದರ ತಂಟೆಗೆ ಹೋಗಬೇಡಿ' ಎಂದು ತನ್ನ ಸಹುದ್ಯೋಗಿಗಳಿಗೆಲ್ಲ ಎಚ್ಚರಿಕೆಯನ್ನು ನೀಡಿದ. ತನ್ನ ಈ ಪ್ರಯೋಗವು 'ಕಾಲಗರ್ಭದಲ್ಲಿ ಹೂತುಹೋಗಲಿ' ಎಂದು ಸೋಬ್ರೆರೊ ಪ್ರಾರ್ಥಿಸಿದರೂ ಹಾಗೆ ಆಗಲೇ ಇಲ್ಲ.

ಆಲ್‌ಫ್ರೆಡ್ ನೊಬೆಲ್ (1833-1896) ಓರ್ವ ಸ್ವೀಡಿಶ್ ರಸಾಯನ ಶಾಸ್ತ್ರಜ್ಞ ಹಾಗೂ ಉದ್ಯಮಿಯಾಗಿದ್ದ. ಅವನಿಗೆ ನೈಟ್ರೋಗ್ಲಿಸರಿನ್ನಿನ ಅಸಾಧಾರಣ ಸ್ಫೋಟಕ ಸಾಮರ್ಥ್ಯದ ಬಗ್ಗೆ ಮಾಹಿತಿ ದೊರೆಯಿತು. ಅದರ ಬಗ್ಗೆ ಅತೀವ ಕುತೂಹಲವನ್ನು ತಳೆದ. ಬೆಂಕಿಯೂ ಅಪಾಯಕಾರಿಯಾದದ್ದೆ! ಆದರೆ ಮನುಷ್ಯನು ಬೆಂಕಿಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು, ಅದನ್ನು ಹಿತ-ಮಿತವಾಗಿ ಬಳಸಿಕೊಳ್ಳುತ್ತಾ ತನ್ನ ದೈನಂದಿನ ಕೆಲಸ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾನಲ್ಲ! ಹಾಗೆಯೇ ನೈಟ್ರೋಗ್ಲಿಸರಿನ್ನಿನ ಸ್ಫೋಟಕ ಶಕ್ತಿಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ಅದನ್ನು ಸುರಕ್ಷಿತವಾಗಿ ಬಳಸಬಹುದು ಎಂದು ನಂಬಿದ್ದ. ನೈಟ್ರೋಗ್ಲಿಸರಿನ್ನನ್ನು ನಿಗ್ರಹಿಸಬಲ್ಲ ವಿವಿಧ ವಿಧಾನಗಳ ಹುಡುಕಾಟದಲ್ಲಿಯೇ ಅವನು ತನ್ನ ತಮ್ಮ ಎಮಿಲ್ ಆಸ್ಕರ್ ನೊಬೆಲ್‌ನನ್ನು ಕಳೆದುಕೊಂಡಿದ್ದ. ಕೊನೆಗೆ ನೈಟ್ರೋಗ್ಲಿಸರಿನ್ನಿನ ಜತೆಯಲ್ಲಿ ಡಯಾಟಮೀ ಮಣ್ಣನ್ನು (ಡಯಾಟಮ್ ಎನ್ನುವ ಬ್ಯಾಕ್ಟೀರಿಯಗಳ ಕವಚಗಳಿಂದ ರೂಪಿತವಾದ ಮಣ್ಣು. ಕೆರೆ/ಸಮುದ್ರಗಳ ತಳದಲ್ಲಿರುತ್ತದೆ) ಬೆರೆಸಿದ. ಮುಟ್ಟಿದರೆ ಸಿಡಿಯುವ ನೈಟ್ರೋಗ್ಲಿಸರಿನ್ 'ಶಾಂತ'ವಾಯಿತು. ಹೀಗೆ ಸುರಕ್ಷಿತವಾಗಿ ಬಳಸಬಹುದಾದ ನೈಟ್ರೋಗ್ಲಿಸರಿನ್ ಸ್ಫೋಟಕವನ್ನು 1867ರಲ್ಲಿ ರೂಪಿಸಿದ. ಕೂಡಲೇ ನೈಟ್ರೋಗ್ಲಿಸರಿನ್ನಿಗೆ ಗಣಿಗಾರಿಕೆ ಹಾಗೂ ಬಂಡೆಕಲ್ಲುಗಳನ್ನು ಸಿಡಿಸುವ ಉದ್ಯಮಗಳಿಂದ ಅಪಾರ ಬೇಡಿಕೆ ಬಂದಿತು. ಅವರ ಬೇಡಿಕೆಯನ್ನು ನೊಬೆಲ್ ಪೂರೈಸಿದ. ಹಣದ ಹೊಳೆಯು ಹರಿದುಬರಲಾರಂಭಿಸಿತು. ಹಾಗೆಯೇ ಯುದ್ಧಗಳಲ್ಲಿ ಬಳಸಲು ಡೈನಮೈಟ್ ಹಾಗೂ ಅದರ ಸುಧಾರಕ ಸ್ಫೋಟಕಗಳ ಬೇಡಿಕೆ ಹೆಚ್ಚಿತು. ನೊಬೆಲ್ ತನ್ನ ಕನಸುಮನಸ್ಸಿನಲ್ಲಿಯೂ ನಿರೀಕ್ಷಿಸದ ಪ್ರಮಾಣದಲ್ಲಿ ಹಣವು ಪ್ರವಾಹೋಪಾದಿಯಲ್ಲಿ ಬಂದು ಅವನನ್ನು ಮಹಾ ಶ್ರೀಮಂತನನ್ನಾಗಿಸಿತು.

1860ರ ದಶಕ. ಡೈನಮೈಟನ್ನು ತಯಾರಿಸುತ್ತಿದ್ದ ಕಾರ್ಖಾನೆಗಳಲ್ಲಿ ಕೆಲಸಗಾರರು ಅನಿವಾರ್ಯವಾಗಿ ನೈಟ್ರೋಗ್ಲಿಸರಿನ್ನಿನಿಂದ ಹೊರಡುತ್ತಿದ್ದ ಅನಿಲಗಳನ್ನು ಸೇವಿಸುತ್ತಿದ್ದರು. ಆಗ ಅವರಿಗೆ ಉಗ್ರ ಸ್ವರೂಪದ ತಲೆನೋವು ಬರುತ್ತಿತ್ತು. ಮುಖವೆಲ್ಲ ಕೆಂಪಾಗಿ, ಒಂದು ರೀತಿಯ ತಲೆ ಸುತ್ತು ಬಂದು, ಕೆಲವು ಸಲ ವಾಂತಿಯೂ ಆಗುತ್ತಿತ್ತು. ಇಲ್ಲಿ ಒಂದು ಅನಿರೀಕ್ಷಿತ ಪರಿಣಾಮವನ್ನು ಕೆಲವು ಕಾರ್ಮಿಕರು ಗಮನಿಸಿದರು. ಕಾರ್ಮಿಕರಲ್ಲಿ ಕೆಲವರಿಗೆ ಎದೆಶೂಲೆ (ಆಂಜೈನ ಪೆಕ್ಟೋರಿಸ್) ಬರುತ್ತಿತ್ತು. ಅಂಥ ಕಾರ್ಮಿಕರು ನೈಟ್ರೋಗ್ಲಿಸರಿನ್ನಿನ ಜತೆಯಲ್ಲಿ ಕೆಲಸವನ್ನು ಮಾಡುವಾಗ ಅವರ ಎದೆಶೂಲೆಯು ಮಾಯವಾಗುತ್ತಿತ್ತು. ಸ್ವಲ್ಪ ದಿನಗಳ ನಂತರ, ಆ ಕಾರ್ಮಿಕರು ಮತ್ತೊಂದು ವಿಶೇಷವನ್ನು ಗಮನಿಸಿದರು. ಶುಕ್ರವಾರ ಸಂಜೆ ಮನೆಯನ್ನು ಸೇರುತ್ತಿದ್ದ ಕಾರ್ಮಿಕರು, ವಾರಾಂತ್ಯವನ್ನು ಕಳೆದು ಸೋಮವಾರವೇ ಕೆಲಸಕ್ಕೆ ಬರುತ್ತಿದ್ದರು. ಆದರೆ ಸೋಮವಾರ ಬೆಳಗಾಗುತ್ತಿದ್ದಂತೆಯೇ ಅವರಿಗೆ ಉಗ್ರ ಸ್ವರೂಪದ ಎದೆಶೂಲೆಯು ಬರುತ್ತಿತ್ತು. ಇದನ್ನು ಅವರು 'ಸೋಮವಾರ ಬೆಳಗಿನ ಎದೆಶೂಲೆ' ಅಥವಾ 'ಮಂಡೆ ಮಾರ್ನಿಂಗ್ ಆಂಜೈನ' ಎಂದು ಕರೆದರು. ಆಗ ಅವರಲ್ಲಿ ಒಂದಿಬ್ಬರು ಬುದ್ಧಿವಂತರು, ''ವಾರಪೂರ್ತಿ ನಾವು ನೈಟ್ರೋಗ್ಲಿಸರಿನ್ನಿನ ಅನಿಲವನ್ನು ಸೇವಿಸುತ್ತಿರುತ್ತೇವೆ. ಆ ಅನಿಲವು ನಮ್ಮ ಎದೆಶೂಲೆಯನ್ನು ನಿಯಂತ್ರಿಸುತ್ತದೆ ಎಂದು ಕಾಣುತ್ತದೆ.

ವಾರಾಂತ್ಯದಲ್ಲಿ ನಾವು ಕಾರ್ಖಾನೆಗೆ ಬರದೇ ಇರುವ ಕಾರಣ, ನೈಟ್ರೋಗ್ಲಿಸರಿನ್ ಅನಿಲವನ್ನು ಸೇವಿಸದೇ ಇರುವ ಕಾರಣ, ಎದೆಶೂಲೆಯು ನಿಧಾನವಾಗಿ ಆರಂಭವಾಗುತ್ತದೆ ಎಂದು ಕಾಣುತ್ತದೆ. ಸೋಮವಾರದ ಬೆಳಗಿನ ಹೊತ್ತಿಗೆ ಈ ಎದೆಶೂಲೆ ಉಗ್ರವಾಗುತ್ತದೆ. ಸೋಮವಾರ ಕೆಲಸವನ್ನು ಆರಂಭಿಸಿದ ಸ್ವಲ್ಪ ಹೊತ್ತಿನಲ್ಲಿ ಎದೆಶೂಲೆಯು ನಾಟಕೀಯವಾಗಿ ಕಡಿಮೆಯಾಗುತ್ತದೆ'' ಎಂದು ತರ್ಕಿಸಿದರು. ಕೆಲವು ಕಾರ್ಮಿಕರು ನೈಟ್ರೋಗ್ಲಿಸರಿನ್ನನ್ನು ತಮ್ಮ ಬಟ್ಟೆಗೆ ಲೇಪಿಸಿ, ಅದೇ ಬಟ್ಟೆಯನ್ನು ವಾರಾಂತ್ಯದಲ್ಲಿ ತೊಡುತ್ತಿದ್ದರು. ಬಟ್ಟೆಯ ಮೇಲಿದ್ದ ನೈಟ್ರೋಗ್ಲಿಸರಿನ್ ನಿಧಾನವಾಗಿ ಆವಿಯಾಗಿ ಅವರ ಎದೆಶೂಲೆಯನ್ನು ಶಮನಗೊಳಿಸುತ್ತಿತ್ತು.

ಹೃದಯವು ಒಂದು ಸ್ನಾಯು ಪಂಪ್. ನಮ್ಮ ಇಡೀ ದೇಹಕ್ಕೆ ಆಕ್ಸಿಜನ್‌ಭರಿತ ರಕ್ತವನ್ನು ಸರಬರಾಜು ಮಾಡುತ್ತದೆ. ಇತರ ಅಂಗಗಳಿಗೆ ಸರಬರಾಜು ಮಾಡುವ ಮೊದಲು ತನಗೆ ತಾನೇ ಮಕುಟಧಮನಿಗಳ (ಕರೋನರಿ ಆರ್ಟರೀಸ್) ಮೂಲಕ ಆಕ್ಸಿಜನ್‌ಭರಿತ ರಕ್ತವನ್ನು ಪೂರೈಸುತ್ತದೆ. ಇಂಥ ಮಕುಟ ಧಮನಿಗಳಲ್ಲಿ ಕೊಬ್ಬು ಸಂಗ್ರಹವಾಗಿ, ಹರಿಯುವ ರಕ್ತದ ಪ್ರಮಾಣವು ಕಡಿಮೆಯಾದಾಗ, ಎದೆಯ ಸ್ನಾಯುಗಳು 'ನನಗೆ ಆಕ್ಸಿಜನ್ ಬೇಕು' ಎಂದು ಆಕ್ರಂದಿಸುತ್ತದೆ. ಆ ಆಕ್ರಂದನವೇ ಎದೆಶೂಲೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ನೈಟ್ರೋಗ್ಲಿಸರಿನ್ ರಕ್ತನಾಳ ವಿಸ್ತಾರಕವಾಗಿ (ವ್ಯಾಸೋಡಯಲೇಟರ್) ಆಗಿ ಕೆಲಸವನ್ನು ಮಾಡುತ್ತದೆ. ನೈಟ್ರೋಗ್ಲಿಸರಿನ್ ಪ್ರಭಾವವು ಇರುವವರೆಗೆ ರಕ್ತನಾಳವು ವಿಸ್ತಾರವಾಗಿಯೇ ಇರುವ ಕಾರಣ, ರಕ್ತಸರಬರಾಜು ಸುಧಾರಿಸಿರುವ ಕಾರಣ, ನೋವು ಕಡಿಮೆಯಾಗುತ್ತದೆ. ನೈಟ್ರೋಗ್ಲಿಸರಿನ್ ಪ್ರಭಾವವು ಕಡಿಮೆಯಾಗುತ್ತಿರುವಂತೆಯೇ ಮಕುಟಧಮನಿಗಳು ಕಿರಿದಾಗಿ ಮತ್ತೆ ಎದೆಶೂಲೆಯು ಉಗ್ರವಾಗುತ್ತದೆ.

1878. ವಿಲಿಯಂ ಮ್ಯೂರೆಲ್ ಎಂಬ ಬ್ರಿಟಿಶ್ ವೈದ್ಯ. ಈತನ ಬಳಿ ಎದೆಶೂಲೆಯ ಚಿಕಿತ್ಸೆಗಾಗಿ ಸಾಕಷ್ಟು ಜನರು ಬರುತ್ತಿದ್ದರು. ಡೈನಮೈಟ್ ಕಾರ್ಖಾನೆಯಲ್ಲಿ ಕೆಲಸವನ್ನು ಮಾಡುವ ಕಾರ್ಮಿಕರು ನೈಟ್ರೋಗ್ಲಿಸರಿನ್ ಎದೆಶೂಲೆಯನ್ನು ಕಡಿಮೆ ಮಾಡುತ್ತದೆ ಎನ್ನುವ ವಿಚಾರವನ್ನು ತಿಳಿಸಿದರು. ಆಗ ಅವನು ಒಂದು ಪ್ರಯೋಗವನ್ನು ಕೈಗೊಳ್ಳುವ ದಿಟ್ಟ ನಿರ್ಧಾರವನ್ನು ಮಾಡಿದ. ನೈಟ್ರೋಗ್ಲಿಸರಿನ್ನಿನ ಶೇ.1ರಷ್ಟು ಪ್ರಮಾಣದ ದ್ರಾವಣವನ್ನು ತಯಾರಿಸಿದ. ತನ್ನ ನಾಲಿಗೆಯ ಅಡಿಯಲ್ಲಿ ಎರಡು ಹನಿ ದ್ರಾವಣವನ್ನು ಲೇಪಿಸಿದ. ನಾಲಿಗೆಯ ಕೆಳಗೆ ರಕ್ತನಾಳಗಳ ಜಾಲ ದಟ್ಟವಾಗಿರುವ ಕಾರಣ, ನೈಟ್ರೋಗ್ಲಿಸರಿನ್ ಹೊಟ್ಟೆಗೆ ಹೋಗುವ ಮೊದಲೇ ಹೃದಯವನ್ನು ನೇರವಾಗಿ ತಲುಪುತ್ತದೆ. ಮ್ಯೂರೆಲ್ ಆರೋಗ್ಯವಂತನಾಗಿದ್ದ. ಹಾಗಾಗಿ ಅವನ ದೇಹದಲ್ಲಿ ರಕ್ತನಾಳಗಳೆಲ್ಲ ಅನಗತ್ಯವಾಗಿ ವಿಸ್ತಾರವಾದವು. ಮುಖಕ್ಕೆ ರಕ್ತವು ನುಗ್ಗಿ ಮುಖವೂ ಟೊಮೇಟೊವನ್ನು ಮೀರಿಸುವಷ್ಟು ಕೆಂಪಾಯಿತು. ತಲೆಯಲ್ಲಿದ್ದ ರಕ್ತನಾಳಗಳೆಲ್ಲ ವಿಸ್ತಾರವಾಗಿ, ರಕ್ತವು ಸಂಚಯನಗೊಂಡು, ಸಿಡಿದುಹೋಗುವಂಥ ತಲೆನೋವು ಕಾಣಿಸಿಕೊಂಡಿತು. ಆಗ ಅವನಿಗೆ ಅನಿಸಿತು- ಈ ನೈಟ್ರೋಗ್ಲಿಸರಿನ್ ಶರೀರದ ಧಮನಿ ಹಾಗೂ ಸಿರೆಗಳ ವ್ಯಾಸವನ್ನು ವಿಸ್ತರಿಸಿ, ಹೃದಯದ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಕಾರಣ, ಎದೆಶೂಲೆಯು ಕಡಿಮೆಯಾಗುತ್ತದೆ ಅಂತ. ಮುಂದಿನ ಹೆಜ್ಜೆಯಾಗಿ, ಎದೆಶೂಲೆಯಿಂದ ನರಳುತ್ತಿದ್ದ ತನ್ನ ರೋಗಿಗಳಿಗೆ ನೈಟ್ರೋಗ್ಲಿಸರಿನ್ ದ್ರಾವಣವನ್ನು ನೀಡಿದ. ಅವರೆಲ್ಲರೂ ತಮ್ಮ ಎದೆಶೂಲೆಯು ನಾಟಕೀಯವಾಗಿ ಶಮನವಾಯಿತು ಎಂದರು.

ಮ್ಯೂರೆಲ್ ತನ್ನ ಅಧ್ಯಯನವನ್ನು 1879ರಲ್ಲಿ ಜಗತ್ತಿನ ವಿಖ್ಯಾತ ಪತ್ರಿಕೆಯಾದ 'ಲ್ಯಾನ್ಸೆಟ್'ನಲ್ಲಿ ಪ್ರಕಟಿಸಿದ. 'ನೈಟ್ರೋಗ್ಲಿಸರಿನ್ ಆ್ಯಸ್ ಎ ರೆಮಿಡಿ ಫಾರ್ ಆಂಜೈನ ಪೆಕ್ಟೋರಿಸ್' ಎಂಬ ಶೀರ್ಷಿಕೆಯಲ್ಲಿ ಆ ಲೇಖನವು ಪ್ರಕಟವಾಯಿತು. ಈ ಲೇಖನದಲ್ಲಿ ನೈಟ್ರೋಗ್ಲಿಸರಿನ್ನಿನ ಔಷಧೀಯ ಗುಣಗಳನ್ನು ಈ ಕೆಳಕಂಡಂತೆ ಸಂಗ್ರಹಿಸಿದ:

- ಇದು ಎದೆಶೂಲೆಯನ್ನು ತ್ವರಿತವಾಗಿ ನಿವಾರಿಸುತ್ತದೆ
- ಹೃದಯಕ್ಕೆ ಅಗತ್ಯವಾದ ಆಕ್ಸಿಜನ್ನನ್ನು ತಕ್ಷಣವೇ ಪೂರೈಸುತ್ತದೆ
- ಕಡಿಮೆ ಪ್ರಮಾಣದಲ್ಲಿ ಉತ್ತಮ ಹಾಗೂ ನಂಬಿಕೆಗೆ ಅರ್ಹವಾದ ಔಷಧವಾಗಿದೆ.

ಇಂದು ನೈಟ್ರೋಗ್ಲಿಸರಿನ್ ಅನ್ನು ಗುಳಿಗೆಗಳ ರೂಪದಲ್ಲಿ, ಸ್ಪ್ರೇ ರೂಪದಲ್ಲಿ, ಇಂಜೆಕ್ಷನ್ ಮೂಲಕ ಹಾಗೂ ಪ್ಯಾಚ್‌ಗಳ ಮೂಲಕ ನಿಗದಿತ ಪ್ರಮಾಣದಲ್ಲಿ ಔಷಧವಾಗಿ ಪೂರೈಸಲು ಸಾಧ್ಯವಾಗಿದೆ. ಎದೆಶೂಲೆಯ ಜತೆಯಲ್ಲಿ 'ರೇನಾಡ್ಸ್ ಡಿಸೀಸ್' ಎಂಬ ರಕ್ತನಾಳಗಳ ಸಮಸ್ಯೆಯಲ್ಲಿ ಇದನ್ನು ಬಳಸಬಹುದಾಗಿದೆ. ಹಾಗೆಯೇ 'ನಿಮಿರು ದೌರ್ಬಲ್ಯ' ಅಥವಾ 'ಎರೆಕ್ಟೈಲ್ ಡಿಸ್‌ಫಂಕ್ಷನ್' ಸಮಸ್ಯೆಯಲ್ಲೂ 'ವಯಾಗ್ರ'ದಂತೆ ಇದನ್ನು ಉಪಯೋಗಿಸಲು ಸಾಧ್ಯವಿದೆ.

ಹೀಗೆ ಮೃತ್ಯುಸ್ವರೂಪವಾಗಿದ್ದ ನೈಟ್ರೋಗ್ಲಿಸರಿನ್, ಜೀವ ಉಳಿಸುವ ಆಪದ್ಬಾಂಧವ ಆಗಿರುವುದು ನಿಜಕ್ಕೂ ಒಂದು ವಿಪರ್ಯಾಸವಾಗಿದೆ. ಚಾಕುವಿನಿಂದ ಹಣ್ಣನ್ನೂ ಹೆಚ್ಚಬಹುದು, ಮತ್ತೊಬ್ಬರನ್ನು ಕೊಲ್ಲಲೂಬಹುದು. ಎಲ್ಲವೂ ಮನುಷ್ಯನ ಕೈಯಲ್ಲಿದೆ.

ಜೆಇಎಂ: ಸಾರ್ವಜನಿಕ ಖರೀದಿಯ ಮಿಂಚು

ಸಾಧನಾಪಥ

ಪಿಯೂಷ್ ಗೋಯಲ್
vveditoped@gmail.com

'ಗವರ್ನ್‌ಮೆಂಟ್ ಇ-ಮಾರ್ಕೆಟ್‌ಪ್ಲೇಸ್' (ಜೆಇಎಂ) ಬಹಳ ವೇಗವಾಗಿ ಸರಕಾರಿ/ಸಾರ್ವಜನಿಕ ಖರೀದಿಗೆ ಪಾರದರ್ಶಕ, ಸಮಗ್ರ ಮತ್ತು ಪರಿಣಾಮಕಾರಿ ವೇದಿಕೆಯನ್ನು ಒದಗಿಸುವಲ್ಲಿ ವಿಶ್ವ ನಾಯಕನಾಗಿ ಮೂಡಿಬಂದಿದೆ. ಇದು 1.6 ಲಕ್ಷಕ್ಕೂ ಹೆಚ್ಚು ಸರಕಾರಿ ಖರೀದಿದಾರರನ್ನು 23 ಲಕ್ಷ ಮಾರಾಟಗಾರರು ಮತ್ತು ಸೇವಾ ಪೂರೈಕೆದಾರರೊಂದಿಗೆ ಬೆಸೆಯುತ್ತದೆ, ಇದು ಪ್ರಧಾನಿ ನರೇಂದ್ರ ಮೋದಿಯವರ 2047ರ 'ವಿಕಸಿತ್ ಭಾರತ್' ದೃಷ್ಟಿಕೋನದ ಪ್ರಮುಖ ಎಂಜಿನ್ ಆಗಿದೆ.

ಪ್ರಧಾನಿ ಮೋದಿ ಅವರು ಪರಿವರ್ತಕ ಡಿಜಿಟಲ್ ಉಪಕ್ರಮವನ್ನು ಪ್ರಾರಂಭಿಸಿದ ಒಂಬತ್ತು ವರ್ಷಗಳಲ್ಲಿ, ಜಿಇಎಂ ಭ್ರಷ್ಟಾಚಾರವನ್ನು ತೊಡೆದುಹಾಕುವ ಮೂಲಕ ಮತ್ತು ಸಣ್ಣ ಪಟ್ಟಣಗಳಲ್ಲಿನ ನವೋದ್ಯಮಗಳು, ಎಂಎಸ್‌ಎಂಇಗಳು, ಮಹಿಳೆಯರು ಮತ್ತು ಉದ್ಯಮಗಳಿಗೆ ವ್ಯಾಪಾರ ಅವಕಾಶಗಳನ್ನು ನೀಡುವ ಮೂಲಕ, ಸರಕಾರವು ಸರಕು ಮತ್ತು ಸೇವೆಗಳನ್ನು ಖರೀದಿಸುವ ವಿಧಾನದಲ್ಲಿ ಕ್ರಾಂತಿಯನ್ನುಂಟುಮಾಡಿದೆ.

ಬಳಕೆದಾರ ಸ್ನೇಹಿ ವೇದಿಕೆಯು ನಿಜವಾದ ರತ್ನವೇ ಆಗಿದ್ದು, ಪೂರೈಕೆ ಮತ್ತು ವಿಲೇವಾರಿ ನಿರ್ದೇಶನಾಲಯವನ್ನು ಸ್ಥಳಾಂತರಿಸಿದೆ- ಇದು ಪಾರದರ್ಶಕವಲ್ಲದ ಮತ್ತು ಸ್ಪರ್ಧಾತ್ಮಕವಲ್ಲದ ವ್ಯವಸ್ಥೆಗಳನ್ನು ಹೊಂದಿತ್ತು, ಅದು ಸವಲತ್ತು ಹೊಂದಿದ್ದ ಕೆಲವರಿಗೆ ಅನ್ಯಾಯದ ಪ್ರಯೋಜನವನ್ನು ನೀಡಿತ್ತು. ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಹೊಸ ಕಚೇರಿ, ವಾಣಿಜ್ಯ ಭವನವನ್ನು ಹಿಂದೆ ಈ ಸಂಸ್ಥೆಯು ನೆಲೆಗೊಂಡಿದ್ದ ಸ್ಥಳದಲ್ಲಿಯೇ ನಿರ್ಮಿಸಲಾಗಿದೆ.

ಅದ್ಭುತ ಬೆಳವಣಿಗೆ: 2016ರಲ್ಲಿ ಪ್ರಾರಂಭವಾದಾಗಿನಿಂದ, ಜಿಇಎಂ ಪೋರ್ಟಲ್‌ನಲ್ಲಿ 13.4 ಲಕ್ಷ ಕೋಟಿ ರುಪಾಯಿಗೂ ಹೆಚ್ಚು ಮೌಲ್ಯದ ಆರ್ಡರ್‌ಗಳ ವಹಿವಾಟು ಮಾಡಲಾಗಿದೆ. ವೇದಿಕೆಯಲ್ಲಿ ಸರಕಾರಿ ಖರೀದಿಯು 2024-25ರಲ್ಲಿ ದಾಖಲೆಯ 5.43 ಲಕ್ಷ ಕೋಟಿ ರು.ಗೆ ಏರಿತು. ಜಿಇಎಂ ತನ್ನ ವಾರ್ಷಿಕ ವ್ಯವಹಾರವನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿ 7 ಲಕ್ಷ ಕೋಟಿ ರು.ಗೆ ಹೆಚ್ಚಿಸುವ ಗುರಿಯನ್ನು ಹೊಂದಿದೆ. ಜಿಇಎಂ ನಿಸ್ಸಂದೇಹವಾಗಿ ಸಾರ್ವಜನಿಕ/ಸರಕಾರಿ ಖರೀದಿ ಕ್ಷೇತ್ರದಲ್ಲಿ ತಾಂತ್ರಿಕ ದೈತ್ಯನಾಗಿ ಹೊರಹೊಮ್ಮಿದೆ.

ವ್ಯವಹಾರದ ಪ್ರಮಾಣವು ಜಿಇಎಂ ಅನ್ನು ಮುಂದಿನ ದಿನಗಳಲ್ಲಿ ದಕ್ಷಿಣ ಕೊರಿಯಾದ 'ಕೋನೆಪ್ಸ್'ನಂಥ ಸುಸ್ಥಾಪಿತ ಸಂಸ್ಥೆಗಳನ್ನು ಮೀರಿಸುವ ಮೂಲಕ ವಿಶ್ವದ ಅತಿ ದೊಡ್ಡ ಸಾರ್ವಜನಿಕ/ಸರಕಾರಿ ಖರೀದಿ ಪೋರ್ಟಲ್ ಮಾಡುವ ಸಾಧ್ಯತೆಯಿದೆ. ಜಿಇಎಂ ಪ್ರಾಮಾಣಿಕ ವ್ಯವಹಾರಗಳಿಗೆ ಹೆಚ್ಚಿನ ಅವಕಾಶಗಳನ್ನು ನೀಡಿದೆ, ಉದ್ಯೋಗಗಳನ್ನು ಸೃಷ್ಟಿಸಿದೆ ಮತ್ತು ಭಾರತದ ಆರ್ಥಿಕ ಬೆಳವಣಿಗೆಗೆ ಬೆಂಬಲ ನೀಡಿದೆ. ಈ ಸಂದರ್ಭದಲ್ಲಿ, ಜಿಇಎಂನ ಮಹತ್ವವು ಹಣಕಾಸಿನ ವಿಷಯದಲ್ಲಿ ಅದರ ಅದ್ಭುತ ಬೆಳವಣಿಗೆಯನ್ನು ದಾಟಿ ಪಸರಿಸಿದೆ. ಇದು ಯಾವುದೇ ಇ-ಕಾಮರ್ಸ್ ದೈತ್ಯನನ್ನು ಅಸೂಯೆಪಡುವಂತೆ ಮಾಡುತ್ತದೆ.

ಸಮಾನ ಬೆಳವಣಿಗೆಯ ಎಂಜಿನ್: ಪ್ರಧಾನಿ ಮೋದಿಯವರ 'ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್' ಎಂಬ ಧ್ಯೇಯಕ್ಕೆ ಅನುಗುಣವಾಗಿ ಜಿಇಎಂ ಸಮಾನ ಬೆಳವಣಿಗೆಯ ನಿರ್ಣಾಯಕ ಎಂಜಿನ್ ಆಗಿ ಕಾರ್ಯನಿರ್ವಹಿಸುತ್ತದೆ. ಇದು ನವೋದ್ಯಮಗಳು, ಸಣ್ಣ ವ್ಯವಹಾರಗಳು ಮತ್ತು ಮಹಿಳಾ ನೇತೃತ್ವದ ಉದ್ಯಮಗಳಿಗೆ ಯಾವುದೇ ಮಧ್ಯವರ್ತಿಗಳಿಲ್ಲದೆ ಸರಕಾರಿ ಖರೀದಿದಾರರಿಗೆ ತಮ್ಮ ಉತ್ಪನ್ನಗಳು ಮತ್ತು ಸೇವೆಗಳನ್ನು ಪ್ರದರ್ಶಿಸಲು ಸುಲಭವಾದ ಮಾರ್ಗವನ್ನು ಒದಗಿಸುತ್ತದೆ. ಪ್ರವೇಶಕ್ಕೆ ಇರುವ ಅಡೆತಡೆಗಳನ್ನು ತೆಗೆದುಹಾಕುವ ಮೂಲಕ, ವೇದಿಕೆಯು ಸಣ್ಣ ಸ್ವದೇಶಿ ವ್ಯವಹಾರೋದ್ಯಮಗಳು ಇ-ಟೆಂಡರ್‌ಗಳಲ್ಲಿ ಭಾಗವಹಿಸಲು ಮತ್ತು ತಮ್ಮ ವ್ಯವಹಾರಗಳನ್ನು ವಿಸ್ತರಿಸಲು ಅವಕಾಶ ನೀಡುತ್ತದೆ.

ಎಲ್ಲರನ್ನೂ ಒಳಗೊಳ್ಳುವಿಕೆಯ ತತ್ವದಿಂದ ಮಾರ್ಗದರ್ಶನ ಪಡೆದಿರುವ ಜಿಇಎಂ, ಸಣ್ಣ ವ್ಯವಹಾರೋದ್ಯಮಗಳ ಬೆಳವಣಿಗೆಯನ್ನು ಬೆಂಬಲಿಸಲು ವಿವಿಧ ಕಾರ್ಯತಂತ್ರದ ಉಪಕ್ರಮಗಳನ್ನು ಸಂಯೋಜಿಸಿದೆ. ಇವುಗಳಲ್ಲಿ ಸರಕಾರಿ ಖರೀದಿದಾರರಿಗೆ ಎಂಎಸ್‌ಇಗಳು ಮತ್ತು ಮಹಿಳಾ ನೇತೃತ್ವದ ಉದ್ಯಮಗಳು ನೀಡುವ ಉತ್ಪನ್ನಗಳು ಮತ್ತು ಸೇವೆಗಳನ್ನು ಗುರುತಿಸಲು ಹಾಗೂ ಆಯ್ಕೆ ಮಾಡಲು ಸಹಾಯ ಮಾಡುವ ವ್ಯವಸ್ಥೆಗಳು ಸೇರಿವೆ.

ಗುರಿಗಳನ್ನು ಮೀರುವುದು: ಜಿಇಎಂನಲ್ಲಿ ಸ್ಟಾರ್ಟ್-ಅಪ್ ರನ್‌ವೇ ಮತ್ತು ವೊಮಾನಿಯಾನಂಥ ಮೀಸಲಾದ ಅಂಗಡಿ ಮುಂಭಾಗಗಳು ಈ ವ್ಯವಹಾರಗಳ ಗೋಚರತೆಯನ್ನು ಮತ್ತು ಸಾರ್ವಜನಿಕ/ಸರಕಾರಿ ಖರೀದಿಯಲ್ಲಿ ಅವುಗಳ ಪಾಲನ್ನು ಪರಿಣಾಮಕಾರಿಯಾಗಿ ಹೆಚ್ಚಿಸಿವೆ. ಇದು ಸರಕಾರವು ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಂದ (ಎಂಎಸ್‌ಇ) ಶೇ.25ರಷ್ಟು ಮತ್ತು ಮಹಿಳಾ ನೇತೃತ್ವದ ವ್ಯವಹಾರಗಳಿಂದ ಶೇ.3ರಷ್ಟು ಖರೀದಿಯ ಗುರಿಗಳನ್ನು ಈಡೇರಿಸಲು ಮತ್ತು ಮೀರಲು ಸಹಾಯ ಮಾಡಿದೆ. ಜಿಇಎಂನಲ್ಲಿ ನಡೆಯುವ ವಹಿವಾಟಿನಲ್ಲಿ ಸುಮಾರು ಶೇ.38ರಷ್ಟನ್ನು ಎಂಎಸ್‌ಇಗಳಿಗೆ ನೀಡಲಾಗುತ್ತದೆ ಮತ್ತು ಮಹಿಳಾ ಉದ್ಯಮಗಳಿಂದ ಖರೀದಿಯು ಸುಮಾರು ಶೇ.4ರಷ್ಟಿದೆ.

ದೊಡ್ಡ ಉಳಿತಾಯ: ಈ ಬದಲಾವಣೆಗಳು ಕೆಲವು ಆರ್ಡರ್‌ಗಳಿಗೆ ಶೇ.33ರಿಂದ 96ರವರೆಗಿನ ಉಳಿತಾಯಕ್ಕೆ ಕಾರಣವಾಗಿವೆ. ದೇಶದ ಸಾಮಾನ್ಯ ನಾಗರಿಕರ ಪ್ರಯೋಜನಕ್ಕಾಗಿ ವ್ಯಾಪಾರ ಮಾಡಲು ಅನುಕೂಲಕರ ವ್ಯವಸ್ಥೆ ಮತ್ತು ಜೀವನವನ್ನು ಸುಲಭಗೊಳಿಸುವ ಮೋದಿ ಸರಕಾರದ ಧ್ಯೇಯಕ್ಕೆ ಅನುಗುಣವಾಗಿ ಈ ಗಮನಾರ್ಹ ವೆಚ್ಚ ಕಡಿತವು ಸ್ವಾಗತಾರ್ಹ ಬದಲಾವಣೆಯಾಗಿದೆ.

ವಿಶ್ವಬ್ಯಾಂಕ್‌ನ ಸ್ವತಂತ್ರ ಮೌಲ್ಯಮಾಪನವು ಜಿಇಎಂನಲ್ಲಿ ಖರೀದಿದಾರರು ಸರಾಸರಿ ಬೆಲೆಯಲ್ಲಿ ಸುಮಾರು ಶೇ.9.75ರಷ್ಟು ಉಳಿಸುತ್ತಾರೆ ಎಂದು ತೋರಿಸುತ್ತದೆ. ಇದು ತೆರಿಗೆದಾರರ ಹಣವನ್ನು ಬಳಸಿಕೊಳ್ಳುವ ಸಾರ್ವಜನಿಕ ಖರೀದಿಯಲ್ಲಿ ಅಂದಾಜು 1,15,000 ಕೋಟಿ ರು.ಗಳಷ್ಟು ದೊಡ್ಡ ಉಳಿತಾಯಕ್ಕೆ ಕಾರಣವಾಗಿದೆ. ಜಿಇಎಂ ಮೂಲಕ ಖರೀದಿಯು ಸರಕಾರಿ ಸ್ವಾಮ್ಯದ ಎನ್‌ಟಿಪಿಸಿಗೆ 20,000 ಕೋಟಿ ರು. ಗುತ್ತಿಗೆ ಒಪ್ಪಂದದಲ್ಲಿ ಹಿಮ್ಮುಖ ಹರಾಜಿನ ಮೂಲಕ 2,000 ಕೋಟಿ ರು. ಉಳಿಸಲು ಸಹಾಯ ಮಾಡಿತು. ರಕ್ಷಣಾ ಉಪಕರಣಗಳು, ಲಸಿಕೆಗಳು, ಡ್ರೋನ್‌ಗಳು ಮತ್ತು ವಿಮೆಯಂಥ ಸೇವೆಗಳ ಪಾರದರ್ಶಕ ಮತ್ತು ವೆಚ್ಚ-ಪರಿಣಾಮಕಾರಿ ಖರೀದಿಗೆ ಜಿಇಎಂ ಸಹಾಯ ಮಾಡಿದೆ.

ಸಣ್ಣ ಉದ್ಯಮಗಳಿಗೆ ಪ್ರಮುಖ ಪರಿಹಾರ ಎಂಬಂತೆ, ಜಿಇಎಂ ಇತ್ತೀಚೆಗೆ ತನ್ನ ವಹಿವಾಟು ಶುಲ್ಕವನ್ನು ಗಣನೀಯವಾಗಿ ಕಡಿಮೆ ಮಾಡಿದೆ. 10 ಲಕ್ಷ ರು.ಗಿಂತ ಹೆಚ್ಚಿನ ಮೊತ್ತದ ಆರ್ಡರ್‌ಗಳು ಶೇ.0.30ರಷ್ಟು ಕಡಿಮೆ ವಹಿವಾಟು ಶುಲ್ಕವನ್ನು ಹೊಂದಿರುತ್ತವೆ. ಆದರೆ 10 ಕೋಟಿ ರು.ಗಿಂತ ಹೆಚ್ಚಿನ ಮೌಲ್ಯದ ಆರ್ಡರ್‌ಗಳು 3 ಲಕ್ಷ ರು. ಮಿತಿಯ ಶುಲ್ಕವನ್ನು ಹೊಂದಿರುತ್ತವೆ- ಇದು ಹಿಂದಿನ 72.50 ಲಕ್ಷ ರು.ಗಿಂತ ಗಮನಾರ್ಹ ಇಳಿಕೆಯಾಗಿದೆ.

ತಂತ್ರಜ್ಞಾನ, ಎಐ: ಬಲಿಷ್ಠವಾದ ತಾಂತ್ರಿಕ ಮೂಲಸೌಕರ್ಯದೊಂದಿಗೆ, ತಾಂತ್ರಿಕ ಪರಿಹಾರಗಳನ್ನು ಬಳಸಿಕೊಂಡು ವ್ಯವಹಾರ ಮಾಡಲು ಹೊಸ ಮತ್ತು ಸುಲಭವಾದ ಮಾರ್ಗಗಳನ್ನು ನೀಡುವ ಮೂಲಕ ವೇದಿಕೆ ನಿರಂತರವಾಗಿ ವಿಕಸನಗೊಳ್ಳುತ್ತಿದೆ. ಜಿಇಎಂ GeMAI ಎಂಬ ಕೃತಕ ಬುದ್ಧಿಮತ್ತೆ-ಚಾಲಿತ ಚಾಟ್‌ಬಾಟ್ ಅನ್ನು ನಿಯೋಜಿಸಿದೆ. ಇದು ಸಂವಾದಾತ್ಮಕ ವಿಶ್ಲೇಷಣೆ ಮತ್ತು ವ್ಯವಹಾರ ಬುದ್ಧಿಮತ್ತೆಯಲ್ಲಿ ತರಬೇತಿ ಪಡೆದ ಸಾಧನವಾಗಿದೆ. ಸ್ಮಾರ್ಟ್ ಚಾಟ್‌ಬಾಟ್ 8 ಸ್ಥಳೀಯ ಭಾಷೆಗಳಲ್ಲಿ ಲಭ್ಯವಿದೆ ಮತ್ತು ಜಿಇಎಂ ಪೋರ್ಟಲ್‌ನಲ್ಲಿ ವ್ಯವಹಾರವನ್ನು ಸುಲಭಗೊಳಿಸಲು ಧ್ವನಿ ಆಜ್ಞೆಯ ಕಾರ್ಯವನ್ನು ಒಳಗೊಂಡಂತೆ ಇತ್ತೀಚಿನ ತಂತ್ರಜ್ಞಾನಗಳೊಂದಿಗೆ ಸಜ್ಜುಗೊಂಡಿದೆ.

ಜಿಇಎಂ ಕೂಡ ಎಂಎಸ್‌ಇ ಮಾರಾಟಗಾರರಿಗೆ ಹಣಕಾಸು ಉತ್ಪನ್ನಗಳನ್ನು ನೀಡುತ್ತದೆ. ಅರ್ಹ ಖರೀದಿ ಆರ್ಡರ್‌ಗಳಿಗೆ 10 ನಿಮಿಷಕ್ಕಿಂತ ಕಡಿಮೆ ಸಮಯದಲ್ಲಿ ಆಸ್ತಿ ಜಾಮೀನು ಇಲ್ಲದೆ ಹಣಕಾಸು ಸಹಾಯ ನೀಡುತ್ತದೆ. ಈ ಪ್ಲಾಟ್‌ಫಾರ್ಮ್ 10 ಲಕ್ಷ ರು.ವರೆಗೆ ಸಾಲ ಪಡೆಯುವುದಕ್ಕಾಗಿ 'ಜಿಇಎಂ ಸಹಾಯ್ 2.0' (GeM Sahay 2.0) ಅನ್ನು ಅಳವಡಿಸಿದೆ. ಇದು ಸಾಲಗಳನ್ನು ಪಡೆಯಲು ಏಕಗವಾಕ್ಷದಂತೆ ಕೆಲಸ ಮಾಡುತ್ತದೆ. ಈ ವೇದಿಕೆಯನ್ನು ಹೆಚ್ಚು ಒಳಗೊಳ್ಳಲು ಮತ್ತು ಸ್ಪರ್ಧಾತ್ಮಕವಾಗಿ ಮಾಡಲು ಇನ್ನಷ್ಟು ಉಪಕ್ರಮಗಳು ಮತ್ತು ತಂತ್ರಜ್ಞಾನ ಪರಿಹಾರಗಳು ಕಾರ್ಯಾನುಷ್ಠಾನ ಹಂತದಲ್ಲಿವೆ.

ಜಿಇಎಂ ಪೋರ್ಟಲ್ ಭಾರತದ ಆರ್ಥಿಕ ಬೆಳವಣಿಗೆ ಮತ್ತು ಪ್ರಧಾನಿ ಮೋದಿಯವರ ಅಭಿವೃದ್ಧಿ ಉದ್ದೇಶಗಳಿಗೆ ಪ್ರಮುಖ ಎಂಜಿನ್ ಆಗಿ ಒದಗಿಬಂದಿದೆ. ಸಮಾಜದ ದುರ್ಬಲರಿಗೆ ಶಕ್ತಿ ನೀಡಲು, ಅವರನ್ನು ಸಶಕ್ತಗೊಳಿಸಿ ಮೇಲೆತ್ತಲು ಹಾಗೂ ಉದ್ಯಮಶೀಲತೆಯನ್ನು ಉತ್ತೇಜಿಸಲು ಇದು ಇನ್ನಷ್ಟು ಹೆಚ್ಚುವರಿ ಪ್ರಯತ್ನಗಳನ್ನು ಮಾಡುತ್ತದೆ. ಜತೆಗೆ ತೆರಿಗೆ ಪಾವತಿಸುವವರ ಹಣವನ್ನು ಶ್ರೇಷ್ಠ ಗುಣಮಟ್ಟದ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಗೆ ಖರೀದಿಸಲು ಪರಿಣಾಮಕಾರಿಯಾಗಿ ಬಳಸುವುದನ್ನು ಖಚಿತಪಡಿಸುತ್ತದೆ.

(ಲೇಖಕರು ಕೇಂದ್ರ ಜವಳಿ ಮತ್ತು ಗ್ರಾಹಕ ವ್ಯವಹಾರಗಳ ಖಾತೆಯ ಸಚಿವರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸಂಜಯ ಉವಾಚ

ಪತ್ರಿಕೆಗಳು ಮತ್ತು ದೃಶ್ಯ ಮಾಧ್ಯಮಗಳು ಘಟನೆ ನಡೆದ ಸ್ಥಳಗಳಿಗೆ ತಮ್ಮ ವರದಿಗಾರರನ್ನು ಕಳಿಸಿ ಸತ್ಯಸಂಗತಿಗಳನ್ನು ಬಿತ್ತರಿಸುತ್ತಿವೆ. ಆದರೆ ಇದರ ಮಧ್ಯ ''ಪಾಕಿಸ್ತಾನದ ವಿರುದ್ಧ ಭಾರತ ನಡೆಸಿದ ಕಾರ್ಯಾಚರಣೆ ಬೂಟಾಟಿಕೆ ಮಾತ್ರ. ಭಾರತದ ಸೈನಿಕರೇ ಪ್ಲಾನ್ ಮಾಡಿ ಅವರನ್ನು ಕರೆಸಿದರು; ಭಾರತವು ಟ್ರಂಪ್ ಮಾತಿನಂತೆ ವರ್ತಿಸುತ್ತಿದೆ. 'ಆಪರೇಷನ್ ಸಿಂಧೂರ' ನಡೆದೇ ಇಲ್ಲ, 'ಕೇವಲ ನಾಲ್ಕು ವಿಮಾನಗಳನ್ನು ಆಕ್ರಮಣಕ್ಕೆ ಭಾರತ ಬಳಸಿದೆ. ಪಾಕಿಸ್ತಾನಕ್ಕೆ ಭಾರತ ತಲೆಬಾಗಿದೆ'' ಹೀಗೆ ಭಾರತ-ಪಾಕಿಸ್ತಾನದ ನಡುವಿನ ಹಣಾಹಣಿಯ ಬಗ್ಗೆ ಮನೆಯಲ್ಲಿ ಕುಳಿತು ರಾಜಕಾರಣಿಗಳು ತಮ್ಮದೇ ಆದ ಹೇಳಿಕೆ ಕೊಡುತ್ತಿದ್ದಾರೆ.

ಹೀಗಾಗಿ, 'ಹದ್ದಿನ ಕಣ್ಣಿಟ್ಟು ಸತ್ಯಸಂಗತಿ ಸಂಗ್ರಹಿಸುತ್ತಿರುವ ಮಾಧ್ಯಮಗಳನ್ನು ನಂಬ ಬೇಕೇ? ರಾಜಕಾರಣಿಗಳ ಮಾತುಗಳನ್ನೇ?' ಎನ್ನುವ ಹೊಯ್ದಾಟ ಸಾರ್ವಜನಿಕರಲ್ಲಿ ಉಂಟಾಗಿದೆ. ಅನೇಕರು ರಾಜಕಾರಣಿಗಳ ಮಾತು ಬಾಲಿಶ ಎಂದು ನಗೆಯಾಡುತ್ತಿದ್ದಾರೆ. ಆದರೆ ವ್ಯಾಸ ಭಾರತದಲ್ಲಿ ಕುರುಡು ಧೃತರಾಷ್ಟ್ರನಿಗೆ ಸಂಜಯನು ಕುರುಕ್ಷೇತ್ರ ರಣರಂಗದಲ್ಲಿ ಏನು ನಡೆದಿದೆ ಎಂದು ಮಾಧ್ಯಮಗಳ ನೇರಪ್ರಸಾರದಂತೆ ವಿವರವಾಗಿ ಹೇಳಿದ ದಾಖಲೆ ಇರುವಾಗ ರಾಜಕಾರಣಿಗಳ ಮಾತನ್ನು ಲಘುವಾಗಿ ತಳ್ಳಿಹಾಕುವುದು ಬೇಡ. ರಾಮ-ರಾವಣ ಯುದ್ಧದಲ್ಲಿ ಅನೇಕ ರಾಕ್ಷಸರು ಹತರಾದರೂ ಅದನ್ನು ಬಹಿರಂಗಪಡಿಸಿ ತನ್ನ ರಾಕ್ಷಸಸೈನ್ಯದ ಜಂಘಾಬಲ ಉಡುಗಿಸಬಾರದು ಎನ್ನುವ ದೂರದೃಷ್ಟಿಯಿಂದ ರಾಕ್ಷಸ ಸೈನಿಕರ ಶವಗಳನ್ನು ಸಮುದ್ರಕ್ಕೆ ಎಸೆದು, ತನ್ನವರು ಯಾರೂ ಮಡಿದಿಲ್ಲ ಎಂದು ಸಾರುವ ವ್ಯವಸ್ಥೆಯನ್ನು ರಾವಣನು ಮಾಡಿದ್ದನಂತೆ. ಬಿಗುವಿನ ವಾತಾವರಣ ಇನ್ನೂ ಧಗಧಗಿಸುತ್ತಿರುವಾಗ ನಮ್ಮ ರಾಜಕಾರಣಿಗಳು ತಮ್ಮ ಸಂಜಯ ದೃಷ್ಟಿಗೆ ಕಂಡ ಸತ್ಯವನ್ನು ಬಹಿರಂಗವಾಗಿ ಪ್ರಕಟಿಸದಿರುವ ಸಂಯಮ ತೋರಲಿ.

-ಸತ್ಯಬೋಧ, ಬೆಂಗಳೂರು

ಜಾಣಮೌನ ಏಕೆ?

ಕನ್ನಡ ಮತ್ತು ಕನ್ನಡಿಗರನ್ನು ಅವಮಾನಿಸುವಂತೆ ಬೆಂಗಳೂರಿನ ಹೋಟೆಲ್ ಒಂದರ ಡಿಜಿಟಲ್ ಬೋರ್ಡ್‌ನಲ್ಲಿ ಅವಾಚ್ಯ ಬರಹದ ತುಣುಕುಗಳನ್ನು ಹಾಕಿದ್ದ ಪ್ರಕರಣ ನಿರೀಕ್ಷಿಸಿದಂತೆ ಭಾರಿ ವೈರಲ್ ಆಗಿದೆ. ರಾಜ್ಯಾದ್ಯಂತದ ಕನ್ನಡಿಗರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ ಮತ್ತು ಈ ಘಟನೆಯನ್ನು ಖಂಡಿಸುತ್ತಿದ್ದಾರೆ. ಬದುಕು ಕಟ್ಟಿಕೊಳ್ಳಲು ಹೊರಗಿನಿಂದ ಕರ್ನಾಟಕಕ್ಕೆ ಬಂದವರು, ಕನ್ನಡವನ್ನು ಮತ್ತು ಕನ್ನಡಿಗರನ್ನು ಅವಮಾನಿಸುವ ನಿದರ್ಶನಗಳು ದಿನೇ ದಿನೆ ಹೆಚ್ಚುತ್ತಿವೆ. ಕರ್ನಾಟಕದಲ್ಲಿ ಕನ್ನಡೇತರರಿಗೆ, ಮುಖ್ಯವಾಗಿ ವಲಸಿಗರಿಗೆ ಕಿಂಚಿತ್ ಅನನುಕೂಲ, ಇರಿಸು-ಮುರಿಸು ಆದರೂ, ನೋವಾದರೂ ಅದನ್ನು 'ಲೀಡ್ ಸ್ಟೋರಿ' ಮಾಡಿ ದಿನಗಟ್ಟಲೆ ಕೊರೆಯುವ ರಾಷ್ಟ್ರೀಯ ಮಾಧ್ಯಮಗಳು ಈ ಘಟನೆಯ ಬಗ್ಗೆ ಜಾಣಮೌನ ವಹಿಸಿರುವುದು ಅಚ್ಚರಿಯ ಸಂಗತಿ. ಮಾಧ್ಯಮಗಳ ಈ ಮೌನವು, ಇಂಥ ಘಟನೆಗಳಿಗಿಂತಲೂ ಅಪಾಯಕಾರಿ.

- ರಮಾನಂದ ಶರ್ಮಾ, ಬೆಂಗಳೂರು

ಭಟ್ಟರ್ ಸ್ಕಾಚ್

- **ಮಹೇಶ ಕಾಕತಿ, ಹುಬ್ಬಳ್ಳಿ**
ಭಟ್ರೇ, ಡಬಲ್ ಎಂಜಿನ್ ಸಂಸಾರ ಅಂದ್ರೆ ಏನು?
– **ಪೊಲೀಸ್ ಅಧಿಕಾರಿಯೇ ಹೆಂಡತಿ ಆಗಿರುವವಳ ಜತೆ ಸಂಸಾರ ಮಾಡುವುದು!**

- **ನವೀನ ಕೆಂಗೇರಿ, (ಇಮೇಲ್ ಮೂಲಕ)**
ಭಟ್ರೇ, ಚುನಾವಣೆ ವೇಳೆ ಯಾರನ್ನೇ ಕೇಳಿದರೂ ಬಹುಮತ ತಮ್ಮ ಪಕ್ಷಕ್ಕೇ ಅಂತಾರಲ್ಲ?
– **ರಾಜ್ಯದ ಜನತೆ ತಮ್ಮ ಕಿಸೆಯಲ್ಲೇ ಅಂತ ಭಾವಿಸಿದವರು ಮಾತ್ರ ಹಾಗೆ ಅಂದುಕೊಳ್ಳಬಹುದು!**

- **ಸತೀಶ ಎಲ್.ವಿ., (ಇಮೇಲ್ ಮೂಲಕ)**
ಭಟ್ರೇ, ಹೆಂಡತಿ ಆಗಾಗ 'ಒಳಗೆ ಸೇರಿದರೆ ಗುಂಡು' ಹಾಡನ್ನು ಹಾಡ್ತಾಳಲ್ಲ?
– **ಇನ್ನೂ ಸೇರಿಲ್ಲ ಎಂದು ಹಾಡಿನ ಮೂಲಕ ಹೇಳುತ್ತಿರಬಹುದು ಅಂತೀಯಾ?!**

- **ಪುಂಗನೂರು ಪೂರ್ಣಯ್ಯ ಮೈಸೂರು**
ಭಟ್ರೇ, ಡಯಾಬಿಟಿಕ್ ಇರುವ ನವವಿವಾಹಿತ ತರುಣನಿಗೆ ನಿಮ್ಮ ಉಪದೇಶವೇನು?
– **ಸದ್ಯಕ್ಕೆ ಸಿಹಿ ಚುಂಬನ ಬೇಡ!**

- **ಅಮಾಸೆ ಸುಬ್ಬು, ಮೈಸೂರು**
'ಪ್ರೇಮದ ಮೊದಲನೇ ಪಾಠ, ಕಂಗಳ ತುಂಬಿದ ನೋಟ' ಅಂತಾರೆ ಅನುಭವಸ್ಥರು. ಹಾಗಾದರೆ ಕೊನೆ ಪಾಠ ಯಾವುದು?
– **'ಕೊನೆಯ ಪಾಠ, ರಾತ್ರಿಯಿಡಿ ಸೊಳ್ಳೆಗಳ ಕಾಟ'!**

- **ನಿಂಗರಾಜು ಆರ್., (ಇಮೇಲ್ ಮೂಲಕ)**
ಭಟ್ರೇ, ಮದುವೆ ಕಾರ್ಯಕ್ರಮದಲ್ಲಿ ಹೆಂಗಸರ ಪಾತ್ರವೇನು?
– **ಸೀರೆ ಉಡುವುದು ಮತ್ತು ಆಗಾಗ ಬದಲಿಸುವುದು !**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ನಾನೂ ಡಾಕ್ಟರ್ ಆಗಬಹುದಾ?
– **ಭಟ್ಟರ್ ಸ್ಕಾಚ್ ಮೇಲೆ ಪಿಎಚ್‌ಡಿ ಮಾಡಿ ಡಾಕ್ಟರ್ ಆಗಬಹುದಲ್ಲ?!**

- **ರಾಘಣ್ಣ, (ಇಮೇಲ್ ಮೂಲಕ)**
ಭಟ್ರೆ, ಸತ್ತಾಗ ಬಳಸುವ ಯಾವ ಪದವೊಂದರ ಹೆಸರನ್ನು ಇಟ್ಟುಕೊಂಡರೆ ಬದುಕಿರುವಾಗಲೂ ಜನ ಅದರಿಂದ ಕರೆಯುತ್ತಾರೆ?
– **ಕೀರ್ತಿಶೇಷ!**

ಆರತಿ ನೆಪದಲ್ಲಾದರೂ ನಮ್ಮ ನದಿಗಳು ಸ್ವಚ್ಛತೆ ಕಾಣಲಿ !

ಲೋಕಮತ

ಲೋಕೇಶ್ ಕಾಯರ್ಗ
kaayarga@gmail.com

ಕರ್ನಾಟಕದಲ್ಲಿ ಉತ್ತರ ಭಾರತೀಯರ ಸಂಖ್ಯೆ ಹೆಚ್ಚಾಗುತ್ತಿದ್ದಂತೆಯೇ ಅಲ್ಲಿನವರ ಆಚರಣೆಗಳೂ ಒಂದೊಂದಾಗಿ ನಮ್ಮ ಬದುಕಿನ ಭಾಗವಾಗುತ್ತಿವೆ. ಉತ್ತರ ಭಾರತೀಯರ ಹೋಳಿ ಸಂಭ್ರಮ, ರಕ್ಷಾ ಬಂಧನ ಈಗ ನಮ್ಮದೇ ಹಬ್ಬ ಎನ್ನುವಂತಾಗಿವೆ. ಮದುವೆಗೆ ಮೊದಲು ನಿಶ್ಚಿತಾರ್ಥ, ವೀಳ್ಯಶಾಸ್ತ್ರ, ಮದರಂಗಿ ಶಾಸ್ತ್ರ ನೆರವೇರಿಸುತ್ತಿದ್ದ ನಾವು ಈಗ ಉತ್ತರ ಭಾರತೀಯರಂತೆ ಮೆಹಂದಿ, ಸಂಗೀತ್, ಹಲ್ದಿ ಶಾಸ್ತ್ರದ ಹೆಸರಿನಲ್ಲಿ ಅದ್ದೂರಿ ಸಮಾರಂಭ ಏರ್ಪಡಿಸಿ ಡಿಜೆ ಸಂಗೀತಕ್ಕೆ ಹೆಜ್ಜೆ ಹಾಕಲು ಕಲಿತಿದ್ದೇವೆ. ಉತ್ತರ, ಮಧ್ಯ ಭಾರತಕ್ಕೆ ಸೀಮಿತವಾಗಿದ್ದ ಕುಂಭಮೇಳವನ್ನು ಈಗ ನಮ್ಮ ರಾಜ್ಯದ ಕಾವೇರಿ ಸಂಗಮದಲ್ಲೂ ಆಯೋಜಿಸುತ್ತಿದ್ದೇವೆ. ಇದೀಗ ಇದಕ್ಕೆ ಹೊಸ ಸೇರ್ಪಡೆಯಾಗಿ ಕಾವೇರಿ ಆರತಿ ಹೆಸರಿನಲ್ಲಿ ಹೊಸ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲು ರಾಜ್ಯ ಸರಕಾರವೇ ಮುಂದಾಗಿದೆ. ಇದರ ಪರ ವಿರುದ್ಧ ಚರ್ಚೆ ಆರಂಭವಾಗಿವೆ.

ಬದುಕಿನಲ್ಲಿ ಸಂಭ್ರಮ, ಸಡಗರಕ್ಕೆ ಕಾರಣವಾಗುವ ಯಾವುದೇ ಹಬ್ಬ, ಆಚರಣೆ, ಹರಿದಿನಗಳನ್ನು ವಿರೋಧಿಸುವ ಅಗತ್ಯ ಇಲ್ಲ. ಆದರೆ ಈ ಆಚರಣೆಗಳ ಹಿಂದೆ ಒಂದು ಸದಾಶಯವಿರಬೇಕು. ಆಚರಣೆಗಳು ದುಡ್ಡು ಪೋಲು ಮಾಡುವ ಇಲ್ಲವೇ ಸಮಯ ವ್ಯರ್ಥ ಮಾಡುವ ಮಾರ್ಗಗಳಾಗಬಾರದು. ಅದರಲ್ಲೂ ಸರಕಾರವೇ ಖುದ್ದಾಗಿ ಹೊಸ ಆಚರಣೆಗಳ ಮೂಲಕ ಹೊಸದೊಂದು ಸಂಪ್ರದಾಯವನ್ನು ಹುಟ್ಟು ಹಾಕುವ ಮುನ್ನ ಹತ್ತಾರು ಬಾರಿ ಯೋಚಿಸಬೇಕು. ಅಧಿಕಾರಿಗಳು ಇಲ್ಲವೇ ಜನಪ್ರತಿನಿಧಿಗಳು ಸಲಹೆ ಮಾಡಿದರೆನ್ನುವ ಕಾರಣಕ್ಕೆ ಧಾರ್ಮಿಕ ಸ್ವರೂಪದ ಕಾರ್ಯಕ್ರಮ ಆರಂಭಿಸಿದರೆ ಮುಂದೆ ಇಂಥದ್ದೇ ಇನ್ನಷ್ಟು ಕಾರ್ಯಕ್ರಮಗಳನ್ನು ನಡೆಸಲು ಬೇಡಿಕೆ ಬರಬಹುದು.

ಕಾವೇರಿ ಆರತಿ ರಾಜ್ಯಕ್ಕೆ ಹೊಸ ಪರಿಕಲ್ಪನೆಯೇನೂ ಅಲ್ಲ. ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಹಲವು ವರ್ಷಗಳಿಂದ ಕಾವೇರಿ ಆರತಿ ಹೆಸರಿನಲ್ಲಿ ಕಾರ್ಯಕ್ರಮ ರೂಪಿಸಿಕೊಂಡು ಬಂದಿದ್ದಾರೆ. ಇದು ಕೇವಲ ಧಾರ್ಮಿಕ ವಿಧಿಯಾಗದೇ ಕಾವೇರಿ ನದಿ ತೀರದಲ್ಲಿ ಸಾಂಸ್ಕೃತಿಕ ಮಹೋತ್ಸವಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಕಾವೇರಿಯ ಮಹತ್ವ, ನದಿ ನೀರಿನ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುವ ಜತೆಗೆ ಸಾಧಕರನ್ನು ಗುರುತಿಸಿ ಸನ್ಮಾನಿಸುವ ಕೆಲಸವನ್ನು ಸ್ವಾಮೀಜಿ ಮಾಡುತ್ತಾ ಬಂದಿದ್ದಾರೆ.

ಕುಂಭಮೇಳವೂ ಅಷ್ಟೇ. ಉತ್ತರಭಾರತದ ನದಿ ಸಂಗಮಗಳಲ್ಲಿ 12 ವರ್ಷಕ್ಕೊಮ್ಮೆ ನಡೆಯುವ ಮಹಾಕುಂಭಮೇಳ ಹಿಂದಿನಿಂದಲೂ ಬಲು ಪ್ರಸಿದ್ಧವಾದದ್ದು. ಆದರೆ ದಕ್ಷಿಣದ ಜನಸಾಮಾನ್ಯರ ಪಾಲಿಗೆ ಇದು ದೂರದ ಆಚರಣೆಯಾಗಿಯೇ ಉಳಿದಿತ್ತು. ದಕ್ಷಿಣದ ಜನರು ವಿಶೇಷವಾಗಿ ಕನ್ನಡಿಗರು ಕುಂಭಮೇಳದ ಹೆಸರಿನಲ್ಲಿ ಒಟ್ಟಾಗಿ ನದಿ ಸ್ನಾನ ಮಾಡಬೇಕೆಂಬ ಉದ್ದೇಶದಿಂದ ಹಲವು ವರ್ಷಗಳ ಹಿಂದೆಯೇ ಟಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ದಕ್ಷಿಣದ ಕುಂಭಮೇಳವನ್ನು ಆರಂಭಿಸಲಾಯಿತು. ಆದಿಚುಂಚನ ಶ್ರೀಗಳು, ಸುತ್ತೂರು ಶ್ರೀಗಳು ಈ ಕುಂಭಮೇಳದ ಆರಂಭದಲ್ಲಿ ಪ್ರಧಾನ ಪಾತ್ರವಹಿಸಿದ್ದರು. ಇತ್ತೀಚೆಗೆ ಸರಕಾರವೇ ಮುಂದೆ ನಿಂತು ಈ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ.

ಕಾವೇರಿ ಆರತಿ ಸರಕಾರದ ವಾರ್ಷಿಕ ಕಾರ್ಯಕ್ರಮದ ಭಾಗವಾಗಬೇಕೆನ್ನುವುದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಯೋಚನೆ. ಈ ಯೋಚನೆಯ ಹಿಂದಿನ ಅವರ ಉದ್ದೇಶ ಏನೆನ್ನುವುದು ಸ್ಪಷ್ಟವಿಲ್ಲ. ಕೆಲ ತಿಂಗಳ ಹಿಂದೆ ಬಿಬಿಎಂಪಿ ಪ್ರಾಯೋಜಕತ್ವದಲ್ಲಿ ಬೆಂಗಳೂರಿನ ಸ್ಯಾಂಕಿ ಟ್ಯಾಂಕ್ ಆವರಣದಲ್ಲಿ ಉತ್ತರ ಭಾರತದ ಪುರೋಹಿತರನ್ನು ಕರೆಸಿ ನಡೆಸಿದ ಕಾವೇರಿ ಆರತಿ ಕಾರ್ಯಕ್ರಮದಲ್ಲೂ ಡಿಕೆಶಿ ಪ್ರಮುಖ ಪಾತ್ರ ವಹಿಸಿದ್ದರು. ಇದೀಗ ದಸರಾ ಹಬ್ಬದ ಸಮಯದಲ್ಲಿ ಶ್ರೀರಂಗಪಟ್ಟಣದಲ್ಲಿ ಕಾವೇರಿ ಆರತಿ ಕಾರ್ಯಕ್ರಮ ಹಮ್ಮಿಕೊಳ್ಳಲು ಸಿದ್ಧತೆ ನಡೆದಿದೆ. ಕೃಷ್ಣರಾಜಸಾಗರ ಅಣೆಕಟ್ಟಿನ ಬಳಿ ಇದಕ್ಕಾಗಿ ಜಾಗವನ್ನು ಗುರುತಿಸುವ ಕೆಲಸವೂ ನಡೆದಿದೆ. ರಾಜ್ಯದ ಎಲ್ಲ ಭಾಗಗಳಿಗೂ ಕುಡಿಯುವ ನೀರು ಪೂರೈಸಲಾಗದ ಸರಕಾರ ಇಂತಹ ಧಾರ್ಮಿಕ ಕಾರ್ಯಕ್ರಮಗಳಿಗೆ ಸರಕಾರದ ದುಡ್ಡನ್ನು ಪೋಲು ಮಾಡಬಾರದೆನ್ನುವುದು ಕಾವೇರಿ ಆರತಿ ಪ್ರಸ್ತಾಪವನ್ನು ವಿರೋಧಿಸುವವರ ವಾದ. ಸದ್ಯದ ಪ್ರಸ್ತಾವನೆಯನ್ನು ಗಮನಿಸಿದರೆ ಸರಕಾರದ ಪಾಲಿಗೆ ಇದು ಹಂಪಿ ಉತ್ಸವ, ಕದಂಬ ಉತ್ಸವದಂತೆ ಪ್ರವಾಸಿಗರನ್ನು ಸೆಳೆಯುವ ಇನ್ನೊಂದು ಕಾರ್ಯಕ್ರಮವಾಗುವ ಸಾಧ್ಯತೆ ಇದೆ. ಆದರೆ ಕಾವೇರಿ ಆರತಿಯನ್ನು ಇದಕ್ಕಿಂತ ಮಿಗಿಲಾದ, ಬೃಹತ್ತಾದ ಆಶಯದೊಂದಿಗೆ ಆಯೋಜಿಸಲು ಎಲ್ಲ ಅವಕಾಶಗಳೂ ಇವೆ.

ಈ ಹಿಂದೆ ಪ್ರಯಾಗದ ಮಹಾಕುಂಭ ಮೇಳದ ಅವಧಿಯಲ್ಲಿ ನಮ್ಮ ರಾಜ್ಯದ ನದಿಗಳ ಮಾಲಿನ್ಯದ ಬಗ್ಗೆ ಬರೆದಿದ್ದೆ. ಗಂಗಾರತಿ, ಕುಂಭ ಮೇಳದಂತಹ ಆಚರಣೆಗಳು ನಮ್ಮ ನದಿಗಳನ್ನು ಇನ್ನಷ್ಟು ಕಲುಷಿತಗೊಳಿಸುವ ಧಾರ್ಮಿಕ ವಿಧಿಗಳಾಗದೆ ನದಿಯ ಸ್ವಚ್ಛತೆ, ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳಾಗಬೇಕೆಂಬ ಆಶಯ ವ್ಯಕ್ತಪಡಿಸಿದ್ದೆ. ಪ್ರಯಾಗದಲ್ಲಿ ಮಿಂದೆದ್ದವರು ತಮ್ಮ ಪಾಪಗಳನ್ನು ತೊಳೆದುಕೊಳ್ಳುವ ಮನಸ್ಥಿತಿಯಲ್ಲಿದ್ದರೇ ಹೊರತು ನದಿಗಳ ಮಲಿನತೆಯ ಬಗ್ಗೆ ಎಂದೂ ಯೋಚಿಸಲಿಲ್ಲ. ಗಂಗೆ ಎಂದೆಂದಿಗೂ ಪವಿತ್ರಳು, ಅವಳು ಅಶುದ್ಧಿಯಾಗಲು ಸಾಧ್ಯವಿಲ್ಲ ಎಂಬ ಧಾರ್ಮಿಕ ನಂಬುಗೆಯೊಂದಿಗೆ ಕಾರ್ಯಕ್ರಮಕ್ಕೆ ತೆರೆ ಎಳೆಯಲಾಗಿತ್ತು. ಆದರೆ ಕುಂಭಮೇಳದ ಬಳಿಕ ನದಿಯಿಂದ ಎತ್ತಲಾದ ಸಾವಿರಾರು ಟನ್ ತ್ಯಾಜ್ಯ ಗಂಗೆ, ಯಮುನೆಯರು ಎಷ್ಟರ ಮಟ್ಟಿಗೆ ಕಲುಷಿತವಾಗಿರಲು ಸಾಧ್ಯ ಎನ್ನುವುದರ ಚಿತ್ರಣ ನೀಡುವಂತಿತ್ತು.

ಇಷ್ಟಾದರೂ ಕಾವೇರಿ ಆರತಿ ಕಾರ್ಯಕ್ರಮವನ್ನು ಬೆಂಬಲಿಸಲು ಕಾರಣವಿದೆ. ಭಾವುಕ ಜೀವಿಗಳಾದ ನಮ್ಮಲ್ಲಿ ಧಾರ್ಮಿಕ ನಂಬಿಕೆಯಿಲ್ಲದೆ ಯಾವ ಕೆಲಸವೂ ನಡೆಯುವುದಿಲ್ಲ. ಬೆಳಿಗ್ಗೆ ಏಳುವುದರಿಂದ ಶುರುವಾಗಿ ರಾತ್ರಿ ಮಲಗುವವರೆಗೂ ನಮ್ಮ ಪ್ರತಿಯೊಂದು ಚರ್ಯೆಗಳು ನಂಬಿಕೆ, ಪ್ರಾರ್ಥನೆಗಳಿಂದ ಆರಂಭವಾಗಿ ಪ್ರಾರ್ಥನೆಯಲ್ಲಿಯೇ ಕೊನೆಗೊಳ್ಳುತ್ತವೆ. ಅದರಲ್ಲೂ ನೀರು ಮತ್ತು ಬೆಂಕಿ ನಮಗೆ ಶುದ್ಧಿಯ ಸಂಕೇತಗಳು. ಈ ಭಾವನೆಯನ್ನು ಸಾರ್ವತ್ರಿಕವಾಗಿ ಬಡಿದೆಬ್ಬಿಸಿ ಎಲ್ಲ ನದಿಗಳನ್ನು ಮಾಲಿನ್ಯ ಮುಕ್ತಗೊಳಿಸಲು ಕಾವೇರಿ ಆರತಿ ಹೆಸರಿನ ಕಾರ್ಯಕ್ರಮ ಸದವಕಾಶ.

ಪಾಶ್ಚಾತ್ಯರು ನದಿಗಳನ್ನು ಪವಿತ್ರ ಎಂದು ಪೂಜಿಸಿ ನಮ್ಮಂತೆ ಸುವಸ್ತುಗಳನ್ನು ಸಮರ್ಪಿಸುವುದಿಲ್ಲ. ಆದರೆ ನದಿ ಮೂಲಗಳ ಸ್ವಚ್ಛತೆ ಬಗ್ಗೆ ಅವರಿಗೆ ತಿಳಿ ಹೇಳಬೇಕಾದ ಅಗತ್ಯವಿಲ್ಲ. ಸ್ವಚ್ಛತೆ ಅವರ ಬದುಕಿನ ಅವಿಭಾಜ್ಯ ಅಂಗ. ಸ್ವಚ್ಛತೆಯ ಬದಲು ಮಡಿವಂತಿಕೆಗೆ, ಕುರುಡು ನಂಬಿಕೆಗಳಿಗೆ ಜೋತು ಬಿದ್ದಿರುವ ನಾವು ಈ ಕಾರಣಕ್ಕಾಗಿಯೂ ನಮ್ಮ ನದಿಗಳನ್ನು ಕಲುಷಿತಗೊಳಿಸುತ್ತಿದ್ದೇವೆ. ಗಂಗೆಯಲ್ಲಿ ಸಾಗಿ ಬರುವ ಅರ್ಧ ಸುಟ್ಟ ಹೆಣಗಳು, ಶ್ರೀರಂಗಪಟ್ಟಣದ ಕಾವೇರಿ ಸಂಗಮದಲ್ಲಿ ಪಿಂಡ ಪ್ರದಾನದ ಹೆಸರಿನಲ್ಲಿ ಸೃಷ್ಟಿಯಾಗಿರುವ ಅನೈರ್ಮಲ್ಯದ ವಾತಾವರಣ ಇದಕ್ಕೆ ಸಾಕ್ಷಿ. ಸದ್ಯದ ಸ್ಥಿತಿಯಲ್ಲಿ ನದಿ ಮೂಲಗಳನ್ನು ಸ್ವಚ್ಛವಾಗಿಡಿ ಎಂದು ಎಷ್ಟೇ ಗೋಗರೆದರೂ ಜನರು ಸ್ವಯಂ ಪ್ರೇರಣೆಯಿಂದ ಸ್ವಚ್ಛತೆಯ ಬಗ್ಗೆ ಗಮನ ಹರಿಸುವುದು ದೂರದ ಮಾತು. ದೇಗುಲದ ಎದುರಿನ ಕಲ್ಯಾಣಿ ಇಲ್ಲವೇ ಸ್ನಾನಘಟ್ಟದ ನೈರ್ಮಲ್ಯದ ಬಗ್ಗೆಯೂ ಕಾಳಜಿ ವಹಿಸದ ನಾವು, ನೀರಿನ ಸ್ವಚ್ಛತೆಯತ್ತ ಮನ ಮಾಡಲು ಸಾಧ್ಯವಿಲ್ಲ. ಕೇಂದ್ರ ಸರಕಾರ ನಮಾಮಿ ಗಂಗೆ ಹೆಸರಿನಲ್ಲಿ ಪ್ರತೀ ವರ್ಷ ಸಾವಿರಾರು ಕೋಟಿ ರು. ಹಣ ವ್ಯಯಿಸಿದ ಬಳಿಕವೂ ಭಾರತೀಯರೆಲ್ಲರ ಪವಿತ್ರ ನದಿ ಗಂಗೆಯನ್ನು ಪೂರ್ತಿಯಾಗಿ ಮಾಲಿನ್ಯ ಮುಕ್ತವನ್ನಾಗಿಸಲು ಸಾಧ್ಯವಾಗಿಲ್ಲ. ಇಂತಹ ಸ್ವಚ್ಛ ಅಭಿಯಾನಕ್ಕೆ ಧಾರ್ಮಿಕ ನಂಬುಗೆಯೊಂದರ ನಂಟು ಕಲ್ಪಿಸುವ ಅಗತ್ಯವಿದೆ.

ನೀರಿನ ಮೂಲಗಳ ಸ್ವಚ್ಛತೆ, ನದಿ ಸಂರಕ್ಷಣೆಯನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ರಾಜ್ಯವ್ಯಾಪಿ ಆಯಾ ಭಾಗದ ನದಿಗಳ ಆರತಿ ಅಭಿಯಾನ ನಡೆಸುವಂತಾದರೆ ಸ್ವಚ್ಛತೆಯ ನಿಟ್ಟಿನಲ್ಲಿ ಇನ್ನೊಂದು ಹೆಜ್ಜೆ ಮುಂದೆ ಸಾಗಲು ಸಾಧ್ಯವಿದೆ. ಇದು ಸಾಧ್ಯವಾಗಬೇಕಾದರೆ ಇದು ನಿರ್ದಿಷ್ಟ ಸ್ಥಳಕ್ಕೆ ಸೀಮಿತವಾದ ಧಾರ್ಮಿಕ ಕಾರ್ಯಕ್ರಮ ಆಗಬಾರದು. ಒಂದು ತಿಂಗಳು ಅಥವಾ ಕನಿಷ್ಠ ಒಂದು ವಾರ ರಾಜ್ಯವ್ಯಾಪಿ ನೀರಿನ ಮೂಲಗಳ ಸ್ವಚ್ಛತೆ ಕಾರ್ಯಕ್ರಮ ನಡೆಸಿ ಬಳಿಕ ಅವರವರ ನಂಬಿಕೆಯಂತೆ ನದಿಗೆ ಗೌರವ ಅರ್ಪಿಸುವ ಕಾರ್ಯಕ್ರಮ ರೂಪಿಸಬೇಕು. ಇಂತಹ ಅಭಿಯಾನದಲ್ಲಿ ವಿದ್ಯಾರ್ಥಿಗಳು, ನಾನಾ ಸಂಘಟನೆಗಳು, ಪಕ್ಷಗಳ ಕಾರ್ಯಕರ್ತರು, ಮಠ, ದೇಗುಲ, ಮಸೀದಿ, ಇಗರ್ಜಿಗಳೆಂಬ ಭೇದವಿಲ್ಲದೆ ಎಲ್ಲ ಧಾರ್ಮಿಕ ನಂಬಿಕೆಯ ಜನರೂ ಭಾಗವಹಿಸುವಂತಾಗಬೇಕು. ಈ ನಿಟ್ಟಿನಲ್ಲಿ ಸರಕಾರವೇ 'ಸ್ವಚ್ಛ ನದಿ ಪಾತ್ರ', 'ಸ್ವಚ್ಛ ನದಿ ಮೂಲ' ಹೆಸರಿನಲ್ಲಿ ಪ್ರಶಸ್ತಿಗಳನ್ನು ಕೊಟ್ಟು ಈ ಸಮಾರಂಭದಲ್ಲಿ ಗೌರವಿಸಬಹುದು.

ಆರಂಭದಲ್ಲಿ ನಮ್ಮ ಎಲ್ಲ ದೇಗುಲಗಳ ಮುಂದಿನ ಕೆರೆ, ಕಲ್ಯಾಣಿ, ಸರೋವರ, ಹೊಳೆ, ನದಿ ಪಾತ್ರಗಳನ್ನು ಸ್ವಚ್ಛವಾಗಿಡುವ ಕಾರ್ಯಕ್ರಮ ಆಯೋಜಿಸಬಹುದು. ನಮ್ಮ ಪ್ರಮುಖ ದೇಗುಲಗಳ ಸ್ನಾನ ಘಟ್ಟಗಳು ಈ ಅಭಿಯಾನದಡಿ ಸ್ವಚ್ಛತೆಯಿಂದ ನಳನಳಿಸುವಂತಾದರೆ ಅಲ್ಲೂ ದೇವರನ್ನು ಕಾಣುವ ಪ್ರಶಾಂತತೆ ಬರಲು ಸಾಧ್ಯವಿದೆ. ಈಗ ಕುಂಭಮೇಳ ಆಯೋಜಿಸುತ್ತಿರುವ ತಿರುಮಕೂಡಲಿನ ಗುಂಜಾಂ ನರಸಿಂಹ ಸ್ವಾಮಿ ದೇಗುಲದ ಎದುರಿನ ಸ್ನಾನ ಘಟ್ಟ ಕಂಡರೆ ಸ್ನಾನ ಬಿಡಿ, ನೀರಿನ ಪ್ರೋಕ್ಷಣೆ ಮಾಡಿಕೊಳ್ಳಲೂ ಮನಸ್ಸಾಗುವುದಿಲ್ಲ. ನಂಜನಗೂಡು ಶ್ರೀಕಂಠೇಶ್ವರ ದೇಗುಲದ ಎದುರಿನ ಸ್ನಾನ ಘಟ್ಟವೂ ಇದಕ್ಕಿಂತ ಭಿನ್ನವಾಗಿಲ್ಲ. ಶ್ರೀರಂಗಪಟ್ಟಣದ ನಿಮಿಷಾಂಬಾ, ಕುಕ್ಕೆ ಸುಬ್ರಮಣ್ಯ, ಧರ್ಮಸ್ಥಳ ಸೇರಿದಂತೆ ಬಹುತೇಕ ಎಲ್ಲ ನದಿಗಳ ಸ್ನಾನ ಘಟ್ಟಗಳು ನಮ್ಮ ಕೊಳಕುತನಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

ನಮ್ಮ ಶ್ರೀಮಂತ ದೇಗುಲಗಳಲ್ಲಿ ಸಂಗ್ರಹವಾಗುವ ಹುಂಡಿ ಹಣದಲ್ಲಿ ಒಂದಷ್ಟು ಮೊತ್ತವನ್ನು ಆಯಾ ದೇಗುಲಗಳ ವ್ಯಾಪ್ತಿಯ ನದಿಗಳ ಸ್ವಚ್ಛತೆ ಮತ್ತು ಜಲಸಂರಕ್ಷಣೆಗೆ ಬಳಸಬಹುದು. ಪ್ರಮುಖ ಸ್ನಾನಘಟ್ಟಗಳಲ್ಲಿ ನೀರಿನ ಶುದ್ಧೀಕರಣ ಘಟಕ ಸ್ಥಾಪನೆ, ತ್ಯಾಜ್ಯ ಸಂಗ್ರಹ ವಿಲೇವಾರಿ ಮತ್ತು ಸ್ವಚ್ಛತಾ ಸಹಾಯಕರನ್ನು ನೇಮಿಸಿಕೊಳ್ಳಲು ಈ ಹಣವನ್ನು ಬಳಸಿಕೊಳ್ಳಬಹುದು. ಕೆರೆ, ಕಲ್ಯಾಣಿ, ನದಿ ಸ್ನಾನ ಘಟ್ಟಗಳ ಸ್ವಚ್ಛತೆಯ ಹೊಣೆಯನ್ನು ಮುಜರಾಯಿ ದೇಗುಲಗಳಿಗೆ ಒಪ್ಪಿಸಿ ವರ್ಷಕ್ಕೊಮ್ಮೆ ನಡೆಸುವ ಆರತಿ ಕಾರ್ಯಕ್ರಮದಲ್ಲಿ ಸ್ವಚ್ಛ ಸ್ನಾನಘಟ್ಟಗಳನ್ನು ಗುರುತಿಸಿ ಪ್ರಶಸ್ತಿ ನೀಡಬಹುದು.

ಕಾವೇರಿ ಆರತಿ ಕಾರ್ಯಕ್ರಮವು ಸ್ವಚ್ಛತೆ ಮತ್ತು ಜಲ ಸಂರಕ್ಷಣೆಯ ಜಾಗೃತಿ ಕಾರ್ಯಕ್ರಮವಾಗಿ ಬದಲಾದರೆ ಕನಿಷ್ಠ ಪಕ್ಷ ನಮ್ಮ ಧಾರ್ಮಿಕ ನಂಬಿಕೆಯ ನೆಲೆಯಲ್ಲಾದರೂ ನೀರಿನ ಮೂಲಗಳು ಸ್ವಚ್ಛತೆ ಕಾಣಲು ಸಾಧ್ಯವಿದೆ. ಇದರ ಮುಂದಿನ ಹಂತವಾಗಿ ಮಾಲಿನ್ಯಕ್ಕೆ ಕಾರಣವಾಗುವ ಉದ್ದಿಮೆ ಘಟಕಗಳ ರಾಸಾಯನಿಕ ಮಿಶ್ರಿತ ನೀರು, ಒಳಚರಂಡಿಯ ತ್ಯಾಜ್ಯ ನೀರು, ನಗರಗಳ ತ್ಯಾಜ್ಯ ವಿಲೇವಾರಿಯನ್ನು ತಡೆಗಟ್ಟಿದರೆ ನಮ್ಮಲ್ಲೂ ಸ್ವಚ್ಛ ನೀರನ್ನು ಕಾಣಲು ಸಾಧ್ಯವಿದೆ.

ಇದಾವುದೂ ಇಲ್ಲದೆ ಕಾವೇರಿ ಆರತಿ ಇನ್ನೊಂದು ಧಾರ್ಮಿಕ ಕಾರ್ಯಕ್ರಮವಾದರೆ ಬಾಗಿನದ ನೆಪದಲ್ಲಿ ಹೂವು, ಹಣ್ಣುಗಳ ತ್ಯಾಜ್ಯ ರಾಶಿ ಸೇರಿ ನದಿ ಮತ್ತೊಂದಷ್ಟು ಕಲುಷಿತವಾಗುವುದು ಬಿಟ್ಟರೆ ಮತ್ತೆ ಯಾವ ಉದ್ದೇಶವೂ ಈಡೇರದು. ಇದಕ್ಕಾಗಿ ಸರಕಾರಿ ದುಡ್ಡನ್ನು ಪೋಲು ಮಾಡುವ ಅಗತ್ಯವಿಲ್ಲ.

ಅಭಿಮತ

ಎಚ್.ಆನಂದರಾಮ ಶಾಸ್ತ್ರೀ

ಅನುವಾದದ ಅಪಸವ್ಯ!

ಇಂಗ್ಲಿಷಿನಿಂದ ಕನ್ನಡಕ್ಕೆ ಸಾಫ್ಟ್‌ವೇರ್ ಅನುವಾದಿಸಿ ನೀಡುವ ಅನರ್ಥದಾಯಕ ಪದಗಳನ್ನು ಬಳಸುವ, ಸರಕಾರಿ ವಲಯದ ಹಲವು ಸಂಸ್ಥೆಗಳ ಚೋದ್ಯದ ಕುರಿತು ಈಚೆಗೆ ಪತ್ರಿಕೆಗಳಲ್ಲಿ ಪತ್ರಗಳು ಮತ್ತು ಲೇಖನಗಳು ಪ್ರಕಟವಾಗುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ. ಸಾಫ್ಟ್‌ವೇರ್ ಅನುವಾದದ ಹೊರತಾಗಿಯೂ, ಬೇರೆ ರೀತಿಯ ಹಲವು ತಪ್ಪುಗಳೂ ವಿವಿಧ ಸಂಸ್ಥೆಗಳಲ್ಲಿ ಲಾಗಾಯ್ತಿನಿಂದಲೂ ಆಗುತ್ತಿವೆ.

'ಸರಕಾರಿ ಹೆಣ್ಣುಮಕ್ಕಳ ಹಿರಿಯ/ಕಿರಿಯ ಪ್ರಾಥಮಿಕ ಪಾಠಶಾಲೆ' ಎಂಬ ಫಲಕಗಳನ್ನು ಈ ಹಿಂದೆ ನಾವು ನೋಡುತ್ತಿದ್ದೆವು! ಸಾಕಷ್ಟು ಜನಾಗ್ರಹದ ನಂತರ ಅವು 'ಹೆಣ್ಣುಮಕ್ಕಳ ಸರಕಾರಿ...ಶಾಲೆ' ಆದವು. ಅನುವಾದದ ತಂತ್ರಾಂಶ ಹುಟ್ಟುವ ಮೊದಲೇ ಬೆಂಗಳೂರಿನ ಹೈಕೋರ್ಟ್ ಕಟ್ಟಡದ ಹಣೆಯಮೇಲೆ '...ಉಚ್ಚ ನ್ಯಾಯಾಲಯ' ಎಂಬ ತಪ್ಪು ಪದ ಬಹುಕಾಲ ರಾರಾಜಿಸುತ್ತಿತ್ತು! ಈ ಪದದೋಷ ಉಲ್ಲೇಖಿಸಿ ನಾನು ಬರೆದ ಪತ್ರವು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿ ಕೆಲ ಸಮಯದ ನಂತರವಷ್ಟೇ ಅದು '..ಉಚ್ಚ ನ್ಯಾಯಾಲಯ' ಎಂದು ಸೂಕ್ತವಾಗಿ ತಿದ್ದಲ್ಪಟ್ಟಿತು (ಆ ಸಂದರ್ಭದಲ್ಲಿ ನನ್ನ ಕಿರಿಯ ಸೋದರ ಅಲ್ಲಿ ನ್ಯಾಯಾಧೀಶನಾಗಿ ಇದ್ದುದು ಕಾಕತಾಳೀಯ!). ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಅಧಿಕಾರಿಯಾಗಿ ನಾನು ಕೆಲಸ ಮಾಡುತ್ತಿದ್ದಾಗ, ಇಂಗ್ಲಿಷ್ ಪದಗಳನ್ನು ಕನ್ನಡಕ್ಕೆ ಅನುವಾದಿಸುತ್ತಿದ್ದ

ಅಧಿಕಾರಿಯೋರ್ವರು ಸೂಕ್ತ ಅನುವಾದಕ್ಕಾಗಿ ಹಲವು ಸಲ ನನ್ನನ್ನು ಸಂಪರ್ಕಿಸಿದ್ದುಂಟು. ಈ 3 ಪ್ರಸಂಗಗಳನ್ನು ಏಕೆ ಹೇಳುತ್ತಿದ್ದೇನೆಂದರೆ, ಅನುವಾದದ ವಿಷಯದಲ್ಲಿ, ಸಂಬಂಧಿಸಿದ ಅಧಿಕಾರಿಗಳಿಗೆ ಜವಾಬ್ದಾರಿ, ಇಚ್ಛಾಶಕ್ತಿ ಮತ್ತು ಭಾಷಾಪ್ರೇಮ ಇವು ಮೂರೂ ಇರಬೇಕಾಗುತ್ತದೆ. ಇಲ್ಲದಿದ್ದರೆ, ಅನುವಾದಿತ ಪದವು ಅನೇಕ ಸಂದರ್ಭಗಳಲ್ಲಿ, ಸಾಫ್ಟ್‌ವೇರ್ ಕಕ್ಕಿದ ಅಸಹ್ಯ ಆಗುತ್ತದೆ! ಮೇಲೆ ಹೇಳಿರುವ ಮೂರೂ ಗುಣಗಳನ್ನೂ ನಮ್ಮ ಸರಕಾರಿ ವಲಯದ ಅಧಿಕಾರಿಗಳು ಮೊದಲು ಬೆಳೆಸಿಕೊಳ್ಳಲಿ. ಸಾಫ್ಟ್‌ವೇರ್ ಎಂಬುದು ಭಾಷಾಜ್ಞಾನಿ ಅಲ್ಲ ಎಂಬ ಎಚ್ಚರ ಅವರಲ್ಲಿ ಸದಾ ಜಾಗೃತವಾಗಿರಲಿ. ಇದೇ ಸಂದರ್ಭದಲ್ಲಿ ಇನ್ನೊಂದು ಮಾತು. ಬಹುತೇಕರಿಗೆ ಅರ್ಥವಾಗದ, 'ಅಭಿಯಂತ, ಅಧೀಕ್ಷಕ, ನಿರೀಕ್ಷಕ...' ಇಂಥ ಪದಗಳು ಸರಕಾರಿ ಫಲಕ-ಜಾಹೀರಾತು-ಪ್ರಕಟಣೆಗಳಲ್ಲಿ ಪುಂಖಾನುಪುಂಖವಾಗಿ ಬಳಕೆಯಾಗುತ್ತಿವೆಯಷ್ಟೆ. ಇವುಗಳ ಬದಲು, ಕನ್ನಡವಾಗಿಯೇ ಜನಬಳಕೆಯಲ್ಲಿರುವ ಇಂಗ್ಲಿಷ್ ಮೂಲಪದಗಳನ್ನೇ ಬಳಸಿದರೆ ತಪ್ಪೇನು? ಕನ್ನಡ ಶಬ್ದಕೋಶಕ್ಕೆ ಒಂದಷ್ಟು ಪದಗಳು ಸೇರಿದಂತಾಗುತ್ತದಲ್ಲವೇ? ಅಪ್ಪಟ ಕನ್ನಡದ ಪದಗಳೇ ಬೇಕಿದ್ದರೆ, ಸಂಸ್ಕೃತ ಭಾಷೆಯನ್ನು ಅತಿಯಾಗಿ ಆಶ್ರಯಿಸದೆ, ಆಡುನುಡಿಯ ಸರಳ ಕನ್ನಡ ಪದಗಳನ್ನು ರಚಿಸಬಹುದಲ್ಲ? ಅಂಥ ಹಲವು ಪದಗಳನ್ನು ನಾನು ರಚಿಸಿ ಪ್ರಕಟಿಸಿದ್ದೇನೆ. ಕನ್ನಡ 'ಅಭಿವೃದ್ಧಿ' ಪ್ರಾಧಿಕಾರ, 'ಕನ್ನಡ ಮತ್ತು ಸಂಸ್ಕೃತಿ' ಇಲಾಖೆ, ಹಂಪಿಯ ಕನ್ನಡ ವಿಶ್ವ'ವಿದ್ಯಾ'ಲಯ, ಅನ್ಯಾನ್ಯ ಕಾರಣಗಳಿಗಾಗಿ ಇತ್ತೀಚೆಗೆ ಹೆಚ್ಚು ಸುದ್ದಿಮಾಡುತ್ತಿರುವ ಕನ್ನಡ 'ಸಾಹಿತ್ಯ' ಪರಿಷತ್ತು ಮುಂತಾದವು ಈ ಕೆಲಸ ಮಾಡಬಹುದಲ್ಲ?

(ಲೇಖಕರು ಹಿರಿಯ ಸಾಹಿತಿ)

ಇದೆಂಥ ವಿಚಿತ್ರ ನೋಡಿ, ಸ್ವರ್ಗ ಕೂಡ ಸಾಲದು ಎಂಬ ಸನ್ನಿವೇಶ ಬಂದರೆ !

ಭಾರತ ಮತ್ತು ಪಾಕಿಸ್ತಾನದ ನಡುವಿನ ನಿರಂತರ ಸಂಘರ್ಷದಲ್ಲಿ ಮೂರು ಮಹತ್ವದ ಹಂತಗಳಿವೆ. ಅವು ಕಳೆದ ಎಪ್ಪತ್ತೈದಕ್ಕೂ ಹೆಚ್ಚು ವರ್ಷಗಳಿಂದ ಗಡಿ ಸಂಘರ್ಷದ ರೂಪದಲ್ಲಿ ಲಾವಾ ಉಗುಳಿ ಉಗುಳಿ ಗಟ್ಟಿಯಾಗಿವೆ. ಮೊದಲ ಹಂತವೆಂದರೆ 1947ರ ಅಕ್ಟೋಬರ್ 22ರಂದು ಕಾಶ್ಮೀರದ ಮೇಲೆ ಭಯೋತ್ಪಾದಕರ ಮೂಲಕ ಪಾಕಿಸ್ತಾನ ನಡೆಸಿದ ಅಮಾನುಷ ದಾಳಿ. ಅದು 1948ರ ಜನವರಿ 1ರಂದು ಕದನವಿರಾಮದೊಂದಿಗೆ ಮೇಲ್ನೋಟಕ್ಕೆ ಅಂತ್ಯಗೊಂಡಿತು.



ಅಕ್ಬರ್‌ನಾಮಾ

ಎಂ.ಜೆ.ಅಕ್ಬರ್
vveditoped@gmail.com

ಕಳೆದ ಅರ್ಧ ಶತಮಾನದಿಂದ ಇತಿಹಾಸದ ಮೆಟ್ಟಿಲುಗಳ ಮೇಲೆ ಕುಳಿತಿರುವ ಕೆಲ ಉತ್ತರವಿಲ್ಲದ ಪ್ರಶ್ನೆಗಳನ್ನು ಗಮನಿಸಿದರೆ ಇಂದಿನ ಪಾಕಿಸ್ತಾನದ ಜಗಮೊಂಡತನ ಮತ್ತು ಆ ದೇಶದೊಳಗಿನ ಅಸ್ಥಿರ ಅವ್ಯವಸ್ಥೆಗಳಿಗೆ ಏನು ಕಾರಣ ಎಂಬುದರ ಬಗ್ಗೆ ಒಂದಷ್ಟು ಸುಳಿವುಗಳು ಸಿಗಬಹುದು. ಯಾವುದೇ ವ್ಯವಸ್ಥೆಯನ್ನು ಮೌಲ್ಯಮಾಪನ ಮಾಡಲು 50 ವರ್ಷಗಳ ಹಿಮ್ಮುಖ ಪ್ರಯಾಣ ಬೇಕಾದಷ್ಟಾಯಿತು. 1947ರ ಅಕ್ಟೋಬರ್‌ನಲ್ಲಿ ಪಾಕಿಸ್ತಾನವೇ ಆರಂಭಿಸಿದ ಹಾಗೂ 2047 ರವರೆಗೂ ಮುಂದುವರಿಯಬಹುದಾದ ಯುದ್ಧದ ಸಂದಿಗ್ಧ ಸಂಕೀರ್ಣ ಬೆಳವಣಿಗೆಗಳ ಭಾವನಾತ್ಮಕ ಅಸ್ಥಿರ ಚಿತ್ರಣದ ಹೊರತಾಗಿಯೂ ಒಂದೈವತ್ತು ವರ್ಷಗಳ ಇತಿಹಾಸವನ್ನು ಮೆಲುಕುಹಾಕಿದರೆ ಪಾಕಿಸ್ತಾನದ ಹಣೆಬರಹದ ಮೌಲ್ಯಮಾಪನವನ್ನು ಸುಲಭವಾಗಿ ಮಾಡಬಹುದೆಂದೇ ನನ್ನ ಭಾವನೆ.

ಭಾರತ ಮತ್ತು ಪಾಕಿಸ್ತಾನದ ನಡುವಿನ ನಿರಂತರ ಸಂಘರ್ಷದಲ್ಲಿ ಮೂರು ಮಹತ್ವದ ಹಂತಗಳಿವೆ. ಅವು ಕಳೆದ ಎಪ್ಪತ್ತೈದಕ್ಕೂ ಹೆಚ್ಚು ವರ್ಷಗಳಿಂದ ಗಡಿ ಸಂಘರ್ಷದ ರೂಪದಲ್ಲಿ ಲಾವಾ ಉಗುಳಿ ಉಗುಳಿ ಗಟ್ಟಿಯಾಗಿವೆ. ಮೊದಲ ಹಂತವೆಂದರೆ 1947ರ ಅಕ್ಟೋಬರ್ 22ರಂದು ಕಾಶ್ಮೀರದ ಮೇಲೆ ಭಯೋತ್ಪಾದಕರ ಮೂಲಕ ಪಾಕಿಸ್ತಾನ ನಡೆಸಿದ ಅಮಾನುಷ ದಾಳಿ. ಅದು 1948ರ ಜನವರಿ 1ರಂದು ಕದನವಿರಾಮದೊಂದಿಗೆ ಮೇಲ್ನೋಟಕ್ಕೆ ಅಂತ್ಯಗೊಂಡಿತು. ಆದರೆ ಇವತ್ತಿಗೂ ಅದು ಮತ್ತೆ ಮತ್ತೆ ಹುಟ್ಟಿಬರುತ್ತಿರುವ ರಕ್ತಬೀಜಾಸುರರಂಥ ಭಯೋತ್ಪಾದಕರ ಮೂಲಕ 1947ರ ಅಕ್ಟೋಬರ್‌ನಲ್ಲಿದ್ದಷ್ಟೇ ಚೈತನ್ಯಶೀಲವಾಗಿದೆ, ಜೀವಂತವಾಗಿದೆ.

1965ರ ಶರತ್ಕಾಲದಲ್ಲಿ ಕಾಶ್ಮೀರವನ್ನು ಕಬಳಿಸಲು ಪಾಕಿಸ್ತಾನ ಎರಡನೇ ಯುದ್ಧ ನಡೆಸಿತು. ಅದು ನಾಟಕೀಯವಾಗಿ ಅಂತ್ಯಗೊಂಡಿತು. ಅಲ್ಲದೆ, ಆ ದೇಶದ ಮೊದಲ ಮಿಲಿಟರಿ ಸರ್ವಾಧಿಕಾರಿ ಅಯೂಬ್ ಖಾನ್‌ನ ರಾಜಕೀಯ ವೃತ್ತಿಜೀವನವನ್ನೂ ಅಂತ್ಯಗೊಳಿಸಿತು. ಆತ ತನಗೆ ತಾನೇ ಜನರಲ್ ಹುದ್ದೆಯಿಂದ ಫೀಲ್ಡ್ ಮಾರ್ಷಲ್ ಹುದ್ದೆಗೆ ಬಡ್ತಿ ಕೊಟ್ಟುಕೊಂಡಿದ್ದ. ಬಹುಶಃ ಭಾರತದ ವಿರುದ್ಧ ಮಿಲಿಟರಿ ದಾಳಿಯಲ್ಲಿ ಗೆದ್ದೇಬಿಡುತ್ತೇನೆಂಬ ಭ್ರಮೆಯಿಂದ ಹಾಗೆ ಮಾಡಿದ್ದಿರಬಹುದು. ಆದರೆ, ಪ್ರಧಾನಿ ಲಾಲ್ ಬಹಾದುರ್ ಶಾಸ್ತ್ರಿಯವರು ಭಾರತೀಯ ಸೇನೆಗೆ ಅಂತಾರಾಷ್ಟ್ರೀಯ ಗಡಿ ದಾಟಿ ಲಾಹೋರ್‌ಗೇ ನುಗ್ಗುವಂತೆ ಆದೇಶಿಸಿದಾಗ ಆತನಿಗೆ ಭಾರತದ ತಾಕತ್ತೇನು ಎಂಬುದರ ಆಳವಾದ ಪರಿಚಯವಾಗಿತ್ತು. ಆನಂತರ ಪಾಕಿಸ್ತಾನ ಯಾವತ್ತೂ ಸಾಂಪ್ರದಾಯಿಕ ಯುದ್ಧದ ಮೂಲಕ ಕಾಶ್ಮೀರವನ್ನು ಪಡೆದುಕೊಳ್ಳುವ ದುಸ್ಸಾಹಸಕ್ಕೆ ಕೈಹಾಕಲಿಲ್ಲ.

1971ರ ಯುದ್ಧ ಮಾರ್ಚ್‌ನಲ್ಲಿ ಅಂದಿನ ಪೂರ್ವ ಪಾಕಿಸ್ತಾನದಲ್ಲಿ ಬಂಗಾಳಿಗಳ ಭೀಕರ ಮಾರಣಹೋಮದೊಂದಿಗೆ ಆರಂಭವಾಯಿತು. ಪೂರ್ವ ಪಾಕಿಸ್ತಾನಿಗಳು ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ತ್ಯಾಗ ಮಾಡಲು ಒಪ್ಪದ ಕಾರಣಕ್ಕೆ ಪಾಕಿಸ್ತಾನ ಅವರ ಮೇಲೆ ಯುದ್ಧ ಸಾರಿತ್ತು. ಬರೋಬ್ಬರಿ ಒಂದು ಕೋಟಿ ನಿರಾಶ್ರಿತರು ಪಾಕ್‌ನ ರಾಕ್ಷಸರಿಂದ ಹೇಗೋ ತಪ್ಪಿಸಿಕೊಂಡು ಭಾರತಕ್ಕೆ ಬಂದು ಆಶ್ರಯ ಪಡೆದರು. ನಂತರ ಬಾಂಗ್ಲಾದೇಶ ಅಸ್ತಿತ್ವಕ್ಕೆ ಬರುವುದರೊಂದಿಗೆ ಸಂಘರ್ಷ ಕೊನೆಯಾಯಿತು. 1971ರ ಡಿಸೆಂಬರ್‌ನಲ್ಲಿ ನಡೆದ ಎರಡು ವಾರಗಳ ಭೀಕರ ಯುದ್ಧದಲ್ಲಿ ಪಾಕಿಸ್ತಾನದ ಸೇನೆ ಬಹುತೇಕ ನಿರ್ನಾಮವಾದ ಮೇಲೆಯೇ ಯುದ್ಧ ಕೊನೆಯಾಗಿದ್ದು. ಢಾಕಾದಲ್ಲಿ ಪಾಕಿಸ್ತಾನದ 93,000 ಸೈನಿಕರು ಮತ್ತು ಸೇನಾಧಿಕಾರಿಗಳು ಭಾರತೀಯ ಸೇನೆಯ ದಂಡನಾಯಕರಾದ ಲೆ.ಜ.ಜಗಜಿತ್ ಸಿಂಗ್ ಅರೋರಾ ಮತ್ತು ಲೆ.ಜ.ಜೆಎಫ್ಆರ್ ಜೇಕಬ್ ಮುಂದೆ ಶರಣಾಗಿದ್ದರು.

ಆದರೆ ಒಂದು ಸರಳ ಪ್ರಶ್ನೆಗೆ ಯಾವತ್ತೂ ಉತ್ತರ ಸಿಕ್ಕಿಲ್ಲ: ಆರೋಗ್ಯವಾಗಿದ್ದ ಹಾಗೂ ಸಾಕಷ್ಟು ಶಸ್ತ್ರಾಸ್ತ್ರಗಳನ್ನು ತಮ್ಮಲ್ಲಿಟ್ಟುಕೊಂಡಿದ್ದ 93,000 ಪಾಕಿಸ್ತಾನಿ ಅಧಿಕಾರಿಗಳು ಮತ್ತು ಯೋಧರು ಏಕೆ ಯುದ್ಧ ಮುಂದುವರಿಸದೆ ಅಷ್ಟೊಂದು ಅವಮಾನಕರ ರೀತಿಯಲ್ಲಿ ಭಾರತದ ಮುಂದೆ ಶರಣಾಗುವ ಆಯ್ಕೆಯನ್ನು ಆತುಕೊಂಡರು? ಯುದ್ಧಕ್ಕೆ ಹೋದ ಎಲ್ಲಾ ಸೈನಿಕರೂ ಸಾಯುತ್ತಾರೆಂದು ಯಾರೂ ನಿರೀಕ್ಷಿಸುವುದಿಲ್ಲ. ಆದರೆ ಸೇನೆಯಲ್ಲಿರುವವರು ಯುದ್ಧದಲ್ಲಿ ನಾನು ಕೊನೆಯ ಉಸಿರಿರುವವರೆಗೂ ಹೋರಾಡುತ್ತೇನೆ ಎಂಬ ಕೆಚ್ಚೆದೆಯ ನಿರ್ಧಾರದೊಂದಿಗೇ ಕೆಲಸ ಮಾಡುತ್ತಿರುತ್ತಾರೆ. ಆದ್ದರಿಂದಲೇ ಸಶಸ್ತ್ರ ಪಡೆಗಳಿಗೆ ಅಷ್ಟೊಂದು ಶ್ರೇಷ್ಠ ಸ್ಥಾನವಿದೆ. ಆದರೆ, ಬಾಂಗ್ಲಾದೇಶದ ಜನನಕ್ಕೂ ಮುನ್ನ ಯುದ್ಧದಲ್ಲಿ ಪಾಕಿಸ್ತಾನದ ಈ ಬೃಹತ್ ಪಡೆಯನ್ನು ಭಾರತದ ಸೇನಾಪಡೆಗಳು ಅತ್ಯಂತ ಚಾಣಾಕ್ಷ ಕಾರ್ಯಾಚರಣೆಯಲ್ಲಿ ಹಣ್ಣುಗಾಯಿ ನೀರುಗಾಯಿ ಮಾಡಿದ್ದವು. ಹಾಗಂತ ಪಾಕ್‌ನ ಸೇನೆಗೆ ಯುದ್ಧ ಮುಂದುವರಿಸಲು ಅವಕಾಶವಿತ್ತು. ಆದರೂ ಅದು ಹೇಡಿಗಳಂತೆ ಶರಣಾಯಿತು.

ಏಕೆ ಹೀಗೆ ಎಂಬ ಪ್ರಶ್ನೆಯನ್ನು ಪಾಕಿಸ್ತಾನ ಕೇಳಲಿಲ್ಲ. ಕೇಳಿದ್ದರೆ ಅದರ ಮರ್ಯಾದೆಯೇ ಹೋಗುತ್ತಿತ್ತು. ಭಾರತೀಯರೂ ಕೇಳಲಿಲ್ಲ. ಏಕೆಂದರೆ ಜಯವನ್ನು ಯಾರೂ ಪ್ರಶ್ನೆ ಮಾಡುವುದಿಲ್ಲ.

ಪಾಕಿಸ್ತಾನದ ಸೇನೆ ಮತ್ತು ರಾಜಕೀಯ ನಾಯಕರು ಆ ಯುದ್ಧದ ವಿಷಯದಲ್ಲಿ ಒಗ್ಗಟ್ಟಾಗಿದ್ದರು. ತಮ್ಮ ಸೇನೆ ಪಾಕಿಸ್ತಾನ ಮತ್ತು ಇಸ್ಲಾಮ್‌ಗಾಗಿ ಯುದ್ಧ ಮಾಡುತ್ತಿದೆ ಎಂಬ ಒಂದೇ ಭಾವನೆಯನ್ನು ಅವರಿಬ್ಬರೂ ಹೊಂದಿದ್ದರು. ಆದರೆ, ಜನರಲ್ ಯಾಹ್ಯಾ ಖಾನ್‌ನ ರಕ್ತಸಿಕ್ತ ಕೈಗಳಿಂದ ಅಧಿಕಾರವನ್ನು ಕಿತ್ತುಕೊಂಡಿದ್ದ ರಾಜಕೀಯ ನಿಪುಣ ಜುಲ್ಫಿಕರ್ ಅಲಿ ಭುಟ್ಟೋ ಕೇವಲ 14 ದಿನಗಳಲ್ಲಿ ಯುದ್ಧವನ್ನು ಸೋತ ನಂತರ ವಿಶ್ವಸಂಸ್ಥೆಗೆ ಹೋಗಿ, 'ನಾವು ಸಾವಿರ ವರ್ಷಗಳವರೆಗೆ ಯುದ್ಧ ಮಾಡಲು ಸಿದ್ಧರಿದ್ದೇವೆ' ಎಂದು ಜೋರಾಗಿ ಭಾಷಣ ಬಿಗಿದಿದ್ದರು. ಆ ದೇಶ ಹುಟ್ಟಿದ್ದೇ ಸುಳ್ಳುಗಳ ಮೇಲೆ. ಅವರ ಮಾತಿನಲ್ಲೂ ಅದೇ ಧ್ವನಿಸುತ್ತಿತ್ತು.

1946 ಮತ್ತು 1947ರಲ್ಲಿ ಪಾಕಿಸ್ತಾನವೆಂಬ ಕಾನ್ಸೆಪ್ಟ್‌ಗೆ ಏಕೈಕ ಸೂಚಕ, ಪ್ರೇರಕ ಮತ್ತು ವಕ್ತಾರನಾಗಿದ್ದ ಮೊಹಮ್ಮದ್ ಅಲಿ ಜಿನ್ನಾ ಭಾರತದಿಂದ ಬೇರೆಯಾಗಿ ಪ್ರತ್ಯೇಕ ದೇಶ ಸೃಷ್ಟಿಸಿಕೊಳ್ಳಲು 'ಇಸ್ಲಾಂ ಅಪಾಯದಲ್ಲಿದೆ' ಎಂಬ ಭ್ರಮೆಯನ್ನು ಭಾರತೀಯ ಮುಸ್ಲಿಮರ ತಲೆಯಲ್ಲಿ ತುಂಬಿದ್ದರು. ಭಾರತದಿಂದ ಬೇರೆಯಾದರೆ ಮಾತ್ರ ನಾವು ಉಳಿಯುತ್ತೇವೆಂಬ ನಂಬಿಕೆಯನ್ನು ಕುಲೀನ ಮುಸ್ಲಿಮರಲ್ಲಿ ಹುಟ್ಟುಹಾಕಿದ್ದರು. ಆದರೆ ಧರ್ಮಕ್ಕಿರುವ ಮೌಲ್ಯದ ಚೌಕಟ್ಟಿನಲ್ಲಿ ನೋಡುವುದಾದರೆ ಇಂಥ ನಂಬಿಕೆ ಶುದ್ಧ ಸುಳ್ಳು. ನೀವು ನಿಜವಾದ ಮುಸ್ಲಿಮರೇ ಆಗಿದ್ದರೆ ಇಸ್ಲಾಂ ಅಪಾಯಕ್ಕೆ ಸಿಲುಕುತ್ತದೆ ಎಂಬುದನ್ನು ಯಾವುದೇ ಕಾರಣಕ್ಕೂ ನಂಬುವುದಿಲ್ಲ. ಮುಸ್ಲಿಮರು ಅಪಾಯಕ್ಕೆ ಸಿಲುಕಬಹುದು, ಅದನ್ನೂ ಮುಸ್ಲಿಂ ಸಮುದಾಯ ದೃಢೀಕರಿಸಬೇಕಾಗುತ್ತದೆ.

ಪಾಕಿಸ್ತಾನವೆಂಬ ಐಡಿಯಾ ಅಥವಾ ಕಲ್ಪನೆಗೆ ಯಾವುದೇ ಸಾಮೂಹಿಕ ಚಳವಳಿಯ ಬೆಂಬಲ ಇರಲಿಲ್ಲ. ದೇಶ ವಿಭಜನೆಯ ಕೂಗಿಗೆ ಕೃತಕ ಕೋಮುಗಲಭೆಗಳ ಸೃಷ್ಟಿಯ ಬಳಿಕವಷ್ಟೇ ಬೆಂಬಲ ಲಭಿಸಿತು. ಬ್ರಿಟಿಷ್ ವಸಾಹತುಶಾಹಿಗಳು ಯಾವುದೇ ವಿಷಯವನ್ನು ತಿರುಚುವಲ್ಲಿ ಮಹಾನ್ ಪ್ರಚಂಡರು. ಅವರು 1946ರ ಚುನಾವಣೆಯ ಫಲಿತಾಂಶವನ್ನು ಮುಸ್ಲಿಂ ಅಭಿಪ್ರಾಯದ ಪರಿಣಾಮ ಎಂಬಂತೆ ಬಿಂಬಿಸಿದ್ದರು. ಆದರೆ ಅದೊಂದು ದೊಡ್ಡ ಮೋಸವಾಗಿತ್ತು. ಏಕೆಂದರೆ ತೆರಿಗೆದಾರರಾಗಿದ್ದ ಮೇಲ್ವರ್ಗದ ಶೇ. 10ರಷ್ಟು ಜನರು ಮಾತ್ರ, ಆ ಚುನಾವಣೆಯಲ್ಲಿ ಮತದಾರರಾಗಿದ್ದರು. ದೇಶ ವಿಭಜನೆಯನ್ನು ಬ್ರಿಟಿಷರು ಬಹಳ ಸಂತೋಷದಿಂದಲೇ ಬೆಂಬಲಿಸಿದ್ದರು. ಆದರೆ ಆ ಸಂತೋಷವನ್ನು ಬಚ್ಚಿಟ್ಟುಕೊಂಡಿದ್ದರು. ಅವರಿಗೆ ಸಂತೋಷ ಏಕೆಂದರೆ, ಬ್ರಿಟಿಷ್ ವಸಾಹತುಶಾಹಿಯಿಂದ ಸ್ವಾತಂತ್ರ್ಯಕ್ಕೆ ಪಟ್ಟುಹಿಡಿದು ಪಡೆದುಕೊಂಡ ಮೊದಲ ದೇಶ ಭಾರತವಾಗಿತ್ತು. ಜಿನ್ನಾ ಬಳಿಕ ಬಂದ ಪ್ರತಿಯೊಬ್ಬ ಉತ್ತರಾಧಿಕಾರಿಯೂ ಇಸ್ಲಾಂ ಮತ್ತು ಪಾಕಿಸ್ತಾನ ಒಂದೇ ಎಂಬ ಗಿಣಿಪಾಠವನ್ನೇ ಹೇಳಿದರು. ಇಸ್ಲಾಂ ಉಳಿಸಿಕೊಳ್ಳಲು ಜೀವ ಕೊಡಿ ಎಂದು ಸೇನೆಗೂ ಉಪದೇಶ ಮಾಡಿದರು.

1971ರ ಯುದ್ಧದಲ್ಲೂ ಈ ನಂಬಿಕೆಯೇ ಪಾಕಿಸ್ತಾನದ ಸಶಸ್ತ್ರ ಪಡೆಗಳ ಮೂಲ ಸಿದ್ಧಾಂತವಾಗಿ ಕೆಲಸ ಮಾಡಬೇಕಿತ್ತು. ಆ 93,000 ಯೋಧರು ನಿಜವಾಗಿಯೂ ಯುದ್ಧದಲ್ಲಿ ತಾವು ಹುತಾತ್ಮರಾದರೆ ಸ್ವರ್ಗದಲ್ಲಿ ಶಾಶ್ವತವಾಗಿ ಸ್ಥಾನ ಸಿಗುತ್ತದೆ ಎಂದು ನಂಬಿದ್ದರೆ ಅವರು ಸಾವನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಲಾಹೋರ್ ಅಥವಾ ಸಿಯಾಲ್ಕೋಟ್ ಅಥವಾ ಕರಾಚಿಯ ಕಿಕ್ಕಿರಿದ ರಸ್ತೆಗಳು ಅಥವಾ ಖೈಬರ್ ಪಖ್ತೂನ್‌ಕ್ವಾದ ಹಳ್ಳಿಗಳಿಗಿಂತ ಸ್ವರ್ಗವೇ ಒಳ್ಳೆಯ ಆಯ್ಕೆಯಾಗಿತ್ತು ಬಿಡಿ. ಆದರೆ, ಪಾಕಿಸ್ತಾನದ ಯೋಧರು ಸ್ವರ್ಗದ ತೊರೆಗಳಿಗಿಂತ ತಮ್ಮೂರಿನ ಜನಪ್ರವಾಹವನ್ನೇ ಪರಮಸುಖ ಎಂಬಂತೆ ಆಯ್ಕೆ ಮಾಡಿಕೊಂಡರು. ಮೊಟ್ಟಮೊದಲ ಇಸ್ಲಾಮಿಸ್ಟ್ ಜನರಲ್ (ಇವರ ಹಿಂದಿನ ಜನರಲ್ ಯಾಹ್ಯಾ ಖಾನ್ ದಿನಕ್ಕೊಂದು ಬಾಟಲ್ ಒಳಗಿಳಿಸುತ್ತಿದ್ದರು) ಜಿಯಾ ಉಲ್ ಹಕ್‌ಗೆ ಈ ವೈರುಧ್ಯದ ಅರಿವಿತ್ತು. ಆದರೆ ಎಲ್ಲೂ ಅದನ್ನು ಒಪ್ಪಿಕೊಳ್ಳಲು ಹೋಗಲಿಲ್ಲ. ಅವರು ಪಾಕಿಸ್ತಾನಿ ಸೇನೆಯ ಮುಖ್ಯ ಉದ್ದೇಶವನ್ನು ಇತ್ತೆಹಾದ್, ಯಕೀನ್, ತಂಜಿಮ್ (ಏಕತೆ, ನಂಬಿಕೆ, ಶಿಸ್ತು) ಬದಲು ಇಮಾನ್, ತಕ್ವಾ, ಜಿಹಾದ್ ಫಿ ಸಬಿಲಿಲ್ಲಾಹ್ (ನಂಬಿಕೆ, ದಯೆ, ಪವಿತ್ರ ಯುದ್ಧ) ಎಂಬುದಕ್ಕೆ ಬದಲಿಸಿದರು. ಜನರಲ್ ಜಿಯಾ ಸೇನೆ ನಿಯೋಜಿಸುತ್ತಿದ್ದ ರೀತಿಯಲ್ಲಿ ಪ್ರತಿಯೊಂದು ಸಂಗತಿಗೂ ಇಸ್ಲಾಂ ಧರ್ಮವೇ ಮೂಲಾಧಾರವಾಗಿರುತ್ತಿತ್ತು. ಅದಕ್ಕೂ ಮೊದಲು ಹಾಗೆ ನಂಬಿಸಲಾಗುತ್ತಿತ್ತಷ್ಟೆ, ಆಚರಣೆಯಲ್ಲಿ ಪಾಲಿಸುತ್ತಿರಲಿಲ್ಲ.

93,000 ಯೋಧರ ಪೈಕಿ ಕೇವಲ 20,000 ಸೈನಿಕರು ತಮ್ಮ ಹಳ್ಳಿಯ ಬದಲು ಸ್ವರ್ಗವನ್ನು ಆಯ್ದುಕೊಂಡಿದ್ದರೂ ಡಿಸೆಂಬರ್ 1971ಕ್ಕೆ ಮುಗಿದ ಯುದ್ಧ ಜನವರಿಯವರೆಗೂ ಮುಂದುವರಿಯುತ್ತಿತ್ತು. ಪಾಕಿಸ್ತಾನವೇನೂ ಯುದ್ಧದಲ್ಲಿ ಗೆಲ್ಲುತ್ತಿರಲಿಲ್ಲ, ಆದರೆ ಅದರ ರಾಜಕೀಯ ಪರಿಣಾಮಗಳು ಬೇರೆಯಾಗಿರುತ್ತಿದ್ದವು. ಏಕೆಂದರೆ ಜಗತ್ತು ಆ ಯುದ್ಧ ನಿಲ್ಲಿಸಲು ಏನು ಮಾಡಬೇಕು ಎಂಬುದರ ಬಗ್ಗೆ ವಿಶ್ವಸಂಸ್ಥೆಯಲ್ಲಿ ಚರ್ಚಿಸಲು ಆರಂಭಿಸಿತ್ತು. 1971ರಲ್ಲಿ ವಿಶ್ವಸಂಸ್ಥೆ ಆಗಿನ್ನೂ ಯುವಕನಾಗಿತ್ತು ಮತ್ತು ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿತ್ತು. ಈಗ ಇರುವಂತೆ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ರೀತಿಯಲ್ಲಿ ಇರಲಿಲ್ಲ. ಆದರೆ ಡಿಸೆಂಬರ್ 16ರಂದು ಪಾಕಿಸ್ತಾನ ದಿಢೀರನೆ ಶರಣಾಗಿದ್ದರಿಂದ ವಿಶ್ವಸಂಸ್ಥೆಯಲ್ಲಿ ನಡೆಯುತ್ತಿದ್ದ ಚರ್ಚೆಗಳು ಅರ್ಧದಲ್ಲೇ ನಿಂತುಹೋದವು. ಎಂಬಲ್ಲಿಗೆ, ಯಾವಾಗಲೂ ಆಗುವಂತೆ ಮತ್ತೆ ಮೊದಲಿನ ಸ್ಥಿತಿಯೇ ನೆಲೆಯಾಯಿತು.

ಚೋದ್ಯವೇನೆಂದರೆ, ಭಾರತ-ಪಾಕ್ ನಡುವಿನ ಮೊದಲ ಯುದ್ಧದಲ್ಲೇ ಅಹಿಂಸೆಯ ಪಿತಾಮಹ ಮಹಾತ್ಮ ಗಾಂಧೀಜಿ, ಒಬ್ಬ ಯೋಧನ ಕರ್ತವ್ಯವೇನು ಎಂಬುದನ್ನು ಬಹಳ ಚೆನ್ನಾಗಿ ಹೇಳಿದ್ದರು. ಭಾರತದ ಮೇಲೆ ದಾಳಿ ನಡೆಸುವಂತೆ ಯೋಧರನ್ನು ಜಿನ್ನಾ ಕಳುಹಿಸಿದ ಏಳನೇ ದಿನಕ್ಕೆ ಗಾಂಧೀಜಿ 1947ರ ಅಕ್ಟೋಬರ್ 29ರಂದು ತಮ್ಮ ಪ್ರಾರ್ಥನಾ ಸಭೆಯಲ್ಲಿ, 'ಸಶಸ್ತ್ರ ಪಡೆಗಳ ಸೈನಿಕರ ಕರ್ತವ್ಯವೇನೆಂದರೆ ಎದೆಯುಬ್ಬಿಸಿ ಮುಂದಕ್ಕೆ ನುಗ್ಗುವುದು ಮತ್ತು ಶತ್ರುವಿನ ಮೇಲೆ ದಾಳಿ ನಡೆಸುವುದು. ಅವರು ಹೋರಾಡುತ್ತಾ ಸಾಯುತ್ತಾರೆಯೇ ಹೊರತು ಯಾವತ್ತೂ ತಿರುಗಿ ಓಡುವುದಿಲ್ಲ...' ಎಂದು ತಿಳಿಸಿದ್ದರು. ಪಾಕಿಸ್ತಾನಿ ಪ್ರಾಯೋಜಿತ ಭಯೋತ್ಪಾದಕರನ್ನು ಅವರು ಉಪದ್ವ್ಯಾಪಿಗಳು ಮತ್ತು ತಂಟೆಕೋರರು ಎಂದು ಕರೆದಿದ್ದರು. 1948ರ ಜನವರಿ 27ರಂದು ಗಾಂಧೀಜಿಯವರು ಬ್ರಿಟಿಷ್ ಪತ್ರಕರ್ತ ಕಿಂಗ್‌ಸ್ಲೇ ಮಾರ್ಟಿನ್‌ಗೆ 'ಭಾರತ ಸರಕಾರ ತನ್ನ ದೇಶವನ್ನು ರಕ್ಷಿಸಿಕೊಳ್ಳುವ ಸಂದರ್ಭ ಬಂದಾಗ ಅಹಿಂಸೆಯ ಮಂತ್ರ ಜಪಿಸುತ್ತಾ ಕೂರಲು ಸಾಧ್ಯವಿಲ್ಲ' ಎಂದು ಸ್ಪಷ್ಟವಾಗಿ ಹೇಳಿದ್ದರು.

ನನ್ನ ಊಹೆಯಿದು. 93,000 ಸೈನಿಕರು ಮತ್ತು ಅಧಿಕಾರಿಗಳು ಯುದ್ಧ ಮುಂದುವರಿಸಿ ಜೀವವನ್ನು ಅಪಾಯಕ್ಕೊಡ್ಡಲು ಏಕೆ ಮುಂದಾಗಲಿಲ್ಲವೆಂದರೆ ಅವರಿಗೆ ಜಿಹಾದ್‌ನಲ್ಲಾಗಲೀ ಪಾಕಿಸ್ತಾನದಲ್ಲಾಗಲೀ ನಂಬಿಕೆಯಿರಲಿಲ್ಲ. ಪಾಕಿಸ್ತಾನಕ್ಕಾಗಿ ಸಾಯುವುದರಲ್ಲಿ ಅರ್ಥವಿಲ್ಲ ಎಂದು ಅವರು ನಂಬಿದ್ದರು. 1971ರ ಯುದ್ಧದಲ್ಲಿ ಅವರು ಅನುಭವಿಸಿದ ನೋವು ಮತ್ತು ಅವಮಾನ ಯಾವ ತೆರನದ್ದಾಗಿತ್ತು ಅಂದರೆ, ಪಾಕಿಸ್ತಾನ ಮತ್ತೆಂದೂ ನೇರವಾಗಿ ಯುದ್ಧಕ್ಕೆ ಬರಲೇ ಇಲ್ಲ. ಆ ಸೋಲಿನ ಬಳಿಕ ಪಾಕಿಸ್ತಾನದ ಸೇನೆಯು ತನ್ನ ಸೇನಾಪಡೆಗಳು ಯುದ್ಧಭೂಮಿಯಲ್ಲಿ ಇರುವುದರ ಬದಲು ತಂತಿಬೇಲಿಯ ಒಳಗೆ ಹಾಗೂ ಬ್ಯಾರಕ್‌ನಲ್ಲೇ ಸುರಕ್ಷಿತವಾಗಿ ಇರುತ್ತವೆ ಎಂದು ನಿರ್ಧರಿಸಿತು. ಪರಿಣಾಮ, ಯುದ್ಧವನ್ನು ಭಯೋತ್ಪಾದಕರಿಗೆ ಹೋಲ್‌ಸೇಲಾಗಿ ಹೊರಗುತ್ತಿಗೆ ನೀಡಿತು.

ಆಧುನಿಕ ಭಯೋತ್ಪಾದನೆಯನ್ನು ಪಾಕಿಸ್ತಾನ ಹುಟ್ಟುಹಾಕಿದ್ದು 1947ರಲ್ಲಿ. ದೇಶ ವಿಭಜನೆಯಾಗಿ, ಭಾರತ ಮತ್ತು ಪಾಕಿಸ್ತಾನ ಸೃಷ್ಟಿಯಾದ ಬೆನ್ನಲ್ಲೇ 5,000 ಭಯೋತ್ಪಾದಕರನ್ನು ಕಾಶ್ಮೀರದಲ್ಲಿ ದಂಗೆ, ಲೂಟಿ, ಕೊಲೆ ಮತ್ತು ಅತ್ಯಾಚಾರ ನಡೆಸಲು ಸೂಚಿಸಿ ಛೂಬಿಟ್ಟಿತ್ತು. ಆದರೆ 1947 ಮತ್ತು 1965ರಲ್ಲಿ ಇದು ಯುದ್ಧದ ಆರಂಭಿಕ ಹಂತದಲ್ಲಿ ಮಾತ್ರ ನಡೆಯುತ್ತಿತ್ತು. ನಂತರ ನಿಜವಾದ ಸೈನಿಕರು ಕಾಶ್ಮೀರದತ್ತ ಧಾವಿಸಿ ರಣರಂಗಕ್ಕೆ ಇಳಿಯುತ್ತಿದ್ದರು. ಸರಕಾರವನ್ನು ಬೀಳಿಸಿ ದಂಗೆಯ ಮೂಲಕ ಪಾಕಿಸ್ತಾನದ ಆಡಳಿತದ ಚುಕ್ಕಾಣಿ ಹಿಡಿದ ಜನರಲ್ ಜಿಯಾ ಉಲ್ ಹಕ್ ಭಯೋತ್ಪಾದನೆಯೆಂಬ ಅನೈತಿಕ ಮತ್ತು ಷಂಡರ ಸಿದ್ಧಾಂತವನ್ನೇ ತನ್ನ ಸೇನೆಯ ಪ್ರಧಾನ ರಣತಂತ್ರವನ್ನಾಗಿ ಮಾಡಿಬಿಟ್ಟಿದ್ದರು. ಭಯೋತ್ಪಾದಕರಿಗೆ ಸೇನೆಯ ನೆರವು ಮತ್ತು ಹಣಕಾಸಿನ ನೆರವು ನೀಡಿ, ಭಾರತವನ್ನು ದುರ್ಬಲಗೊಳಿಸಲು ಅಟ್ಟುತ್ತಿದ್ದರು. ಅವರ ದಾಳಿಯಿಂದ ವಾಯವ್ಯ ಭಾರತ ದುರ್ಬಲವಾಗುತ್ತದೆ, ಕ್ರಮೇಣ ಅದನ್ನು ತಾನು ವಶಪಡಿಸಿಕೊಳ್ಳಬಹುದು ಎಂಬ ಭ್ರಮೆ ಅವರಿಗಿತ್ತು. ಆತನ ಅತ್ಯಂತ ಮಹತ್ವಾಕಾಂಕ್ಷಿ ಕಾರ್ಯಾಚರಣೆ ಕಾರ್ಗಿಲ್ ಭಯೋತ್ಪಾದಕ ದಾಳಿಯಾಗಿತ್ತು. ಅದರಲ್ಲಿ ವಿಫಲಗೊಂಡ ಬಳಿಕವೂ ಪಾಕ್‌ನ ಕೊಲ್ಲುವ ಆಟ ನಿಂತಿಲ್ಲ, ಬೇರೆ ಬೇರೆ ಫಲಿತಾಂಶವನ್ನು ಪಡೆಯುವ ನಿರೀಕ್ಷೆಯಲ್ಲಿ ಪಾಕಿಸ್ತಾನ ಒಂದೇ ಹುಚ್ಚಾಟವನ್ನು ನಿರಂತರವಾಗಿ ನಡೆಸುತ್ತಾ ಬಂದಿದೆ. ಇಂಥ ಹುಚ್ಚಾಟ ಅದಕ್ಕೊಂದು ಚಟವೇ ಆಗಿಬಿಟ್ಟಿದೆ.

ಅಣ್ವಸ್ತ್ರಗಳನ್ನು ಪಡೆದುಕೊಂಡ ಮೇಲಂತೂ ಪಾಕ್‌ನ ಭ್ರಮೆ ಇನ್ನೊಂದು ಹಂತಕ್ಕೆ ಏರಿಕೆಯಾಗಿದೆ. ಅಣ್ವಸ್ತ್ರ ಪರೀಕ್ಷೆಯಲ್ಲಿ ಯಶಸ್ವಿಯಾದ ಮೇಲೆ ಅಲ್ಲಿನ ಮಿಲಿಟರಿ ಕಾರಿಡಾರ್‌ಗಳಲ್ಲಿ ಭಯೋತ್ಪಾದನೆಯ ಅಧಿಕೃತ ಸಿದ್ಧಾಂತಕ್ಕೆ ಹೊಸ ಚೈತನ್ಯ ಬಂದಿತ್ತು. ಆದರೆ, ಅಣ್ವಸ್ತ್ರವಿದೆ ಎಂದು ಬ್ಲ್ಯಾಕ್‌ಮೇಲ್ ಮಾಡಿದರೆ ಭಾರತ ಸೊಪ್ಪು ಹಾಕುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ತೀಕ್ಷ್ಣವಾಗಿ ಹೇಳಿದ ಮೇಲೆ ಆ ವಿಷಯದಲ್ಲಿದ್ದ ಗೊಂದಲವೂ ಪಾಕ್‌ನ ಮಸ್ತಿಷ್ಕದಿಂದ ದೂರವಾದಂತಾಗಿದೆ.

ಈಗಲೂ ಯುದ್ಧದ ಕಾರ್ಮೋಡ ಇನ್ನೂ ಸಂಪೂರ್ಣ ಸರಿದಿಲ್ಲ. ಆದರೆ, ಪಾಕಿಸ್ತಾನ ನಲುಗಿಹೋಗಿದೆ ಎಂಬುದಕ್ಕೆ ಸಾಕಷ್ಟು ಅಧಿಕೃತ ವರದಿಗಳಿವೆ. ಪಾಕಿಸ್ತಾನದ ಅಣ್ವಸ್ತ್ರಗಳು ಇರುವ ಪ್ರದೇಶದ ಪಕ್ಕದಲ್ಲೇ ನೂರ್ ಖಾನ್ ವಾಯುನೆಲೆಯ ಮೇಲೆ ಭಾರತ ಕರಾರುವಾಕ್ಕು ಕ್ಷಿಪಣಿ ದಾಳಿ ನಡೆಸಿದ ಮೇಲೆ ವಾಷಿಂಗ್ಟನ್ ಕೂಡ ಕಂಗಾಲಾಗಿದೆ. ಹೀಗಾಗಿ ಎಲ್ಲರೂ ಸೇರಿ ಕದನವಿರಾಮಕ್ಕಾಗಿ ಓಡಿಬಂದಿದ್ದಾರೆ. ಪಾಕ್‌ನ ನಡುಕ ಇನ್ನೂ ನಿಂತಿಲ್ಲ. ಆ ದೇಶಕ್ಕಾದ ಗಾಯಗಳನ್ನು ಉಪಗ್ರಹದ ಚಿತ್ರಗಳು ತೋರಿಸುತ್ತಿವೆ. ಸರ್ಗೋಧಾ ಪ್ರದೇಶದಲ್ಲಿ ವಿಕಿರಣಶೀಲತೆ ಹೆಚ್ಚಾಗಿದೆ ಎಂಬ ವರದಿಗಳೂ ಇವೆ. ಭಾರತೀಯ ಉಪಖಂಡವು ಹಿಂದೆಂದಿಗಿಂತ ತೀಕ್ಷ್ಣವಾದ ಅನಾಹುತದತ್ತ ಸಾಗುತ್ತಿರುವ ಸುಳಿವುಗಳಿವೆ ಎಂದು ಅಮೆರಿಕದ ಗುಪ್ತಚರ ಸಂಸ್ಥೆಗಳು ಪೆಂಟಗನ್‌ಗೆ ವರದಿ ನೀಡಿದ ಮೇಲೆ ಬೇರೆ ದಾರಿಯೇ ಇಲ್ಲದೆ ಇಸ್ಲಾಮಾಬಾದ್ ಮತ್ತು ದೆಹಲಿಗೆ, ವಾಷಿಂಗ್ಟನ್ ಫೋನ್ ಕೈಗೆತ್ತಿಕೊಂಡಿದೆ. ಯುದ್ಧೋನ್ಮಾದದಿಂದ ರೂಪುಗೊಂಡ ಸಾರ್ವಜನಿಕ ಅಭಿಪ್ರಾಯವೇ ಸೇಡಿನ ಸ್ಪರ್ಧೆಯ ಜಡ್ಜ್ ಆಗಿಬಿಟ್ಟರೆ ಪ್ರಥಮ ಯಾರು ಮತ್ತು ದ್ವಿತೀಯ ಯಾರು ಎಂಬುದನ್ನು ಹೇಳುವುದು ಕಷ್ಟ. ಒಂದೇ ಒಂದು ತಪ್ಪು ಲೆಕ್ಕಾಚಾರ ಕೂಡ ಆರ್ಮಗೆಡನ್‌ನಂಥ ಭಯಾನಕ ದುಷ್ಪರಿಣಾಮವನ್ನು ಸೃಷ್ಟಿಸಬಲ್ಲದು.

ಯುದ್ಧವನ್ನು ಶುರುಮಾಡುವುದು ಯುದ್ಧವನ್ನು ಮುಗಿಸುವುದಕ್ಕಿಂತ ಬಹಳ ಸುಲಭ. ಪಾಕಿಸ್ತಾನ ಯುದ್ಧ ಶುರು ಮಾಡಿದೆ. ಬಳಿಕ ಅದಕ್ಕೆ ಭಾರತದಲ್ಲಿ ಉಕ್ಕಿನ ನರಗಳ ನಾಯಕನಿದ್ದಾನೆ ಎಂಬುದು ಗೊತ್ತಾಗಿದೆ. ತಾನು ಬಳಸುವ ಕೋಮುವಾದಿ ಭಯೋತ್ಪಾದನೆಯ ದಾಳದಿಂದ ಯಾವುದೇ ಪ್ರಯೋಜನವಿಲ್ಲ ಎಂಬ ಸತ್ಯವನ್ನು ಪಾಕಿಸ್ತಾನ ಒಪ್ಪಿಕೊಂಡಿದೆ. ಭಯೋತ್ಪಾದನೆ ಹೀಗೇ ಉಳಿಯಬಹುದು, ಆದರೆ ಆಪರೇಷನ್ ಸಿಂದೂರ್ ಬಳಿಕ ಅದರ ಪರಿಣಾಮಗಳು ಬೇರೆಯಾಗಿವೆ.

ಯೋಚನೆ ಕೂಡ ಮಾಡಲು ಆಗದ ವಿಚಾರವೇ ವಾಸ್ತವವಾಗುವುದನ್ನು ತಪ್ಪಿಸಬೇಕು ಅಂದರೆ ನೀವು ಅದನ್ನು ಯೋಚನೆ ಮಾಡುವಂಥ ವಿಚಾರವನ್ನಾಗಿಸಬೇಕು. ಪ್ರಧಾನಿ ಮೋದಿ ಅದನ್ನೇ ಮಾಡಿದ್ದಾರೆ.

ಈವರೆಗೆ ಬಹಳ ಸಹಜ ಎಂಬಂತೆ ಪರಿಗಣಿಸಲ್ಪಡುತ್ತಿದ್ದ ಸಾಂಪ್ರದಾಯಿಕ ಮಾನದಂಡಗಳು ಕೂಡ ಈಗ ಬದಲಾಗಿವೆ. ಹೊಸ ನಾರ್ಮಲ್ ಈಗ ನಿಧಾನವಾಗಿ ರೂಪ ತಳೆಯುತ್ತಿದೆ. ನೀರಿನ ರಣತಂತ್ರ ಬೈಬಲ್‌ನಷ್ಟೇ ಹಳೆಯದು. ಹಳೆಯ ಒಡಂಬಡಿಕೆಯಲ್ಲಿ ಬರುವ ಒಳ್ಳೆಯ ರಾಜರಲ್ಲಿ ಒಬ್ಬನಾದ ಜುಡಾದ ಹೆಜೆಕಿಯಾ ರಾಜನು ಸುಮಾರು 2700 ವರ್ಷಗಳ ಹಿಂದೆಯೇ ಅಸಿರಿಯನ್ಸ್‌ಗಳಿಗೆ ನೀರು ಹರಿಯದಂತೆ ನದಿಯನ್ನು ನಿಲ್ಲಿಸಿದ್ದನು. ಮೋದಿ ಸಿಂಧೂ ನದಿಯ ಬಗ್ಗೆ ಹೇಳಿರುವುದೂ ಇದನ್ನೇ. 'ಭಾರತದ ನೀರು ಭಾರತೀಯರ ಅನುಕೂಲಕ್ಕೆ ಹರಿಯುತ್ತದೆ. ಅದನ್ನು ಭಾರತದ ಅನುಕೂಲಕ್ಕಾಗಿ ಉಳಿಸಿಕೊಳ್ಳಲಾಗುತ್ತದೆ. ಅದನ್ನು ಭಾರತದ ಅಭಿವೃದ್ಧಿಗೆ ಬಳಸಲಾಗುತ್ತದೆ' ಎಂದು ಅವರು ಹೇಳಿದ್ದಾರೆ. ನೀರೆಂಬುದು ಮೃದುವಾದ ಶಕ್ತಿಯಲ್ಲ, ಅದು ಬಹಳ ಗಟ್ಟಿಯಾದ ಮತ್ತು ತುಂಬಾ ತೀಕ್ಷ್ಣವಾದ ಅಸ್ತ್ರ. ಕಾಕತಾಳೀಯವೆಂಬಂತೆ, ಸಾಫ್ಟ್ ಪವರ್ ಎಂಬ ಪದವನ್ನು ಸೃಷ್ಟಿಸಿದ ವ್ಯಕ್ತಿ ಜೋಸೆಫ್ ನಿಯೆ ಇತ್ತೀಚೆಗಷ್ಟೇ ತೀರಿಕೊಂಡರು. ಇಲ್ಲಿಯವರೆಗೆ ಸಾಫ್ಟ್ ಪವರ್ ಎಂಬುದು ಜಾಗತಿಕ ಆರ್ಥಿಕತೆಯ ನಾಟಕ ರಂಗದಲ್ಲಿ ನಡೆಯುವ ವ್ಯಾಪಾರದ ಚೌಕಾಸಿಗಷ್ಟೇ ಸೀಮಿತವಾಗಿತ್ತು.

ಇತಿಹಾಸಕ್ಕೆ ತಾಳ್ಮೆಯಿದೆ. ಅಪಾಯಕಾರಿ ಸಂದಿಗ್ಧದ ಡಿಎನ್‌ಎ ಕುರಿತು ಪ್ರಶ್ನೆ ಕೇಳಲು ಅದು ತನ್ನದೇ ಆದ ಸಮಯವನ್ನು ತೆಗೆದುಕೊಳ್ಳಬಹುದು. ಆದರೆ, ಅದು ಉತ್ತರವನ್ನು ಮಾತ್ರ ಪಡೆದೇ ತೀರುತ್ತದೆ.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 127

ಸಮಾಚಾರ ಸಣ್ಣದಲ್ಲ

ರೈಲು ಹಳಿ ತಪ್ಪಿಸಲು ಸಂಚು: ತಪ್ಪಿದ ದುರಂತ

ಲಖನೌ: ಉತ್ತರ ಪ್ರದೇಶದಲ್ಲಿ ಕೆಲ ದುಷ್ಕರ್ಮಿಗಳು ರೈಲುಗಳನ್ನು ಹಳಿ ತಪ್ಪಿಸಲು ಪ್ರಯತ್ನವನ್ನು ಮತ್ತೆ ಆರಂಭಿಸಿದ್ದಾರೆ. ಹರ್ದೋಯ್ ಜಿಲ್ಲೆಯಲ್ಲಿನ ದಲೇಲ್ ನಗರ ಮತ್ತು ಉಮರ್ ತಾಲಿ ನಿಲ್ದಾಣಗಳ ನಡುವೆ ರೈಲು ಹಳಿಗೆ ವಿದ್ಯುತ್ ತಂತಿ ಬಳಸಿ ಮರದ ದಿಮ್ಮಿಗಳನ್ನು ಕಟ್ಟಿದ್ದಾರೆ. ಆ ಮೂಲಕ ರಾಜಧಾನಿ ಎಕ್ಸ್‌ಪ್ರೆಸ್ ರೈಲುಗಾಡಿಯ ಹಳಿ ತಪ್ಪಿಸಲು ಸಂಚು ಹೂಡಿದ್ದಾರೆ. ಸುದೈವವಶಾತ್ ರೈಲಿನ ಲೋಕೊ ಪೈಲಟ್, ಮರದ ದಿಮ್ಮಿ ಹಳಿ ಮೇಲೆ ಇರುವುದನ್ನು ದೂರದಿಂದಲೇ ಗಮನಿಸಿ ತಕ್ಷಣವೇ ರೈಲುಗಾಡಿಗೆ ಬ್ರೇಕ್ ಹಾಕಿದ್ದರಿಂದ ದೊಡ್ಡ ಅವಘಡ ತಪ್ಪಿದೆ. ದೆಹಲಿಯಿಂದ ಅಸ್ಸಾಂನ ದಿಬ್ರೂಗಢಕ್ಕೆ ಸಂಚರಿಸುತ್ತಿದ್ದ ರಾಜಧಾನಿ ಎಕ್ಸ್‌ಪ್ರೆಸ್ ಮಾತ್ರವಲ್ಲದೇ ಇದೇ ಮಾರ್ಗದಲ್ಲಿ ಇನ್ನೂ ಎರಡು ರೈಲುಗಳು ಸಂಚರಿಸಲಿದ್ದವು. ಲೋಕೊ ಪೈಲಟ್ ಸಮಯಪ್ರಜ್ಞೆಯಿಂದ ಮೂರೂ ರೈಲುಗಳು ಅವಘಡಕ್ಕೀಡಾಗುವುದು ತಪ್ಪಿದಂತಾಗಿದೆ.

ಸರ್ವಪಕ್ಷ ನಿಯೋಗಕ್ಕೆ ಟಿಎಂಸಿಯ ಅಭಿಷೇಕ್

ದೆಹಲಿ: ಪಾಕಿಸ್ತಾನದ ಗಡಿಯಾಚೆಗಿನ ಭಯೋತ್ಪಾದನೆ, ಭಾರತ ನಡೆಸಿದ ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆ ಬಗ್ಗೆ ವಿವಿಧ ದೇಶಗಳಿಗೆ ಮಾಹಿತಿ ನೀಡುವುದಕ್ಕಾಗಿ ತೆರಳಲಿರುವ 'ಸರ್ವಪಕ್ಷ ನಿಯೋಗ'ಕ್ಕೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದಿಂದ ಸಂಸದ ಅಭಿಷೇಕ್ ಬ್ಯಾನರ್ಜಿ ಸೇರ್ಪಡೆಗೊಳ್ಳುವುದು ಖಚಿತವಾಗಿದೆ. ಈ ಸಂಬಂಧ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಮಂಗಳವಾರ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಜತೆ ಚರ್ಚೆ ನಡೆಸಿದ ಬಳಿಕ ಈ ನಿರ್ಧಾರಕ್ಕೆ ಬರಲಾಗಿದೆ. ಅಭಿಷೇಕ್ ಬ್ಯಾನರ್ಜಿ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸೋದರಳಿಯ. ಈ ಮೊದಲು ಸರ್ವಪಕ್ಷ ನಿಯೋಗಕ್ಕೆ ಟಿಎಂಸಿಯಿಂದ ಸಂಸದ ಯೂಸೂಫ್ ಪಠಾಣ್ ನಿಯೋಜನೆಗೊಳ್ಳಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿತ್ತು. ಆದರೆ ನಿಯೋಗದಲ್ಲಿ ಟಿಎಂಸಿ ಭಾಗಿಯಾಗದು ಎಂದು ಪಕ್ಷದ ಮುಖಂಡರು ಮೇ 19ರಂದು ಹೇಳಿದ ಬಳಿಕ ಈ ಬದಲಾವಣೆ ಮಾಡಲಾಗಿದೆ.

ತ.ನಾಡು ಕಲ್ಲು ಕ್ವಾರಿ: ಬಂಡೆ ಕುಸಿದು 5 ಸಾವು

ಶಿವಗಂಗಾ: ತಮಿಳುನಾಡು ರಾಜ್ಯದ ಶಿವಗಂಗಾ ಜಿಲ್ಲೆಯ ಸಿಂಗಂಪುನಾರಿ ಬಳಿಯ ಮಲ್ಲಕೊಟ್ಟೈನಲ್ಲಿನ ಕಲ್ಲು ಕ್ವಾರಿಯೊಂದರಲ್ಲಿ ಮಂಗಳವಾರ ಬಂಡೆಗಳು ಕುಸಿದ ಪರಿಣಾಮ ಐವರು ಕಾರ್ಮಿಕರು ಸಾವಿಗೀಡಾಗಿ, ಇಬ್ಬರು ಗಾಯಗೊಂಡಿದ್ದಾರೆ. ಕುಸಿದ ಬಂಡೆಗಳಡಿ ಹಲವು ಕಾರ್ಮಿಕರು ಸಿಲುಕಿಕೊಂಡಿದರು. ಅಗ್ನಿಶಾಮಕ ದಳ ಮತ್ತು ರಕ್ಷಣಾ ಸೇವಾ ಸಿಬ್ಬಂದಿ ಬಂಡೆಗಳನ್ನು ತೆರವುಗೊಳಿಸಿ ಕಾರ್ಮಿಕರನ್ನು ರಕ್ಷಿಸಲು ಶ್ರಮಿಸಿದರು. ಆದರೆ, ಒಬ್ಬ ಕಾರ್ಮಿಕ ಸ್ಥಳದಲ್ಲೇ ಸಾವಿಗೀಡಾಗಿದ್ದರೆ, ಇಬ್ಬರು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಅಸು ನೀಗಿದರು. ಗಂಭೀರವಾಗಿ ಗಾಯಗೊಂಡಿರುವ ಇಬ್ಬರನ್ನು ಮಧುರೈ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ರಾತ್ರಿಯಿಡೀ ಬಿದ್ದ ಮಳೆಗೆ ಬಂಡೆಗಳಡಿಯ ಮಣ್ಣು ಕರಗಿರಬಹುದು. ಜತೆಗೆ ಸ್ಫೋಟಕ ಬಳಸಿ ಬಂಡೆಗಳನ್ನು ಸಿಡಿಸಲಾಗಿದೆ. ಪರಿಣಾಮ ಬಂಡೆಗಳು ದಿಢೀರ್ ಎಂಬಂತೆ ಕುಸಿದಿವೆ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಮಾಸಾಂತ್ಯ ಸೇನೆ ವಾಪಸ್ ಭಾರತ-ಪಾಕ್ ಸಹಮತ?

ದೆಹಲಿ: ಭಾರತ-ಪಾಕಿಸ್ತಾನ ನಡುವೆ ಇತ್ತೀಚೆಗೆ ನಡೆದ ಸೇನಾ ಸಂಘರ್ಷದ ಸಂದರ್ಭ ಎರಡೂ ದೇಶಗಳ ಗಡಿ ಭಾಗಗಳಲ್ಲಿ ನಿಯೋಜನೆಗೊಂಡಿದ್ದ ಸೇನಾ ಪಡೆಗಳನ್ನು ಮೇ ಮಾಸಾಂತ್ಯಕ್ಕೆ ಮುನ್ನವೇ ಹಿಂತೆಗೆದುಕೊಳ್ಳಲು ಎರಡೂ ದೇಶಗಳ ಸರಕಾರಗಳು ಒಪ್ಪಿಕೊಂಡಿವೆ ಎಂದು ಪಾಕ್‌ನ ಹಿರಿಯ ಭದ್ರತಾ ಅಧಿಕಾರಿ ಮಂಗಳವಾರ ಸುದ್ದಿಸಂಸ್ಥೆ 'ಎಎಫ್‌ಪಿ'ಗೆ ತಿಳಿಸಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇ 10ರ ಸಂಜೆ 5ಗಂಟೆಯಲ್ಲಿ ಅನಿರೀಕ್ಷಿತವಾಗಿ ಎರಡೂ ದೇಶಗಳು ಕದನ ವಿರಾಮಕ್ಕೆ ಒಪ್ಪಿಕೊಂಡಿವೆ ಎಂದು ಜಾಲತಾಣದಲ್ಲಿ ಘೋಷಿಸಿದ ನಂತರ ಭಾರತ-ಪಾಕ್ ನಡುವಿನ ಸೇನಾ ಕಾರ್ಯಾಚರಣೆ ದಿಢೀರ್ ರದ್ದಾಯಿತು. ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏ.22ರಂದು ನಡೆದ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಭಾರತ 'ಆಪರೇಷನ್ ಸಿಂದೂರ' ಹೆಸರಲ್ಲಿ ಸೇನಾ ಕಾರ್ಯಾಚರಣೆ ನಡೆಸಿತ್ತು. 4 ದಿನ ಭಾರತ-ಪಾಕ್ ನಡುವೆ ಸೇನಾ ಸಂಘರ್ಷ ನಡೆದಿತ್ತು.

{ಉದ್ಧವ್ ಠಾಕ್ರೆ } ಶಿವಸೇನೆ(ಯುಬಿಟಿ)

ಪಾಕಿಸ್ತಾನದ ಗಡಿಯಾಚೆ ಭಯೋತ್ಪಾದನೆ ಬಗ್ಗೆ ವಿಶ್ವಕ್ಕೆ ತಿಳಿಸಲು ವಿವಿಧ ದೇಶಗಳಿಗೆ ತೆರಳುವ ಭಾರತದ ಸರ್ವಪಕ್ಷ ನಿಯೋಗದಲ್ಲಿ ಭಾಗಿಯಾಗುತ್ತೇವೆ. ರಾಷ್ಟ್ರೀಯ ಹಿತಾಸಕ್ತಿಯಿಂದ ಬೆಂಬಲಿಸುತ್ತೇವೆ. ಕೇಂದ್ರ ಸಚಿವ ಕಿರಣ್ ರಿಜಿಜು ಕರೆ ಮಾಡಿ ಮಾತನಾಡಿದ ಬಳಿಕ ಈ ತೀರ್ಮಾನಕ್ಕೆ ಬರಲಾಗಿದೆ. ಆದರೆ, ನಿಯೋಗ ರಚನೆಗೆ ಸರಕಾರ 'ಶಿಷ್ಟಾಚಾರ' ಪಾಲಿಸಬೇಕು.

ರಷ್ಯಾ-ಉಕ್ರೇನ್ ಕದನ ವಿರಾಮ ಚರ್ಚೆ ತಕ್ಷಣ ಶುರು: ಟ್ರಂಪ್ | ಪುಟಿನ್ ಜತೆಗೆ 2 ಗಂಟೆ ಕಾಲ ಟ್ರಂಪ್ ದೂರವಾಣಿ ಮಾತುಕತೆ

ಕದನ ವಿರಾಮಕ್ಕೆ ಟ್ರಂಪ್ ಉತ್ಸುಕ, ಆದರೆ, ಪುಟಿನ್ ಮಂದಗತಿ | ಕದನ ವಿರಾಮ ಮಾತುಕತೆಗೆ ವ್ಯಾಟಿಕನ್ ಸೂಕ್ತ ಸ್ಥಳ: ಟ್ರಂಪ್

ರಷ್ಯಾ-ಉಕ್ರೇನ್ ಯುದ್ಧ ಶೀಘ್ರವೇ ಅಂತ್ಯ: ಟ್ರಂಪ್

ವಾಷಿಂಗ್ಟನ್: ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಶೀಘ್ರವೇ ಕೊನೆಗೊಳ್ಳಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಸೋಮವಾರ ದೂರವಾಣಿ ಕರೆ ಮಾಡಿದ್ದ ಟ್ರಂಪ್, 2 ಗಂಟೆಗೂ ಹೆಚ್ಚು ಕಾಲ ಮಾತುಕತೆ ನಡೆಸಿದ್ದಾರೆ. 'ನಮ್ಮ ನಡುವಿನ ಮಾತುಕತೆ ಬಹಳ ಫಲಪ್ರದವಾಗಿತ್ತು. ರಷ್ಯಾ-ಉಕ್ರೇನ್ ತಕ್ಷಣ ಕದನ ವಿರಾಮ ಕುರಿತು ಮಾತುಕತೆ ಆರಂಭಿಸಲಿವೆ' ಎಂದು ಭಾರೀ ಉತ್ಸಾಹದಿಂದ ಹೇಳಿಕೊಂಡಿದ್ದಾರೆ.

ರಷ್ಯಾ-ಉಕ್ರೇನ್ ದೇಶಗಳ ಮುಖ್ಯಸ್ಥರ ನಡುವಿನ ಮಾತುಕತೆಯಲ್ಲಿ ಷರತ್ತುಗಳು ಇರುತ್ತವೆ. ಬೇರೆ ಯಾರಿಗೂ ತಿಳಿದಿರದ ವಿವರಗಳು ನನಗೆ ತಿಳಿದಿವೆ ಎಂದು ಟ್ರಂಪ್ ತಮ್ಮದೇ ಮಾಲೀಕತ್ವದ ಸಂದೇಶ ವಾಹಕ ಸಂಸ್ಥೆ 'ಟ್ರುಥ್'ನ ಜಾಲತಾಣ ಖಾತೆಯಲ್ಲಿ ಬರೆದಿದ್ದಾರೆ.

ಉಕ್ರೇನ್‌ನಲ್ಲಿನ ಯುದ್ಧದ ಪರಿಸ್ಥಿತಿ ಬಗ್ಗೆ ಅಮರಿಕ ತೀವ್ರ ಹತಾಶೆಗೊಂಡಿದೆ ಎಂದು ಶ್ವೇತಭವನ ಹೇಳಿದ ಬಳಿಕ ಪುಟಿನ್ ಮತ್ತು ಟ್ರಂಪ್ ನಡುವೆ ಮಾತುಕತೆ ನಡೆದಿದೆ. ಯುದ್ಧ ಕೊನೆಗೊಳಿಸುವ ಬಗ್ಗೆ ಚರ್ಚಿಸಲು ರಷ್ಯಾ ಸಿದ್ಧವಿದೆ ಎಂದು ಪುಟಿನ್ ಹೇಳಿರುವುದಾಗಿ ಟ್ರಂಪ್ ಸಂದೇಶದಲ್ಲಿ ವಿವರಿಸಿದ್ದಾರೆ.

ವ್ಯಾಟಿಕನ್ ಸೂಕ್ತ: 2022ರ ಫೆಬ್ರವರಿಯಲ್ಲಿ ರಷ್ಯಾ-ಉಕ್ರೇನ್ ಯುದ್ಧ ಆರಂಭಗೊಂಡಿದ್ದು, ಈಗ ಸಮರ ಸ್ಥಗಿತಕ್ಕೆ ಅಮೆರಿಕ ಅಧ್ಯಕ್ಷ ಟ್ರಂಪ್ ಬಹಳ ಪ್ರಯತ್ನ ಪಡುತ್ತಿದ್ದಾರೆ. ಯುದ್ಧದಲ್ಲಿ ತೊಡಗಿರುವ ಎರಡೂ ದೇಶಗಳ ನಾಯಕರು ಮೂರನೇ ತಟಸ್ಥ ದೇಶದಲ್ಲಿ ಮಾತುಕತೆ ನಡೆಸುವುದು ಸೂಕ್ತ. ಅದಕ್ಕೆ ವ್ಯಾಟಿಕನ್ ನಗರ ಸೂಕ್ತವಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಲಹೆ ನೀಡಿದ್ದಾರೆ.

ರಷ್ಯಾ ಸರಕಿಗೆ ಅಮೆರಿಕ ದೊಡ್ಡ ಮಾರುಕಟ್ಟೆ

ಕದನ ವಿರಾಮದ ಹೊರತಾಗಿ ಪುಟಿನ್ ಜತೆಗೆ ವ್ಯಾಪಾರ ಕುರಿತು ಹೆಚ್ಚು ಚರ್ಚಿಸಿರುವುದಾಗಿ ಟ್ರಂಪ್ ಹೇಳಿಕೊಂಡಿದ್ದಾರೆ. ಮುಖ್ಯವಾಗಿ ಅಮೆರಿಕದ ಜತೆಗಿನ ವ್ಯಾಪಾರ ಸಂಬಂಧವನ್ನು ಮತ್ತಷ್ಟು ದೊಡ್ಡ ಮಟ್ಟದಲ್ಲಿ ನಡೆಸಲು ಉತ್ಸುಕವಾಗಿದೆ. ಎರಡೂ ದೇಶಗಳ ನಡುವೆ ಇದ್ದ ಹಿಂದಿನ ರೀತಿಯ ಮುನಿಸು ಈಗ ಉಳಿದಿಲ್ಲ. ಅಮೆರಿಕದ ಮಾರುಕಟ್ಟೆಯಲ್ಲಿ ರಷ್ಯಾಗೆ ದೊಡ್ಡ ಅವಕಾಶಗಳು ಕಾದಿವೆ. ಅವರ ದೇಶದಲ್ಲಿ ಉದ್ಯೋಗ ಅವಕಾಶ ಹೆಚ್ಚಳಕ್ಕೂ, ಸಂಪತ್ತು ವೃದ್ಧಿಗೂ ಇದು 'ಅಮಿತ' ಅವಕಾಶಗಳನ್ನು ಸೃಷ್ಟಿಸಿಕೊಡಲಿದೆ. ಅದೇ ಬಗೆಯಲ್ಲಿ ಉಕ್ರೇನ್ ಕೂಡಾ ಹೆಚ್ಚಿನ ಪ್ರಯೋಜನವನ್ನು ಪಡೆಯಬಹುದಾಗಿದೆ ಎಂದು ಟ್ರಂಪ್ ಹೇಳಿದ್ದಾರೆ.

ಸಮಯ ನಿಗದಿ ಆಗಿಲ್ಲ: ಪುಟಿನ್

ಉಕ್ರೇನ್ ಜತೆಗೆ ರಷ್ಯಾದ ಕದನ ವಿರಾಮ ಕುರಿತ ಮಾತುಕತೆ ತಕ್ಷಣವೇ ಆರಂಭಗೊಳ್ಳಲಿದೆ ಎಂಬ ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ಹೇಳಿಕೆಯನ್ನು ಪೂರ್ಣವಾಗಿ ಒಪ್ಪದ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಶಾಂತಿ ಮಾತುಕತೆ ನಡೆಸುವುದಕ್ಕೆ ರಷ್ಯಾ ಒಪ್ಪಿಕೊಂಡಿರುವುದು ನಿಜ. ಆದರೆ, ಅದು ಯಾವಾಗ ಎಂಬ ಬಗ್ಗೆ ಸಮಯವಿನ್ನೂ ನಿಗದಿಯಾ ಗಿಲ್ಲ ಎಂದು ಹೇಳಿದ್ದಾರೆ. ಟ್ರಂಪ್ ಅವರೊಂದಿಗಿನ 2 ಗಂಟೆ ಕಾಲದ ದೂರವಾಣಿ ಮಾತುಕತೆ ವೇಳೆ ಕದನ ವಿರಾಮ ಮಾತುಕತೆ ಆರಂಭಕ್ಕೆ ಸಮಯ ನಿಗದಿ ಮಾಡುವ ಕುರಿತು ಚರ್ಚೆ ಆಗಿಲ್ಲ. ಭವಿಷ್ಯದ ಶಾಂತಿ ಮಾತುಕತೆ ಕುರಿತು ಕೆಲವು ಒಡಂಬಡಿ ಕೆಗಳನ್ನು ಮಾಡಿಕೊಳ್ಳಲು ಬಹಳಷ್ಟು ಸಿದ್ಧತೆ ಮಾಡಿಕೊಳ್ಳಬೇಕಿದೆ. ತರಾತುರಿಯಲ್ಲಿ ಕದನ ವಿರಾಮ ಮಾತುಕತೆ ಆರಂಭಿಸುವುದು ಅಸಾಧ್ಯ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಒತ್ತು: ಯೂರಿ

ಇದೇ ವೇಳೆ ರಷ್ಯಾ ವಿದೇಶಾಂಗ ನೀತಿಯ ಸಲಹೆಗಾರ ಯೂರಿ ಉಷಕೋವ್ ಕ್ರೆಮ್ಲಿನ್‌ನಲ್ಲಿ ಸುದ್ದಿಗಾರರ ಜತೆ ಮಾತನಾಡಿದ್ದಾರೆ. ರಷ್ಯಾ ಮಟ್ಟಿಗೆ ಅಮೆರಿಕ ಸಂಬಂಧ ಬಹಳ ಮುಖ್ಯವಾದುದಾಗಿದೆ. ಹಾಗಾಗಿ, ಟ್ರಂಪ್ ಮತ್ತು ಪುಟಿನ್ ನಡುವಿನ 2 ಗಂಟೆಗಳ ದೂರವಾಣಿ ಸಂವಾದದಲ್ಲಿ ಅಮೆರಿಕ-ರಷ್ಯಾ ದ್ವಿಪಕ್ಷೀಯ ಸಂಬಂಧ ವೃದ್ಧಿ ವಿಚಾರ ಹೆಚ್ಚು ಚರ್ಚೆಯಾಗಿದೆ. ರಷ್ಯಾ-ಉಕ್ರೇನ್ ಕದನ ವಿರಾಮ ವಿಚಾರ ಪ್ರಸ್ತಾಪವಾಗಿದೆ. ಕದನ ವಿರಾಮ ಘೋಷಣೆಯಾದರೆ ಅಮೆರಿಕ- ರಷ್ಯಾ ಸಂಬಂಧದ ಮೇಲೆ ಉತ್ತಮ ಪರಿಣಾಮ ಬೀರಲಿದೆ ಎಂಬುದು ತಿಳಿದಿದೆ. ಹಾಗಾಗಿಯೇ ಶಾಂತಿ ಮಾತುಕತೆಗೆ ಪುಟಿನ್ ಸಿದ್ಧರಿದ್ದಾರೆ. ಆದರೆ, ಸಮಯ ಮಿತಿ ವಿಚಾರ ಚರ್ಚೆ ಆಗಿಲ್ಲ ಎಂದು ಹೇಳಿದ್ದಾರೆ. ಈಗಿನ ಮಾತುಕತೆಯಲ್ಲಿ ಅಮೆರಿಕ-ರಷ್ಯಾ ಸೆರೆಮನೆ ಗಳಲ್ಲಿ ಇರುವ ಉಭಯ ದೇಶದ ಪ್ರಜೆಗಳ ವಿನಿಮಯ ಕಾರ್ಯಕ್ರಮ ಕುರಿತು ಚರ್ಚಿಸಲಾಗಿದೆ. ಮೊದಲಿಗೆ 9 ಮಂದಿಯ ವಿನಿ ಮಯ ಪ್ರಕ್ರಿಯೆಗೆ ಸಿದ್ಧತೆ ಮಾಡಿಕೊಳ್ಳಲು ಸಮ್ಮತಿಸಲಾಗಿದೆ ಎಂದು ವಿವರಿಸಿದರು.

ಪುಟಿನ್ ದನಿಯಲ್ಲೂ ಉತ್ಸಾಹವಿತ್ತು: ಟ್ರಂಪ್

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜತೆಗೆ ನಡೆಸಿದ 2 ಗಂಟೆ ಕಾಲದ ದೂರವಾಣಿ ಮಾತುಕತೆ ಬಹಳ ಚೆನ್ನಾಗಿತ್ತು. ಪುಟಿನ್ ಅವರ ದನಿಯಲ್ಲೂ ಬಹಳ ಉತ್ಸಾಹವಿತ್ತು, ಮಾತುಕತೆಗೆ ಸಿದ್ಧವಿರುವ ದಾಟಿ ಕಾಣಿಸಿತು. ತಕ್ಷಣವೇ ಕದನ ವಿರಾಮ ಮಾತುಕತೆ ಆರಂಭಗೊಳ್ಳಲಿದೆ. ಯುದ್ಧ ಶೀಘ್ರವೇ ಕೊನೆಗೊಳ್ಳಲಿದೆ ಎಂಬ ವಿಶ್ವಾಸವಿದೆ. ಕದನ ವಿರಾಮದ ಷರತ್ತುಗಳನ್ನು ಎರಡೂ ದೇಶಗಳ ನಾಯಕರೇ ಕಂಡುಕೊಳ್ಳಲಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ 'ಟ್ರುಥ್' ಖಾತೆಯಲ್ಲಿ ಬರೆದಿದ್ದಾರೆ.

ಪುಟಿನ್ ಜತೆಗಿನ ಕರೆ ಕಡಿತಗೊಳಿಸಿದ ಬೆನ್ನಲ್ಲೇ ಉಕ್ರೇನ್ ಅಧ್ಯಕ್ಷ ವೊಲಿದಿಮಿರ್ ಝೆಲೆನ್‌ಸ್ಕಿ ಜತೆಗೂ ಮಾತನಾಡಿದೆ. ಬಳಿಕ ಯೂರೋಪಿಯನ್ ಆಯೋಗದ ಅಧ್ಯಕ್ಷರಾದ ಉರ್ಸುಲಾ ವೊನ್‌ಡೇರ್ ಲೆಯೆನ್, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯಲ್ ಮ್ಯಾಕ್ರಾನ್, ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ, ಜರ್ಮನಿ ಚಾನ್ಸೆಲರ್ ಫ್ರೆಡ್ರಿಚ್ ಮೆರ್ಜ್, ಫಿನ್‌ಲೆಂಡ್ ಅಧ್ಯಕ್ಷ ಅಲೆಕ್ಸಾಂಡರ್ ಸ್ಟಬ್ ಅವರೂ ನನಗೆ ಕರೆ ಮಾಡಿದ್ದರು. ಅವರೆಲ್ಲರಿಗೂ ರಷ್ಯಾ-ಉಕ್ರೇನ್ ನಡುವೆ ತಕ್ಷಣವೇ ಮಾತುಕತೆ ಆರಂಭವಾಗಲಿರುವ ವಿಚಾರ ತಿಳಿಸಿದೆ ಎಂದು ಟ್ರಂಪ್ 'ಟ್ರುಥ್' ಖಾತೆಯಲ್ಲಿ ಬರೆದಿದ್ದಾರೆ.

ವಕ್ಫ್ ತಿದ್ದುಪಡಿ ಕಾಯಿದೆ-2025 ಬಗ್ಗೆ ಸಿಜೆಐ ಮಹತ್ವದ ಹೇಳಿಕೆ

ಸಂಸತ್ ಒಪ್ಪಿತ ಕಾಯಿದೆ ಸಾಂವಿಧಾನಿಕ, ಮಧ್ಯಪ್ರವೇಶ ಸಾಧ್ಯವಿಲ್ಲ: ಸುಪ್ರೀಂ

ದೆಹಲಿ: 'ಸಂಸತ್‌ನಲ್ಲಿ ಬಹುಮತದ ಮೇರೆಗೆ ಅಂಗೀಕರಿಸಲಾಗುವ ಕಾಯಿದೆಗಳು ಸಾಂವಿಧಾನಿಕ ಎಂದೇ ಭಾವಿಸಬೇಕಿದೆ. ಸ್ಪಷ್ಟ ಮತ್ತು ಗಂಭೀರ ಸಮಸ್ಯೆ ಇಲ್ಲದಿದ್ದರೆ ಅದರಲ್ಲಿ ನ್ಯಾಯಾಲಯಗಳು ಮಧ್ಯಪ್ರವೇಶಿಸಲು ಸಾಧ್ಯವಿಲ್ಲ' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮಂಗಳವಾರ ಸ್ಪಷ್ಟವಾಗಿ ಹೇಳಿದ್ದಾರೆ.

ವಕ್ಫ್ ತಿದ್ದುಪಡಿ ಕಾಯಿದೆ-2025 ಅನ್ನು ವಿರೋಧಿಸಿ ಹಲವರಿಂದ ಸಲ್ಲಿಕೆಯಾಗಿರುವ 70ಕ್ಕೂ ಅಧಿಕ ಅರ್ಜಿಗಳಲ್ಲಿ ಆಯ್ದ 5 ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ನ್ಯಾ.ಎ.ಜಿ.ಮಾಸಿಹ್ ಅವರ ದ್ವಿಸದಸ್ಯ ಪೀಠ ವಿಚಾರಣೆಗೆ ಪರಿಗಣಿಸಿದೆ. ಮಂಗಳವಾರ ನಡೆದ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಈ ಮಹತ್ವದ ಹೇಳಿಕೆ ನೀಡಿದರು.

ವಕ್ಫ್ ತಿದ್ದುಪಡಿ ಕಾಯಿದೆ-2025 ಜಾರಿಗೊಳ್ಳದಂತೆ ಮಧ್ಯಂತರ ತಡೆ ನೀಡಬೇಕೆಂಬ ಕೆಲವು ಅರ್ಜಿದಾರರು ಮನವಿ ಮಾಡಿದ್ದಾರೆ. ಆದರೆ, ಕೇಂದ್ರ ಸರಕಾರ ಮಧ್ಯಂತರ ತಡೆಯಾಜ್ಞೆಯನ್ನು ವಿರೋಧಿಸಿದ್ದು, ಕಾಯಿದೆ ಜಾರಿಯ ಅಗತ್ಯದ ಬಗ್ಗೆ ಕೋರ್ಟ್ ಗಮನ ಸೆಳೆಯಲೆತ್ನಿಸಿದರು. ಕಾಯಿದೆಯನ್ನು ಬಲವಾಗಿ ಸಮರ್ಥಿಸಿಕೊಂಡಿದೆ. ಮಧ್ಯಂತರ ತಡೆಯಾಜ್ಞೆಗೆ ಸಂಬಂಧಿಸಿದಂತೆ ಮಂಗಳವಾರದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಏನನ್ನೂ ಹೇಳಲಿಲ್ಲ.

ಬಳಕೆ ಕಾರಣದಿಂದ ವಕ್ಫ್ ಆಸ್ತಿ, ಕೇಂದ್ರ ವಕ್ಫ್ ಸಮಿತಿ ಮತ್ತು ರಾಜ್ಯ ವಕ್ಫ್ ಮಂಡಳಿಗಳಿಗೆ ಮುಸ್ಲಿಮೇತರರ ನಾಮ ನಿರ್ದೇಶನ ಮತ್ತು ಸರಕಾರಿ ಭೂಮಿಯನ್ನು ವಕ್ಫ್ ಆಸ್ತಿ ಎಂದು ಗುರುತಿಸುವ ಕ್ರಮದ ಪ್ರಶ್ನೆ ಎಂಬ ಮೂರು ಪ್ರಮುಖ ವಿಷಯಗಳನ್ನು ಸುಪ್ರೀಂ ಕೋರ್ಟ್ ಈ ಮೊದಲೇ ವಿಚಾರಣೆಗೆ ಗುರುತಿಸಿದೆ.

ಇದೇ ಅಂಶಗಳನ್ನು ಮುಂದಿಟ್ಟುಕೊಂಡು ಕೇಂದ್ರ ಸರಕಾರದ ಪರ ಪ್ರಮಾಣಪತ್ರ ಸಲ್ಲಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಪೀಠದ ವಿಚಾರಣೆ ಈ ಮೂರು ಪ್ರಮುಖ ಅಂಶಗಳಿಗೇ ಸೀಮಿತಗೊಳ್ಳಬೇಕಿದೆ ಎಂದು ಮನವಿ ಮಾಡಿದರು.

ಇದಕ್ಕೂ ಮೊದಲೇ ನ್ಯಾಯಾಲಯದ ಮುಂದಿನ ಆದೇಶದವರೆಗೆ ಕೇಂದ್ರ ವಕ್ಫ್ ಮಂಡಳಿ ಮತ್ತು ರಾಜ್ಯ ವಕ್ಫ್ ಮಂಡಳಿಗಳಲ್ಲಿ ಮುಸ್ಲಿಮೇತರ ಸದಸ್ಯರ ನೇಮಕವನ್ನು ಸದ್ಯಕ್ಕೆ ನಡೆಸುವುದಿಲ್ಲ ಎಂದು ಭರವಸೆಯನ್ನು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರಕಾರ ಪ್ರಮಾಣಪತ್ರದ ಮೂಲಕ ನೀಡಿದೆ ಎಂಬುದು ಉಲ್ಲೇಖಾರ್ಹ.

ಕಾಯಿದೆ ಅಂಗೀಕಾರ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಅಂಕಿತದ ಬಳಿಕ ಎನ್‌ಡಿಎ ಕೇಂದ್ರ ಸರಕಾರ, ಏಪ್ರಿಲ್‌ನಲ್ಲಿ ವಕ್ಫ್ ತಿದ್ದುಪಡಿ ಕಾಯಿದೆ-2025ರ ಜಾರಿಗೆ ಏ.5ರಂದು ಅಧಿಸೂಚನೆ ಮಾಡಿತು. ವಿಧೇಯಕ ಲೋಕ ಸಭೆಯಲ್ಲಿ 288 ಸದಸ್ಯರ ಬೆಂಬಲ ಪಡೆದು ಅಂಗೀಕಾರವಾಗಿದೆ. 232 ಸಂಸದರು ಕಾಯಿದೆಯ ತಿದ್ದುಪಡಿಗಳನ್ನು ವಿರೋಧಿಸಿದ್ದರು. ರಾಜ್ಯಸಭೆಯಲ್ಲಿ ಕಾಯಿದೆ ಪರ 128 ಸದಸ್ಯರು ಮತ್ತು 95 ಸದಸ್ಯರು ವಿರುದ್ಧವಾಗಿ ಮತ ಚಲಾಯಿಸಿದ್ದರು.

ಅರ್ಜಿದಾರರ ಪರ ಕಪಿಲ್ ಸಿಬಲ್ ವಾದ

ಮಧ್ಯಂತರ ತಡೆಯಾಜ್ಞೆ ಕುರಿತು ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, ವಕ್ಫ್ ತಿದ್ದುಪಡಿ ಕಾಯಿದೆ-2025ರ ಸಿಂಧುತ್ವವನ್ನು ಪ್ರಶ್ನಿಸಿದರು. ಈ ಕಾಯಿದೆ ವಕ್ಫ್ ರಕ್ಷಣೆಗಾಗಿ ಇದೆ ಎನ್ನಲಾಗುತ್ತಿದೆ. ಆದರೆ ಅದರ ಉದ್ದೇಶ ವಕ್ಫ್ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವುದೇ ಆಗಿದೆ ಎಂದು ವಾದಿಸಿದರು. ವಕ್ಫ್ ತಿದ್ದುಪಡಿ ಕಾಯಿದೆ-2025 ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕು ಮತ್ತು 25 ಮತ್ತು 26ನೇ ವಿಧಿಗಳಡಿ ಧಾರ್ಮಿಕ ಆಸ್ತಿಗಳನ್ನು ನಿರ್ವಹಿಸುವ ಹಕ್ಕನ್ನು ಉಲ್ಲಂಘಿಸುತ್ತದೆ ಎಂದು ಹೇಳಿದರು.



ಕೇಂದ್ರದ ಪರ ತುಷಾರ್ ಮೆಹ್ತಾ ಪ್ರಮಾಣಪತ್ರ

ಕಾನೂನಿನ ಸುತ್ತಲಿನ ಪ್ರಶ್ನೆಗಳಿಗೆ ಮುಂದುವರಿಯುವ ಮೊದಲು ಪೀಠ, 3 ಪ್ರಮುಖ ವಿಷಯಗಳ ಬಗೆಗೇ ವಿಚಾರಣೆಯನ್ನು ಸೀಮಿತಗೊಳಿಸಬೇಕು. ನ್ಯಾಯಾಲಯಗಳಿಂದ ವಕ್ಫ್ ಆಸ್ತಿ ಎಂದು ಘೋಷಿಸಲಾದ ಆಸ್ತಿಗಳನ್ನು ಡಿನೋಟಿಫೈ ಮಾಡಬಹುದೇ? ವಕ್ಫ್ ಬೈ ಯೂಸರ್(ವಕ್ಫ್ ಆಸ್ತಿ ಎಂದು ಹಲವು ವರ್ಷಗಳಿಂದ ಬಳಸುತ್ತಿರುವವರ ಕಾನೂನುಬದ್ಧತೆ) ಮತ್ತು ವಕ್ಫ್ ಬೈ ಡೀಡ್(ಬೇರೆಯವರಿಂದ ಮಾರಾಟ ಮಾಡಿದ ಆಸ್ತಿಗಳನ್ನು ಖರೀದಿಸಿದ ವಕ್ಫ್ ಆಸ್ತಿ) ಎಂಬ ಅಂಶಗಳ ಬಗೆಗಷ್ಟೇ ವಿಚಾರಣೆ ನಡೆಸಬೇಕು ಎಂದು ಕೇಂದ್ರ ಸರಕಾರ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಪ್ರಮಾಣಪತ್ರ ಸಲ್ಲಿಸಿ ಪೀಠಕ್ಕೆ ಮನವಿ ಮಾಡಿದರು. ಆದರೆ ಅರ್ಜಿದಾರರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಕಪಿಲ್ ಸಿಬಲ್, ಕೇಂದ್ರದ ಈ ಮನವಿಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಈ ವಿಷಯ ಸಾಂವಿಧಾನಿಕ ಪ್ರಶ್ನೆಗಳನ್ನು ಒಳಗೊಂಡಿದೆ. ಅವನ್ನು ಪ್ರತ್ಯೇಕವಾಗಿ ನಿರ್ಣಯಿಸಲು ಸಾಧ್ಯವಿಲ್ಲ ಎಂದು ವಾದಿಸಿದರು.

ಪರಮಾಣು ವಿಜ್ಞಾನಿ ಎಂಆರ್‌ಶ್ರೀ ಅಸ್ತಂಗತ

ಮುಂಬೈ: ಭಾರತದ ಪರಮಾಣು ವಿದ್ಯುತ್ ಕ್ಷೇತ್ರದ ಪ್ರಗತಿಗೆ ಶ್ರಮಿಸಿದ ಪರಮಾಣು ವಿಜ್ಞಾನಿ, ಅಣುಶಕ್ತಿ ಆಯೋಗದ ಅಧ್ಯಕ್ಷರೂ ಆಗಿದ್ದ ಡಾ.ಎಂ.ಆರ್.ಶ್ರೀನಿವಾಸನ್(95) ಮುಂಬೈನಲ್ಲಿ ಮಂಗಳವಾರ ನಿಧನರಾದರು.

1955ರ ಸೆಪ್ಟೆಂಬರ್‌ನಲ್ಲಿ ಪರಮಾಣು ಶಕ್ತಿ ಇಲಾಖೆಗೆ(ಡಿಎಇ) ಸೇರಿದ ಡಾ.ಶ್ರೀನಿವಾಸನ್, ಬಳಿಕ ಭಾರತದ ಪರಮಾಣು ಶಕ್ತಿ ಕ್ಷೇತ್ರದ ಪಿತಾಮಹ ಎಂದೇ ಹೆಸರಾಗಿರುವ ಡಾ.ಹೋಮಿ ಭಾಭಾ ಅವರ ಜತೆ ಮೂರು ಹಂತಗಳ ಪರಮಾಣ ಕಾರ್ಯಕ್ರಮವನ್ನು ವಿನ್ಯಾಸಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ದೇಶದ ಪ್ರಥಮ ಪರಮಾಣು ಸಂಶೋಧನಾ ರಿಯಾಕ್ಟರ್ 'ಅಪ್ಸರಾ' ನಿರ್ಮಾಣದಲ್ಲಿಯೂ ಅವರ ಪಾತ್ರ ಹಿರಿದಾಗಿತ್ತು. ಅವರನ್ನು ಪ್ರಧಾನ ಯೋಜನಾ ಇಂಜಿನಿಯರ್ ಆಗಿ ನೇಮಿಸಲಾಗಿತ್ತು. ನಂತರ 1967ರಲ್ಲಿ ಶ್ರೀನಿವಾಸನ್ ಮದ್ರಾಸ್ ಪರಮಾಣು ವಿದ್ಯುತ್ ಕೇಂದ್ರದ ಮುಖ್ಯ ಯೋಜನಾ ಇಂಜಿನಿಯರ್ ಹುದ್ದೆ ಅಲಂಕರಿಸಿದರು.

1987ರಲ್ಲಿ ಶ್ರೀನಿವಾಸನ್ ಅವರನ್ನು ಪರಮಾಣು ಶಕ್ತಿ ಆಯೋಗದ ಅಧ್ಯಕ್ಷರಾಗಿ ನೇಮಕಗೊಳಿಸಲಾಯಿತು. ಅಲ್ಲದೇ ಪರಮಾಣು ಶಕ್ತಿ ಇಲಾಖೆ ಕಾರ್ಯದರ್ಶಿ ಹುದ್ದೆಗೂ ನೇಮಕಗೊಂಡರು. ಅದೇ ವರ್ಷ ಎನ್‌ಪಿಸಿಐಎಲ್ ಅಧ್ಯಕ್ಷರೂ ಆದರು. ಇವರ ನೇತೃತ್ವದಲ್ಲಿ ದೇಶದ ವಿವಿಧೆಡೆ 18 ಪರಮಾಣು ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲಾಗಿದೆ ಎಂಬುದು ಉಲ್ಲೇಖಾರ್ಹ. ಇದೆಲ್ಲವನ್ನೂ ಗುರುತಿಸಿದ ಕೇಂದ್ರ ಸರಕಾರ ಪದ್ಮವಿಭೂಷಣ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದೆ.

ಖ್ಯಾತ ಖಗೋಳ ತಜ್ಞ ನಾರ್ಲಿಕರ್ ಇನ್ನಿಲ್ಲ

ಮುಂಬೈ: ಖ್ಯಾತ ಖಗೋಳ ತಜ್ಞ, ವಿಜ್ಞಾನ ಸಂವಹನಕಾರ, ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಡಾ.ಜಯಂತ್ ನಾರ್ಲಿಕರ್ (87) ಮಂಗಳವಾರ ಪುಣೆಯಲ್ಲಿ ನಿಧನರಾದರು. ನಾರ್ಲಿಕರ್ ಅವರಿಗೆ ಇತ್ತೀಚೆಗೆ ಶಸ್ತ್ರಚಿಕಿತ್ಸೆಯಾಗಿತ್ತು.



'ಬಿಗ್ ಬ್ಯಾಂಗ್' ಸಿದ್ಧಾಂತಕ್ಕೆ ಪರ್ಯಾಯಗಳನ್ನು ಪ್ರಸ್ತಾಪಿಸಿದ್ದ ನಾರ್ಲಿಕರ್ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ್ದರು. ಭಾರತದಲ್ಲಿ ಖಗೋಳಶಾಸ್ತ್ರ ಮತ್ತು ಖಗೋಳ ಭೌತಶಾಸ್ತ್ರ ಸಂಶೋಧನೆಗೆ ವಿಶ್ವ ದರ್ಜೆ ಸಂಸ್ಥೆಗಳ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನಾರ್ಲಿಕರ್, ಭಾರತೀಯ ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ.

1938ರ ಜು.19ರಂದು ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಜನಿಸಿದ ನಾರ್ಲಿಕರ್, ತಂದೆ ವಿಷ್ಣು ವಾಸುದೇವ ನಾರ್ಲಿಕರ್ ಗಣಿತ ಪ್ರಾಧ್ಯಾಪಕರಾಗಿದ್ದ ಬನಾರಸ್ ಹಿಂದೂ ವಿವಿಯಲ್ಲಿ ಶಿಕ್ಷಣ ಪಡೆದರು. ಬಳಿಕ ಉನ್ನತ ಶಿಕ್ಷಣಕ್ಕಾಗಿ ಕೇಂಬ್ರಿಡ್ಜ್‌ಗೆ ತೆರಳಿದರು. ಬಳಿಕ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ಗೆ ಸೇರಲೆಂದೇ ಭಾರತಕ್ಕೆ ಮರಳಿದರು. 1988ರಿಂದ 2003ರವರೆಗೆ ವಿವಿ ಧನಸಹಾಯ ಆಯೋಗ ಪ್ರಸ್ತಾವಿತ ಅಂತರ ವಿಶ್ವವಿದ್ಯಾಲಯ ಖಗೋಳವಿಜ್ಞಾನ ಮತ್ತು ಆಸ್ಟ್ರೋಫಿಸಿಕ್ಸ್ ಕೇಂದ್ರದಲ್ಲಿ ನಿರ್ದೇಶಕರಾಗಿದ್ದರು.

ನಾರ್ಲಿಕರ್ ಅವರಿಗೆ 26ನೇ ವರ್ಷವಾಗಿದ್ದಾಗಲೇ ಪದ್ಮಭೂಷಣ ಪ್ರಶಸ್ತಿ ಸಂದಿತು. 2004ರಲ್ಲಿ ಪದ್ಮವಿಭೂಷಣ ಲಭಿಸಿತು. 2011ರಲ್ಲಿ ಮಹಾರಾಷ್ಟ್ರ ಸರಕಾರ ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿಯಾದ 'ಮಹಾರಾಷ್ಟ್ರ ಭೂಷಣ' ನೀಡಿ ಗೌರವಿಸಿತು.

ಜೆಎನ್1 ರೂಪಾಂತರ: ಮತ್ತೆ ಕರೋನಾ ಆತಂಕ

ದೆಹಲಿ: 2020ರಲ್ಲಿ ಇಡೀ ವಿಶ್ವವನ್ನು ಕಂಗೆಡಿಸಿದ್ದ ಕರೋನಾ ವೈರಾಣು ಭೀತಿ ಮತ್ತೆ ಭಾರತದಲ್ಲಿ ಶುರುವಾಗಿದೆ. ಭಾರತ ಮಾತ್ರವಲ್ಲದೆ ಏಷ್ಯಾ ಖಂಡದ ದೇಶಗಳಾದ ಚೀನಾ, ಸಿಂಗಾಪುರ, ಹಾಂಗ್‌ಕಾಂಗ್ ಮತ್ತು ಥೈಲ್ಯಾಂಡ್‌ನಲ್ಲಿ ಕರೋನಾ ಪ್ರಕರಣಗಳು ಹೆಚ್ಚುತ್ತಿರುವುದು ವಿಶ್ವಾದ್ಯಂತ ಆತಂಕ ಹೆಚ್ಚಿಸಿದೆ.

ಮುಂಬೈನ ಕೆಇಎಂ ಆಸ್ಪತ್ರೆಯಲ್ಲಿ ಇಬ್ಬರು ಕೋವಿಡ್-19 ಪಾಸಿಟಿವ್ ರೋಗಿಗಳು ಸಾವನ್ನಪ್ಪಿದ್ದಾರೆ. ಬಾಲಿವುಡ್‌ನ ಖ್ಯಾತ ನಟಿ ಶಿಲ್ಪಾ ಶಿರೋಡ್ಕರ್ ಕೂಡ ಕರೋನಾ ಸೋಂಕಿಗೆ ಒಳಗಾಗಿದ್ದಾರೆ ಎಂದು ತಿಳಿದು ಬಂದಿದೆ.

ಕೋವಿಡ್-19 ರೋಗಿಗಳ ಸಂಖ್ಯೆ ದಿಢೀರ್ ಹೆಚ್ಚಳಕ್ಕೆ ಮುಖ್ಯ ಕಾರಣವೆಂದರೆ ವೇಗವಾಗಿ ಬೆಳೆಯುತ್ತಿರುವ ಓಮಿಕ್ರಾನ್ ವೈರಾಣುವಿನ ಹೊಸ ರೂಪಾಂತರ. ಜೆಎನ್1 ಮತ್ತು ಎಲ್ಎಫ್7 ರೂಪಾಂತರ ವೈರಾಣುಗಳಿಂದಾಗಿಯೇ ಕೋವಿಡ್-19 ಪ್ರಕರಣಗಳ ಸಂಖ್ಯೆ ವೇಗವಾಗಿ ಏರಿಕೆ ಆಗುತ್ತಿದೆ. ಸಿಂಗಾಪುರದಲ್ಲಿ ಕರೋನಾ ಸೋಂಕಿಗೆ ತುತ್ತಾದ ರೋಗಿಗಳ ಸಂಖ್ಯೆ ಏಪ್ರಿಲ್ ಕೊನೆ ವಾರ 11,100ರಷ್ಟಿತ್ತು. ಆದರೆ, ಮೇ ಮೊದಲವಾರದ ವೇಳೆಗೆಲ್ಲಾ 14,000ಕ್ಕಿಂತಲೂ ಅಧಿಕವಾಯಿತು.

ಸಿಂಗಾಪುರದ ಒಳಚರಂಡಿಯಲ್ಲೂ ಕೋವಿಡ್-19 ವೈರಸ್‌ನ ಹೊಸ ರೂಪಾಂತರಿ ತಳಿಗಳು ಇರುವುದು ಕಂಡುಬಂದಿದೆ.

ದೇಶದಲ್ಲಿ 257 ಪ್ರಕರಣ



ಭಾರತದಲ್ಲಿ ಪ್ರಸ್ತುತ ಕರೋನಾ ಸೋಂಕು ನಿಯಂತ್ರಣದಲ್ಲಿದೆ. ಮೇ 19ರ ವೇಳೆ ದೇಶದಲ್ಲಿನ ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 257ರಷ್ಟಿತ್ತು. ಕೇರಳ, ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಪ್ರಕರಣಗಳು ಕಂಡುಬಂದಿವೆ. ಕೇರಳದಲ್ಲಿ 69, ಮಹಾರಾಷ್ಟ್ರದಲ್ಲಿ 44 ಮತ್ತು ತಮಿಳುನಾಡಲ್ಲಿ 34 ಹೊಸ ಪ್ರಕರಣಗಳು ವರದಿಯಾಗಿವೆ. ಮಹಾರಾಷ್ಟ್ರದಲ್ಲಿ ವರದಿಯಾಗಿರುವ 2 ಸಾವು ಪ್ರಕರಣಗಳು ಕೋವಿಡ್ -19ರಿಂದ ಉಂಟಾದ ಸಾವಲ್ಲ. ಆದರೆ ಇಬ್ಬರೂ ರೋಗಿಗಳಲ್ಲಿ ಕೋವಿಡ್- 19 ಪಾಸಿಟಿವ್ ಎಂದು ಕಂಡುಬಂದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಮೂಲಗಳು ತಿಳಿಸಿವೆ. ಬಹುತೇಕ ಪ್ರಕರಣಗಳು ಸೌಮ್ಯವಾಗಿವೆ. ತೀವ್ರ ಸ್ವರೂಪದ ಲಕ್ಷಣ ಗೋಚರಿಸುವುದಿಲ್ಲ. ಆಸ್ಪತ್ರೆಗೆ ದಾಖಲಾಗಬೇಕಾದ ಅಗತ್ಯವಿಲ್ಲ ಎಂದು ಆರೋಗ್ಯ ತಜ್ಞರು ಹೇಳಿದ್ದಾರೆ. ಆರೋಗ್ಯ ಸೇವೆಗಳ ಮಹಾ ನಿರ್ದೇಶಕರ (ಡಿಜಿಎಚ್‌ಎಸ್) ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಕೇಂದ್ರ ಸರಕಾರಿ ಆಸ್ಪತ್ರೆಗಳ ತಜ್ಞರ ಪರಿಶೀಲನಾ ಸಭೆ ನಡೆಸಲಾಗಿದ್ದು, ಆ ಬಳಿಕ ಈ ಮಾಹಿತಿ ಲಭ್ಯವಾಗಿದೆ.

ಕಿರಿಯ ನ್ಯಾಯಾಧೀಶ: 3 ವರ್ಷ ವಕೀಲಿಕೆ ಕಡ್ಡಾಯ

ದೆಹಲಿ: ಸಿವಿಲ್ ನ್ಯಾಯಾಧೀಶ (ಜೂನಿಯರ್) ಹುದ್ದೆಗೆ ನೇಮಕಗೊಳ್ಳಲು ಅಭ್ಯರ್ಥಿಗಳು ವಕೀಲರಾಗಿ ಕನಿಷ್ಠ 3 ವರ್ಷ ಅನುಭವ ಹೊಂದಿರಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ, ನ್ಯಾ.ಎ.ಜಿ.ಮಾಸಿಹ್ ಮತ್ತು ನ್ಯಾ.ಕೆ.ವಿನೋದ್ ಚಂದ್ರನ್ ಅವರ ತ್ರಿಸದಸ್ಯ ಪೀಠ ಮಂಗಳವಾರ ಈ ಆದೇಶ ಹೊರಡಿಸಿದೆ. ಈಗಷ್ಟೇ ಕಾನೂನು ಪದವಿ ಪಡೆದು ಬಂದವರನ್ನು ತಕ್ಷಣವೇ ನ್ಯಾಯಾಧೀಶರನ್ನಾಗಿ ನೇಮಿಸುವ ವಿಚಾರಕ್ಕೆ ಕಳವಳ ವ್ಯಕ್ತಪಡಿಸಿರುವ ಪೀಠ, ಕಿರಿಯ ಶ್ರೇಣಿ ನ್ಯಾಯಾಧೀಶರಾಗಲು ಬಯಸುವವರಿಗೆ ವಕೀಲ ವೃತ್ತಿಯಲ್ಲಿ ಕನಿಷ್ಠ 3 ವರ್ಷಗಳ ಅನುಭವ ಅಗತ್ಯ ಎಂದು ಸ್ಪಷ್ಟವಾಗಿ ಹೇಳಿದೆ. ಅನುಭವದ ಕೊರತೆ ನ್ಯಾಯಾದಾನ ಪ್ರಕ್ರಿಯೆಯಲ್ಲಿ ಹಲವು ಸಮಸ್ಯೆಗಳನ್ನು ಸೃಷ್ಟಿಸಿರುವುದನ್ನು ಗಮನಿಸಿದ್ದೇವೆ. ಕಾನೂನು ಪದವಿ ಮುಗಿದ ತಕ್ಷಣವೇ ನ್ಯಾಯಾಧೀಶ ಹುದ್ದೆಗೆ ಆಯ್ಕೆಯಾದವರು ನ್ಯಾಯಾಂಗ ಅಧಿಕಾರದ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಬೇಕಾದ ಕೌಶಲಗಳನ್ನು ಹೊಂದಿಲ್ಲದಿರುವುದನ್ನು ಗಮನಿಸಿದ ಬಳಿಕವೇ ಈ ತೀರ್ಮಾನಕ್ಕೆ ಬರಲಾಗಿದೆ. ಭವಿಷ್ಯದಲ್ಲಿ ನಡೆಯುವ ಕಿರಿಯ ಶ್ರೇಣಿ ನ್ಯಾಯಾಧೀಶರ ಆಯ್ಕೆ ಪ್ರಕ್ರಿಯೆಗಳಲ್ಲಿ ಈ ಹೊಸ ನಿಯಮ ಜಾರಿಗೊಳಿಸಲಾಗುತ್ತದೆ ಎಂದು ಪೀಠ ಹೇಳಿದೆ.

ಸ್ವರ್ಣಮಂದಿರಕ್ಕೆ ಏರ್ ಡಿಫೆನ್ಸ್ ಸಿಸ್ಟಂ

ಅಮೃತಸರ: ಭಾರತದ ವಿರುದ್ಧ ದಶಕಗಳಿಂದ ಭಯೋತ್ಪಾದನೆ ನಡೆಸುತ್ತಾ ಬಂದಿರುವ ಪಾಕಿಸ್ತಾನ, ಭಾರತದಲ್ಲಿನ ಧಾರ್ಮಿಕ ಕೇಂದ್ರಗಳು, ಪುಣ್ಯ ಕ್ಷೇತ್ರಗಳನ್ನು ಗುರಿಯಾಗಿಸಿ ದಾಳಿ ನಡೆಸುವ ಅಪಾಯ ಇರುವುದರಿಂದ ಸಿಖ್ಖರ ಪವಿತ್ರ ಕ್ಷೇತ್ರ 'ಸ್ವರ್ಣ ಮಂದಿರ'ಕ್ಕೆ ಏರ್ ಡಿಫೆನ್ಸ್ ಸಿಸ್ಟಂ(ವಾಯುದಾಳಿ ತಡೆ ಪ್ರತ್ಯಸ್ತ್ರ) ಅಳವಡಿಸಲು ಅನುಮತಿ ನೀಡಲಾಗಿದೆ. ಮೇ 7ರಿಂದ 10ರವರೆಗೆ ಭಾರತ-ಪಾಕಿಸ್ತಾನ ನಡುವೆ ನಡೆದ ಸೇನಾ ಸಂಘರ್ಷದ ಕಾಲದಲ್ಲಿ 'ಸ್ವರ್ಣ ಮಂದಿರ'ದ ಮೇಲೆ ಪಾಕ್ ಕ್ಷಿಪಣಿಗಳಿಂದ ದಾಳಿ ನಡೆಸಿತ್ತು. ಆದರೆ, ಪಾಕ್‌ನ ಕ್ಷಿಪಣಿ ಮತ್ತು ಡ್ರೋನ್‌ಗಳು ಆಕಾಶದಲ್ಲಿರುವಾಗಲೇ ಭಾರತೀಯ ಸೇನಾಪಡೆಯ ಕ್ಷಿಪಣಿ ವಿನಾಶಕ ಸಾಧನವಾದ 'ಆಕಾಶ್' ಏರ್ ಡಿಫೆನ್ಸ್ ಸಿಸ್ಟಂ ಹೊಡೆದುರುಳಿಸಿತು. ಇದೀಗ ಭಾರತ ಸರಕಾರ ಪಾಕಿಸ್ತಾನದ ಗಡಿಗೆ ಸಮೀಪವಿರುವ ಧಾರ್ಮಿಕ ಕ್ಷೇತ್ರಗಳಿಗೆ ಬಿಗಿ ಭದ್ರತೆ ಒದಗಿಸಲು ಮುಂದಾಗಿದೆ. ಸಂಭಾವ್ಯ ವಾಯುದಾಳಿ ತಡೆಗಾಗಿ ಸ್ವರ್ಣಮಂದಿರಕ್ಕೆ ಏರ್ ಡಿಫೆನ್ಸ್ ಸಿಸ್ಟಂ ಅಳವಡಿಕೆಗೆ ಸಮ್ಮತಿಸಿ ಎಂದು ತಿಳಿದುಬಂದಿದೆ.

ಸಚಿವ ವಿಜಯ್ ಹೇಳಿಕೆ ತನಿಖೆಗೆ ಎಸ್‌ಐಟಿ

ಭೋಪಾಲ್: ಭಾರತೀಯ ಸೇನೆಯ ಕರ್ನಲ್ ಸೋಫಿಯಾ ಖುರೇಷಿ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ಮಧ್ಯಪ್ರದೇಶ ಸಚಿವ ವಿಜಯ್ ಶಾ ಪ್ರಕರಣದ ತನಿಖೆಗೆ ರಾಜ್ಯ ಪೊಲೀಸ್ ಇಲಾಖೆ ಮೂರು ಸದಸ್ಯರ ವಿಶೇಷ ತನಿಖಾ ತಂಡವನ್ನು(ಎಸ್‌ಐಟಿ) ಸೋಮವಾರ ತಡರಾತ್ರಿ ರಚಿಸಿದೆ. ವಿಶೇಷ ತನಿಖಾ ತಂಡದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್(ಐಜಿಪಿ) ಪ್ರಮೋದ್ ವರ್ಮಾ, ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಕಲ್ಯಾಣ್ ಚಕ್ರವರ್ತಿ ಮತ್ತು ಎಸ್‌ಪಿ ವಾಹಿನಿ ಸಿಂಗ್ ಇದ್ದಾರೆ. ಹೈಕೋರ್ಟ್ ಆದೇಶ ಬಳಿಕ ದಾಖಲಿಸಲಾಗಿರುವ ಎಫ್‌ಐಆರ್ ತನಿಖೆಗೆ ಐಜಿಪಿ ಶ್ರೇಣಿ ಅಧಿಕಾರಿ ನೇತೃತ್ವದಲ್ಲಿ ಮೂವರು ಸದಸ್ಯರ ವಿಶೇಷ ತನಿಖಾ ತಂಡವನ್ನು ಮಂಗಳವಾರ ಬೆಳಗ್ಗೆ 10 ಗಂಟೆಯೊಳಗೆ ರಚಿಸಬೇಕು. ಆ ತಂಡದಲ್ಲಿ ಮಹಿಳಾ ಅಧಿಕಾರಿಯೂ ಇರಬೇಕು. ವರದಿಯನ್ನು ಮೇ 28ರೊಳಗೆ ಸಲ್ಲಿಸಬೇಕು ಎಂದು ಸುಪ್ರೀಂ ಆದೇಶಿಸಿತ್ತು. ಸಚಿವ ವಿಜಯ್ ಶಾ ಕಾರ್ಯಕ್ರಮವೊಂದರಲ್ಲಿ ಭಾಷಣ ಮಾಡುವಾಗ, ಪಾಕಿಸ್ತಾನವನ್ನು ಉದ್ದೇಶಿಸಿ ಭಯೋತ್ಪಾದಕರೇ ನಿಮ್ಮದೇ ಸೋದರಿಯಿಂದ ಸುದ್ದಿಗೋಷ್ಠಿ ನಡೆಸಿ ನಿಮಗೆ ಉತ್ತರ ಕೊಡಿಸಿದ್ದೇವೆ ಎಂದಿದ್ದರು. ಕರ್ನಲ್ ಸೋಫಿಯಾ ಖುರೇಷಿ ಅವರನ್ನು ಭಯೋತ್ಪಾದಕರ ಸಹೋದರಿ ಎಂಬರ್ಥದಲ್ಲಿ ಹೇಳಿದ್ದಾರೆ ಎಂದು ಸಚಿವರ ವಿರುದ್ಧ ಆಕ್ರೋಶ ವ್ಯಕ್ತವಾಗಿತ್ತು.

ಫ್ರಾನ್ಸ್ ಅಧ್ಯಕ್ಷರ ನಕಾರ: ಯೂನುಸ್ ಮುಖಭಂಗ

ಪ್ಯಾರಿಸ್: ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಾಂಗ್ಲಾದೇಶಕ್ಕೆ ಮುಖಭಂಗವಾಗಿದೆ. ಫ್ರಾನ್ಸ್‌ನ ಅಧ್ಯಕ್ಷ ಎಮ್ಯಾನುಯಲ್ ಮ್ಯಾಕ್ರಾನ್ ಬಾಂಗ್ಲಾದೇಶದ ಮಧ್ಯಂತರ ಸರಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ಜತೆಗೆ ದ್ವಿಪಕ್ಷೀಯ ಮಾತುಕತೆ ನಡೆಸಲು ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ವಿಶ್ವಸಂಸ್ಥೆಯ 3ನೇ ಓಶನ್ ಕಾನ್ಫರೆನ್ಸ್ ಜೂ.9ರಿಂದ ಫ್ರಾನ್ಸ್ ದೇಶದ ನೈಸ್ ನಗರದಲ್ಲಿ ನಡೆಯಲಿದ್ದು, ಬಾಂಗ್ಲಾದೇಶದ ಹಂಗಾಮಿ ಆಡಳಿತಗಾರ ಭಾಗಿಯಾಗಲಿದ್ದರು. ಫ್ರಾನ್ಸ್ ಅಧ್ಯಕ್ಷ ಗಣ್ಯ ಅತಿಥಿಗಳಿಗಾಗಿ ಜೂ.8ರ ರಾತ್ರಿ ವಿಶೇಷ ಔತಣಕೂಟವನ್ನೂ ಆಯೋಜಿಸಿದ್ದಾರೆ., ಆ ವಿಶೇಷ ಸಮಾವೇಶದ ಸಂದರ್ಭದಲ್ಲೇ ದ್ವಿಪಕ್ಷೀಯ ಮಾತುಕತೆಗೆ ಇಚ್ಛಿಸಿದ ಯೂನುಸ್, ಫ್ರಾನ್ಸ್ ಅಧ್ಯಕ್ಷರ ಮುಂದೆ ಪ್ರಸ್ತಾವ ಮಂಡಿಸಿದ್ದರು. ಆದರೆ, ಆ ಪ್ರಸ್ತಾವಕ್ಕೆ ಮ್ಯಾಕ್ರಾನ್ ಅವರು ಸ್ಪಷ್ಟವಾಗಿ ನಿರಾಕರಿಸಿದರು. ಇದರಿಂದ ನೊಬೆಲ್ ಪ್ರಶಸ್ತಿ ಪುರಸ್ಕೃತ ಯೂನುಸ್‌ಗೆ ಮುಖಭಂಗವಾದಂತಾಗಿದೆ. ಪರಿಣಾಮ, ಯೂನುಸ್ ಪ್ಯಾರಿಸ್ ಪ್ರವಾಸ ರದ್ದುಗೊಳಿಸಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ. ಇದಕ್ಕೂ ಮುನ್ನ 2023ರಲ್ಲಿ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯಲ್ ಮ್ಯಾಕ್ರಾನ್ ಬಾಂಗ್ಲಾದೇಶಕ್ಕೆ ಭೇಟಿ ನೀಡಿದ್ದರು. ನಂತರದಲ್ಲಿ ಬಾಂಗ್ಲಾಗೆ ಫ್ರಾನ್ಸ್ ಅಧ್ಯಕ್ಷರು ಭೇಟಿ ನೀಡಿಲ್ಲ ಎಂಬುದು ಉಲ್ಲೇಖಾರ್ಹ.

ಸಮಾಚಾರ ಸಣ್ಣದಲ್ಲ

ಯೋಗಾಭ್ಯಾಸದಿಂದ ರೋಗಗಳಿಗೆ ಮುಕ್ತಿ

ಬೆಂಗಳೂರು: ಯೋಗವೊಂದು ಉತ್ತಮ ಆರೋಗ್ಯದ ಕೈಪಿಡಿ, ಯೋಗವನ್ನು ಅಳವಡಿಸಿಕೊಂಡರೆ ಆರೋಗ್ಯಯುತ ಜೀವನವನ್ನು ಕಾಣಬಹುದು ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ. ಸಿ.ಎನ್. ಮಂಜುನಾಥ್ ಅವರು ಹೇಳಿದರು. ಅಂತಾರಾಷ್ಟ್ರೀಯ ಯೋಗ ದಿನದ ಹಿನ್ನೆಲೆ ಪೂರ್ವಭಾವಿಯಾಗಿ ಲೈಫ್ ಎಟರ್ನಲ್ ಟ್ರಸ್ಟ್‌ನ ಆಯೋಜನೆಯಲ್ಲಿ, ಸಹಜ ಯೋಗ ಸಂಸ್ಥೆಯು ಸಾರ್ವಜನಿಕರಲ್ಲಿ ಯೋಗ ಕುರಿತು ಜಾಗೃತಿ ಮೂಡಿಸಲು ಹಾಗೂ ಧ್ಯಾನದ ಮಹತ್ವ ತಿಳಿಸಿ ಕೊಡಲು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಂಚರಿಸಲು ಸಿದ್ಧವಾಗಿರುವ ಮೊಬೈಲ್ ವಾಹನಕ್ಕೆ ಪದ್ಮನಾಭನಗರದಲ್ಲಿ ಡಾ. ಸಿ.ಎನ್. ಮಂಜುನಾಥ್ ಅವರು ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ಯೋಗ ಎನ್ನುವುದು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ಆಧ್ಯಾತ್ಮಿಕ ಮತ್ತು ವೈಜ್ಞಾನಿಕ ಪ್ರಕ್ರಿಯೆ. ಏಕೆಂದರೆ ಔಷಧ ಅಲ್ಲದ ಔಷಧಿಯ ಗುಂಪಿನ ಪಟ್ಟಿಯಲ್ಲಿ ಯೋಗ ಮತ್ತು ಧ್ಯಾನ ಸೇರುತ್ತದೆ. ಆಧುನಿಕ ತಂತ್ರಜ್ಞಾನ ಮತ್ತು ಡಿಜಿಟಲೀಕರಣ ಕಾಲಘಟ್ಟದಲ್ಲಿ ನಾವು ಯಂತ್ರಗಳಂತೆ ಕಾರ್ಯನಿರ್ವಹಿಸುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಯೋಗ ಮತ್ತು ಧ್ಯಾನ ಮಾಡುವ ಮೂಲಕ ನಮ್ಮ ಮನಸ್ಸಿಗೆ ನೆಮ್ಮದಿ ಕಂಡುಕೊಳ್ಳಬಹುದು. ಮನಸ್ಸು, ಮೆದುಳು ಹಾಗೂ ದೇಹವನ್ನು ಒಗ್ಗೂಡಿಸುವ ಗಂಗೋತ್ರಿಯೆಂದರೆ ಅದು ಯೋಗ ಎಂದು ಅವರು ಅಭಿಪ್ರಾಯಪಟ್ಟರು.

ಕನ್ನಡ ಕಲಿಕಾ ಕಾರ್ಯಕ್ರಮ ವಿಸ್ತರಣೆ

ಬೆಂಗಳೂರು: ಕನ್ನಡೇತರಿಗೆ ಕನ್ನಡ ಕಲಿಕಾ ಕಾರ್ಯಕ್ರಮ ರಾಜ್ಯಾದ್ಯಂತ ವಿಸ್ತರಿಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ

ತಿಳಿಸಿದ್ದಾರೆ. ಈ ಕುರಿತ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಇಲ್ಲಿಯವರೆಗೆ ಬಹುಪಾಲು ಬೆಂಗಳೂರು ನಗರಕ್ಕೆ ಸೀಮಿತವಾಗಿದ್ದ ಅನ್ಯಭಾಷಿಕರಿಗೆ ಕನ್ನಡ ಕಲಿಕಾ ಕಾರ್ಯಕ್ರಮ ರಾಜ್ಯಾದ್ಯಂತ ವಿಸ್ತರಿಸಲು ತೀರ್ಮಾನಿಸಲಾಗಿದೆ. ರಾಜ್ಯಾದ್ಯಂತ ಕೇಂದ್ರೋದ್ಯಮಗಳು, ಬ್ಯಾಂಕುಗಳು, ಕೇಂದ್ರ ಸರಕಾರಿ ಸಂಸ್ಥೆಗಳಲ್ಲಿ ಹಲವಾರು ಅನ್ಯಭಾಷಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ವ್ಯಾಪಾರ-ವ್ಯವಹಾರಗಳಿಗೆ ಬೇರೆ ರಾಜ್ಯಗಳಿಂದ ಬಂದು ಕರ್ನಾಟಕದಲ್ಲಿ ನೆಲೆ ಕಂಡುಕೊಂಡಿದ್ದಾರೆ. ಈ ಸಮುದಾಯಗಳನ್ನು ಪ್ರತಿ ಜಿಲ್ಲೆಗಳಲ್ಲಿ ಗುರುತಿಸಿ ಅವರಿಗೆ ಕನ್ನಡ ಕಲಿಸುವ ಪ್ರಯತ್ನ ಮಾಡಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಿರ್ಣಯಿಸಿದೆ. ಈ ಬೃಹತ್ ಅಭಿಯಾನಕ್ಕೆ ರಾಜ್ಯಾದ್ಯಂತ ಇರುವ ಆಸಕ್ತ ಸಂಘ ಸಂಸ್ಥೆಗಳು ಸಂಬಂಧಪಟ್ಟ ಜಿಲ್ಲಾಡಳಿತದೊಂದಿಗೆ ನೋಂದಾಯಿಸಿಕೊಳ್ಳಬಹುದು. ತರಗತಿ ನಡೆಸಲು ಸ್ಥಳಾವಕಾಶ ಒದಗಿಸುವ ಜತೆಗೆ ಜಿಲ್ಲಾಡಳಿತಗಳಿಂದ ನೇಮಿಸಲ್ಪಡುವ ಶಿಕ್ಷಕರುಗಳಿಗೆ ಗೌರವ ಸಂಭಾವನೆಯನ್ನು ಪ್ರಾಧಿಕಾರವೇ ನೀಡಲಿದೆ ಎಂದು ಮಾಹಿತಿ ನೀಡಿದ್ದಾರೆ.

ನಗರದ 8 ವಲಯಗಳಲ್ಲಿ ಮಳೆ | ಹಾನಿ ಪ್ರದೇಶಗಳಿಗೆ ಅಧಿಕಾರಿಗಳು ಭೇಟಿ, ಪರಿಶೀಲನೆ

ಬಿಬಿಎಂಪಿಯಿಂದ ವಲಯವಾರು ಸುರಕ್ಷತಾ ಕ್ರಮ

ಬೆಂಗಳೂರು: ಬಿಬಿಎಂಪಿಯ 8 ವಲಯಗಳಲ್ಲಿ ಮಳೆಯಾಗುತ್ತಿರುವ ಹಿನ್ನೆಲೆ ಅಧಿಕಾರಿಗಳು ಸದಾ ಸನ್ನದ್ಧರಾಗಿ ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರೆಲ್ಲರೂ ಎಚ್ಚರಿಕೆಯಿಂದಿದ್ದು, ಸಮಸ್ಯೆಯೆದುರಾದರೆ ಸಹಾಯವಾಣಿ ಸಂಖ್ಯೆ - 1533 ಗೆ ಕರೆ ಮಾಡಿ ದೂರು ನೀಡಲು ಕೋರಿದೆ.

ಮಹದೇವಪುರ ವಲಯದ ಸಾಯಿ ಲೇಔಟ್ ಗೆ ವಲಯ ಆಯುಕ್ತ ರಮೇಶ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ನೀರಿನ ಪ್ರಮಾಣ ಶೇ. 80 ರಷ್ಟು ಕಡಿಮೆಯಾಗಿದ್ದು, ಮಂಗಳವಾರ ಮಳೆ ಬರದಿದ್ದರೆ ಸಂಪೂರ್ಣವಾಗಿ ನೀರು ಹೊರಹೋಗಲಿದೆ. ಚರಂಡಿಗಳ ಸ್ಲ್ಯಾಬ್ ತೆಗೆದು ಜೆಸಿಬಿ ಹಾಗೂ ಸಿಬ್ಬಂದಿ ಮೂಲಕ ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಲಾಗಿದೆ.

ಸಾಯಿ ಲೇಔಟ್‌ನಲ್ಲಿ ಆರೋಗ್ಯ ಶಿಬಿರ: ಪಾಲಿಕೆ ಅಧಿಕಾರಿಗಳು ಖುದ್ದು ಸ್ಥಳದಲ್ಲಿದ್ದು, ಸಮಸ್ಯೆಯನ್ನು ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಸ್ಥಳದಲ್ಲಿ 1 ಜೆ.ಸಿ.ಬಿ, 2 ಟ್ರ್ಯಾಕ್ಟರ್, 2 ಎಚ್.ಪಿ ಪಂಪ್ ಸೆಟ್ ಗಳಿದ್ದು, 16 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಣ್ಣ ಅವಧಿಯಲ್ಲಿ ಅಧಿಕ ಮಳೆಯಾದ ಪರಿಣಾಮ ಸಮಸ್ಯೆಯಾಗಿದ್ದು, ಮಳೆ ಕಡಿಮೆಯಾದರೆ ನೀರಿನ ಮಟ್ಟ ಕ್ರಮೇಣ ಕಡಿಮೆಯಾಗಲಿದೆ. ಸ್ಥಳೀಯ ನಿವಾಸಿಗಳಿಗೆ ದಿನದ ಮೂರು ಹೊತ್ತು ತಿಂಡಿ, ಊಟ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಸಾಯಿ ಲೇಔಟ್ ಪ್ರದೇಶ ಜಲಾವೃತವಾಗಿರುವ ಪರಿಣಾಮ ನಿವಾಸಿಗಳಿಗಾಗಿ ಪಾಲಿಕೆಯ ಆರೋಗ್ಯ ವಿಭಾಗದಿಂದ ಆರೋಗ್ಯ ಶಿಬಿರವನ್ನು ಆಯೋಜಿಸಿದ್ದು, ನಿವಾಸಿಗಳಿಗೆ ಪರೀಕ್ಷೆ ಮಾಡಿ ಔಷಧ ಹಾಗೂ ಮಾತ್ರೆಗಳನ್ನು ಉಚಿತವಾಗಿ ವಿತರಿಸಲಾಯಿತು.

ಪಂಪ್ ಸೆಟ್ ಅಳವಡಿಸಿ ನೀರು ತೆರವು: ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ಎಚ್.ಎಸ್.ಆರ್, ಅನುಗ್ರಹ ಲೇಔಟ್ ನಲ್ಲಿ ಜಲಾವೃತವಾಗಿದ್ದ ಪ್ರದೇಶಗಳಲ್ಲಿ ಪಂಪ್ ಸೆಟ್ ಗಳನ್ನು ಅಳವಡಿಸಿ ನೀರು ತೆರವು ಮಾಡಲಾಗಿದೆ. ಪಶ್ಚಿಮ ವಲಯದ ವಲಯ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಕೆ.ಆರ್ ಮಾರುಕಟ್ಟೆ ಹಾಗು ಬೇಲಿಮಠ ರಸ್ತೆಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಕೆ.ಆರ್ ಮಾರುಕಟ್ಟೆ ಪಾರ್ಕಿಂಗ್ ಸ್ಥಳದಲ್ಲಿ ನೀರು ನಿಂತಿದ್ದು, ಅದನ್ನು ತೆರವುಗೊಳಿಸಲು ಸೂಚಿಸಿದರು. ರಸ್ತೆಗಳಲ್ಲಿ ಜಲಾವೃತವಾಗುವ ಪ್ರದೇಶಗಳ ಮೇಲೆ ಹೆಚ್ಚು ನಿಗಾವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ಎಚ್.ಎಸ್.ಆರ್, ಅನುಗ್ರಹ ಲೇಔಟ್ ನಲ್ಲಿ ಜಲಾವೃತವಾಗಿದ್ದ ಪ್ರದೇಶಗಳಲ್ಲಿ ಪಂಪ್ ಸೆಟ್ ಗಳನ್ನು ಅಳವಡಿಸಿ ನೀರು ತೆರವು ಮಾಡಲಾಯಿತು.

ವರ್ಚ್ಯುವಲ್ ಸಭೆ ಮೂಲಕ ಅಧಿಕಾರಿಗಳಿಗೆ ಸೂಚನೆ

ಬೆಂಗಳೂರು ನಗರದಲ್ಲಿ ನಿರಂತರವಾಗಿ ಮಳೆಯಾಗುತ್ತಿರುವ ಹಿನ್ನೆಲೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ವರ್ಚ್ಯುವಲ್ ಮೂಲಕ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅಗತ್ಯ ನಿರ್ದೇಶನಗಳನ್ನು ನೀಡಿದ್ದು, ಬಿಬಿಎಂಪಿ ಎಲ್ಲಾ ವಲಯಗಳಲ್ಲಿ ನಾಗರಿಕರಿಂದ ನಿಯಂತ್ರಣ ಕೊಠಡಿಗಳಿಗೆ ಬಂದಂತಹ ದೂರುಗಳಿಗೆ ಕೂಡಲೇ ಸ್ಪಂದಿಸಿ ಇರುವ ಸಮಸ್ಯೆಗಳನ್ನು ಬಗೆಹರಿಸಬೇಕು. ನಾಗರಿಕರಿಗೆ ತ್ವರಿತವಾಗಿ ಸ್ಪಂದಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಸದಾ ಕಾರ್ಯಪ್ರವೃತ್ತವಾಗಿ ಕಾರ್ಯನಿರ್ವಹಿಸಲು ಸೂಚಿಸಿದರು. ಪಾಲಿಕೆಯ ಎಲ್ಲಾ 8 ವಲಯಗಳ ವ್ಯಾಪ್ತಿಯ ಅಗ್ನಿ ಶಾಮಕ ಠಾಣೆಗಳೊಂದಿಗೆ ವಲಯ ಆಯುಕ್ತರುಗಳು ಹಾಗೂ ಅಧಿಕಾರಿಗಳು ಸದಾ ಸಂಪರ್ಕದಲ್ಲಿದ್ದು, ತುರ್ತು ಸಂದರ್ಭಗಳಲ್ಲಿ ಅಗ್ನಿ ಶಾಮಕದಳದ ಸಿಬ್ಬಂದಿ ಹಾಗೂ ವಾಹನಗಳನ್ನು ಬಳಸಿಕೊಳ್ಳಲು ಸೂಚಿಸಿದರು.

ಸಚಿವ ರಾಮಲಿಂಗಾರೆಡ್ಡಿ, ಮುಖ್ಯ ಆಯುಕ್ತರ ಭೇಟಿ: ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ರಾಜಕಾಲುವೆ ಹಾಗೂ ಮೆಟ್ರೋ ಕಾಮಗಾರಿಯಿಂದಾಗಿ ನೀರಿನ ಹರಿವು ಸರಿಯಾಗಿ ಹೋಗಲು ಜಾಗ ಇಲ್ಲದ ಕಾರಣ ರಸ್ತೆ ಜಲಾವೃತವಾಗುತ್ತಿದೆ. ಈ ಹಿನ್ನೆಲೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹಾಗೂ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ರಾಜಕಾಲುವೆಯಲ್ಲಿ ನೀರಿನ ಹರಿವಿನ ಮಟ್ಟ ಹೆಚ್ಚಾಗಿರುವ ಪರಿಣಾಮ ಸಿಲ್ಕ್ ಬೋರ್ಡ್ ಜಂಕ್ಷನ್ ಜಲಾವೃತವಾಗಿದೆ. ಸದರಿ ಜಂಕ್ಷನ್ ನಲ್ಲಿ ರಾಜಕಾಲುವೆಯ ಪುನರ್ ನವೀಕರಣ ಕಾಮಗಾರಿ ಕೈಗೆತ್ತಿಕೊಳ್ಳಬೇಕಿದ್ದು, ಮೆಟ್ರೋ ಇಲಾಖೆಯಿಂದ ಅಗತ್ಯ ಕ್ರಮಗಳನ್ನು ಕೈಗೊಂಡು ಜಲಾವೃತವಾಗುವುದನ್ನು ತಪ್ಪಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಕೆ.ಎ.ಎಸ್ ಆಫೀಸರ್ಸ್ ಲೇಔಟ್ ನಲ್ಲಿ ಕಾಲುವೆಯ ನಿರ್ಮಾಣ ಮಾಡಬೇಕಿದ್ದು, ಸದರಿ ಸ್ಥಳದಲ್ಲಿ ಖಾಸಗಿ ಸ್ಥಳ ಬರಲಿದ್ದು, ಭೂಸ್ವಾಧೀನ ಮಾಡಿಕೊಳ್ಳಬೇಕಿದೆ. ಈ ಸಂಬಂಧ ವಿಪತ್ತು ನಿರ್ವಹಣೆ ಅಡಿ ತಾತ್ಕಾಲಿಕವಾಗಿ ನೀರು ಹರಿದು ಹೋಗುವಂತೆ ವ್ಯವಸ್ಥೆ ಮಾಡಿ ನಂತರದ ಶಾಶ್ವತ ಕಾಲುವೆ ನಿರ್ಮಾಣ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಾಲೀಕರಿಗೆ ಶೋಕಾಸ್ ನೋಟಿಸ್:

ರಾಜರಾಜೇಶ್ವರಿ ನಗರ ವಲಯದ ಅಂದರಹಳ್ಳಿ ಮುಖ್ಯ ರಸ್ತೆ ಜನನಿ ಶಾಲೆಯ ಬಳಿ ತಡೆಗೋಡೆ ಕುಸಿದ ಪರಿಣಾಮ ರಸ್ತೆ ಬದಿಯಿರುವ ಚರಂಡಿ ದುರಸ್ತಿಯಾಗಿದೆ. ಅಲ್ಲದೆ ವಿದ್ಯುತ್ ಕಂಬ ಕೂಡ ಬಿದ್ದಿದೆ. ಈ ಸಂಬಂಧ ಮಾಲೀಕರಿಗೆ ಶೋಕಾಸ್ ನೋಟಿಸ್ ನೀಡಲು ಅಧಿಕಾರಿಗಳಿಗೆ ಸೂಚನೆ ನಿಡಲಾಗಿದೆ. ಜವರೇಗೌಡನದೊಡ್ಡಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೈಡ್ ಡ್ರೈನ್ ಗಳು ಬ್ಲಾಕ್ ಆಗಿರುವ ಪರಿಣಾಮ ನೀರು ನಿಂತು ಜಲಾವೃತವಾಗಿದೆ. ಈ ಸಂಬಂಧ ರಸ್ತೆ ಭಾಗ ಕತ್ತರಿಸಿ ನೀರು ಹರಿದು ಹೋಗಲು ವ್ಯವಸ್ಥೆ ಮಾಡಲಾಗಿದೆ. ಜತೆಗೆ ಸೈಡ್ ಡ್ರೈನ್ ಗಳ ಸ್ವಚ್ಛತಾ ಕಾರ್ಯ ಮಾಡಲಾಗುತ್ತಿದೆ.

ವಿದ್ಯಾಮಂದಿರ ಸ್ಕೂಲ್ ಬಳಿ ರಸ್ತೆಯ ಅರ್ಧ ಭಾಗ ಒತ್ತುವರಿ ಮಾಡಿಕೊಂಡು ಗೋಡೆ ನಿರ್ಮಾಣ ಮಾಡಿರುತ್ತಾರೆ. ಈ ಪೈಕಿ ಸ್ಥಳದಲ್ಲೇ ಜೆಸಿಬಿಯನ್ನು ತರಿಸುವ ಮೂಲಕ ಗೋಡೆ ತೆರವು ಮಾಡಲಾಗಿದ್ದು, ವಿಪತ್ತು ನಿರ್ವಹಣೆ ಅಡಿ ಕೂಡಲೇ ಕಚ್ಚಾ ಡ್ರೈನ್ ನಿರ್ಮಾಣ ಮಾಡಿ ನೀರು ಹರಿದು ಹೋಗುವಂತೆ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿ ಕ್ರಮಗಳು

- **2024-25 ನೇ ಸಾಲಿನಲ್ಲಿ ಕರ್ನಾಟಕ ಸರತಕಾರವು ಕರ್ನಾಟಕ ಜಲ ಭದ್ರತೆ ಮತ್ತು ವಿಪತ್ತು ಸ್ಥಿತಿ ಸ್ಥಾಪಕತ್ವ ಯೋಜನೆ ಅಡಿಯಲ್ಲಿ 2,000 ಕೋಟಿ ರು.ಗಳನ್ನು ಪಾಲಿಕೆಗೆ ಅನುದಾನ ಒದಗಿಸುತ್ತಿದ್ದು, ಈ ಯೋಜನೆ ಅಡಿಯಲ್ಲಿ ಬಾಕಿ ಇರುವ ಎಲ್ಲಾ 173.90 ಕಿ.ಮೀ ಉದ್ದ ಮಣ್ಣಿನ ಕಾಲುವೆಗಳಿಗೆ ಆರ್.ಸಿ.ಸಿ ತಡೆಗೋಡೆ ನಿರ್ಮಿಸಲಾಗುತ್ತಿದೆ.**
- **ಕೆ.ಎಸ್.ಎನ್.ಡಿ.ಎಂ.ಸಿ ಸಂಸ್ಥೆಯ ವತಿಯಿಂದ ಹೆಚ್ಚುವರಿಯಾಗಿ ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳಲಾಗುವುದು.**
- **ಬೃಹತ್ ನೀರುಗಾಲುವೆಗಳ ಒತ್ತುವರಿಗಳನ್ನು ಪರಿಣಾಮಕಾರಿಯಾಗಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.**
- **ಹಾಲಿ ಬೆಂಗಳೂರು ನಗರದಲ್ಲಿರುವ ಕೆರೆಗಳಿಗೆ ತೂಬುಕಾಲುವೆಗಳನ್ನು ಅಳವಡಿಸಿ ಕೆರೆಗಳನ್ನು ಪ್ರವಾಹ ತಡೆಗಟ್ಟುವ ಸಾಧನಗಳಾಗಿ ಬಳಸಲು ಉದ್ದೇಶಿಸಲಾಗಿದೆ.**

ಧರೆಗುರುಳಿದ ಮರಗಳ ತೆರವು

ನಗರದಲ್ಲಿ ಸೋಮವಾರ ಸುರಿದ ಮಳೆಯಿಂದಾಗಿ 25 ಮರಗಳು, 44 ಮರದ ರೆಂಬೆ/ಕೊಂಬೆಗಳು ಧರೆಗುರುಳಿರುವ ದೂರುಗಳು ದಾಖಲಾಗಿದ್ದು, ಈವರೆಗೆ 10 ಮರಗಳು ಹಾಗೂ 25 ಮರದ ರೆಂಬೆ/ಕೊಂಬೆಗಳನ್ನು ತೆರವುಗೊಳಿಸಲಾಗಿದೆ. ಉಳಿದ ಮರ, ಮರದ ರೆಂಬೆ/ಕೊಂಬೆಗಳ ತೆರವು ಕಾರ್ಯಾಚರಣೆಯಲ್ಲಿ ಮರ ತೆರವುಗೊಳಿಸುವ ತಂಡ ಕಾರ್ಯನಿರತವಾಗಿದೆ.

ನಗರದಲ್ಲಿ 75 ಕೆರೆಗಳು ಭರ್ತಿ

ಬಿಬಿಎಂಪಿ ವ್ಯಾಪ್ತಿಗೆ 183 ಕೆರೆಗಳು ಬರಲಿದ್ದು, ಈ ಪೈಕಿ ನಿರಂತವಾಗಿ ಮಳೆಯಾಗುತ್ತಿರುವ ಹಿನ್ನೆಲೆ ಈಗಾಗಲೇ ಸುಮಾರು 75 ಕೆರೆಗಳು ಭರ್ತಿಯಾಗಿದ್ದು, ತುಂಬಿರುವ ಎಲ್ಲಾ ಕೆರೆಗಳ ತೂಬುಗಳ ಬಳಿ ಸ್ವಚ್ಛತಾ ಕಾರ್ಯ ಮಾಡಲಾಗುತ್ತಿದೆ. ಜತೆಗೆ ಕಾಲುವೆಗಳಲ್ಲಿ ತುಂಬಿರುವ ಕಸ-ಕಡ್ಡಿ, ಪ್ಲಾಸ್ಟಿಕ್ ಸೇರಿದಂತೆ ಇನ್ನಿತರೆ ತ್ಯಾಜ್ಯವನ್ನು ಸ್ವಚ್ಛಗೊಳಿಸಲಾಗುತ್ತಿದೆ.

ವಿಮೆ: ಷರತ್ತು ಸಡಿಲಿಸಲು ಒತ್ತಾಯ

ಬೆಂಗಳೂರು: ಪತ್ರಿಕಾ ವಿತರಕರ ಅಪಘಾತ ವಿಮಾ ಯೋಜನೆಯ ಕೆಲ ಷರತ್ತುಗಳನ್ನು ಸಡಿಲಿಸುವಂತೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಅವರ ಜತೆಗೂಡಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರನ್ನು ಭೇಟಿ ಮಾಡಿದ ಅವರು, ಪತ್ರಿಕಾ ವಿತರಕರ ವಿಮಾ ಯೋಜನೆ ಕೆಲ ಕಠಿಣ ಷರತ್ತುಗಳನ್ನು ಹೊಂದಿದೆ. ಈ ಕಾರಣದಿಂದಾಗಿ ಪತ್ರಿಕಾ ವಿತರಕರಿಗೆ ಇದು ತಲುಪುವುದು ಕಷ್ಟವಾಗಿದೆ. ಕೆಲ ನಿಯಮಗಳನ್ನು ಸಡಿಲಗೊಳಿಸುವ ಮೂಲಕ ವಿಮಾ ಯೋಜನೆ ಎಲ್ಲರನ್ನು ತಲುಪುವಂತೆ ಮಾಡಬೇಕು ಎಂದು ಮನವಿ ಮಾಡಿದರು.

ಕೆ.ವಿ.ಪ್ರಭಾಕರ್ ಭೇಟಿ ನಂತರ ಸಿಎಂ ಸಿದ್ದರಾಮಯ್ಯ ಹಾಗೂ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ಭೇಟಿ ಮಾಡಿ ಪ್ರತ್ಯೇಕ ಮನವಿ ಸಲ್ಲಿಸಲಾಯಿತು. ಈ ಬಗ್ಗೆ ಪರಿಶೀಲಿಸಿ ಪತ್ರಿಕಾ ವಿತರಕರ ಒಕ್ಕೂಟ ಸೇರಿದಂತೆ ಸಮಿತಿ ರಚಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಂತೋಷ್ ಲಾಡ್ ಭರವಸೆ ನೀಡಿದರು. ಇದೇ ಸಂದರ್ಭದಲ್ಲಿ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಐದನೇ ರಾಜ್ಯ ಸಮ್ಮೇಳನಕ್ಕೆ ಮುಖ್ಯಮಂತ್ರಿಗಳನ್ನು ಆಹ್ವಾನಿಸಲಾಯಿತು.

ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು ಹಾಗೂ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಅವರು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರನ್ನು ಭೇಟಿ ಪತ್ರಿಕಾ ವಿತರಕರ ವಿಮಾ ಯೋಜನೆಯ ಕೆಲ ಷರತ್ತುಗಳನ್ನು ಸಡಿಲಿಸುವಂತೆ ಮನವಿ ಪತ್ರ ಸಲ್ಲಿಸಿದರು.

ರಾಜ್ಯದಲ್ಲಿ ವಾರ ಕಾಲ ಮಳೆ ಮುಂದುವರಿಕೆ

ಬೆಂಗಳೂರು: ರಾಜ್ಯಾದ್ಯಂತ ಕಳೆದ ಮೂರು ದಿನಗಳಿಂದ ಅಬ್ಬರದ ಮಳೆಯಾಗುತ್ತಿದ್ದು, ಭಾನುವಾರ ರಾತ್ರಿಯಿಂದ ದಾಖಲೆಯ ಮಳೆಯ ಜತೆಗೆ ಭಾರಿ ಅವಾಂತರ ಸೃಷ್ಟಿಯಾಗಿದೆ.

ಭಾನುವಾರ, ಸೋಮವಾರ ಮಾತ್ರವಲ್ಲದೇ ಮಂಗಳವಾರವೂ ರಾಜ್ಯದ ಬಹುತೇಕ ಕಡೆಗಳಲ್ಲಿ ವರುಣ ಅಬ್ಬರಿಸಿ ಬೊಬ್ಬಿರಿಯುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಜನರು ಮಳೆ ಯಾವಾಗ ನಿಲ್ಲುತ್ತದೆ ಎಂದು ಎದುರು ನೋಡುವಂತಹ ಸ್ಥಿತಿ ನಿರ್ಮಾಣವಾಗಿದೆ.

ಹವಾಮಾನ ಇಲಾಖೆ ವರದಿಯ ಪ್ರಕಾರ, ಅರಬ್ಬಿ ಸಮುದ್ರದಲ್ಲಿ ಉಂಟಾಗಿರುವ ವಾಯುಭಾರ ಕುಸಿತದಿಂದಾಗಿ ರಾಜ್ಯಾದ್ಯಂತ ಮುಂದಿನ ಮೂರು ದಿನಗಳ ಕಾಲ ಗಾಳಿ ಸಹಿತ ಭಾರೀ ಮಳೆಯಾಗಲಿದ್ದು, ಚಂಡಮಾರು ತವಾಗಿ ಪರಿವರ್ತನೆಯಾಗುವ ಸಾಧ್ಯತೆ ಇದೆ. ಹವಾಮಾನ ಇಲಾಖೆಯು ರಾಜ್ಯದ ವಿವಿಧ ಜಿಲ್ಲೆಗಳಿಗೆ ರೆಡ್, ಆರೆಂಜ್ ಮತ್ತು ಎಲ್ಲೋ ಅಲರ್ಟ್ ಘೋಷಿಸಿದೆ. ಕರಾವಳಿ, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ. ಬೆಂಗಳೂರಿನಲ್ಲಿ ಮೇ 21ರಂದು ಭಾರಿ ಮಳೆಯ ಹಿನ್ನೆಲೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ರೆಡ್ ಮತ್ತು ಆರೆಂಜ್ ಅಲರ್ಟ್: ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೇ.20ರಿಂದ ಮೂರು ದಿನಗಳ ಕಾಲ ರೆಡ್ ಅಲರ್ಟ್ ಘೋಷಿಸಲಾಗಿದ್ದು, ಈ ಜಿಲ್ಲೆಗಳಲ್ಲಿ ಗುಡುಗು-ಮಿಂಚು ಸಹಿತ ಭಾರೀ ಮಳೆಯಾಗುವ ಸಾಧ್ಯತೆ ಇದೆ. ಮೇ 23ರಂದು ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಆರೆಂಜ್ ಅಲರ್ಟ್, ಉತ್ತರ ಕನ್ನಡದಲ್ಲಿ ಎಲ್ಲೋ ಅಲರ್ಟ್ ಘೋಷಿಸಲಾಗಿದೆ. ಮೇ 24 ಮತ್ತು 25ರಂದು ಎಲ್ಲೋ ಅಲರ್ಟ್, ಮೇ 26 ಮತ್ತು 27ರಂದು ಆರೆಂಜ್ ಅಲರ್ಟ್ ಜಾರಿಯಲ್ಲಿರಲಿದೆ. ಕರಾವಳಿ ಭಾಗದಲ್ಲಿ ಈ ವಾರವಿಡೀ ಮಳೆಯಾಗಲಿದ್ದು, ಬಲವಾದ ಗಾಳಿಯ ಜತೆಗೆ ಮಳೆಯಾಗುವುದರಿಂದ ಪ್ರವಾಹವುಂಟಾಗಲಿದೆ ಹೀಗಾಗಿ ಜನರು ಎಚ್ಚರಿಕೆ ವಹಿಸಬೇಕು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಧಾರವಾಡ, ಹಾವೇರಿ, ಕೊಡಗು, ಹಾಸನದಲ್ಲಿ ಮುಂದಿನ ಮೂರು ದಿನಗಳ ಕಾಲ ಭಾರಿ ಬಿರುಸಿನಲ್ಲಿ ಮಳೆಯಾಗುವ ಸಾಧ್ಯತೆಯಿದ್ದು, ಬೆಳಗಾವಿ, ಬಾಗಲಕೋಟೆ, ಧಾರವಾಡ, ಶಿವಮೊಗ್ಗ, ಉತ್ತರ ಕನ್ನಡ, ಹಾವೇರಿ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಬೆಂಗಳೂರು ಸೇರಿದಂತೆ ಕರ್ನಾಟಕದಾದ್ಯಂತ ಉಳಿದ ಜಿಲ್ಲೆಗಳಿಗೆ ಹಳದಿ ಅಲರ್ಟ್ ನೀಡಲಾಗಿದೆ. ಮಧ್ಯಮ ಮಳೆ ಮತ್ತು ಪ್ರತ್ಯೇಕ ಗುಡುಗು ಸಹಿತ ಮಳೆಯಾಗುವ ನಿರೀಕ್ಷೆಯಿರುವುದರಿಂದ ನಿವಾಸಿಗಳು ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳ ಬಗ್ಗೆ ಎಚ್ಚರದಿಂದಿರಬೇಕು ಎಂದು ಎಚ್ಚರಿಸಿದೆ.

ಜನ ಸತ್ತು ಬದುಕುತ್ತಿದ್ದರೆ ಇವರಿಗೆ ಸಾಧನಾ ಸಮಾವೇಶದ ಚಿಂತೆ: ಎಚ್‌ಡಿಕೆ

ಬ್ರ್ಯಾಂಡೆಡ್ ನರಕದಲ್ಲಿ ಬೆಂಗಳೂರು ಜನ

ನವದೆಹಲಿ: ಸತತ ಮಳೆಯಿಂದ ತತ್ತರಿಸುತ್ತಿರುವ ಜನರು ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಬ್ರ್ಯಾಂಡೆಡ್ ನರಕದಲ್ಲಿ ನರಳುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಪತ್ರಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಜನ ಸತ್ತು ಬದುಕುತ್ತಿದ್ದರೆ ರಾಜ್ಯ ಕಾಂಗ್ರೆಸ್ ನಾಯಕರಿಗೆ ಸಾಧನಾ ಸಮಾವೇಶದ ಚಿಂತೆ. ವಾರದಿಂದ ಬಣ್ಣಬಣ್ಣದ ಸರಣಿ ಗ್ಯಾರಂಟಿ ಜಾಹೀರಾತು ಬೇರೆ..! ಬೆಂಗಳೂರು ಜನ ಬ್ರ್ಯಾಂಡೆಡ್ ನರಕದಲ್ಲಿದ್ದಾರೆ! ನಗರ ನರಳುತ್ತಿದ್ದರೆ ಇವರಿಗೆ ಪ್ರಚಾರದ ಗೀಳು ಎಂದು ಕಿಡಿ ಕಾರಿದ್ದಾರೆ.

ಕಾಂಗ್ರೆಸ್ ಸರಕಾರದ ಸಾಧನೆ ಬೆಂಗಳೂರು ರಸ್ತೆಗಳಲ್ಲಿ, ಚರಂಡಿಗಳಲ್ಲಿ ಕೊಚ್ಚೆಯಾಗಿ ಕೊಚ್ಚಿ ಹೋಗುತ್ತಿದೆ. ಇವರಿಗೆ ಆತ್ಮಸಾಕ್ಷಿ ಎನ್ನುವುದು ಇದೆಯಾ? ಸತ್ತ ಸರಕಾರಕ್ಕೆ ಸಾಧನೆ ಸಮಾವೇಶ ಬೇರೆ ಕೇಡು. ಡಿಸಿಎಂ ಡಿ.ಕೆ.ಶಿವಕುಮಾರ್ ಮಾತಿನ ಡಬ್ಬಾ ಹೊಡೆಯುವುದು ಬಿಟ್ಟು, ಪ್ರತಿಪಕ್ಷಗಳನ್ನು ನಿಂದಿಸುವುದನ್ನು ಪಕ್ಕಕ್ಕಿಟ್ಟು ಕೆಲಸ ಮಾಡಲಿ. ವಾರ್ ರೂಂನಲ್ಲಿ ಕೂತು ಜೆಡಿಎಸ್, ಬಿಜೆಪಿ ಮೇಲೆ ಪ್ರಾಕ್ಸಿವಾರ್ ಮಾಡಿದರೆ ಪ್ರಯೋಜನವೇನು? ಕೈಲಾಗದವ ನಿಗೆ ಬಾಯಿ ಭದ್ರ ಇರುವುದಿಲ್ಲ. ಈ ಮನುಷ್ಯ ಆ ಪರಿಸ್ಥಿತಿಯಲ್ಲಿದ್ದಾರೆ! ಎಂದಿದ್ದಾರೆ.

ಮಾತೆತ್ತಿದರೆ ಬೆಂಗಳೂರಿಗೆ ಕುಮಾರಸ್ವಾಮಿ ಏನು ಮಾಡಿದರೆಂದು ಕೇಳುತ್ತಾರೆ. 2006ರ 20 ತಿಂಗಳ ಅವಧಿಯಲ್ಲಿ 58 ರಸ್ತೆ ಅಗಲೀಕರಣ, ಮೆಟ್ರೋ ಮೊದಲ ಹಂತ ಕಾಮಗಾರಿಗೆ ಚಾಲನೆ, ಹೊಸ ಏರ್‌ಪೋರ್ಟ್ ರಸ್ತೆ, ನೆಲಮಂಗಲ ರಸ್ತೆ, ಎಲೆಕ್ಟ್ರಾನಿಕ್ ರಸ್ತೆ ಅಭಿವೃದ್ಧಿ ಸೇರಿ ಎಷ್ಟೋ ಕೆಲಸ ಮಾಡಿದ್ದೇನೆ. ಕೆರೆಯನ್ನೇ ನುಂಗಿ ಜೆಪಿ ನಗರ ಡಾಲರ್ಸ್ ಕಾಲೋನಿ ಮಾಡಿದ್ದರಲ್ಲ, ಆ ಮನೆಗಳಿಗೆ ಕೆರೆ ನೀರು ನುಗ್ಗುತ್ತಿದ್ದನ್ನು ತಪ್ಪಿಸಿದ್ದು ಯಾರು? ಎಂದು ಪ್ರಶ್ನಿಸಿದ್ದಾರೆ.

ಯಾವ ಪುರುಷಾರ್ಥಕ್ಕೆ ಗ್ರೇಟರ್ ಬೆಂಗಳೂರು?

ಯಾರ ಉದ್ಧಾರಕ್ಕೆ ಬ್ರ್ಯಾಂಡ್ ಬೆಂಗಳೂರು? ಲೂಟಿ ಹೊಡೆಯೋದಕ್ಕೆ ಹೊಸ ಹೊಸ ಹೆಸರೇ? ಎರಡು ವರ್ಷಗಳಿಂದ ಬ್ರ್ಯಾಂಡ್, ಬ್ರ್ಯಾಂಡ್ ಎಂದು ಭಜನೆ ಮಾಡುತ್ತಿದ್ದೀರಲ್ಲ.. ಬ್ರ್ಯಾಂಡ್ ಎಂದರೆ ಬೆಂಗಳೂರನ್ನು ಮುಳುಗಿಸುವುದಾ? ಎಂದು ಎಚ್‌ಡಿಕೆ ಪ್ರಶ್ನಿಸಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಇಲಾಖೆ ಈ ವ್ಯಕ್ತಿ ಪಾಲಿಗೆ ಬೆಂಗಳೂರು ನಗದು ಅಭಿವೃದ್ಧಿ ಇಲಾಖೆ. ಬಯಸಿದಾಗ ನೋಟಿನ ಮಳೆ ಸುರಿಸುವ ಅಕ್ಷಯಪಾತ್ರೆ, ಎರಡು ವರ್ಷಗಳಿಂದ ಸುರಿದ ನೋಟಿನ ಮಳೆ ಪ್ರಮಾಣ ಎಷ್ಟು? ಕೈ ಇಟ್ಟ ಕಡೆಯಲ್ಲಾ ದುಡ್ಡು! ಜನರ ಮೇಲೆ ತೆರಿಗೆ ಮೇಲೆ ತೆರಿಗೆ! ಎರಡು ವರ್ಷಗಳಲ್ಲಿ ಎಷ್ಟೊಂದು ಬಾರಿ ಸಾಯಿ ಬಡಾವಣೆ ಮುಳುಗಿತು? ಅಲ್ಲಿಗೆ ಡಿಸಿಎಂ ಎಷ್ಟು ಸಲ ಹೋಗಿದ್ದರು? ಈ ಹಿಂದೆ ನಗರಾಭಿವೃದ್ಧಿ ಮಂತ್ರಿ ಆಗಿದ್ದಾಗ ನಗರಕ್ಕೇನು ಮಾಡಿದ್ದರು? ಸಚಿವಗಿರಿಯನ್ನು ಸ್ವ-ನಗದು ಅಭಿವೃದ್ಧಿಗೆ ಬಳಸಿಕೊಂಡರಷ್ಟೇ ಎಂದು ಆರೋಪಿಸಿದ್ದಾರೆ.

ಅಧಿಕಾರಿಗಳಿಗೆ ಬಿಬಿಎಂಪಿ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಸೂಚನೆ

ಪ್ರವಾಹ ಸ್ಥಳಗಳ ಶಾಶ್ವತ ಪರಿಹಾರಕ್ಕೆ ಕ್ರಮವಹಿಸಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರವಾಹ ಉಂಟಾಗುವ ಸ್ಥಳಗಳಿಗೆ ಶಾಶ್ವತ ಪರಿಹಾರ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ನಗರದಲ್ಲಿ ಮಳೆ ಬಾಧಿತ ಪ್ರದೇಶಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿ, ಎಲೆಕ್ಟ್ರಾನಿಕ್ ಸಿಟಿ ಹತ್ತಿರ ಪಾಲಿಕೆ ವ್ಯಾಪ್ತಿಗೆ ಬರುವ ನ್ಯಾಷನಲ್ ಹೈವೇ ರಸ್ತೆಯಲ್ಲಿ ಪ್ರವಾಹ ಉಂಟಾಗುವ ಸ್ಥಳಗಳಲ್ಲಿ ನೀರು ನಿಲ್ಲದಂತೆ ಕ್ರಮವಹಿಸಲು ನ್ಯಾಷನಲ್ ಹೈವೇ ಅಧಿಕಾರಿಗಳಿಗೆ ಸೂಚಿಸಿದರು. ಜೊತೆಗೆ ಸೈಡ್ ಡ್ರೈನ್ ಗಳಲ್ಲಿ ಹೂಳೆತ್ತಿ ಸ್ವಚ್ಛತೆ ಕಾಪಾಡಲು ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಾಕ್ಸ್ ಕಲ್ವರ್ಟ್ ಅಳವಡಿಸಿ: ಕೋಗಿಲು ಜಂಕ್ಷನ್ ನಲ್ಲಿ ಜಲಾವೃತವಾಗುವುದನ್ನು ತಪ್ಪಿಸಲು ರಾಜಕಾಲುವೆ ವಿಭಾಗದಿಂದ ಕೂಡಲೇ ಬಾಕ್ಸ್ ಕಲ್ವರ್ಟ್ ಕಾಮಗಾರಿ ಕೈಗೆತ್ತಿಕೊಳ್ಳಬೇಕು. ಇದೇ ಸ್ಥಳದಲ್ಲಿ ಮೆಟ್ರೋ ಕಾಮಗಾರಿ ಕೂಡಾ ನಡೆಯುತ್ತಿದ್ದು, ಸಂಚಾರಿ ವಿಭಾಗದಿಂದ ಕಾಮಗಾರಿ ನಡೆಸಲು ಅನುಮತಿ ಪಡೆದು ನಿಗದಿತ ಸಮಯದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಜಲಾವೃತವಾಗುವ ರೈಲ್ವೆ ಕೆಳಸೇತುವೆಗಳಲ್ಲಿ ಸೂಕ್ತ ಕ್ರಮ: ನಗರದಲ್ಲಿ ಜಲಾವೃತವಾಗುವ ರೈಲ್ವೆ ಕೆಳ ಸೇತುವೆಗಳನ್ನು ಪಟ್ಟಿ ಮಾಡಿ, ಆ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವ ನಿಟ್ಟಿನಲ್ಲಿ ರೈಲ್ವೆ ಇಲಾಖೆಯಿಂದ ಡ್ರೈನ್ ಮಾಡುವುದರ ಜತೆಗೆ ನೀರಿನ ಹರಿವಿನ ಮಟ್ಟದ ಸಾಮರ್ಥ್ಯ ಕಡಿಮೆ ಇದ್ದರೆ ಅಗಲೀಕರಣ ಮಾಡಬೇಕು. ಕಾಮಗಾರಿ ಪೂರ್ಣಗೊಂಡ ನಂತರ ಪಾಲಿಕೆ ಅದನ್ನು ನಿರ್ವಹಣೆ ಮಾಡಲು ಸೂಚಿಸಿದರು.

ಈ ವೇಳೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್, ಸಂಚಾರ ವಿಭಾಗದ ಪೊಲೀಸ್ ಜಂಟಿ ಆಯುಕ್ತ ಅನುಚೇತ್, ಪ್ರಧಾನ ಅಭಿಯಂತರ ಪ್ರಹ್ಲಾದ್, ಮೆಟ್ರೋ, ಬಿಡಿಎ, ಬೆಸ್ಕಾಂ, ರೈಲ್ವೆ ಇಲಾಖೆ ಅಧಿಕಾರಿಗಳು ಇದ್ದರು.

ನಗರದಲ್ಲಿ ಮಳೆ ಬಾಧಿತ ಪ್ರದೇಶಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಮಾತನಾಡಿದರು.

ಒಳಚರಂಡಿಗಳಿಂದ ನೀರು ಉಕ್ಕುವುದನ್ನು ತಪ್ಪಿಸಿ

ಬನ್ನೇರುಘಟ್ಟ ರಸ್ತೆಯಲ್ಲಿ ಜಲಮಂಡಳಿ ವತಿಯಿಂದ ಒಳಚರಂಡಿ ಕಾಮಗಾರಿಗಾಗಿ ರಸ್ತೆ ಅಗೆದಿದ್ದು, ಕಾಮಗಾರಿ ಪೂರ್ಣಗೊಂಡಿದ್ದು, ಇದುವರೆಗೆ ರಸ್ತೆ ಕತ್ತರಿಸಿರುವ ಭಾಗದ ದುರಸ್ತಿ ಕಾರ್ಯ ಕೈಗೊಂಡಿಲ್ಲ. ಈ ಸಂಬಂಧ ಕೂಡಲೇ ರಿಸ್ಟೋರೇಶನ್ ಕಾಮಗಾರಿ ಮಾಡಬೇಕು. ಮಳೆ ಬರುವ ವೇಳೆ ಒಳಚರಂಡಿಯಲ್ಲಿ ಬಹುತೇಕ ಕಡೆ ನೀರಿನ ಹರಿವಿನ ಮಟ್ಟ ಹೆಚ್ಚಾಗಿ, ನೀರು ಉಕ್ಕಿ ಜಲಾವೃತವಾಗುತ್ತಿದೆ. ಅದನ್ನು ತಪ್ಪಿಸುವ ಸಲುವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಮೆಟ್ರೋ ಕಾಮಗಾರಿ ನಡೆಯುತ್ತಿರುವ ಹೊರ ವರ್ತುಲ ರಸ್ತೆಯಲ್ಲಿ ಪಾದಚಾರಿ ಮಾರ್ಗ ದುರಸ್ತಿಯಲ್ಲಿದ್ದು, ರಸ್ತೆ ಬದಿಯಿರುವ ತ್ಯಾಜ್ಯ/ಹೂಳನ್ನು ಕೂಡಲೇ ತೆರವುಗೊಳಿಸಬೇಕು ಎಂದು ಸೂಚಿಸಿದರು.

ಕೋಮುದ್ವೇಷ ಬಿತ್ತಿದ ಆರೋಪದ ಕೇಸ್ | ವಿಶೇಷ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್

ಶಾಸಕ ಪೂಂಜಾ ವಿರುದ್ಧ ಆರೋಪ ಪಟ್ಟಿ ಸಲ್ಲಿಕೆ

ಬೆಂಗಳೂರು: ಕೋಮು ದ್ವೇಷ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬೆಳ್ತಂಗಡಿ ಬಿಜೆಪಿ ಶಾಸಕ ಹರೀಶ್ ಪೂಂಜಾ ಅವರ ವಿರುದ್ಧ ವಿಶೇಷ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ರಾಜ್ಯ ಸರಕಾರ ಮಂಗಳವಾರ ಹೈಕೋರ್ಟ್‌ಗೆ ತಿಳಿಸಿತು. ಎಫ್ಐಆರ್ ದಾಖಲಾದ 16 ದಿನಗಳಲ್ಲಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸುವ ಮೂಲಕ ರಾಜ್ಯ ಸರಕಾರವು ವಿಶಿಷ್ಟ ಸಾಧನೆಗೈದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ ಠಾಣೆಯಲ್ಲಿ ದಾಖಲಾಗಿರುವ ಎಫ್ಐಆರ್ ಮತ್ತು ಆನಂತರ ಕಾನೂನು ಪ್ರಕ್ರಿಯೆ ರದ್ದತಿ ಕೋರಿ ಪೂಂಜಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್. ರಾಚಯ್ಯ ಅವರ ರಜಾಕಾಲೀನ ಏಕಸದಸ್ಯ ಪೀಠವು ನಡೆಸಿತು.

ಪೂಂಜಾ ಪರ ವಕೀಲರು ಇದು ವಿಶೇಷ ನ್ಯಾಯಾಲಯದ ಪ್ರಕರಣವಾಗಿದ್ದು, ಅರ್ಜಿದಾರರು ಹಾಲಿ ಶಾಸಕರಾಗಿದ್ದಾರೆ. ಉಪ್ಪಿನಂಗಡಿಯಲ್ಲಿ ಎಫ್ಐಆರ್ ದಾಖಲಿಸಿ, ಅದನ್ನು ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಅದು ಟ್ರಾನ್ಸಿಟ್ ಹಂತದಲ್ಲಿದೆ. ನಮಗೆ ಯಾವುದೇ ದಾಖಲೆ ದೊರೆತಿಲ್ಲ. ಈ ನಡುವೆ, ಅತ್ಯಂತ ಕಡಿಮೆ ಅವಧಿಯಲ್ಲಿ ಆರೋಪ ಪಟ್ಟಿ ಸಲ್ಲಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೆ, ಅವರಿಗೆ ಸ್ವಾತಂತ್ರ್ಯವಿದೆ. ಆದರೆ ಇದು ಸರಿಯಾದ ವಿಧಾನವಲ್ಲ. ಹೀಗಾಗಿ, ಬಲವಂತದ ಕ್ರಮಕೈಗೊಳ್ಳದಂತೆ ಆದೇಶಿಸಬೇಕು ಮತ್ತು ಆರೋಪ ಪಟ್ಟಿಯ ಪ್ರತಿ ನೀಡಲು ಆದೇಶಿಸಬೇಕು ಎಂದು ಕೋರಿದರು.

ನನ್ನ ಬಳಿಯೂ ಆರೋಪ ಪಟ್ಟಿ ಇಲ್ಲ: ರಾಜ್ಯ ಸರಕಾರವನ್ನು ಪ್ರತಿನಿಧಿಸಿದ್ದ ಹೆಚ್ಚುವರಿ ವಿಶೇಷ ಸರಕಾರಿ ಅಭಿಯೋಜಕ ಬಿ.ಎನ್.ಜಗದೀಶ್ ಅವರು ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ಮಂಗಳವಾರ ಆರೋಪ ಪಟ್ಟಿಯನ್ನು ಸಕ್ಷಮ ನ್ಯಾಯಾಲಯಕ್ಕೆ ತನಿಖಾಧಿಕಾರಿ ಸಲ್ಲಿಸಿದ್ದಾರೆ ಎಂಬ ಮಾಹಿತಿ ಒದಗಿಸಲಾಗಿದೆ. ಆರೋಪ ಪಟ್ಟಿ ಸಲ್ಲಿಸಿರುವುದರಿಂದ ಪೂಂಜಾ ಅವರು ಹೊಸ ಅರ್ಜಿ ಸಲ್ಲಿಸಬೇಕು. ಇಲ್ಲವೇ ಅದನ್ನು ತಿದ್ದುಪಡಿ ಮಾಡಬೇಕು. ಈಗಲೇ ಆರೋಪ ಪಟ್ಟಿ ಪ್ರತಿ ನೀಡಬೇಕು ಎಂದರೆ ಅದು ನನ್ನ ಬಳಿಯೂ ಇಲ್ಲ ಎಂದರು.

ದೂರುದಾರ ಎಸ್.ಬಿ.ಇಬ್ರಾಹಿಂ ಪರವಾಗಿ ಹಾಜರಾದ ವಕೀಲ ಎಸ್.ಬಾಲನ್ ಅವರು ಇಬ್ರಾಹಿಂ ಪರವಾಗಿ ವಕಾಲತ್ತು ಹಾಕಿದ್ದೇನೆ. ಈ ಹಿಂದೆ ಪೂಂಜಾ ಅವರು 7 ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಸಾರ್ವಜನಿಕವಾಗಿ ಅವರು ಬಳಕೆ ಮಾಡಿರುವ ಭಾಷೆಯನ್ನು ನ್ಯಾಯಾಲಯ ನೋಡಬೇಕು. ಈ ಪ್ರಕರಣ ದಾಖಲಾದ ಬಳಿಕ ಪೂಂಜಾ ಅವರು ಬಹಿರಂಗವಾಗಿ ಇನ್ನೂ ನೂರು ಪ್ರಕರಣವನ್ನು ಸರಕಾರ ದಾಖಲಿಸಲಿ. ಅದಕ್ಕೆ ಹೆದರುವ ಮಗ ನಾನಲ್ಲ ಎಂದಿದ್ದಾರೆ. ಇಂಥ ಕೋಮು ಭಾಷಣದಿಂದ ಕೊಲೆಗಳು ನಡೆಯುತ್ತಿವೆ. ಅವರು ವಿಷ ಉಗುಳುತಿದ್ದಾರೆ. ಹೀಗಾಗಿ, ರಜಾಕಾಲ ಮುಗಿದ ಬಳಿಕ ವಿಚಾರಣೆ ನಡೆಸಬಹುದು. ಅರ್ಜಿಗೆ ಆಕ್ಷೇಪಣೆ ಸಲ್ಲಿಸಲಾಗುವುದು ಎಂದರು. ಇದನ್ನು ಆಲಿಸಿದ ಪೀಠವು ಪೂಂಜಾ ಪರ ವಕೀಲರಿಗೆ ತಿದ್ದುಪಡಿ ಅರ್ಜಿ ಸಲ್ಲಿಸಲು ಆದೇಶಿಸಿ, ವಿಚಾರಣೆಯನ್ನು ಮೇ 22ಕ್ಕೆ ಮುಂದೂಡಿತು.

ಪ್ರಕರಣದ ಹಿನ್ನೆಲೆ: ಇಬ್ರಾಹಿಂ ಉಪ್ಪಿನಂಗಡಿ ನೀಡಿರುವ ದೂರಿನಲ್ಲಿ, ತೆಕ್ಕಾರುವಿನ ಭಟ್ರಬೈಲು ಎಂಬಲ್ಲಿ ತೆಕ್ಕಾರು ಗೋಪಾಲಕೃಷ್ಣ ದೇವಸ್ಥಾನದ ಬ್ರಹ್ಮ ಕಲಶೋತ್ಸವದಲ್ಲಿ ಮೇ.3ರಂದು ಹರೀಶ್ ಪೂಂಜಾ ಅವರು ರಾತ್ರಿ 9.30ರ ವೇಳೆಗೆ ತುಳು ಭಾಷೆಯಲ್ಲಿ ತೆಕ್ಕಾರಿನ ಕಂತ್ರಿ ಬ್ಯಾರಿಗಳು ಟ್ಯೂಬ್‌ಲೈಟ್ ಹೊಡೆದಿದ್ದಾರೆ. ಜನರೇಟರ್‌ನ ಡೀಸೆಲ್ ಕದ್ದಿದ್ದಾರೆ ಎಂಬ ಬಗ್ಗೆ ಸ್ಥಳೀಯರಿಂದ ಮಾಹಿತಿ ಬಂದಿದೆ. ಬ್ರಹ್ಮ ಕಲಶೋತ್ಸವ ಮುಗಿಯುವ ವೇಳೆಗೆ ಕದ್ದಿರುವವರು ಯಾರು ಎಂಬ ಮಾಹಿತಿ ಬರುತ್ತದೆ. ನಮ್ಮಲ್ಲಿ ಸೌಹಾರ್ದತೆ ಬೇಕು ಎಂದು ಹೇಳುತ್ತಾರೆ. ನಾವು ಮಸೀದಿಗೆ ಹೋಗಿ ಆಮಂತ್ರಣ ಕೊಟ್ಟಿದ್ದರಿಂದ ಬ್ಯಾರಿಗಳು ಟ್ಯೂಬ್ ಹೊಡೆದಿದ್ದಾರೆ. ಅವರಿಗೆ ಆಮಂತ್ರಣ ನೀಡಬಾರದಿತ್ತು. ಕಾರ್ಯಕ್ರಮಕ್ಕೆ ಕರೆಯಬಾರದಿತ್ತು. ನಾವು ಹಿಂದೂಗಳು ಹಿಂದೂಗಳೇ, ಅವರನ್ನು ಸೇರಿಸಬಾರದು. ಪ್ರಸ್ತುತ ತೆಕ್ಕಾರಿನಲ್ಲಿ 1,200 ಮುಸ್ಲಿಮರಿದ್ದು, ನಾವು 150 ಮನೆಯವರು ಇದ್ದೇವೆ. 10 ವರ್ಷ ಕಳೆದರೆ 5 ಸಾವಿರ ಜನರಾಗುತ್ತಾರೆ. ಮುಸ್ಲಿಮರು ಐದು ಸಾವಿರ ಅಲ್ಲ 10 ಸಾವಿರ ಆದರೂ ಅವರನ್ನು ಹೆದರಿಸಿ, ನೀವು ಸನಾತನ ಹಿಂದೂ ಧರ್ಮವನ್ನು ಪಾಲನೆ ಮಾಡಿ, ದೇವರ ಪೂಜೆ ಮಾಡಿಕೊಂಡ ಬರಬೇಕು ಎಂದು ಹೇಳಿದ್ದಾರೆ. ಆ ಮೂಲಕ ಸಮುದಾಯಗಳ ನಡುವೆ ದ್ವೇಷ ಹರಡಿದ್ದಾರೆ ಎನ್ನಲಾಗಿದೆ.

ಪೂಂಜಾ ಪರ ವಕೀಲರ ವಾದ

- **ನಮಗೆ ಕೇಸ್‌ನ ಯಾವುದೇ ದಾಖಲೆ ಸಿಕ್ಕಿಲ್ಲ**
- **ಕಡಿಮೆ ಅವಧಿಯಲ್ಲಿ ಆರೋಪ ಪಟ್ಟಿ ಸಲ್ಲಿಸಿದೆ**
- **ಕಡಿಮೆ ಅವಧಿಯ ಚಾರ್ಜ್‌ಶೀಟ್ ಸರಿಯಲ್ಲ**
- **ಪೂಂಜಾ ವಿರುದ್ಧ ಬಲವಂತದ ಕ್ರಮ ಮಾಡಬಾರದು**
- **ಆರೋಪ ಪಟ್ಟಿಯ ಪ್ರತಿ ನೀಡಲು ಕೋರ್ಟ್ ಆದೇಶಿಸಬೇಕು..**

ಬರ ಸಿಡಿಲಿಗೆ ಇರಲಿ ಮುಂಜಾಗ್ರತೆ

ಪ್ರತೀ ವರ್ಷವೂ ನಮ್ಮ ರಾಜ್ಯದಲ್ಲಿ ಸಿಡಿಲಿನಿಂದ ಸಂಭವಿಸುವ ಸಾವಿನ ಪ್ರಮಾಣ ಹೆಚ್ಚಳವಾಗುತ್ತಿದೆ. ಹಾಗಾದರೆ ಸಿಡಿಲು ಹೇಗೆ ಉಂಟಾಗುತ್ತದೆ, ಅದರಿಂದ ತಪ್ಪಿಸಿಕೊಳ್ಳುವ ಮುನ್ನೆಚ್ಚರಿಕೆ ಏನೇನು ಎಂಬುದರ ಕುರಿತಾದ ಸಂಕ್ಷಿಪ್ತ ವಿವರ ಇಲ್ಲಿದೆ.

ನಮ್ಮ ರಾಜ್ಯದ ಹೆಚ್ಚಿನ ಜಿಲ್ಲೆಗಳಲ್ಲಿ ಪೂರ್ವ ಮುಂಗಾರು ಮಳೆಯ ಅಬ್ಬರ ಈಗ ಹೆಚ್ಚಾಗಿದೆ. ಉತ್ತರ ಕರ್ನಾಟಕದಲ್ಲಂತೂ ಮಳೆಯ ಜೊತೆಗೆ ಸಿಡಿಲಿನ ಅಬ್ಬರವೂ ತೀವ್ರವಾಗಿದೆ. ಸಿಡಿಲಿನ ಕಾರಣ ದಿಂದಾಗಿ ಸಾವನಪ್ಪುವವರ ಸಂಖ್ಯೆ ಪ್ರತೀ ವರ್ಷ ನಮ್ಮ ಇಡೀ ರಾಜ್ಯದಲ್ಲಿ ಹೆಚ್ಚಾಗುತ್ತಿದೆ. ವಾರ್ಷಿಕವಾಗಿ ಪ್ರವಾಹಕ್ಕಿಂತಲೂ ಹೆಚ್ಚು ಜೀವಗಳು ಸಿಡಿಲಿಗೆ ಬಲಿಯಾಗುತ್ತಿರುವುದು ನಿಜಕ್ಕೂ ಆತಂಕದ ವಿಷಯ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ (ಕೆಎಸ್ಎನ್‌ಡಿಎಂಸಿ) ಸಾರ್ವಜನಿಕ ಜಾಗೃತಿ ಅಭಿಯಾನಗಳು ಮತ್ತು 'ಸಿಡಿಲು ಆ್ಯಪ್' ಮೂಲಕ ಸಾರ್ವಜನಿಕರು ಮತ್ತು ಜಿಲ್ಲಾಡಳಿತಗಳಿಗೆ ಎಚ್ಚರಿಕೆ ನೀಡುವ ಕ್ರಮಗಳನ್ನು ಕೈಗೊಂಡಿದೆ.

ಸಿಡಿಲು ಹೇಗೆ ಉಂಟಾಗುತ್ತದೆ?

ಏಪ್ರಿಲ್-ಮೇ ತಿಂಗಳಿನ ಹೊತ್ತಿಗೆ ಆಕಾಶದಲ್ಲಿ ಮುಂಗಾರು ಪೂರ್ವದ ದಟ್ಟ ಕಪ್ಪು ಮೋಡಗಳು ಕವಿಯಲಾರಂಭಿಸುತ್ತವೆ. ಅವುಗಳನ್ನು ಕ್ಯುಮುಲೋನಿಂಬಸ್ ಮೋಡಗಳೆನ್ನುತ್ತಾರೆ. ಅವುಗಳ ತಳ

ಭೂಮಿಯಿಂದ ಸುಮಾರು 2 ಕಿಲೋಮೀಟರ್ ದೂರವಿರುತ್ತದೆ. ಅವುಗಳ ಮೇಲ್ತುದಿ ಸುಮಾರು 15 ಕಿಲೋಮೀಟರ್ ಎತ್ತರದ ಲ್ಲಿರುತ್ತದೆ. ಗಾಳಿ ಬೀಸುವಾಗ ಮೋಡದ ಕಣಗಳು ಪರಸ್ಪರ ಢಿಕ್ಕಿ ಹೊಡೆದು ಇಲೆಕ್ಟ್ರಾನ್‌ಗಳನ್ನು ಬಿಡುಗಡೆಗೊಳಿಸುತ್ತವೆ. ಬಿಡುಗಡೆಯಾದ ಆ ಇಲೆಕ್ಟ್ರಾನ್‌ಗಳು ದೊಡ್ಡ ಮೋಡಗಳ ತಳಭಾಗದಲ್ಲಿ ಸಂಗ್ರಹಗೊಳ್ಳುತ್ತವೆ. ಹೀಗೆ ಮೋಡದ ತಳಭಾಗದಲ್ಲಿ ಋಣ ವಿದ್ಯುತ್ ಕ್ಷೇತ್ರ ಸಂಚಯನವಾಗುತ್ತದೆ. ಅದೇ ಹೊತ್ತಿಗೆ ಭೂಮಿಯ ಮೇಲ್ಭಾಗದಲ್ಲಿ ಧನ ವಿದ್ಯುತ್ ಕ್ಷೇತ್ರ ಸಂಚಯನವಾಗಿದ್ದರೆ, ಮೋಡದ ಋಣ ವಿದ್ಯುತ್ ಶಕ್ತಿ ಇತ್ತ ಕಡೆಗೆ ನುಗ್ಗಿ ಬರುತ್ತದೆ, ಅದು ದೊಡ್ಡ ಪ್ರಮಾಣದಲ್ಲಿದ್ದಾಗ ಸಿಡಿಲು ಉಂಟಾಗುತ್ತದೆ.

ಸರಳವಾಗಿ ಹೇಳುವುದಾದರೆ ಸಿಡಿಲು ಒಂದು ವಿದ್ಯುತ್ ಪ್ರವಾಹ. ನೆಲವು ಬಿಸಿಯಾಗಿರುವಾಗ ಅದು ಅದರ ಮೇಲಿನ ಗಾಳಿಯನ್ನು ಬಿಸಿ ಮಾಡುತ್ತದೆ, ಆ ಬೆಚ್ಚಗಿನ ಗಾಳಿ ಏರುತ್ತಲೇ ಸಾಗುತ್ತದೆ. ಗಾಳಿ ಏರುತ್ತಿದ್ದಂತೆ ನೀರಿನ ಆವಿ ತಣ್ಣಗಾಗುತ್ತದೆ ಮತ್ತು ಅದು ಮೋಡವನ್ನು ರೂಪಿಸುತ್ತದೆ. ಗಾಳಿ ಏರುತ್ತಲೇ ಇದ್ದಾಗ ಮೋಡವು ದೊಡ್ಡದಾಗುತ್ತಾ ಹೋಗುತ್ತದೆ. ಮೋಡಗಳ ಮೇಲ್ಭಾಗದಲ್ಲಿ ತಾಪಮಾನವು ಘನೀಕರಿಸುವ ಮಟ್ಟಕ್ಕಿಂತ ಕಡಿಮೆಯಾಗಿ ಸಿಡಿಲಿನ ರೂಪವನ್ನು ಪಡೆಯುತ್ತದೆ.

ರಾಜ್ಯದಲ್ಲಿ ಇತ್ತೀಚಿನ ಸಾವು

- **ಏಪ್ರಿಲ್:** ರಾಯಚೂರು ಜಿಲ್ಲೆಯಲ್ಲಿ ಒಬ್ಬ ಮಹಿಳೆ ಸೇರಿದಂತೆ ಇಬ್ಬರು ಸಿಡಿಲು ಬಡಿದು ಸಾವು
- **ಮೇ 7:** ಬೆಳಗಾವಿಯಲ್ಲಿ ಸಿಡಿಲು ಬಡಿದು ಬಾಲಕಿ ಬಲಿ
- **ಮೇ 10:** ಉತ್ತರ ಕರ್ನಾಟಕದಲ್ಲಿ ಸಿಡಿಲಿಗೆ 7 ಮಂದಿಯ ಸಾವು
- **ಮೇ 11:** ಬೆಳಗಾವಿ ಜಿಲ್ಲೆಯಲ್ಲಿ ಸಿಡಿಲು ಬಡಿದು ಓರ್ವ ಮಹಿಳೆ ಮತ್ತು ಅವರ ಮಗಳ ಬಲಿ
- **ಮೇ 13:** ಬಳ್ಳಾರಿ, ವಿಜಯಪುರ, ಕೊಪ್ಪಳ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಿಡಿಲಿಗೆ 6 ಸಾವು
- **ಮೇ 20:** ರಾಯಚೂರಿನಲ್ಲಿ ಓರ್ವ ಮಹಿಳೆಯ ಸಾವು

ಒಳಾಂಗಣ ಅಪಾಯ: ಈ ರೀತಿ ತಪ್ಪಿಸಿ

- ಮನೆಯ ಕಿಟಕಿಯ ಬಳಿ ನಿಲ್ಲುವುದಕ್ಕಿಂತಲೂ ಮನೆಯ ಮಧ್ಯದಲ್ಲಿರುವುದು ಸುರಕ್ಷಿತ.
- ಕಂಪ್ಯೂಟರ್‌ಗಳಲ್ಲಿ ಕೆಲಸ ಮಾಡುವವರಾದರೆ ಸ್ವಲ್ಪ ಹೊತ್ತು ಅದರಿಂದ ದೂರ ಇರಿ.
- ಗುಡುಗು ಸಹಿತ ಮಳೆಯ ಸಮಯದಲ್ಲಿ ಮನೆ ಕೆಲಸ ಮಾಡುವುದೂ ಸೂಕ್ತವಲ್ಲ.
- ವಿದ್ಯುತ್ ಪರಿಕರಗಳಿಂದ ದೂರವಿರಿ
- ಗುಡುಗು-ಸಿಡಿಲಿನ ಸಂದರ್ಭದಲ್ಲಿ ಫೋನ್ ಬಳಸಬೇಡಿ.

ಉ.ಕರ್ನಾಟಕದಲ್ಲೇ ಹೆಚ್ಚಿನ ಪ್ರಕರಣ

ಉತ್ತರ ಕರ್ನಾಟಕದ ಕಲಬುರಗಿಯಲ್ಲಿ ಅತಿ ಹೆಚ್ಚು ಸಿಡಿಲು ಸಂಬಂಧಿ ಸಾವುಗಳಾಗಿವೆ. ನಂತರದ ಸ್ಥಾನದಲ್ಲಿ ಯಾದಗಿರಿ, ವಿಜಯಪುರ, ಗದಗ ಮತ್ತು ಬೆಳಗಾವಿ ಇವೆ. ಪೂರ್ವ ಮುಂಗಾರು ಮತ್ತು ಮುಂಗಾರು ಋತುಗಳಲ್ಲಿ ಸಿಡಿಲು ಬೀಳುವುದು ಸಾಮಾನ್ಯ. ಸ್ಥಳ-ನಿರ್ದಿಷ್ಟವಾಗಿ ಸಿಡಿಲು-ಮಿಂಚಿನ ಎಚ್ಚರಿಕೆಗಳನ್ನು ನೀಡಲು ಕೆಎಸ್ಎನ್‌ಡಿಎಂಸಿ ಮತ್ತು ಕಂದಾಯ ಇಲಾಖೆ ಏಪ್ರಿಲ್ 2018ರಲ್ಲಿ 'ಸಿಡಿಲು ಆ್ಯಪ್' ಅನ್ನು ಪ್ರಾರಂಭಿಸಿತ್ತು.

ಸಿಡಿಲಿನಿಂದ ತಪ್ಪಿಸಿಕೊಳ್ಳುವ ಸುಲಭ ಮಾರ್ಗಗಳು

ಸಿಡಿಲಿಗೆ ಬಲಿಯಾಗುವುದನ್ನು ತಪ್ಪಿಸಿಕೊಳ್ಳಲು ಹಲವು ಮಾರ್ಗಗಳಿವೆ. ಸಿಡಿಲು ಬಡಿದಾಕ್ಷಣ ಸೂಕ್ತ ಸ್ಥಳದಲ್ಲಿ ಆಶ್ರಯ ಪಡೆಯಲು ಆದ್ಯತೆ ನೀಡಬೇಕು. ಹೊರಾಂಗಣದಲ್ಲಿದ್ದರೆ ಎತ್ತರದ ಪ್ರದೇಶ, ಮರಗಳು ಮತ್ತು ಲೋಹದ ವಸ್ತುಗಳಿಂದ ದೂರವಿರಿ. ಚಂಡಮಾರುತವೂ ಇದ್ದರೆ ನೀರು, ಕೊಳಾಯಿ ಮತ್ತು ವಿದ್ಯುತ್ ಉಪಕರಣಗಳಿಂದ ದೂರವಿರುವುದು ಸುರಕ್ಷಿತ. ಗುಡುಗಿನ ಕೊನೆಯ ಶಬ್ದದ ನಂತರ ಕನಿಷ್ಠ 30 ನಿಮಿಷಗಳ ಕಾಲ ಮನೆಯೊಳಗೆ ಅಥವಾ ಒಳಾಂಗಣದಲ್ಲಿ ಇರಬೇಕು, ಏಕೆಂದರೆ ಮಳೆ ಬೀಳುವ ಪ್ರದೇಶದಿಂದ ಒಂದೂವರೆ ಕಿ.ಮೀ.ಗಳಷ್ಟು ದೂರದಲ್ಲಿ ಸಿಡಿಲು ಬಡಿಯಬಹುದು.

ಬೇಸಿಗೆ ಮಳೆ: ಸಿಡಿಲಿನ ಅಪಾಯ ಹೆಚ್ಚು

ಬೇಸಿಗೆಯಲ್ಲಿ ಮೈ ಸುಡುವ ಬಿಸಿಲನ್ನು ಬಯ್ಯುತ್ತಾ ಕೆಲಸ ಮಾಡುವ ಜನ, ಮಳೆ ಬಂದರೆ ಸಾಕಪ್ಪಾ ಎಂದು ಮುಗಿಲಿನತ್ತ ನೋಡುವುದು ಮಾಮೂಲಿ. ಅದರಲ್ಲೂ ಬೇಸಿಗೆಯ ಕೊನೆಯ ದಿನಗಳಲ್ಲಿ ಇದ್ದಕ್ಕಿದ್ದಂತೆಯೇ ಬಿಸಿಲಿಗೆ ಸೆಡ್ಡು ಹೊಡೆದು ಸುರಿಯುವ ಮಳೆ ಮತ್ತು ಅದರ ಜತೆಯಲ್ಲಿ ಅಬ್ಬರಿಸುವ ಮಿಂಚು, ಗುಡುಗು ನಮಗೆ ತಂಪು ನೀಡಿದರೂ ಕೂಡ ಕೆಲವೊಮ್ಮೆ ನಮ್ಮ ಪಾಲಿಗೆ ಯಮನಾಗುವ ಸಾಧ್ಯತೆಯೇ ಹೆಚ್ಚು. ಬಯಲಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರು, ಜಮೀನಿನಲ್ಲಿ ದುಡಿಯುವವರು, ದನ, ಕುರಿ ಮೇಯಿಸುವ ರೈತರು ಸಿಡಿಲಿಗೆ ಹೆಚ್ಚಾಗಿ ಬಲಿಯಾಗುವವರು ಎಂದರೆ ತಪ್ಪಾಗಲಾರದು.

ಸಾವು-ನೋವಿನ ವಿಧಗಳು

ಸಿಡಿಲು ಬಡಿತದ ಸಾವು ಪ್ರಾಥಮಿಕವಾಗಿ ಹೃದಯ ಮತ್ತು ಉಸಿರಾಟದ ಸ್ತಂಭನದಿಂದ ಉಂಟಾಗುತ್ತವೆ. ಆಗಾಗ್ಗೆ ತೀವ್ರವಾದ ವಿದ್ಯುತ್ ಪ್ರವಾಹ ಹೃದಯ ಮತ್ತು ಶ್ವಾಸಕೋಶಗಳಿಗೆ ಹಾನಿ ಮಾಡುತ್ತದೆ. ಗಂಭೀರ ಗಾಯಗಳು ಮತ್ತು ಸುಟ್ಟಗಾಯಗಳಿಗೂ ಕಾರಣವಾಗಬಹುದು. ಮಿಂಚಿನ ಹೊಡೆತದಿಂದ ಬರುವ ವಿದ್ಯುತ್ ಪ್ರವಾಹವು ಹೃದಯದ ಚಟುವಟಿಕೆಯನ್ನು ಅಡ್ಡಿಪಡಿಸಬಹುದು. ಇದು ಅಸಿಸ್ಟೋಲ್ (ಹೃದಯ ಬಡಿತವಿಲ್ಲದೆ) ಅಥವಾ ಕುಹರದ ಕಂಪನದಂತಹ (ವೇಗದ, ಅನಿಯಮಿತ ಹೃದಯ ಬಡಿತ) ಘಟನೆಗಳಿಗೆ ಕಾರಣವಾಗಿ, ಅದು ಹೃದಯ ಸ್ತಂಭನಕ್ಕೆ ಕಾರಣವಾಗಬಹುದು. ತೀವ್ರವಾದ ಶಾಖ ಅಥವಾ ವಿದ್ಯುತ್ ಆಘಾತವು ಉಸಿರಾಟದ ವ್ಯವಸ್ಥೆಯನ್ನು ಹಾನಿಗೊಳಿಸಬಹುದು, ಅದರಿಂದಾಗಿ ಉಸಿರಾಟದ ಸ್ತಂಭನಕ್ಕೂ ಕಾರಣವಾಗಬಹುದು. ಸಿಡಿಲಿನ ಹೊಡೆತಕ್ಕೆ ವ್ಯಕ್ತಿಯು ಕೆಲವು ಮೀಟರ್‌ಗಳಷ್ಟು ದೂರಬೀಳುವ ಸಾಧ್ಯತೆ ಹೆಚ್ಚು. ಆಗ ಮೂಳೆ ಮುರಿತವೂ ಸೇರಿದಂತೆ ಗಂಭೀರ ಗಾಯಗಳಿಗೆ ಅದು ಕಾರಣವಾಗಬಹುದು. ಸಿಡಿಲಿನ ವಿದ್ಯುತ್ ಪ್ರವಾಹವು ಮೆದುಳು ಮತ್ತು ನರಮಂಡಲವನ್ನು ಹಾನಿಗೊಳಿಸುತ್ತದೆಯಲ್ಲದೆ, ಪ್ರಜ್ಞೆ ಕಳೆದುಕೊಳ್ಳುವುದಕ್ಕೂ ಕಾರಣವಾಗುತ್ತದೆ.

ಹೊರ ವಲಯದಲ್ಲಿದ್ದರೆ ಸಿಡಿಲಿನಿಂದ ರಕ್ಷಣೆ ಹೀಗೆ

ಗುಡುಗು- ಮಿಂಚು ಬರಲಿದೆ ಎಂದು ಗೊತ್ತಾದಾಗ ಹೊಲದಲ್ಲಿದ್ದರೆ ಹತ್ತಿರದಲ್ಲಿರುವ ಯಾವುದೇ ಕಟ್ಟಡದಲ್ಲಿ ಅಥವಾ ಪಂಪ್ ಹೌಸ್‌ನಲ್ಲಿ ಆಶ್ರಯ ಪಡೆಯಿರಿ. ಬಯಲು ಪ್ರದೇಶದಲ್ಲಿದ್ದರೆ ತಕ್ಷಣವೇ ಇರುವುದರಲ್ಲಿ ತಗ್ಗು ಪ್ರದೇಶಕ್ಕೆ ಹೋಗಿ ಕುಳಿತುಕೊಳ್ಳಿ, ಆದರೆ ನಿಲ್ಲಬೇಡಿ. ಬಯಲಿನಲ್ಲಿದ್ದರೆ ಅಲ್ಲಿ ಮಲಗಬೇಡಿ. ಒದ್ದೆ ನೆಲದೊಂದಿಗೆ ಇಡೀ ದೇಹಕ್ಕೆ ಸಂಪರ್ಕವಿರಬಾರದು. ತಲೆಯನ್ನು ಮೊಣಕಾಲುಗಳ ನಡುವೆ ಹುದುಗಿಸಿಕೊಳ್ಳಿ. ಇದು ಮಿಂಚಿನಿಂದ ಮೆದುಳಿಗೂ, ಹೃದಯಕ್ಕೂ ಆಗುವ ಹಾನಿಯನ್ನು ತಪ್ಪಿಸುತ್ತದೆ. ಮರಗಳಿದ್ದ ಪ್ರದೇಶದಲ್ಲಿ ಇದ್ದರೆ, ಅಲ್ಲಿಂದ ಬೇಗನೆ ಹೊರಬರುವುದು ಒಳ್ಳೆಯದು, ಏಕೆಂದರೆ ಸಿಡಿಲು ಮೋಡದಿಂದ ಭೂಮಿಗೆ ಹರಿಯಲು ಮರದಂತಹ ಹಸಿ, ಒದ್ದೆ ವಸ್ತುವನ್ನೆ ಆರಿಸಿಕೊಳ್ಳುತ್ತದೆ. ಮರಗಳ ಗುಂಪಿನ ನಡುವೆ ಇದ್ದರೆ, ಇದ್ದುದರಲ್ಲಿ ಸಣ್ಣ ಮರದ ಕೆಳಗೆ ನಿಲ್ಲಿ, ದೊಡ್ಡ ಮರಗಳು ಸಿಡಿಲಿಗೆ ಸುಲಭದ ತುತ್ತು, ಹಾಗಾಗಿ ಎತ್ತರದ ಗುಡ್ಡದ ಮೇಲಿದ್ದರೆ ತಗ್ಗಿಗೆ ಇಳಿಯಿರಿ.

2010-22: ಸಿಡಿಲಿನಿಂದ ಸತ್ತವರ ಅಂಕಿ-ಅಂಶ

ವರ್ಷ	ಪುರುಷ	ಮಹಿಳೆ	ಒಟ್ಟು
2010	115	34	146
2011	65	38	103
2012	62	28	90
2013	56	31	87
2014	116	26	142
2015	101	36	137
2016	60	17	77
2017	87	34	121
2018	98	28	126
2019	78	21	99
2020	59	16	75
2021	100	21	121
2022	73	23	96

ಎಸ್ಸಿ ಒಳ ಮೀಸಲಾತಿ ಹಂಚಿಕೆಗೆ ಸಮೀಕ್ಷೆ | ಗಣತಿದಾರರಿಗೆ ಪಕ್ಕಾ ಮಾಹಿತಿ ಕೊರತೆ

ಸಮೀಕ್ಷೆ ಸವಾಲು, ಮುಖಂಡರ ಅಹವಾಲು

ಜಿಲ್ಲಾ ನೋಟ

ಹೆಗ್ಗೆರೆ ರೇಣುಕಾರಾಧ್ಯ, ಶಿವಮೊಗ್ಗ

ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹಂಚಿಕೆ ಸಂಬಂಧ ನ್ಯಾ.ಎಚ್. ಎನ್. ನಾಗಮೋಹನ್ ದಾಸ್ ನೇತೃತ್ವದ ಆಯೋಗದ ಮೂಲಕ ರಾಜ್ಯಾದ್ಯಂತ ಸಮೀಕ್ಷಾ ಕಾರ್ಯ ನಡೆಯುತ್ತಿದೆ. ಆದರೆ ಇದು ಶಿವಮೊಗ್ಗ ಜಿಲ್ಲೆಯೂ ಸೇರಿದಂತೆ ಕೆಲವು ಕಡೆ ಗೊಂದಲದ ಗೂಡಾಗಿದೆ. ಇದಕ್ಕೆ ತಾಂತ್ರಿಕ ಅಡಚಣೆ ಕಾರಣ ನೀಡಲಾಗುತ್ತಿದೆ.

ಗೊಂದಲ ಏನೇನು

ಮುಖ್ಯವಾಗಿ ಮನೆ ಮನೆಗೆ ಭೇಟಿ ನೀಡಿ ಸಮೀಕ್ಷೆ ನಡೆಸುವ ಗಣತಿದಾರರಿಗೆ ಮಾಹಿತಿ ಕೊರತೆ ಇದೆ ಎನ್ನಲಾಗುತ್ತಿದೆ. ಜತೆಗೆ ನೌಕರರ ನಿರ್ಲಕ್ಷ್ಯವೂ ಇಲ್ಲಿ ಸೇರಿಕೊಂಡಿದೆ ಎಂಬ ದೂರುಗಳಿವೆ. ಸಮೀಕ್ಷೆ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬ ಬಗ್ಗೆ ಜಿಲ್ಲೆಯ ಎಸ್ಸಿ ಸಮುದಾಯಗಳ ಮುಖಂಡರಿಂದ ಸಾಕಷ್ಟು ಆರೋಪಗಳು ಕೇಳಿ ಬಂದಿವೆ. ಗಣತಿ ವೇಳೆ ರೇಷನ್ ಕಾರ್ಡ್, ಆಧಾರ ಕಾರ್ಡ್ ಹಾಗೂ ಮತದಾರರ ಪಟ್ಟಿ ಕೂಡ ಗೊಂದಲ ಹುಟ್ಟಿಸುತ್ತಿದೆ. ಇದರಿಂದಲೂ ಹೆಸರುಗಳು ಕೈಬಿಟ್ಟು ಹೋಗುವ ಆತಂಕ ವ್ಯಕ್ತವಾಗಿದೆ. ಇದೇ ವೇಳೆ ಸಮೀಕ್ಷೆಗೆ ಈಗ ಮರುನಿಗದಿ ಆಗಿರುವ ಕಾಲಮಿತಿಯೂ ಇನ್ನಷ್ಟು ವಿಸ್ತರಣೆಯಾಗಬೇಕಿದೆ ಎನ್ನುವ ಒತ್ತಾಯವೂ ಕೇಳಿ ಬಂದಿದೆ.

ಕಾಲಾವಧಿ ವಿಸ್ತರಣೆ

ನಾಗಮೋಹನ್ ನೇತೃತ್ವದ ಏಕ ಸದಸ್ಯ ಆಯೋಗದ ಮೂಲಕ ರಾಜ್ಯ ಸರಕಾರ ಪರಿಶಿಷ್ಟ ಜಾತಿಗಳ ಜಾತಿ ಗಣತಿಗೆ ಚಾಲನೆ ನೀಡಿದೆ. ರಾಜ್ಯಾದ್ಯಂತ ಮೇ 5ರಿಂದಲೇ ಈ ಗಣತಿ ಶುರುವಾಗಿದೆ. ಆರಂಭದಲ್ಲಿ ಇದು ನಿಗದಿಯಾದಂತೆ ಮನೆ ಮನೆ ಭೇಟಿಯ ಸಮೀಕ್ಷೆ ನಡೆದು ಮೇ 17ಕ್ಕೆ ಮುಗಿಯಬೇಕಿತ್ತು. ಆದರೆ ಸಮೀಕ್ಷಾ ಕಾರ್ಯದ ಆರಂಭದಲ್ಲಿ ಸರ್ವರ್ ಡೌನ್ ಕಾರಣಕ್ಕೆ ಅಂಕಿ ಅಂಶಗಳ ಅಪ್‌ಲೋಡ್‌ಗೆ ತೀವ್ರ ಸಮಸ್ಯೆಯಾಗಿದ್ದರಿಂದ ಇದರ ಕಾಲಮಿತಿ ವಿಸ್ತರಣೆ ಮಾಡುವಂತೆ ಒತ್ತಾಯಗಳು ಕೇಳಿ ಬಂದವು. ಅದೇ ಕಾರಣಕ್ಕೆ ಆಯೋಗ ಮನೆಮನೆ ಸಮೀಕ್ಷೆಯ ಅವಧಿಯನ್ನು ಮೇ 25ರವರೆಗೆ ವಿಸ್ತರಿಸಿದೆ.

ಆಧಾರ್ ಸಮಸ್ಯೆ

ಮನೆ ಮನೆ ಸಮೀಕ್ಷೆಗೆ ಬಹುತೇಕ ಈಗ ನೀಡಿರುವ ಅವಧಿಯೇ ಅಂತಿಮವಾಗುವ ಸಾಧ್ಯತೆಗಳಿವೆ, ಆದರೆ ಈಗ ನಡೆಯುತ್ತಿರುವ ಸಮೀಕ್ಷೆ ಕಾರ್ಯ ಗೊಂದಲಗಳಲ್ಲಿದೆ. ಹೀಗಾಗಿ ಸಮೀಕ್ಷೆ ಕಾರ್ಯ ಸಮರ್ಪಕವಾಗುವುದು ಕಷ್ಟ ಎನ್ನುವುದು ಆ ಸಮುದಾಯಗಳ ಮುಖಂಡರ ಅಭಿಪ್ರಾಯ. ಜಿಲ್ಲಾಡಳಿತ ಶಿಕ್ಷಣ ಇಲಾಖೆ ಮೂಲಕ ನಿಯೋಜನೆ ಮಾಡಿರುವ ಶಿಕ್ಷಕರಿಗೆ ಈ ಬಗ್ಗೆ ಸರಿಯಾದ ಮಾಹಿತಿ ನೀಡಿಲ್ಲ. ಮೊಬೈಲ್ ಆಪ್ ಮೂಲಕ ಗಣತಿದಾರರು ಪರಿಶಿಷ್ಟ ಜಾತಿ ಜನರ ಅಂಕಿ ಅಂಶಗಳನ್ನು ಅಪ್‌ಲೋಡ್ ಮಾಡುವಾಗ, ರೇಷನ್‌ಕಾರ್ಡ್, ಆಧಾರ್ ಕಾರ್ಡ್ ಜತೆ ಮತದಾರರ ಪಟ್ಟಿಯನ್ನೇ ಪರಿಗಣಿಸುತ್ತಿದ್ದಾರೆ. ಪ್ರಧಾನವಾಗಿ ರೇಷನ್ ಕಾರ್ಡ್ ನೋಡುವಾಗ, ಅಲ್ಲಿ ಹೆಸರಿಲ್ಲದ ಕುಟುಂಬದ ಸದಸ್ಯರ ಹೆಸರು ಗಣತಿಗೆ ನೋಂದಣಿ ಮಾಡುತ್ತಿಲ್ಲ ಎನ್ನುವ ದೂರುಗಳು ಇವೆ.

ನೆಟ್ ವರ್ಕ್ ಪ್ರಾಬ್ಲಂ

ಇನ್ನು ಮೊಬೈಲ್ ನೆಟ್ ವರ್ಕ್ ಸಿಗದ ಅನೇಕ ಹಳ್ಳಿಗಳಲ್ಲಿ ಗಣತಿದಾರರು ಮ್ಯಾನುವಲ್ ಮೂಲಕವೇ ಎಸ್ಸಿ ಸಮುದಾಯದ ಜನರ ಅಂಕಿ ಸಂಖ್ಯೆಗಳನ್ನು ದಾಖಲು ಮಾಡಬೇಕು. ಆದರೆ ಇಲ್ಲಿ ಗಣತಿದಾರರು ಮೊಬೈಲ್ ಆಪ್

» ನೆಟ್ ವರ್ಕ್, ಸರ್ವರ್ ಡೌನ್‌ಗೆ ವಿಳಂಬ

» ಗಣತಿಗೆ ಎರಡನೇ ಬಾರಿ ಅವಧಿ ವಿಸ್ತರಣೆ

ಮೂಲಕವೇ ತಮಗೆ ಅವಕಾಶ ಇರುವುದು ಎನ್ನುವ ನೆಪದಲ್ಲಿ ಮೊಬೈಲ್ ನೆಟ್ ವರ್ಕ್ ಇಲ್ಲದ ಹಳ್ಳಿಗಳಿಗೆ ಕಾಲೇ ಇಡುತ್ತಿಲ್ಲ.

ರಜೆಗಳ ನೆಪಕ್ಕೆ ಚೆಕ್ಕರ್

ಈ ಗಣತಿ ಕಾರ್ಯಕ್ಕೆ ನಿಯೋಜಿತರಾದ ಎಷ್ಟೋ ಶಿಕ್ಷಕರು, ಅನಾರೋಗ್ಯ, ಮದುವೆ-ಮುಂಜಿ ನೆಪ ಹೇಳಿ ರಜಾದ ಮೇಲಿದ್ದಾರೆ. ಆ ಜಾಗಕ್ಕೆ ಬೇರೆಯವರನ್ನು ನಿಯೋಜನೆ ಮಾಡಿಲ್ಲ. ನಾನಾ ಕಾರಣ ಹೇಳಿ ಗಣತಿಗೆ ನಿಯೋಜನೆಯಾದವರು ಗಣತಿಗೆ ಹೋಗುತ್ತಿಲ್ಲ ಎಂಬ ದೂರುಗಳು ಕೂಡ ಬಂದಿವೆ. ಇದನ್ನು ಶಿಕ್ಷಣ ಇಲಾಖೆಯ ಬಿಇಒಗಳು ಗಂಭೀರವಾಗಿ ತೆಗೆದುಕೊಂಡಿಲ್ಲ. ಕೊನೆ ಪಕ್ಷ ಇದರ ನಿರ್ವಹಣೆ ಮೇಲುಸ್ತುವಾರಿ ಇಲಾಖೆಯಾಗಿರುವ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯೂ ಹೆಚ್ಚಿನ ಮುತುವರ್ಜಿ ವಹಿಸುತ್ತಿಲ್ಲ ಎಂದು ದಲಿತ ಸಮಾಜದ ಮುಖಂಡರು ಆರೋಪಿಸುತ್ತಿದ್ದಾರೆ.

ಸರ್ವರ್ ಡೌನ್ ಕಾರಣ

ಗಣತಿದಾರರು ಸಮೀಕ್ಷೆ ವಿಳಂಬಕ್ಕೆ ನಾನಾ ಕಾರಣ ಹೇಳುತ್ತಿದ್ದಾರೆ. ಸರ್ವರ್ ಡೌನ್ ಎನ್ನುತ್ತಿದ್ದಾರೆ. ರೇಷನ್ ಕಾರ್ಡ್‌ನಲ್ಲಿ ಹೆಸರೇ ಇಲ್ಲ ಎನ್ನುತ್ತಿದ್ದಾರೆ. ಮೊಬೈಲ್ ನೆಟ್ ವರ್ಕ್ ಸಿಗುತ್ತಿಲ್ಲ ಎನ್ನುತ್ತಿದ್ದಾರೆ. ಬಹುಪಾಲು ಶಿಕ್ಷಕರು ಇಂಥ ಕುಂಟ ನೆಪ ಹೇಳುತ್ತಿದ್ದಾರೆ. ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಗೆ ಇದ್ಯಾವುದೂ ಗಮನಕ್ಕೆ ಬಾರದಿರುವುದು ವಿಪರ್ಯಾಸ. ಅಧಿಕಾರಿಗಳಿಗೆ ನಮ್ಮ ಸಮುದಾಯದ ಏಳಿಗೆ ಬೇಡವಾಗಿದೆ. ಅಧಿಕಾರಿಗಳೇ ಈ ರೀತಿ ನಿರ್ಲಕ್ಷ್ಯ ತೋರಿದರೆ ಸಮೀಕ್ಷೆ ಕಾರ್ಯ ಸಮರ್ಪಕವಾಗಿ ಹೇಗೆ ನಡೆಯಲು ಸಾಧ್ಯ? ಎಂಬುದು ದಲಿತ ಮುಖಂಡರ ಅಳಲು..

ಮುಖಂಡರ ದೂರು

ಕೆಲ ಮೇಲ್ಜಾತಿ ಗಣತಿದಾರರು ಪರಿಶಿಷ್ಟ ಜಾತಿಗರ ಕಾಲೋನಿಗಳಿಗೆ ಕಾಲಿಟ್ಟಿಲ್ಲ ಎನ್ನುವ ಗಂಭೀರ ಆರೋಪಗಳು ಕೇಳಿಬಂದಿವೆ. ಸಮೀಕ್ಷೆಗೆ ನಿಯೋಜನೆಗೊಂಡವರು ನಾನಾ ಕಾರಣ ಹೇಳಿ ತಪ್ಪಿಸಿಕೊಂಡಿದ್ದಾರೆ. ಕೆಲವರು ಬೇಕಾಬಿಟ್ಟಿ ಕೆಲಸ ಮಾಡುತ್ತಿದ್ದಾರೆ. ಇನ್ನು ಕೂಲಿ ಅರಸಿ ಪರ ಊರುಗಳಿಗೆ ಹೋದವರ ವಿವರವನ್ನು ಅವರ ಕುಟುಂಬದವರು ಗಣತಿದಾರರಿಗೆ ನೀಡುವಾಗ, ಅವರ ಆಧಾರ್ ಕಾರ್ಡ್ ಇಲ್ಲದೆ ಗಣತಿಗೆ ದಾಖಲು ಮಾಡಲಾಗುವುದಿಲ್ಲ ಎನ್ನುವ ನೆಪ ಹೇಳಲಾಗುತ್ತಿದೆ ಎನ್ನುವ ಮಾತುಗಳು ಕೇಳಿ ಬಂದಿವೆ.

ಇಂತಹ ಅನೇಕ ಸಮಸ್ಯೆಗಳು, ಸವಾಲುಗಳ ನಡುವೆ ಗೊಂದಲದ ಗೂಡಾಗಿರುವ ಪರಿಶಿಷ್ಟ ಜಾತಿಗಳ ಜಾತಿ ಗಣತಿ ಸಮರ್ಪಕವಾಗಿ ನಡೆಯುವ ಬಗ್ಗೆ ದೊಡ್ಡ ಅನುಮಾನವಿದೆ. ಇದು ನಿವಾರಣೆಯಾಗಬೇಕಾದರೆ ಜಿಲ್ಲಾಡಳಿತ ಈಗಲೇ ಸಮೀಕ್ಷಾ ಕಾರ್ಯದ ಮೇಲೆ ಹೆಚ್ಚು ನಿಗಾ ಇಡಬೇಕಿದೆ.

ದಶಕಗಳ ಹೋರಾಟ

ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಸಮೀಕ್ಷೆ ಶುರುವಾಗಿದ್ದರ ಹಿಂದೆ ದಲಿತರ 30 ವರ್ಷಗಳ ಹೋರಾಟದ ಪರಿಶ್ರಮವಿದೆ. ಶೋಷಿತ ಸಮುದಾಯಗಳಿಗೆ ನ್ಯಾಯ ಸಿಗಬೇಕಾದರೆ ಒಳ ಮೀಸಲಾತಿ ಬೇಕೆನ್ನುವ ಆಗ್ರಹದ ಹೋರಾಟಕ್ಕೆ ಸರಕಾರ ಮನ್ನಣೆ ನೀಡಿದೆ. ಸಮೀಕ್ಷೆ ಕಾರ್ಯ ಶುರು ಮಾಡಿದೆ. ಇದರ ಹಿಂದೆ ಅನೇಕ ಜನರ ತ್ಯಾಗವೂ ಇದೆ. ಪೊಲೀಸರಿಂದ ಹೊಡೆತ ತಿಂದು ಜೈಲಿಗೂ ಹೋಗಿ ಬಂದವರಿದ್ದಾರೆ. ಇದೆಲ್ಲದ ಪರಿಶ್ರಮದ ಫಲವಾಗಿ ಶುರುವಾದ ಸಮೀಕ್ಷೆ ಕಾರ್ಯ ಕೆಲವರ ಅಲಕ್ಷ್ಯಕ್ಕೆ, ತಾಂತ್ರಿಕ ದೋಷದ ಕಾರಣಕ್ಕೆ ಪರಿಪೂರ್ಣ ಸಮೀಕ್ಷೆಯಿಂದ ಹೊರಗುಳಿಯಬಾರದು. ಹಾಗೇ ಹಿನ್ನಡೆ ಕೂಡ ಅನುಭವಿಸಬಾರದು. ಸರಕಾರ ಇದಕ್ಕಾಗಿ ಕೋಟ್ಯಂತರ ಹಣ ವೆಚ್ಚ ಮಾಡುತ್ತಿದೆ. ಅದು ಗುಡ್ಡಕ್ಕೆ ಕಲ್ಲು ಹೊತ್ತಂತಾಗಬಾರದು.

ಸಿಬಿಐ ವಿಶೇಷ ನ್ಯಾಯಾಲಯದ ತೀರ್ಪು | ಜಿಲ್ಲಾದ್ಯಂತ ತೀರ್ಪಿನ ಚರ್ಚೆ ಮುನ್ನೆಲೆಗೆ

ಗಣಿ ಪ್ರಕರಣ ನೆಪ, ಉಪ ಚುನಾವಣೆ ಜಪ

ಜಿಲ್ಲಾ ನೋಟ

ಶರಣಬಸವ ಹುಲಿಹೈದರ್ ಕೊಪ್ಪಳ

ಈ ಜಿಲ್ಲೆಯ ಗಂಗಾವತಿ ಕ್ಷೇತ್ರದ ಶಾಸಕ ಜನಾರ್ದನ ರೆಡ್ಡಿಗೆ ಸಿಬಿಐ ವಿಶೇಷ ನ್ಯಾಯಾಲಯ ಏಳು ವರ್ಷ ಜೈಲು ಶಿಕ್ಷೆ ಪ್ರಕಟಿಸಿದೆ. ಇದರ ಬೆನ್ನಲ್ಲೇ ಅವರ ಶಾಸಕ ಸ್ಥಾನವನ್ನು ರದ್ದು ಮಾಡಿ, ಕರ್ನಾಟಕ ವಿಧಾನಸಭೆ ಕಾರ್ಯದರ್ಶಿ ಅಧಿಸೂಚನೆ ಹೊರಡಿಸಿದ್ದಾರೆ. ಈ ಹಿನ್ನೆಲೆ ಗಂಗಾವತಿ ವಿಧಾನಸಭೆ ಚುನಾವಣೆಗೆ ಉಪ ಚುನಾವಣೆ ನಡೆಯಲಿದೆ ಎಂಬ ಚರ್ಚೆ ಕೊಪ್ಪಳ ಜಿಲ್ಲಾದ್ಯಂತ ಮುನ್ನೆಲೆಗೆ ಬಂದಿದೆ.

ಎಲೆಕ್ಷನ್ ಮೂಡ್

ಜನಾರ್ದನ ರೆಡ್ಡಿ ಜೈಲು ಸೇರುತ್ತಿದ್ದಂತೆಯೇ ಗಂಗಾವತಿಯ ಬಿಜೆಪಿ- ಕಾಂಗ್ರೆಸ್ ಪ್ರಮುಖರು ಎಲೆಕ್ಷನ್ ಮೂಡ್ ಗೆ ಹೋಗಿದ್ದಾರೆ. ಆದರೆ, ಶಾಸಕ ಜನಾರ್ದನ ರೆಡ್ಡಿಗೆ ಹೈಕೋರ್ಟ್ ನಲ್ಲಿ ತಾತ್ಕಾಲಿಕ ರಿಲೀಫ್ ಸಿಗುವ ಸಾಧ್ಯತೆ ಹೆಚ್ಚಿದ್ದು, ಗಂಗಾವತಿಗೆ ಉಪ ಚುನಾವಣೆ ನಡೆಯುವ ಅನಿವಾರ್ಯ ಬರುವುದಿಲ್ಲ ಎಂಬ ಮಾತುಗಳೂ ಕಾನೂನು ಬಲ್ಲವರಿಂದ ಕೇಳಿ ಬಂದಿವೆ.

ಪತ್ನಿ ಅರುಣಾ ಲಕ್ಷ್ಮೀ ಎಂಟ್ರಿ

ಖುದ್ದು ಜನಾರ್ದನ ರೆಡ್ಡಿ ಪತ್ನಿ ಅರುಣಾ ಲಕ್ಷ್ಮೀ ಈಗ ಫೀಲ್ಡ್‌ಗೆ ಎಂಟ್ರಿ ಕೊಟ್ಟಿದ್ದಾರೆ. ಇಂಥ ಕೋರ್ಟ್ ಪ್ರಕರಣಗಳ ಜೊತೆಗೆ ಹತ್ತಾರು ಉದಾಹರಣೆ ಸಮೇತವಾಗಿ ಕಾರ್ಯಕರ್ತರಿಗೆ ತಿಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದಾಗ್ಯೂ ಉಭಯ-ಪಕ್ಷಗಳ ಮುಖಂಡರು ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸಿದರು ಎನ್ನುವಂತೆ ಚುನಾವಣೆ ಘೋಷಣೆಗೂ ಮೊದಲೇ ಪಕ್ಷದಲ್ಲಿ ಆಕಾಂಕ್ಷಿಗಳು ಕ್ಷೇತ್ರದಲ್ಲಿ ಓಡಾಟ ಶುರು ಮಾಡಿಕೊಂಡಿದ್ದಾರೆ. ಕೆಲವು ಮುಖಂಡರಿಗೆ ಚುನಾವಣೆ ಎದುರಾಗುವುದಿಲ್ಲ ಎಂಬುದು ಗೊತ್ತಿದ್ದರೂ, ಕ್ಷೇತ್ರದಲ್ಲಿ ನಾಯಕರಾಗಿ ಗುರುತಿಸಿಕೊಳ್ಳಲು ಓಡಾಟ ಶುರು ಮಾಡಿದ್ದಾರೆ. ಕಾಂಗ್ರೆಸ್‌ನಲ್ಲಿ ಇನ್ನೇನು ಚುನಾವಣೆ ಘೋಷಣೆ ಆಗಿಯೇ ಬಿಟ್ಟಿತು ಎನ್ನುವಂತೆ ಅಭ್ಯರ್ಥಿ ಬಗ್ಗೆ ಚರ್ಚೆ ನಡೆದಿದೆ.

ರಿಲೀಫ್ ಸಾಧ್ಯತೆ ಹೆಚ್ಚು

ಶಾಸಕ ಜನಾರ್ದನ ರೆಡ್ಡಿ ಈಗಾಗಲೇ ತಮ್ಮ ವಕೀಲರ ಮೂಲಕ ಹೈದ್ರಾಬಾದ್ ಹೈಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸಲು ತಯಾರಿ ನಡೆಸಿದ್ದಾರೆ. ಸಿಬಿಐ ವಿಶೇಷ ನ್ಯಾಯಾಲಯದ ತೀರ್ಪು ಓದಿಕೊಂಡು, ಹೈಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸಲು ಒಂದಷ್ಟು ಕಾಲಾವಕಾಶ ಬೇಕು. ಕೆಳ ಹಂತದ ನ್ಯಾಯಾಲಯದ ಆದೇಶವನ್ನು ಅಮಾನತಿನಲ್ಲಿಟ್ಟು, ಹೈಕೋರ್ಟ್ ವಿಚಾರಣೆ ಕೈಗೆತ್ತಿಕೊಳ್ಳಬಹುದು. ಒಂದೊಮ್ಮೆ ಹೈಕೋರ್ಟ್ ಸಿಬಿಐ ವಿಶೇಷ ನ್ಯಾಯಾಲಯದ ಆದೇಶವನ್ನು ಅಮಾನತಿನಲ್ಲಿಟ್ಟರೆ, ರೆಡ್ಡಿ ಹೊರಗೆ ಬಂದು ಮತ್ತೇ ಶಾಸಕರಾಗುತ್ತಾರೆ. ಜೊತೆಗೆ ಇಲ್ಲೇನಾದರೂ ಸಮಸ್ಯೆಯಾದರೆ ಸುಪ್ರೀಂ ಕೋರ್ಟ್ ನಲ್ಲಿ ಕಾನೂನು ಹೋರಾಡಕ್ಕೂ ಅವಕಾಶ ಇದೆ.

ಕಾನೂನು ತಜ್ಞರ ಮಾತು

ಈ ಎಲ್ಲ ಹಂತ ಮೀರಿ ಗಂಗಾವತಿ ಕ್ಷೇತ್ರಕ್ಕೆ ಉಪ ಚುನಾವಣೆ ಘೋಷಣೆ ಆಗುವುದು ಸುಲಭ ಸಾಧ್ಯವಿಲ್ಲ ಎಂಬ ಮಾತೂ ಕಾನೂನು ಬಲ್ಲವರಿಂದ ಕೇಳಿ ಬಂದಿವೆ. ಈ ಹಿನ್ನೆಲೆ ಜನಾರ್ದನ ರೆಡ್ಡಿ ಮತ್ತು ಅವರ ಹಿಂಬಾಲಕರು ಉಚ ಚುನಾವಣೆ ಬಗ್ಗೆ ಮೌನ ತಾಳಿದ್ದಾರೆ. ಕೋರ್ಟ್‌ನಲ್ಲಿ ಶೇ. 100 ರಷ್ಟು ಕನಿಷ್ಠ ತಾತ್ಕಾಲಿಕ ರಿಲೀಫ್ ಸಿಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದಾರೆ.

ಬೆಂಬಲಿಗರು ವಿಚಲಿತ

ಸದ್ಯಕ್ಕೆ ಕ್ಷೇತ್ರದ ಮತದಾರರು ಮತ್ತು ರೆಡ್ಡಿ ಬೆಂಬಲಿಗರು ವಿಚಲಿತರಾಗಿದ್ದಾರೆ. ಇನ್ನೇನು ಗಂಗಾವತಿ ಕ್ಷೇತ್ರಕ್ಕೆ ಉಪ ಚುನಾವಣೆ ಅನಿವಾರ್ಯ ಎನ್ನುವ ಮನಸ್ಥಿತಿಗೆ ಬಂದಿದ್ದಾರೆ. ಮೇಲಿಂದ ಮೇಲೆ ಈ ಬಗ್ಗೆ ಮಾಧ್ಯಮದಲ್ಲಿ ಚರ್ಚೆ ಆಗುತ್ತಿದ್ದು, ಜನರು ಕೂಡ ಗೊಂದಲಕ್ಕೆ ಸಿಲುಕಿದ್ದಾರೆ. ರೆಡ್ಡಿ ಪತ್ನಿ ಅರುಣಾ ಲಕ್ಷ್ಮಿ ಬಳ್ಳಾರಿ ನಗರ ಮತ್ತು ಗಂಗಾವತಿಯಲ್ಲಿ ಪ್ರತ್ಯೇಕ ಸಭೆ ಮಾಡುತ್ತಿದ್ದಾರೆ. ರಾಜಕೀಯ ಕುತಂತ್ರದಿಂದ ಜನಾರ್ದನ ರೆಡ್ಡಿ ಅವರಿಗೆ ಜೈಲು ಶಿಕ್ಷೆ ಆಗಿದೆ ಎಂದು ದೂರಿದ್ದಾರೆ. ಒಂದು ಹಂತ ಮುಂದೆ ಹೋಗಿ, ಒಂದೊಮ್ಮೆ ಉಪ ಚುನಾವಣೆ ನಡೆದರೆ, ನಾನೇ ಅಭ್ಯರ್ಥಿ ಆಗುತ್ತೇನೆ ಎಂದು ಅರುಣ ಲಕ್ಷ್ಮಿ ಹೇಳಿಕೊಂಡಿದ್ದಾರೆ.



ಅನ್ಸಾರಿಗೆ ತೂಗುಗತ್ತಿ

ಗಂಗಾವತಿಗೆ ಉಪ ಚುನಾವಣೆ ನಡೆಯಲಿದೆ ಎಂಬ ಚರ್ಚೆ ಆರಂಭವಾಗಿ ಒಂದು ವಾರದ ನಂತರ ಇಕ್ಬಾಲ್ ಅನ್ಸಾರಿ ರಂಗ ಪ್ರವೇಶ ಮಾಡಿದ್ದಾರೆ. ಮಾಜಿ ಶಾಸಕ ಹಾಗೂ ಕಳೆದ ಗಂಗಾವತಿ ವಿಧಾನಸಭೆ ಚುನಾವಣೆಯ ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಇಕ್ಬಾಲ್ ಅನ್ಸಾರಿ, ಎರಡು ದಿನಗಳ ಹಿಂದೆ ತಮ್ಮ ಹಳೇ ಶೈಲಿ ಮತ್ತು ಅವರದ್ದೇ ಫೇವರೇಟ್ ಸಂವಹನ ಮಾಧ್ಯಮ, ವಾಟ್ಸಾಪ್ ಮೂಲಕ ಆಡಿಯೋ ಸಂದೇಶ ಕಳುಹಿಸಿದ್ದಾರೆ. ಅಷ್ಟೇ ಅಲ್ಲದೇ ಉಪ ಚುನಾವಣೆ ನಡೆದರೆ ನಾನೇ ಅಭ್ಯರ್ಥಿ ಎಂದು ಘೋಷಣೆ ಮಾಡಿಕೊಂಡಿದ್ದಾರೆ. ಆದರೆ, ಸಿಎಂ ಸಿದ್ದರಾಮಯ್ಯ ಇದಕ್ಕೆ ವ್ಯತಿರಿಕ್ತ ಮಾತನಾಡಿದ್ದಾರೆ. ಗೆಲ್ಲುವ ಕುದುರೆಗೆ ಅಭ್ಯರ್ಥಿ ಮಾಡುತ್ತೇವೆ ಎಂದಿದ್ದಾರೆ. ಇಷ್ಟು ದಿನ ಗಂಗಾವತಿ ಕಾಂಗ್ರೆಸ್ ಗೆ ಇಕ್ಬಾಲ್ ಅನ್ಸಾರಿಯೇ ಪಕ್ಷಾತೀತ ನಾಯಕ ಎಂಬ ಕಾಲ ಇತ್ತು. ಆದರೆ, ಸಿಎಂ ಸಿದ್ದರಾಮಯ್ಯ ಅವರ ಗೆಲ್ಲುವ ಕುದುರೆಗೆ ಟಿಕೇಟ್ ಕೊಡುತ್ತೇವೆ ಎಂಬ ಮಾತು ಅನ್ಸಾರಿ ಬಣಕ್ಕೆ ನುಂಗಲಾರದ ತುತ್ತಾಗಿದೆ. ಸಿಎಂ ಆಡಿರುವ ಈ ಮಾತು, ಪರಾಜಿತರಾದ ಅನ್ಸಾರಿಗೆ ಟಿಕೇಟ್ ಪಡೆಯುವುದು ಅಷ್ಟು ಸುಲಭ ಸಾಧ್ಯವಿಲ್ಲ ಎಂಬುದಂತೂ ಪಕ್ಕಾ ಆಗಿದೆ.

ಎಲೆಕ್ಷನ್ ತಯಾರಿ

ಶಾಸಕ ಜನಾರ್ದನ ರೆಡ್ಡಿ ಮುಂದಿನ ಚುನಾವಣೆಯಲ್ಲಿ ಮತ್ತೆ ಗಂಗಾವತಿಯಿಂದಲೇ ಸ್ಪರ್ಧೆ ಮಾಡುವ ಸಾಧ್ಯತೆ ತುಂಬಾ ಕಡಿಮೆ. ಕಳೆದ 2023ರಲ್ಲಿ ಜನಾರ್ದನ ರೆಡ್ಡಿಗೆ ಬಳ್ಳಾರಿ ಪ್ರವೇಶಕ್ಕೆ ಕೋರ್ಟ್ ಅವಕಾಶ ನೀಡಿರಲಿಲ್ಲ. ಈ ಹಿನ್ನೆಲೆ ರೆಡ್ಡಿ, ಬಳ್ಳಾರಿ ಪಕ್ಕದ ಜಿಲ್ಲೆ ಹಾಗೂ ಗಡಿಗೆ ಹೊಂದಿಕೊಂಡಿದ್ದ ಗಂಗಾವತಿ ಕ್ಷೇತ್ರ ಆಯ್ಕೆ ಮಾಡಿಕೊಂಡಿದ್ದರು. ಆದರೆ ಇದೀಗ ರೆಡ್ಡಿ ಬಳ್ಳಾರಿ ಪ್ರವೇಶಕ್ಕೆ ಕೋರ್ಟ್ ಅವಕಾಶ ನೀಡಿದೆ. ಇದರಿಂದ ರೆಡ್ಡಿ ಮುಂದಿನ ಬಾರಿಗೆ ಬಳ್ಳಾರಿ ಅಥವಾ ವಿಜಯನಗರ ಜಿಲ್ಲೆಯಲ್ಲಿ ಸ್ಪರ್ಧೆ ಮಾಡುವ ಸಾಧ್ಯತೆ ಹೆಚ್ಚಿದೆ. ಹೀಗಾಗಿ ಕೊಪ್ಪಳ ಜಿಲ್ಲೆಯ ಕಾಂಗ್ರೆಸ್ - ಬಿಜೆಪಿ ಟಿಕೇಟ್ ಆಕಾಂಕ್ಷಿಗಳು ಉಪ ಚುನಾವಣೆ ಬಂದೇ ಬರುತ್ತದೆ ಎಂದು ಜಪಿಸುತ್ತಿದ್ದಾರೆ...! ಮುಂದೆ ಏನಾಗಬಹುದು ಎನ್ನುವುದು ಮಾತ್ರ ನ್ಯಾಯಾಲಯಗಳ ತೀರ್ಪು ಗಳ ಮೇಲೆ ಅವಲಂಬಿಸಿರುವುದಂತೂ ನಿಜ.

ಅನುದಿನವೂ ವಿರಾಮಕ್ಕೆ ಒಂದು ನೆಪ

ಆರಾಮ

ವಿಶ್ವವಾಣಿ
@vishwavaninews

ಬೆಂಗಳೂರು
21-05-2025
ಬುಧವಾರ

ಇಂತಹ ಹೀನ ಕೃತ್ಯ!

ಭಯೋತ್ಪಾದನೆ ಮತ್ತು ಹಿಂಸಾಚಾರದ ಅಪಾಯ ಮತ್ತು ಜನರು, ಸಮಾಜ ಮತ್ತು ಒಟ್ಟಾರೆ ದೇಶದ ಮೇಲೆ ಬೀರುವ ಅದರ ಪರಿಣಾಮದ ಬಗ್ಗೆ ಜಾಗೃತಿ ಮೂಡಿಸುವುದು ಇಂದಿನ ಅಗತ್ಯತೆಯಾಗಿದೆ. ಅದಕ್ಕಾಗಿ ನಮ್ಮ ದೇಶದಲ್ಲಿ ಪ್ರತಿ ವರ್ಷ ಮೇ 21ರಂದು ಭಯೋತ್ಪಾದನಾ ವಿರೋಧಿ ದಿನವನ್ನು ಆಚರಿಸಲಾಗುತ್ತಿದೆ.

• ಮಲ್ಲಪ್ಪ ಸಿ. ಖೊದ್ನಾಪೂರ (ತಿಕೋಟಾ)

ನಮ್ಮ ದೇಶದ ಏಳನೆಯ ಪ್ರಧಾನಿ ರಾಜೀವ ಗಾಂಧಿಯವರನ್ನು ಮೇ 21, 1991 ರಂದು ತಮಿಳುನಾಡಿನ ಪೆರಂಬದೂರ ಎಂಬಲ್ಲಿ ಎಲ್.ಟಿ.ಟಿ.ಇ. ಗುಂಪಿನ ಸದಸ್ಯರು ಹತ್ಯೆ ಮಾಡಿದರು. ಬೆಲ್ಟ್ ಬಾಂಬ್ ಸ್ಫೋಟಿಸಿ, ರಾಜೀವ ಗಾಂಧಿಯವರಿಗೆ ನಮಸ್ಕರಿಸುವಂತೆ ನಟಿಸಿ, ಈ ಭಯೋತ್ಪಾದನಾ ಕೃತ್ಯವನ್ನು ನಡೆಸಲಾಯಿತು. ರಾಜೀವ ಗಾಂಧಿಯವರು ಸ್ಥಳದಲ್ಲೇ ಮಡಿದರು. ಮತ್ತು ಈ ಘಟನೆಯಲ್ಲಿ ಸುಮಾರು 25 ಜನ ಸಾವನ್ನಪ್ಪಿದರು.

ಈ ದುರ್ಘಟನೆಯು ದೇಶವನ್ನೇ ಬೆಚ್ಚಿಬೀಳಿಸಿತು! ಭಯೋತ್ಪಾದನೆಯನ್ನು ತಳಮಟ್ಟದಿಂದ ಮಟ್ಟಹಾಕುವ ನಿರ್ಧಾರ ಕೈಗೊಳ್ಳಲಾಯಿತು. ನಂತರ ಅಧಿಕಾರಕ್ಕೆ ಬಂದ ವ್ಹಿ.ಪಿ.ಸಿಂಗ್ ಅವರ ಸರ್ಕಾರವು ಪ್ರತಿವರ್ಷ ಮೇ 21 ರಂದು ಭಯೋತ್ಪಾದನಾ ವಿರೋಧಿ ದಿನವನ್ನು ಆಚರಿಸಲು ಕರೆ ಕೊಟ್ಟಿತು. ದೇಶದಲ್ಲಿ ಮಾನವೀಯತೆ ಮತ್ತು ಶಾಂತಿಯ ಸಂದೇಶವನ್ನು ಪ್ರಚಾರ ಮಾಡುವುದು, ಅತಿ ಅವಶ್ಯಕವೆಂದು ಮನಗಂಡು ಭಯೋತ್ಪಾದನೆಯ ಚಟುವಟಿಕೆಗಳ ವಿರುದ್ಧ ಹೋರಾಡುವ ಮಹತ್ವವನ್ನು ಎತ್ತಿ ತೋರಿಸಲು ಭಾರತ ಸರ್ಕಾರವು ಪ್ರತಿ ವರ್ಷ ಈ ದಿನದಂದು ಆಚರಿಸುತ್ತಿದೆ.

ಉದ್ದೇಶ

ದೇಶದೆಲ್ಲೆಡೆ ಜನರಲ್ಲಿ ಶಾಂತಿ ಮತ್ತು ಮಾನವೀಯತೆಯ ಸಂದೇಶವನ್ನು ಹರಡಲು ಹಾಗೂ ಜನರಲ್ಲಿ ಏಕತೆಯ ಬಗ್ಗೆ ಮನದಲ್ಲಿ ಬೀಜ ಬಿತ್ತುವ ಮೂಲಕ ಸಾಮರಸ್ಯತೆಯನ್ನು ಕಾಪಾಡುವುದು. ಯುವ ಜನಾಂಗ ಮತ್ತು ಯುವಕರು ಭಯೋತ್ಪಾದನೆಯಂತಹ ಗುಂಪುಗಳಲ್ಲಿ ತೊಡಗಿಸಿಕೊಳ್ಳದಂತೆ ಮತ್ತು ಕೃತ್ಯಗಳನ್ನು ಎಸಗದಂತೆ ಶಿಕ್ಷಣ ಮತ್ತು ತರಬೇತಿ ಮೂಲಕ ಜಾಗೃತಿ ಮೂಡಿಸುವುದು. ಭಯೋತ್ಪಾದನೆ, ಅದರ ಅಪಾಯ, ಅದರಿಂದುಂಟಾಗುವ ಅಪಾಯಗಳ ಬಗ್ಗೆ ಮನವರಿಕೆ ಮಾಡಿಕೊಟ್ಟು ಸಮಾಜದಲ್ಲಿ ಭಾವೈಕ್ಯತೆ, ಶಾಂತಿ-ಸಾಮರಸ್ಯತೆ ಮತ್ತು ಭಾವೈಕ್ಯತೆಯನ್ನು ಒಡಮೂಡಿಸುವುದು. ಜಾತಿ, ಮತ, ಧರ್ಮ ಅಥವಾ ಪ್ರದೇಶವನ್ನು ಲೆಕ್ಕಿಸದೇ ದೇಶದೆಲ್ಲೆಡೆ ಶಾಂತಿ ಮತ್ತು ಸಾಮರಸ್ಯದ ಸಂದೇಶವನ್ನು ಹರಡುವುದೇ ಈ ದಿನದ ಆಚರಣೆಯ ಪ್ರಮುಖ ಧ್ಯೇಯವಾಗಿದೆ.

ಅಮಾಯಕರ ಮೇಲೆ ಗುಂಡಿನ ಮಳೆ



ಇತ್ತೀಚೆಗೆ ಎಪ್ರಿಲ್ 22ರಂದು, ಕಾಶ್ಮೀರದ ಪಹಲಗಾಂವನಲ್ಲಿ ಜರುಗಿದ ಭಯೋತ್ಪಾದನಾ ಕೃತ್ಯ ಎಲ್ಲರನ್ನೂ ಬೆಚ್ಚಿಬೀಳಿಸಿದೆ. ಬಂದೂಕು ಹಿಡಿದ ಭಯೋತ್ಪಾದಕರು, ಪ್ರವಾಸಿಗರ ಮೇಲೆ ಗುಂಡು ಹಾರಿಸಿದರು; ಯಾವುದೇ ಶಸ್ತ್ರಗಳನ್ನು ಹೊಂದಿರದೇ ಇದ್ದ ಅಮಾಯಕ ಪ್ರವಾಸಿಗರು ಗುಂಡಿಗೆ ಬಲಿಯಾದರು. ಅಂದು ಒಟ್ಟು 26 ಜನರನ್ನು ಹತ್ಯೆ ಮಾಡಿದರು. ಇದು ಇಡೀ ಜಗತ್ತು ತಲೆ ತಗ್ಗಿಸುವಂತಹ ಕರಾಳತೆ ಘಟನೆ! ಪಕ್ಕದ ದೇಶದ ಬೆಂಬಲದಿಂದ, ಕುಮ್ಮಕ್ಕಿನಿಂತ, ಕಾರಸ್ತಾನದಿಂದ ಇಂತಹದೊಂದು ಭಯೋತ್ಪಾದಕ ಕೃತ್ಯ ನಡೆದಿದೆ ಎಂದು ಗುಪ್ತಚರ ಸಂಸ್ಥೆಗಳು ಪತ್ತೆ ಮಾಡಿದರು. ಪಕ್ಕದ ದೇಶದಲ್ಲಿರುವ ಭಯೋತ್ಪಾದನಾ ತರಬೇತಿ ಶಿಬಿರ ಮತ್ತು ವ್ಯವಸ್ಥೆಗಳ ಮೇಲೆ ನಮ್ಮ ದೇಶವು ದಾಳಿ ಮಾಡಿ, ಮುಂದಿನ ದಿನಗಳಲ್ಲಿ ಇಂತಹ ಕೃತ್ಯ ನಡೆಯದಂತೆ ಸೂಕ್ತ ಕ್ರಮ ಕೈಗೊಂಡಿತು.

ವೈರಲ್ ಭಯೋತ್ಪಾದನೆ

ಇತ್ತೀಚೆಗೆ ಪ್ರವರ್ಧಮಾನಕ್ಕೆ ಬಂದಿರುವ ಸೋಷಿಯಲ್ ಮೀಡಿಯಾದ ಮೂಲಕ, ಹೊಸ ರೀತಿಯ ಭಯ ಹುಟ್ಟಿಸುವ ತಂತ್ರಗಳನ್ನು ಹುಡುಕಿರುವುದು ಬೇಸರದ ಸಂಗತಿ. ಅದೆಲ್ಲೋ ಅನಾಮಿಕ ಸ್ಥಳದಲ್ಲಿ ಕುಳಿತು, ವಿಮಾನದಲ್ಲಿ ಬಾಂಬ್ ಇರಿಸಲಾಗಿದೆ ಎಂದೋ, ಯಾರನ್ನಾದರೂ ಹತ್ಯೆ ಮಾಡಲಾಗುವುದು ಎಂದೋ ಭಯ ಹುಟ್ಟಿಸುವುದು ಇಂದಿನ ಹೊಸ ಕುತಂತ್ರ. ಇದನ್ನು ತಡೆಯಲು ಸರಕಾರವು ಬಿಗಿ ಕ್ರಮಗಳನ್ನು ಕೈಗೊಳ್ಳುತ್ತಿದೆ.2025ರ ಘೋಷವಾಕ್ಯ ''ಭಯೋತ್ಪಾದನೆ ಬೇಡ, ಶಾಂತಿಗೆ ಹೌದು ಎಂದು ಹೇಳಿ'' ಎಂಬ ಘೋಷವಾಕ್ಯದೊಂದಿಗೆ 2025 ನೇಯ ವರ್ಷದ ಭಯೋತ್ಪಾದನಾ ವಿರೋಧಿ ದಿನವನ್ನು ಆಚರಿಸಲಾಗುತ್ತಿದೆ.

ಹೊಸ ವೇದಿಕೆಯ ಬಳಕೆ

ಡಿಜಿಟಲ್, ಸೋಶಿಯಲ್ ಮೀಡಿಯಾ, ಮತ್ತು ಸಮೂಹ ಮಾಧ್ಯಮ ವೇದಿಕೆಗಳ ಮೂಲಕ ಭಯೋತ್ಪಾದನಾ ವಿರೋಧಿ ಸಂದೇಶವನ್ನು ಪ್ರಚಾರ ಮಾಡುವ ವಿನೂತನವಾದ ಮಾರ್ಗಗಳನ್ನು ಬಳಸಿಕೊಳ್ಳುವುದರ ಜತೆಗೆ ರಾಷ್ಟ್ರೀಯ ಭದ್ರತೆಗೆ ಕೊಡುಗೆ ನೀಡಲು ಅನುವು ಮಾಡಿಕೊಡಲು ಜಾಗರೂಕತೆಯ ಸಂಸ್ಕೃತಿಯನ್ನು ಉತ್ತೇಜಿಸಲು ಈ ದಿನದ ಆಚರಣೆಯು ಮಹತ್ವ ಪಡೆದುಕೊಂಡಿದೆ. ಭಯೋತ್ಪಾದಕ ದಾಳಿಯಲ್ಲಿ ಪ್ರಾಣ ಕಳೆದುಕೊಂಡ ಧೈರ್ಯಶಾಲಿ ಸೈನಿಕರು ಮತ್ತು ನಾಗರಿಕರಿಗೆ ಗೌರವ ಸಲ್ಲಿಸುವುದು ಮತ್ತು ಭಯೋತ್ಪಾದನೆಯನ್ನು ಬೇರು ಸಹಿತ ಕಿತ್ತೊಗೆಯುವ ಬದ್ಧತೆಯನ್ನು ತಿಳಿಸುತ್ತದೆ. 'ಸರ್ವೇ ಜನಾಂ ಸುಖಿನೋ ಭವಂತು' ಎಂದು ಸಾರುವ, ಧರ್ಮ ಭಾಷೆಗಳ ಭಾವ ಸಂಗಮದ ಈ ನಾಡಿನಲ್ಲಿ, ಇಂದಿಗೂ ನಡೆಯುತ್ತಿರುವ ಭಯೋತ್ಪಾದಕ ಕೃತ್ಯಗಳು, ಭವಿಷ್ಯದ ಮೇಲೆ ಕರಾಳ ಛಾಯೆ ಮೂಡಿಸಿರುವುದು ಸುಳ್ಳಲ್ಲ.

ಆಪರೇಷನ್ ಸಿಂದೂರ

ನಾಡಿನ ಜನರು ನೋಡಲು ಹೋದರು
ಕಾಶ್ಮೀರ ಸಿರಿಯನ್ನು
ಅಲ್ಲಿಯ ಸೃಷ್ಟಿ ಸೊಬಗನು ಸವಿದು
ಪಡೆದರು ಖುಷಿಯನ್ನು॥
ಅಡಗಿ ಕುಳಿತ ಉಗ್ರರು ಬಂದರು
ಕೇಕೆಯ ಹಾಕುತ್ತಾ
ಪತ್ನಿಯ ಎದುರೇ ಗಂಡನ ಕೊಂದರು
ಧರ್ಮವ ಕೇಳುತ್ತಾ॥
ಪತ್ನಿಯರೆಲ್ಲಾ ನಮ್ಮನೂ ಕೊಲ್ಲಿರಿ
ಎಂದರು ಹಲಬುತ್ತಾ
ಹೋಗಿ ನೀವು ಮೋದಿಗೆ ಹೇಳಿರಿ
ಎಂದರು ಕಿರಚುತ್ತಾ॥
ಹಸಿರು ನೆಲದಲಿ ಉಸಿರು ಚೆಲ್ಲಿದರು
ನೆತ್ತರು ಹರಿಸುತ್ತಾ
ಉಗ್ರರು ಸರ ಸರ ಓಡಿ ಹೋದರು
ಕಾಡಲಿ ಅಡಗುತ್ತಾ॥
ಉಗ್ರರ ನೆಲೆಗಳ ಹುಡುಕಿ ಹೊಡೆಯಲು
ನಡೆದರು ಯೋಧರು
ಡ್ರೋನ್ ಮಿಸೈಲ್ ದಾಳಿಗಿಳಿಯಲು
ಉಗ್ರಶಿಬಿರ ಸಂಹಾರ!

• ಡಾ.ಕರವೀರಪ್ರಭು ಕ್ಯಾಲಕೊಂಡ

ದಾರುಣ ವರ್ಷ 2008

ಭಯೋತ್ಪಾದಕ ಕೃತ್ಯಗಳಿಂದ ಹೆಚ್ಚು ನಲುಗಿದ ದೇಶಗಳಲ್ಲಿ ಭಾರತವೂ ಒಂದು. ಅಂಕಿ ಅಂಶ ಗಮನಿಸಿದರೆ, 2008ರಲ್ಲಿ ನಮ್ಮ ದೇಶದಲ್ಲಿ ಅತಿ ಹೆಚ್ಚಿನ ಭಯೋತ್ಪಾದಕ ಕೃತ್ಯಗಳು ನಡೆದದ್ದು ದಾಖಲಾಗಿದೆ. ಅವುಗಳಲ್ಲಿ ಮುಂಬಯಿಯ ತಾಜ್ ಹೋಟೇಲ್ ಮತ್ತು ಇತರ ತಾಣಗಳಲ್ಲಿ ಮೂರು ದಿನಗಳ ಕಾಲ ಭಯೋತ್ಪಾದಕರು ನಡೆಸಿದ ಅಟ್ಟಹಾಸ ಮತ್ತು ಸುಮಾರು 171 ಜನರು ಮೃತಪಟ್ಟ ಘಟನೆಯು ಹೇಯ ಮತ್ತು ಬೀಭತ್ಸ ಎನಿಸಿದೆ. ಮೂರು ದಿನ ನಡೆದ ಆ ಭಯೋತ್ಪಾದಕ ಕೃತ್ಯದಲ್ಲಿ ಪಾಕಿಸ್ತಾನದಿಂದ ಬಂದ ಭಯೋತ್ಪಾದಕರು ಪಾಲ್ಗೊಂಡಿದ್ದರು ಎಂಬುದು ಋಜುವಾತಾಗಿತ್ತು ಮತ್ತು ಕಸಬ್ ಎಂಬ ಪಾಕಿಸ್ತಾನಿ ನಾಗರಿಕನು ಸೆರೆಯಾಗಿ, ನೆರೆಯ ದೇಶದ ಭಯೋತ್ಪಾದಕ ತರಬೇತಿಯ ವಿವರಗಳನ್ನು ನೀಡಿ, ಕಾನೂನು ಪ್ರಕ್ರಿಯೆಗೆ ಒಳಗಾಗಿ ಗಲ್ಲು ಶಿಕ್ಷೆಗೆ ಗುರಿಯಾದ; ಮತ್ತು ಆತ ನೀಡಿದ ವಿವರಗಳ ಪ್ರಕಾರ ನಮ್ಮ ನೆರೆಯ ದೇಶವು ಭಯೋತ್ಪಾದಕರನ್ನು ನಿರಂತರವಾಗಿ ತರಬೇತುಗೊಳಿಸುತ್ತಿದೆ ಎಂಬುದು ಜಗತ್ತಿಗೇ ತಿಳಿಯಿತು. 2008ರಲ್ಲಿ ಜನವರಿ 1ರಂದು ಉತ್ತರಪ್ರದೇಶದ ರಾಂಪುರ್ ಎಂಬಲ್ಲಿ ಸಿಆರ್‌ಪಿಎಫ್ ಶಿಬಿರದ ಮೇಲೆ ದಾಳಿ ಮಾಡಿದ ಭಯೋತ್ಪಾದಕರು 8 ಜನರನ್ನು ಸಾಯಿಸಿದರು; 13.5.2008ರಂದು ಜೈಪುರದಲ್ಲಿ ನಡೆದ ಸರಣಿ ಬಾಂಬ್ ದಾಳಿಯಲ್ಲಿ 71ಕ್ಕೂ ಅಧಿಕ ಜನರು ಸತ್ತರು; 25.7.2008ರಂದು ಬೆಂಗಳೂರಿನಲ್ಲಿ ಬಾಂಬ್ ದಾಳಿಯಾಗಿ ಒಬ್ಬರು ಸತ್ತರು. 26.7.2008ರಂದು ಅಹಮದಾಬಾದ್‌ನ ಸರಣಿ ಬಾಂಬ್ ದಾಳಿಯಲ್ಲಿ 56 ಜನ, 13.9.2008ರಲ್ಲಿ ದೆಹಲಿಯ ಸರಣಿ ಬಾಂಬ್ ದಾಳಿಯಲ್ಲಿ 33 ಜನ, ಅದೇ ತಿಂಗಳ 27 ಮತ್ತು 29ರಂದು ಪುನಃ ಬಾಂಬ್ ದಾಳಿ – ಈ ರೀತಿ 2008 ನಮ್ಮ ದೇಶಕ್ಕೆ ಅತಿ ದಾರುಣ ಎನಿಸಿತು. ಇಂತಹ ಭಯೋತ್ಪಾದಕ ದಾಳಿಗಳನ್ನು ಹಿಮ್ಮೆಟ್ಟಿಸಲು, ಆ ಕುರಿತು ತಿಳಿವಳಿಕೆ ಮೂಡಿಸಲು, ಪ್ರತಿ ವರ್ಷ ಮೇ 21ರಂದು ನಡೆಸಲಾಗುತ್ತಿರುವ ಭಯೋತ್ಪಾದಕ ವಿರೋಧಿ ದಿನ ಸಹಕಾರಿ.

ಚಿತ್ತವಿಹಾರ

ವಿವೇಚನಾತ್ಮಕ ಮನನ ಅಗತ್ಯ

ಸಾಮಾನ್ಯವಾಗಿ ಹಲವರು ತಾವು ಕೇಳಿದ ಮಾಹಿತಿಯನ್ನು, ಪಡೆದ ಜ್ಞಾನವನ್ನು ತಮ್ಮ ಮಿತಿಯಲ್ಲಿಯೇ ಅರ್ಥೈಸುತ್ತಾ, ಅದನ್ನೇ ಸರಿ ಎಂದು ಸಾಬೀತುಪಡಿಸಲು ತಮ್ಮ ತಿಳುವಳಿಕೆಯ ಪರಿಧಿಯನ್ನು ಕಿರಿದಾಗಿಸುತ್ತಾ ಹೋಗುತ್ತಾರೆ. ಇದರಿಂದ ಆ ಕ್ಷಣದಲ್ಲಿ ತನ್ನ ಹೇಳಿಕೆಯನ್ನು ಸಾಬೀತು ಪಡಿಸಿದೆ ಎನ್ನುವ ಅಹಂಭಾವ ಗಳಿಸುವುದನ್ನು ಬಿಟ್ಟರೆ ಬೇರೇನೂ ಸಾಧನೆಯಾಗಲಾರದು. ಉನ್ನತ ಪದವಿ ಪಡೆಯಲು ಪ್ರಬಂಧ ಮಂಡನೆಗೆ ಸಿದ್ಧವಾಗುತ್ತಿದ್ದ ಸಂಶೋಧಕನೊಬ್ಬ ಜಿರಳೆಯ ಬಗ್ಗೆ ಅಧ್ಯಯನ ನಡೆಸುತ್ತಿದ್ದ. ಪ್ರಯೋಗಾಲಯದಲ್ಲಿ ಜಿರಳೆ ಒಂದರ ಕಾಲನ್ನು ಕಿತ್ತು ಅದಕ್ಕೆ ಓಡು ಎಂದು ಆಜ್ಞಾಪಿಸಿದ. ಅದು ಓಡಲು ಪ್ರಾರಂಭಿಸಿತು. ಅದನ್ನು ಹಿಡಿದು ತಂದು ಎರಡನೇ ಕಾಲನ್ನು ಕಿತ್ತು ಮತ್ತೆ ಓಡು ಎಂದು ಆದೇಶಿಸಿದ. ಈ ಬಾರಿಯೂ ಅದು ಓಡಲಾರಂಭಿಸಿತು. ಹೀಗೆಯೇ ಒಂದರ ನಂತರ ಒಂದರಂತೆ ಮೂರು, ನಾಲ್ಕು, ಐದನೇ ಕಾಲುಗಳನ್ನು ಕಿತ್ತು, ಪ್ರತಿ ಬಾರಿಯೂ ಓಡು ಎಂದು ಸೂಚನೆ ನೀಡುತ್ತಾ ಹೋದ. ಅದು ಕಷ್ಟಪಟ್ಟು ತೆವಳುತ್ತಾ ಓಡಲು ಯತ್ನಿಸುತ್ತಲೇ ಇತ್ತು. ಕೊನೆಯದಾಗಿ ಆರನೇ ಕಾಲನ್ನು ಕಿತ್ತು ಓಡು ಎಂದು ನಿರ್ದೇಶಿಸಿದ. ಈ ಬಾರಿ ಜಿರಳೆ ಚಲಿಸಲಾಗದೆ ಹಾಗೆಯೇ ಉಳಿದುಬಿಟ್ಟಿತ್ತು.

ಸಂಶೋಧಕ ತನ್ನ ಪ್ರಬಂಧದಲ್ಲಿ ತಾನು ಪ್ರಾಯೋಗಿಕವಾಗಿ ಕಂಡುಕೊಂಡ ಸತ್ಯವನ್ನು ಹೀಗೆ ದಾಖಲಿಸಿದ ''ಜಿರಳೆಯ ಆರೂ ಕಾಲುಗಳನ್ನು ಕಿತ್ತ ಮೇಲೆ ಅದಕ್ಕೆ ಕಿವಿ ಕೇಳುವುದಿಲ್ಲ'' ಎಂದು. ಇಲ್ಲಿ ಆತ ನೋಡಿದ್ದು ಸುಳ್ಳಲ್ಲ, ಆದರೆ ಅರ್ಥೈಸಿದ ರೀತಿ ನಿಜವೂ ಅಲ್ಲ, ಕೇಳುವುದರಿಂದಲೂ, ನೋಡುವುದರಿಂದಲೂ, ಅನುಭವದಿಂದಲೂ ಪಡೆದ ಮಾಹಿತಿಯೇ ಪೂರ್ಣ ಜ್ಞಾನವಲ್ಲ, ಮನನ ಮಾಡಿಕೊಳ್ಳುವ ಹಂತದಲ್ಲಿ ವಿವೇಚನೆ ಬಹಳ ಮುಖ್ಯ. ವರ್ತಮಾನದಲ್ಲಿ ನಮಗೆ ಯಾವುದೇ ಕ್ಷೇತ್ರದ ಮಾಹಿತಿ, ಜ್ಞಾನಗಳು ಬೆರಳ ತುದಿಯಲ್ಲಿ ಲಭ್ಯ ಎದೆ. ವಿವಿಧ ಮೂಲಗಳಿಂದ ಪಡೆದ ಜ್ಞಾನವನ್ನು ನಾವು ಯಾವ ನೆಲೆಯಲ್ಲಿ ಅರ್ಥೈಸುತ್ತೇವೆ ಎನ್ನು ವುದರ ಮೂಲಕ ನಮ್ಮ ಅರಿವಿನ ಪರಿಧಿಯ ವಿಸ್ತಾರವಾಗುತ್ತಾ ಸಾಗುತ್ತದೆ. ತಿಳಿವು ಪಡೆಯಲು ಮೊದಲು ಮನವನ್ನು ಪೂರ್ಣ ತೆರೆದುಕೊಳ್ಳ ಬೇಕು. ಪೂರ್ವಾಗ್ರಹಗಳಿಲ್ಲದ ಮನಸ್ಸು ಗ್ರಹಿಸಿದ ವಿಚಾರಗಳನ್ನು ವಾಸ್ತವಿಕತೆಯ ಆಧಾರದ ಮೇಲೆ ವಿವೇಚಿಸಲು ಸಾಧ್ಯವಾದಾಗ ಮಾತ್ರ ತಿಳುವಳಿಕೆಯ ಮಟ್ಟವನ್ನು ಎತ್ತರಕ್ಕೆ ಏರಿಸಿಕೊಳ್ಳಲು ಸಾಧ್ಯ.

• ಮಾಯಾ ಬಾಲಚಂದ್ರ

ಹನಿಮಳೆ

ಹೊಸ ಅಳಿಯ

ಮದುವೆಯಾಗಿ
ಮಾವನ ಮನೆಯಲ್ಲಿ
ಕುಳಿತಿದ್ದಾನೆ
ಅಳಿಯ ತೆಪ್ಪಗೆ
ಮದುವೆಯಲ್ಲಿ
ಕೊಡಬೇಕಾಗಿದ್ದ ಕಾರನ್ನು
ಮಡದಿ ನೆನಪಿಸಬೇಕಂತೆ
ಅವರಪ್ಪಗೆ

• ಮಹಾಂತೇಶ ಮಾಗನೂರ

ನಾವು ಒಂದು ಎಳೆ ಮಾತ್ರ

ದಿನದಿನವು ಹಳಸುವುವು, ದಿನದಿನವು ಕೊಳೆಯುವುವು
ಮನುಜಕುಲದೆಲ್ಲ ಕೃತಿ ವಿಜಯವಿಭವಗಳು
ಅನುದಿನವು ಮತ್ತವನು ತೊಳೆದು ಹೊಸತೆನಿಸುವುದೆ
ಜನುಮ ಸಫಲತೆ ನಿನಗೆ - ಮಂಕುತಿಮ್ಮ॥

ಇಂದಿನದು ನೂತನ, ಇಂದಿನ ನೂತನ ನಾಳೆಗೆ ಹಳತು, ನಾಡಿದ್ದು ಹಳಸು, ಮತ್ತೊಂದು ದಿನ ಕೊಳೆಯುವಿಕೆ ಎಂಬುದು ವಾಸ್ತವ ಸಂಗತಿಗಳೇ ಆಗಿವೆ. ಹಾಗೆಯೇ ಈ ಕ್ಷಣ, ಈ ದಿನ ಎಂಬುವುಗಳು ನಾಳೆಗೆ ಹಳತಾಗಿರುತ್ತವೆ. ಇಂದಿನ ನಮ್ಮ ಸಾಧನೆಯು ನಾಳೆಗೆ ಅದು ಹಳತಾಗುತ್ತದೆ. ಇಂದಿನ ಸಾಧನೆಗಳನ್ನೇ ನಾಳೆಯೂ, ನಾಡಿದ್ದು ಮತ್ತೆ ಮತ್ತೆ ಓರೆ ಹಚ್ಚಿ ಅದನ್ನು ಹೊಳಪನ್ನಾಗಿ ಮಾಡುತ್ತಿದ್ದೇವೆಯೇ ವಿನಃ ಈ ಜಗತ್ತಿಗೆ ನೀಡಿದ್ದಾರೂ ಏನು? ಇದೇ ನಿನ್ನ ಸಾಧನೆಯೇ? ಇರುವುದನ್ನೇ ನೀನು ಓರೆಗೆಹಚ್ಚುವುದಾದರೆ ನಿನ್ನ ಜೀವನದ ಸಫಲತೆಯಾದರೂ ಏನು? ಎಂಬುವ ಪ್ರಶ್ನೆ ಈ ಪದ್ಯದಲ್ಲಿ ಬರುತ್ತದೆ.

ಇಂದು ಮಾಡಿದ ಅನ್ನವು ಬಿಸಿಯಾಗಿ ಹೊಸತಾಗಿರುತ್ತದೆ. ಅದೇ ಅನ್ನವು ನಾಳೆ ತಂಗಳಾಗುತ್ತದೆ, ನಾಡಿದ್ದು ಅದೇ ಅನ್ನವು ಹಳಸಿಹೋಗುತ್ತದೆ, ಮತ್ತೊಂದು ದಿನ ಅದೇ ಅನ್ನವೂ ಕೊಳೆತು ಹೋಗುತ್ತದೆ. ಇದನ್ನೇ ಒಂದು ಉದಾಹರಣೆಯಾಗಿ ತಗೆದುಕೊಂಡಲ್ಲಿ ಮನುಷ್ಯನ ಜೀವನದಲ್ಲಿ ಬರುವ ಇಂದಿನ ದಿನ ಎಂಬುದು ನಾಳೆಗೆ ಅದು ಹಳೆಯದೇ ಹೌದು. ಈ ಜಗತ್ತಿನಲ್ಲಿ ಈ ಮಾನವ ಜೀವಿಯ ಬುದ್ಧಿಮತ್ತೆ ಬೆಳೆದಂತೆಲ್ಲಾ ಆತನು ತನ್ನ ಜೀವನಕ್ಕೆ ಉಪಯೋಗವಾಗುವ ರೀತಿಯಲ್ಲಿ ಇಲ್ಲಿರುವ ವಸ್ತುಗಳನ್ನು ಮಾರ್ಪಾಡಿಸಿಕೊಂಡಿದ್ದನ್ನೇ ಹೊಸ ಅನ್ವೇಷಣೆಗಳೆಂದು ಕೊಂಡಿದ್ದಾನೆಯೇ ವಿನಃ ಆತನು ಈ ಜಗತ್ತಿಗೆ ಹೊಸ ವಸ್ತುವನ್ನು ಎಂದಿಗೂ ತರಲಾಗಿಲ್ಲ, ತರಲಾಗುವುದೂ ಇಲ್ಲ. ಆತನು ಅಕ್ಕಿಯಿಂದ ಅನ್ನ ಮಾಡುವುದನ್ನು ಅವಿಷ್ಕರಿಸಿದನೇ ಹೊರತು ಆತನು ಬತ್ತ ಅಥವಾ ಅಕ್ಕಿಯನ್ನು ತಾನೇ ಸ್ವತಃ ತಯಾರು ಮಾಡಲು ಸಾಧ್ಯವೇ ಇಲ್ಲ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಹಾಗೆಯೇ ಈ ಜಗತ್ತಿನಲ್ಲಿಯ ಎಲ್ಲಾ ಅನ್ವೇಷಣೆಗಳು, ಅವಿಷ್ಕಾರಗಳೆಲ್ಲವೂ ಸಹ ಇಲ್ಲಿರುವ ವಸ್ತುಗಳಿಂದಲೇ, ತನಗೆ ಉಪಕಾರಿಯಾಗುವ ರೀತಿಯಲ್ಲಿಯೇ ಮಾರ್ಪಾಡು ಮಾಡಿಕೊಂಡು ಅವುಗಳಿಂದ ಉಪಯೋಗ ಪಡೆಯುತ್ತಿದ್ದಾನೆಯೇ ಪರಂತು ಈತನಿಂದ ಯಾವ ಹೊಸ ವಸ್ತುಗಳೂ ಸಹ ಅವಿಷ್ಕಾರಗೊಂಡಿಲ್ಲ. ಇಂತಹ ಅವಿಷ್ಕಾರಗಳನ್ನೇ ಮತ್ತೆ ಮತ್ತೆ ನವೀನಗೊಳಿಸುವುದೋ, ಶುಭ್ರಗೊಳಿಸುವುದೋ, ಮಾರ್ಪಾಡು ಮಾಡುವುದೇ ಈತನ ಜೀವನವಾದರೆ ಹೊಸ ವಸ್ತುಗಳಿಗೆ ಈ ಇಳೆಯಲ್ಲಿಯಾದರೂ ಸ್ಥಳವೆಲ್ಲಿ? ಈತನ ಜೀವನದ ಉತ್ಕಟತೆ ಕೇವಲ ಮಾರ್ಪಾಡು ಮಾಡುವುದರಲ್ಲಿ ಮಾತ್ರವೇ ಅಡಗಿಹುದೋ? ಅಥವಾ ಅಷ್ಟು ಮಾತ್ರಕ್ಕೇ ಈತನ ಜೀವನವು ನಿರ್ಭಂಧಿಸಿಹುದೋ? ಎಂಬ ಹಲವಾರು ಪ್ರಶ್ನೆಗಳು ಪುಟಿದೇಳುತ್ತವೆ. ಮನುಷ್ಯನು ಅವಿಷ್ಕರಿಸಿದ್ದನ್ನೇ ನಾ ಸಾಧಿಸಿದೆ, ನಾ ಜಯಿಸಿದೆ, ಎಂದು ಬೀಗುತ್ತಾ, ಕಾಲಾನುಕಾಲಕ್ಕೆ ಅವೂ ಸಹ ಹಳತಾಗಿ, ಕೊಳೆತು, ಹಳಸಿ ಹೋಗುತ್ತದೆ. ಹೀಗೆ ಈ ಜಗತ್ತಿನಲ್ಲಿ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಸ್ತುಗಳನ್ನು ತನ್ನ ಪ್ರಯೋಜನಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಂಡು ಹೊಸ ಹೊಸತನ್ನು ಕಂಡುಕೊಳ್ಳುತ್ತಲೇ ಇರುತ್ತಾನೆ. ಇಷ್ಟೇ ಇವನ ಸಾಧನೆ ಮತ್ತು ಜಯ ಎಂಬುದೇ ಈ ಪದ್ಯದ ಸಾರಾಂಶವಾಗಿದೆ.

ಬ್ಲಾಕ್ ಪೀಟರನ ಹತ್ಯೆ



ಪತ್ತೇದಾರಿ ಕಥೆ ಕಾದಂಬರಿಗಳಲ್ಲಿ ಪ್ರಸಿದ್ಧ ಎನಿಸಿದ ಷರ್ಲಾಕ್ ಹೋಮ್ಸ್‌ನ ಕಥೆ ಗಳನ್ನು ರಚಿಸಿದವನು ಆರ್ಥರ್ ಕಾನನ್ ಡಾಯ್ಲ್ ((1859–1930). ಈ ಕಥಾ ಸರಣಿಯಲ್ಲಿ ಹಲವು ಕೃತಿಗಳು ಹೊರಬಂದಿವೆ. ಇವುಗಳ ಪೈಕಿ, ಒಂದು ಪುಸ್ತಕವನ್ನು 'ಬ್ಲಾಕ್ ಪೀಟರನ ಹತ್ಯೆ' ಎಂಬ ಹೆಸರಿನಲ್ಲಿ ಎಂ.ವಿ.ನಾಗರಾಜ ರಾವ್ ಅವರು ಅನುವಾದಿಸಿದ್ದು, ಅದೀಗ ಬೆಂಗಳೂರಿನ ಅಂಕಿತ ಪುಸ್ತಕದ ಮೂಲಕ ಹೊರಬಂದಿದೆ. ಇಪ್ಪತ್ತನೆಯ ಶತಮಾನದ ಅತಿ ಜನಪ್ರಿಯ ಕೃತಿಗಳಲ್ಲಿ ಷರ್ಲಾಕ್ ಹೋಮ್ಸ್‌ನ ಸಾಹಸಗಳೂ ಸೇರಿವೆ. ಇದೀಗ ಕನ್ನಡದಲ್ಲೂ ಹೊರಬಂದು, ಇಂದಿನ ತಲೆಮಾರಿನ ಓದುಗರಿಗೆ ಲಭ್ಯವಾಗಿವೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1		■	2		■	3		4
	■	5		■	■		■	
	■		■	6			■	
7	8		■		■	9	10	
■		■	11			■		■
12		13	■		■	14		15
	■	16			■		■	
	■		■	■	17		■	
18			■	19		■	20	

ಎಡದಿಂದ ಬಲಕ್ಕೆ

1. ಎಲುಬು (2)
2. ಮರವೂ ಹೌದು ಸುವಾಸನೆಯೂ ಹೌದು (2)
3. ದಿನವೂ ಸಲಹೆ ನೀಡುವ ಮಂತ್ರಿ (3)
5. ಕಡೆಗೂ ಸಿಕ್ಕಿತು ಸಾಲ (2)
6. ಸಂಪಗೆ ಹೂವು (3)
7. ತೀಕ್ಷ್ಣ ಸುವಾಸನೆಯ ಹೂವು (3)
9. ಆಚೀಚೆಯಾಗಿರುವ ಪತಿವ್ರತೆ (3)
11. ನಯವಾದ ನಮ್ರತೆ (3)
12. ಹೊರ ಸಾಮಾನುಗಳನ್ನು ತರಿಸಿಕೊಳ್ಳುವುದು (3)
14. ಶಿವನ ಮತ್ತೊಂದು ಹೆಸರು (3)
16. ಕಾಡಿನಲ್ಲಿ ಬರೆದ ಪದ್ಯವೇ? (3)
17. ಮನ್ಮಥನ ಮತ್ತೊಂದು ಹೆಸರು (2)
18. ಪಹಲ್‌ಗಾಂವ್‌ನಲ್ಲಿ ಹರಿದದ್ದು (3)
19. ಒಂದು ಬಗೆಯ ಲೋಹ (2)
20. ದೇಹದ ವ್ರಣ (2)

ಮೇಲಿಂದ ಕೆಳಕ್ಕೆ

1. ಯೋಗ್ಯ ಮತ್ತು ಸುಂದರನಾದವನು (4)
2. ಪತಿ (2)
3. ಪ್ರತಿದಿನ ಬರುವ ಸೂರ್ಯ (4)
4. ದೇವಾಲಯದ ಸಭಾಮಂಟಪ (4)
5. ಯುದ್ಧ ಆರಂಭದ ಮೊದಲು ಊದಿದ ವಾದ್ಯ (3)
6. ಕನ್ನಡ ಚಿತ್ರರಂಗಕ್ಕೆ ಹೀಗೆ ಹೇಳುವರು (5)
8. ಬೇಡುವವನು ತಲೆಕೆಳಗಾಗಿದ್ದಾನೆ (3)
10. ಹಣೆಗಿಡುವ ಬೊಟ್ಟು (3)
12. ವಿಚಾರ, ಯೋಚನೆ (4)
13. ಅಡ್ಡಿ, ಆಕ್ಷೇಪ (4)
14. ನೀರೂ ಆಗಬಲ್ಲ ಒಬ್ಬ ರಾಕ್ಷಸ (3)
15. ಚೆಲುವಾದ (4)
17. ಇದು ತಪ್ಪಬಾರದು (2)

ಸರಿಯುತ್ತರಗಳು

ಗರ್ಭದಲ್ಲಿದ್ದಾಗಲೇ ತಂದೆಯ ತಪ್ಪನ್ನು ಗ್ರಹಿಸಿದ!

ಅಷ್ಟಾವಕ್ರ ಪ್ರಾಚೀನ ಭಾರತದ ಋಷಿ. ಈತ ಕಹೋಡ ಮಹರ್ಷಿ ಮತ್ತು ಸುಜಾತೆಯ ಮಗ. ಜನ್ಮತಃ ಅಸಾಧಾರಣ ಬುದ್ಧಿಶಕ್ತಿಯುಳ್ಳ ಪ್ರತಿಭಾವಂತ. ದೇಹದ ಎಂಟು ಅಂಗಗಳಲ್ಲಿ ವಿಕಲತೆಯನ್ನು ಹೊತ್ತುಕೊಂಡು ಹುಟ್ಟಿದ್ದರಿಂದ ಅಷ್ಟಾವಕ್ರನೆಂದು ಪ್ರಖ್ಯಾತನಾದ.

ಉದ್ದಾಲಕನೆಂಬ ಮಹರ್ಷಿ ಆಶ್ರಮವೊಂದರಲ್ಲಿ ವೇದೋಪನಿಷತ್ತನ್ನು ಕಲಿಸುತ್ತಿದ್ದರು. ಬಾಲಕ ಕಹೋಡ ಅವರ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದನು. ಮುಂದೆ ಕಹೋಡನ ಸೇವೆಯಿಂದ ಸಂತೃಪ್ತರಾದ ಉದ್ದಾಲಕರು ತಮ್ಮ ಮಗಳಾದ ಸುಜಾತಳನ್ನು ಕಹೋಡನಿಗೆ ಕೊಟ್ಟು ಮದುವೆ ಮಾಡಿಸುತ್ತಾರೆ. ಒಂದು ದಿನ ಕಹೋಡ ಮುನಿ ತಮ್ಮ ವೇದಾಧ್ಯಯನವನ್ನು ಮಾಡುತ್ತಿರುವಾಗ ಗರ್ಭಿಣಿ ಸುಜಾತೆಯು ಅಲ್ಲಿಗೆ ಬಂದು ಗಂಡನ ಅಧ್ಯಯನವನ್ನು ಗಮನಿಸುತ್ತಿರುತ್ತಾಳೆ. ಇದ್ಯಾವುದರ ಅರಿವಿಲ್ಲದ ಕಹೋಡಮುನಿಗಳು ತಮ್ಮ ಮಂತ್ರೋಚ್ಚಾರಣೆಯನ್ನು ಜೋರಾಗಿ ಹೇಳಿಕೊಳ್ಳುತ್ತಿರುತ್ತಾರೆ. ಮಧ್ಯೆ ಒಂದೆರಡು ಕಡೆ ತಪ್ಪಾಗಿ ಮಂತ್ರ ಉಚ್ಚರಿಸುತ್ತಾರೆ.

ಆಗ ಸುಜಾತೆಯ ಗರ್ಭದಲ್ಲಿದ್ದ ಮಗು ಗೇಲಿ ಮಾಡಿ ನಗುತ್ತದೆ. ಸುಜಾತೆಗೆ ಗರ್ಭದಲ್ಲಿರುವ ಮಗುವಿನ ಗೇಲಿ ಅರ್ಥವಾಗುತ್ತದೆ. ಆದರೆ ಪತಿಗೆ ಹೇಳುವದಿಲ್ಲ. ಆದರೆ ಕಹೋಡ ಮಹರ್ಷಿ ಎಂಟು ಸಲ ಮಂತ್ರವನ್ನು ತಪ್ಪಾಗಿ ಉಚ್ಚರಿಸುತ್ತಾರೆ. ಪ್ರತೀಸಲವೂ ಮಗು ನಕ್ಕು ಗೇಲಿ ಮಾಡುತ್ತದೆ. ಆದರೆ ಎಂಟನೇ ಸಲ ಮಾತ್ರ ಸುಜಾತಳಿಗೆ ತಡೆಯಲಾಗುವದಿಲ್ಲ. ಪತಿ ಕಹೋಡ ಮಹರ್ಷಿಗೆ ಸಮಸ್ತ ವಿಷಯವನ್ನು ತಿಳಿಸುತ್ತಾಳೆ. ಆದರೆ ವಿದ್ಯೆಯ ಮದವೇರಿದ್ದ ಕಹೋಡರಿಗೆ ತಮ್ಮ ತಪ್ಪಿನ ಅರಿವಾಗುವದಿಲ್ಲ. ಬದಲಾಗಿ ತಮ್ಮನ್ನು ಎಂಟು ಸಲ ಗೇಲಿ ಮಾಡಿ ನಕ್ಕ ಗರ್ಭದಲ್ಲಿನ ಮಗುವಿನ ಮೇಲೆ ಅಸಾಧ್ಯ ಕೋಪ ಬರುತ್ತದೆ. ತಕ್ಷಣವೇ ಸುಜಾತೆಯ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಗರ್ಭಕ್ಕೆ 'ಎಂಟು ಸಲ ನನ್ನನ್ನು ಅವಮಾನಿಸಿದ ನಿನ್ನ ಎಂಟು ಅಂಗಗಳು ಕೂಡ ಊನವಾಗಲಿ..' ಅಂತ ಶಪಿಸುತ್ತಾರೆ. ಹಾಗೆ ಎಂಟು ಅಂಗಗಳನ್ನು ಹೊತ್ತುಕೊಂಡು ಹುಟ್ಟಿದವನೇ ಅಷ್ಟಾವಕ್ರ. ಈತ 'ಅಷ್ಟಾವಕ್ರ ಗೀತಾ' ಎಂಬ ಗ್ರಂಥವನ್ನು ಬರೆದಿದ್ದಾನೆ. ಜನಕರಾಜನ ಸಭೆಯಲ್ಲಿ ವಂದಿ ಎಂಬ ದುಷ್ಟ ಪಂಡಿತ ತನ್ನ ಕುತಂತ್ರದಿಂದ ಅಲ್ಲಿ ವಾದಕ್ಕೆ ಬಂದವರನ್ನೆಲ್ಲ ಸೋಲಿಸಿ, ನೀರಿನಲ್ಲಿ ಹಾಕಿ ಕೊಲ್ಲುತ್ತಿದ್ದರು. ಅದೇ ರೀತಿ ಅಷ್ಟಾವಕ್ರನ ತಂದೆ ಯಾದ ಕಹೋಡ ಮಹರ್ಷಿಯನ್ನು ಸಹ ನೀರಿಗೆ ಎಸೆದು ಕೊಂದಿದ್ದರು. ವಯಸ್ಸಿಗೆ ಬಂದಂತಹ ಅಷ್ಟಾವಕ್ರ ಜನಕನ ಸಭೆಗೆ ಹೋಗಿ ವಾಗ್ವಾದದಲ್ಲಿ ವಂದಿಯನ್ನು ಸೋಲಿಸಿ, ಅವನನ್ನೇ ನೀರಿಗೆ ಎಸೆದು, ಹಿಂದೆ ನೀರಿಗೆ ಬಿದ್ದು ಸಾಯಿಸಿದವರನ್ನು ಬದುಕಿಸಿ ತಂದನಂತೆ.

ಋಷಿ ಮೂಲ ಗ್ರಂಥದಲ್ಲಿ ಸಿಗುವ ಈ ಕಥೆ ಗರ್ಭದಲ್ಲಿರುವ ಶಿಶು ಹೇಗೆ ತನ್ನ ಹೊರಗಿನ ವಾತಾವರಣದಲ್ಲಿ ಇರುವ ಒಳ್ಳೆಯದು ಕೆಟ್ಟದ್ದು ಎರಡನ್ನೂ ಗ್ರಹಿಸುವ ಶಕ್ತಿ ಹೊಂದಿದೆ ಎಂದು ತಿಳಿಸುತ್ತದೆ. ಆದ್ದರಿಂದಲೇ ಗರ್ಭಿಣಿ ಸ್ತ್ರೀಯರು ಒಳ್ಳೆಯ ವಾತಾವರಣದಲ್ಲಿ, ಸದ್ವಿಚಾರಗಳನ್ನು ಯೋಚಿಸುತ್ತ ಆದಷ್ಟು ತಮ್ಮ ಗರ್ಭದಲ್ಲಿರುವ ಶಿಶುವಿಗೆ ಸಕಾರಾತ್ಮಕ ವಿಷಯಗಳನ್ನು ತಲುಪಿಸುವ ವಿಚಾರ ಮಾಡಬೇಕು. ಗರ್ಭ ಧರಿಸಿದ ಹೆಣ್ಣು ಮಗಳು ಆತಂಕ, ಅಸಹನೆ, ಅನುಮಾನ ಮುಂತಾದ ಗುಣಗಳಿಂದ ಭಾದಿತಳಾಗಿದ್ದರೆ ಹೊಟ್ಟೆಯಲ್ಲಿರುವ ಮಗು ಕೂಡ ಅವುಗಳನ್ನು ಗ್ರಹಿಸುತ್ತಾ ಬೆಳೆಯುತ್ತದೆ. ಹುಟ್ಟಿದ ನಂತರ ಅದರ ಗುಣದಲ್ಲಿ ಖಂಡಿತಾ ಅವುಗಳ ಪ್ರಭಾವ ಕಂಡೇ ಕಾಣುತ್ತದೆ. ನಮ್ಮ ಹಿರಿಯರು ಆದ್ದರಿಂದಲೇ ಗರ್ಭಿಣಿ ಹೆಣ್ಣುಮಗಳು ಶಾಂತವಾದ ವಾತಾವರಣದಲ್ಲಿ ಒಳ್ಳೆಯ ಆರೈಕೆಯಿಂದ ಒಂಬತ್ತು ತಿಂಗಳನ್ನು ಕಳೆಯಬೇಕು ಎಂದು ಅವಳನ್ನು ತಾಯಿಯ ಮನೆಯ ಆರೈಕೆಯಲ್ಲಿ ಇಡುತ್ತಾರೆ. ಇಂದಿನ ದಿನಗಳಲ್ಲಿ ಉದ್ಯೋಗಗಳಲ್ಲಿ ಇರುವ ಹೆಣ್ಣು ಮಕ್ಕಳಿಗೆ ಅಷ್ಟೊಂದು ಸಮಯ ತವರು ಮನೆಯ ಆರೈಕೆ, ವಿಶ್ರಾಂತಿ ಸಿಗದೇ ಹೋದರೂ, ಯೋಗ, ಧ್ಯಾನ, ಒಳ್ಳೆಯ ವಿಚಾರಗಳನ್ನು ಓದುವುದರಿಂದ ಮಾನಸಿಕ ಸಮತೋಲನವನ್ನ ಕಾಪಾಡಿಕೊಳ್ಳಬಹುದು. ಕುಟುಂಬದವರು ಕೂಡ ಆ ಹೆಣ್ಣು ಮಗಳಿಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿಕೊಡಬೇಕು. ಪತಿ, ಮನೆಯವರು ಎಲ್ಲರ ಪ್ರೀತಿಯಾದರಗಳಿಂದ ಆ ಹೆಣ್ಣು ಮಗಳು ನವ ವಸಂತಗಳನ್ನು ಕಳೆದು ಮಗುವಿಗೆ ಜನ್ಮ ನೀಡಿದಾಗ ತಾಯ್ತನದ ಎಲ್ಲ ಜವಾಬ್ದಾರಿಗಳನ್ನು ಹೊರಲು ಆಕೆಯೂ ಒಳ್ಳೆಯ ಮನಸ್ಸಿನಿಂದ ಸಜ್ಜಾಗಿರುತ್ತಾಳೆ. ಇಂತಹ ಆರೈಕೆ ಪ್ರೀತಿ ಎಲ್ಲ ತಾಯಂದಿರಿಗೂ ಸಿಗುವಂತಾಗಲಿ. ಹುಟ್ಟುವ ಪ್ರತಿ ಮಗುವೂ ತೇಜಸ್ವಿಯಾಗಲಿ.

ಕಾಯಕವೇ ಕೈಲಾಸವಾದಾಗ

ಮರಣ ಕಾಲದಲ್ಲಿ ತನ್ನನ್ನು ತಿಳಿಯುವುದರ ಬಗ್ಗೆ ಕೃಷ್ಣ ಹೇಳುತ್ತಾನೆ – ಆದ್ದರಿಂದ ಸದಾ ಕಾಲದಲ್ಲಿ ನನ್ನನ್ನು ಸ್ಮರಿಸಿ ಹೋರಾಡು. ಮನಸ್ಸು ಮತ್ತು ಬುದ್ಧಿಯನ್ನು ನನ್ನಲ್ಲಿ ಲೀನಗೊಳಿಸಿದರೆ ವಿಸ್ತಾರ ವಾಗಿ ನನ್ನನ್ನು ತಲುಪುವೆ. (8.7)

ದಿವಸದಲ್ಲಿ ಕೆಲಕಾಲ ದೇವರನ್ನು ಪೂಜಿಸುವುದರಿಂದ ಅಥವಾ ಕ್ವಚಿತ್ತಾಗಿ ದೇವಸ್ಥಾನಗಳಿಗೆ ಹೋಗುವುದರಿಂದ ನಾವು ದೇವರನ್ನು ಸ್ಮರಿಸುತ್ತೇವೆ. ದೇವರ ಹೆಸರುಗಳು ಹಾಗೂ ಪೂಜಾ ವಿಧಾನಗಳು ಬೇರೆ ಬೇರೆ ರೀತಿಯ ನಂಬಿಕೆಗಳಿಗನುಗುಣವಾಗಿ ಬೇರೆ ಬೇರೆಯಾಗಿರುತ್ತವೆ. ಸಾಮಾನ್ಯವಾಗಿ ನಮ್ಮ ತೊಂದರೆಗಳ ನಿವಾರಣೆಗಾಗಿ ಅಥವಾ ಸಂಪತ್ತು ಅಧಿಕಾರ ಅಥವಾ ಪ್ರಸಿದ್ಧಿ ಪಡೆಯಲು ದೇವರನ್ನು ಸ್ಮರಿಸುತ್ತೇವೆ. ಆದರೆ ಇಲ್ಲಿ ಕೃಷ್ಣ ಹೇಳುತ್ತಾನೆ- ಸದಾ ನನ್ನನ್ನು ಸ್ಮರಿಸಿರಿ.

ಇದು ಅಸಂಭವವೆಂದು ತೋರುತ್ತದೆ. ಏಕೆಂದರೆ ದಿನನಿತ್ಯ ಸದಾ ಕಾಲದಲ್ಲಿಯೂ ಹೇಗೆ ಪ್ರಾರ್ಥಿಸಬೇಕೆಂದು ನಮಗೆ ಗೊತ್ತಿಲ್ಲ.

ಈ ಸಮಸ್ಯೆಗೆ ಸೂಚನೆ ಭಕ್ತಿಯೋಗದ ಮೂಲದಿಂದ ಬರುತ್ತದೆ. ಅದು ಹೇಳುತ್ತದೆ – ಎಲ್ಲ ಜೀವಿಗಳನ್ನು ಆತ್ಮದಲ್ಲಿ ನೋಡು ಹಾಗೂ ಆತ್ಮವನ್ನು ಎಲ್ಲ ಜೀವಿಗಳಲ್ಲಿ ನೋಡು ಮತ್ತು ಅವನನ್ನು (ಭಗವಂತ) ಎಲ್ಲೆಡೆ ನೋಡು (6.29,6.30) ಈ ನಿತ್ಯ ಸತ್ಯವನ್ನು ಅರಿತಾಗ ವ್ಯಕ್ತಿಯು ಎಲ್ಲೆಡೆ ಪರಮಾತ್ಮನನ್ನು ಕಾಣುತ್ತಾನೆ. ಇದು ಪರಮಾತ್ಮನನ್ನು ಸದಾ ಕಾಲ ಸ್ಮರಿಸುವುದಲ್ಲದೆ ಮತ್ತೇನೂ ಅಲ್ಲ. ನಾವು ನೋಡುವುದು ಸುಂದರವಾಗಿರಲಿ, ಕುರೂಪವಾಗಿರಲಿ, ನಾವು ಕೇಳುವುದು ಹೊಗಳಿಕೆ ಯಾಗಲಿ ಅಥವಾ ತೆಗಳಿಕೆಯಾಗಲಿ ಅದು ಪರಮಾತ್ಮನವೇ ಆಗಿರುತ್ತದೆ.

ಒಮ್ಮೆ ಈ ತಿಳುವಳಿಕೆಯನ್ನು ರೂಢಿಸಿಕೊಂಡರೆ ಯುದ್ಧ ಮಾಡು ಎನ್ನುವ ಕೃಷ್ಣನ ಉಪದೇಶ ಸುಲಭವಾಗಿ ಅರ್ಥ ವಾಗುತ್ತದೆ. ತನ್ನ ಕೈಯಲ್ಲಿರುವ ಕೆಲಸದ ಪರವಾಗಿ ಕೃಷ್ಣ ನಿದ್ದಾನೆ. ಇದು ಕುರುಕ್ಷೇತ್ರ ಯುದ್ಧವಾಗುತ್ತದೆ. ಸದ್ಯದ ಯುದ್ಧದ ಕ್ಷಣದಲ್ಲಿ ಪರಮಾತ್ಮನನ್ನು ನೋಡುವುದು ಅರ್ಜುನನಿಗೆ ಕಠಿಣ ಪರೀಕ್ಷೆ

ನಿತ್ಯ ಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಯಾಗುತ್ತದೆ. ನಮ್ಮ ಪರಿಸ್ಥಿತಿಯು ಇದಕ್ಕಿಂತ ಬೇರೆಯಾಗಿಲ್ಲ.

ಈ ಹಂತವನ್ನು ಮುಟ್ಟುವ ಒಂದು ಪ್ರಾಯೋಗಿಕ ಮಾರ್ಗವೆಂದರೆ ನಮ್ಮ ವೃತ್ತಿಯಲ್ಲಿ ಅಥವಾ ವೈಯಕ್ತಿಕ ಜೀವನದಲ್ಲಿ ತಾಳ್ಮೆಯಿಂದ ಮತ್ತೊಬ್ಬನ ದೃಷ್ಟಿಕೋನವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುವುದು. ನಾವು ಕೂಡ ಅಂತಹದೇ ಪರಿಸ್ಥಿತಿಯಲ್ಲಿ ಅದೇ ರೀತಿ ನಡೆದುಕೊಳ್ಳುತ್ತಿದ್ದೆವು ಎನ್ನುವುದನ್ನು ತಿಳಿಯಲು ಇದು ಸಹಾಯಮಾಡುತ್ತದೆ ಏಕತೆಯನ್ನು ಹೊಂದಲು ಮತ್ತು ಕೆಲಸವನ್ನು ಪ್ರಾರ್ಥನೆಯಂತೆ ಮಾಡಲು ನಿರ್ಣಯಗಳನ್ನು ಹಾಗೂ ಅಂತರಗಳನ್ನು ಬಿಟ್ಟುಬಿಡುವಲ್ಲಿ ಈ ಪ್ರಕ್ರಿಯೆ ನಮ್ಮ ನೆರವಿಗೆ ಬರುತ್ತದೆ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಗುಜರಾತ್	12	09	03	18
ಬೆಂಗಳೂರು	12	08	03	17
ಪಂಜಾಬ್	12	08	03	17
ಮುಂಬೈ	12	07	05	14
ಡೆಲ್ಲಿ	12	06	05	13
ಕೋಲ್ಕತ್ತಾ	13	05	06	12
ಲಖನೌ	12	05	07	10
ಹೈದರಾಬಾದ್	12	04	07	09
ರಾಜಸ್ಥಾನ್	14	04	10	08
ಚೆನ್ನೈ	13	03	10	06

ಇಂದಿನ ಪಂದ್ಯ

7.30 PM

ಮುಂಬೈ ಇಂಡಿಯನ್ಸ್ VS ಡೆಲ್ಲಿ ಕ್ಯಾಪಿಟಲ್ಸ್

ವಾಂಖೆಡೆ ಸ್ಟೇಡಿಯಂ ಮುಂಬೈ

ರಿಷಬ್ ಪಂತ್‌ಗೆ ಇನ್ನಷ್ಟು ಸಿದ್ಧತೆ ಅತ್ಯಗತ್ಯ

'ಲಖನೌ ಸೂಪರ್ ಜೈಂಟ್ಸ್ ತಂಡ ಮುಂದಿನ ಆವೃತ್ತಿಗೆ ಉತ್ತಮ ರೀತಿಯ ತಯಾರಿ ನಡೆಸಬೇಕೆಂದರೆ, ನಾಯಕನಾಗಿ ರಿಷಬ್ ಪಂತ್ ಯಾವ ಕ್ರಮಾಂಕದಲ್ಲಿ ಬ್ಯಾಟ್ ಮಾಡಬೇಕೆಂದು ಅವರೇ ದೃಢ ನಿರ್ಧಾರ ಮಾಡಬೇಕಾಗುತ್ತದೆ. ಬ್ಯಾಟಿಂಗ್ ಕ್ರಮಾಂಕ ಆಗಾಗ ಬದಲು ಮಾಡುವ ಬದಲು ಒಂದನೇ ಪಂದ್ಯದಿಂದ ಕೊನೆಯ ಪಂದ್ಯದವರೆಗೂ ಒಂದೇ ಕ್ರಮಾಂಕದಲ್ಲಿ ರಿಷಬ್ ಆಡುವುದು ಉತ್ತಮ. ಅದಕ್ಕೆ ತಕ್ಕಂತೆ ತಂಡವನ್ನೂ ಪುನರಚಿಸಬೇಕಾಗುತ್ತದೆ. ಕೆಲ ಪಂದ್ಯಗಳಲ್ಲಿ ಅವರು ಬ್ಯಾಟಿಂಗ್‌ಗೆ ಬಂದಿರಲಿಲ್ಲ ಹಾಗೂ ಇನ್ನುಳಿದ ಪಂದ್ಯಗಳಲ್ಲಿ ರಿಷಬ್ ನಾಯಕನಾಗಿ ಮಾತ್ರ ಕೆಲಸವನ್ನು ಮಾಡುತ್ತಿದ್ದರು, ಆ ಮೂಲಕ ನಾಯಕನಾಗಿ ತಮ್ಮ ಪಾತ್ರವೇನೆಂದು ಅವರಿಗೆ ಸ್ಪಷ್ಟವಾಗಿ ತಿಳಿಯುತ್ತಿರಲಿಲ್ಲ.

-ಮೊಹಮ್ಮದ್ ಕೈಫ್ ಟೀಮ್ ಇಂಡಿಯಾ ಮಾಜಿ ಆಟಗಾರ



ಸ್ಕೋರ್ ಬೋರ್ಡ್

ಚೆನ್ನೈ ಸೂಪರ್ ಕಿಂಗ್ಸ್ 187/8 (20 ಓವರ್)

ಚೆನ್ನೈ ಸೂಪರ್ ಕಿಂಗ್ಸ್		ರನ್	ಬಾಲ್
ಆಯುಷ್ ಮ್ಹಾತ್ರೆ	ಕಾಟ್ ▸ ಮಾಫಕಾ, ಬೌಲರ್ ▸ ದೇಶಪಾಂಡೆ	43	20
ಡಿ.ಕಾನ್ವೆ	ಕಾಟ್ ▸ ಪರಾಗ್, ಬೌಲರ್ ▸ ಯುಧ್ವೀರ್	10	8
ಯು.ಪಟೇಲ್	ಕಾಟ್ ▸ ಮಫಕಾ, ಬೌಲರ್ ▸ ಯುಧ್ವೀರ್	0	2
ಆರ್.ಅಶ್ವಿನ್	ಕಾಟ್ ▸ ಹೆಟ್ಮೆಯರ್, ಬೌಲರ್ ▸ ಹಸರಂಗ	13	8
ಜಡೇಜಾ	ಕಾಟ್ ▸ ಜುರೆಲ್, ಬೌಲರ್ ▸ ಯುಧ್ವೀರ್	1	5
ಬ್ರೆವಿಸ್	ಬೌಲ್ಡ್ ▸ ಬೌಲರ್-ಮಧ್ವಲ್	42	25
ಶಿವಂ ದುಬೆ	ಕಾಟ್ ▸ ಜೈಸ್ವಾಲ್, ಬೌಲರ್ ▸ ಮಧ್ವಲ್	39	32
ಎಂಎಸ್ ಧೋನಿ	ಕಾಟ್ ▸ ದೇಶಪಾಂಡೆ, ಬೌಲರ್ ▸ ಮಧ್ವಲ್	16	17
ಕಾಂಬೋಜ್	ನಾಟೌಟ್	5	3
ಎನ್.ಅಹ್ಮದ್	ನಾಟೌಟ್	2	1

ರಾಜಸ್ಥಾನ್ ರಾಯಲ್ಸ್	ಓವರ್	ರನ್	ವಿಕೆಟ್
ದೇಶಪಾಂಡೆ	4	33	1
ಯುಧ್ವೀರ್	4	47	3
ಮಫಕಾ	2	22	0
ಹಸರಂಗ	4	27	1
ಪರಾಗ್	2	26	0
ಮಧ್ವಲ್	4	29	3

ಚೆನ್ನೈ ಸೂಪರ್ ಕಿಂಗ್ಸ್	ಓವರ್	ರನ್	ವಿಕೆಟ್
ಕೆ.ಅಹ್ಮದ್	3	38	0
ಕಾಂಬೋಜ್	3	21	1
ಅಶ್ವಿನ್	4	41	2
ಎನ್.ಅಹ್ಮದ್	3	42	1
ಪಥಿರಾನ	2.1	22	0
ಜಡೇಜಾ	2	27	0

ರಾಜಸ್ಥಾನ್ ರಾಯಲ್ಸ್ 188/4 (17.1 ಓವರ್)

ರಾಜಸ್ಥಾನ್ ರಾಯಲ್ಸ್		ರನ್	ಬಾಲ್
ಜೈಸ್ವಾಲ್	ಬೌಲ್ಡ್-ಬೌಲರ್ ▸ ಕಾಂಬೋಜ್	36	19
ಸೂರ್ಯವಂಶಿ	ಕಾಟ್ ▸ ಜಡೇಜಾ, ಬೌಲರ್ ▸ ಅಶ್ವಿನ್	57	33
ಸಂಜು	ಕಾಟ್ ▸ ಬ್ರೆವಿಸ್, ಬೌಲರ್ ▸ ಅಶ್ವಿನ್	41	31
ಪರಾಗ್	ಬೌಲ್ಡ್ ▸ ಬೌಲರ್-ಎನ್.ಅಹ್ಮದ್	3	4
ಜುರೆಲ್	ನಾಟೌಟ್	31	12
ಹೆಟ್ಮೆಯರ್	ನಾಟೌಟ್	12	5

ಮತ್ತೆ ಮಿಂಚಿದ ವೈಭವ್ ಸೂರ್ಯವಂಶಿ | ಧೋನಿ ಪಡೆಗೆ ಸೋಲು

ರಾಜಸ್ಥಾನಕ್ಕೆ ಭರ್ಜರಿ ಜಯ

ದೆಹಲಿ: ಇಲ್ಲಿನ ಅರುಣ್ ಜೇಟ್ಲಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಮಂಗಳವಾರ ನಡೆದ ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ರಾಜಸ್ಥಾನ್ ರಾಯಲ್ಸ್ ತಂಡವು ಚೆನ್ನೈ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಧೋನಿ ಪಡೆ ನೀಡಿದ 188 ರನ್‌ಗಳ ಗುರಿಯನ್ನು ಬೆಂಬತ್ತಿದ ರಾಜಸ್ಥಾನ ತಂಡವು 17.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ಗೆಲುವನ್ನು ತನ್ನದನ್ನಾಗಿರಿಸಿತು. ರಾಜಸ್ಥಾನ ತಂಡದ ಪರ ಆರಂಭಿಕ ಆಟಗಾರ ವೈಭವ್ ಸೂರ್ಯವಂಶಿ 33 ಬಾಲ್‌ಗಳಲ್ಲಿ 57 ರನ್ ಗಳಿಸಿ ಮಿಂಚಿದರು. ಅವರ ಇನ್ನಿಂಗ್ಸ್‌ನಲ್ಲಿ 4 ಸಿಕ್ಸರ್ ಮತ್ತು 4 ಬೌಂಡರಿಗಳಿದ್ದವು. ಮತ್ತೋರ್ವ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ 19 ಬಾಲ್‌ಗಳಲ್ಲಿ 36 ರನ್ ಗಳಿಸಿ ಔಟ್ ಆದರು. ರಾಜಸ್ಥಾನ ತಂಡದ ನಾಯಕ ಸಂಜು ಸ್ಯಾಮ್ಸನ್ 31 ಬಾಲ್‌ಗಳಲ್ಲಿ 41 ರನ್ ಗಳಿಸಿ ಅಶ್ವಿನ್‌ಗೆ ವಿಕೆಟ್ ಒಪ್ಪಿಸಿದರು.

ರಿಯಾನ್ ಪರಾಗ್ ಕೇವಲ 3 ರನ್ ಗಳಿಸಿ ಪೆವಿಲಿಯನ್ ಸೇರಿದರೆ, ಧ್ರುವ್ ಜ್ಯೂರೆಲ್ 12 ಬಾಲ್‌ಗಳಲ್ಲಿ 31 ರನ್ ಗಳಿಸಿ ಮತ್ತು ಹೆಟ್ಮೆಯರ್ 5 ಬಾಲ್‌ಗಳಲ್ಲಿ 12 ರನ್ ಗಳಿಸಿ ಅಜೇಯರಾಗುಳಿದರು.

ಟಾಸ್ ಗೆದ್ದ ರಾಜಸ್ಥಾನ ತಂಡವು ಚೆನ್ನೈಯನ್ನು ಮೊದಲು ಬ್ಯಾಟಿಂಗ್‌ಗೆ ಇಳಿಸಿತು. ಚೆನ್ನೈ ತಂಡದ ಆರಂಭಿಕ ಆಟಗಾರ ಕಾನ್ವೆ 8 ಬಾಲ್‌ಗಳನ್ನು ಎದುರಿಸಿ 10 ರನ್ ಗಳಿಸಿ ತುಷಾರ್ ದೇಶಪಾಂಡೆಗೆ ತಮ್ಮ ವಿಕೆಟ್ ಒಪ್ಪಿಸಿದರು. ಆ ಬಳಿಕ ಬಂದ ಉರ್ವಿಲ್ ಪಟೇಲ್ ಕೇವಲ 2 ಬಾಲ್‌ಗಳನ್ನು ಎದುರಿಸಿದ ಯಾವುದೇ ರನ್ ಗಳಿಸದೆ ಯುಧ್ವೀರ್ ಸಿಂಗ್ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು.

ಆರಂಭಿಕ ಆಟಗಾರನಾಗಿ ಬಂದಿದ್ದ ಆಯುಷ್ ಮ್ಹಾತ್ರೆ 20 ಬಾಲ್‌ನಲ್ಲಿ 43 ರನ್ ಗಳಿಸಿ ಚೆನ್ನೈ ಪರ ಉತ್ತಮ ಬ್ಯಾಟಿಂಗ್ ಪ್ರದರ್ಶಿಸುವಲ್ಲಿ ಸಫಲರಾದರು. ಅವರ ಇನ್ನಿಂಗ್ಸ್‌ನಲ್ಲಿ 1 ಸಿಕ್ಸರ್ ಮತ್ತು 8 ಬೌಂಡರಿಗಳಿದ್ದವು. ಆ ನಂತರ ಕ್ರೀಸ್‌ಗೆ ಬಂದ ಆರ್. ಅಶ್ವಿನ್ 8 ಬಾಲ್‌ಗಳಲ್ಲಿ 13 ಗಳಿಸಿದ್ದ ವೇಳೆ ಹಸರಂಗ ಬೌಲಿಂಗ್‌ನಲ್ಲಿ ಹೆಟ್ಮೆಯರ್‌ಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು. ಜಡೇಜಾ ಕೇವಲ 5 ಬಾಲ್‌ಗಳನ್ನು ಎದುರಿಸಿ 1 ರನ್ ಗಳಿಸಿ ಯಧ್ವೀರ್ ಸಿಂಗ್ ಬೌಲಿಂಗ್‌ನಲ್ಲಿ ಧ್ರುವ್ ಜುರೆಲ್‌ಗೆ ಕ್ಯಾಚ್ ನೀಡಿ ಔಟ್ ಆದರು.

ಆ ಬಳಿಕ ಬಂದ ಡೆವಾಲ್ಡ್ ಬ್ರೇವಿಸ್ ಮತ್ತು ಶಿವಂ ದುಬೆ ಆಕರ್ಷಕ ಜತೆಯಾಟ ಪ್ರದರ್ಶಿಸಿ ಚೆನ್ನೈ ತಂಡವನ್ನು 150ರ ಗಡಿ ದಾಟಿಸುವಲ್ಲಿ ಯಶಸ್ವಿಯಾದರು. ಬ್ರೇವಿಸ್ 25 ಬಾಲ್‌ಗಳನ್ನು ಎದುರಿಸಿ 42 ರನ್ ಗಳಿಸಿ ತಮ್ಮ ವಿಕೆಟ್ ಕಳೆದುಕೊಂಡರು. ಶಿವಂ ದುಬೆ 32 ಬಾಲ್‌ಗಳನ್ನು ಎದುರಿಸಿ 39 ರನ್ ಗಳಿಸಿದರು. ಆ ಬಳಿಕ ಬಂದ ಚೆನ್ನೈ ತಂಡದ ನಾಯಕ ಎಂ.ಎಸ್. ಧೋನಿ 17 ಬಾಲ್‌ಗಳನ್ನು ಎದುರಿಸಿ ಕೇವಲ 16 ರನ್ ಗಳಿಸಿ ಆಕಾಶ್ ಮಧ್ವಲ್ ಬೌಲಿಂಗ್‌ನಲ್ಲಿ ತುಷಾರ್ ದೇಶಪಾಂಡೆಗೆ ಕ್ಯಾಚ್ ನೀಡಿ ಪೆವಿಲಿಯನ್‌ಗೆ ಮರಳಿದರು.

ಕೊನೆಯಲ್ಲಿ ಕಂಬೋಜ್ 5 ರನ್ ಮತ್ತು ನೂರ್ ಅಹಮ್ಮದ್ 2 ರನ್‌ಗಳನ್ನು ಪಡೆದು ಅಜೇಯರಾಗಿ ಉಳಿದರು.

ರಾಜಸ್ಥಾನ್ ರಾಯಲ್ಸ್ ತಂಡದ ಪರ ಯುಧ್ವೀರ್ ಸಿಂಗ್ ಮತ್ತು ಆಕಾಶ್ ಮಧ್ವಲ್ ತಲಾ 3 ವಿಕೆಟ್ ಹಾಗೂ ತುಷಾರ್ ದೇಶಪಾಂಡೆ, ಹಸರಂಗ ತಲಾ ಒಂದು ವಿಕೆಟ್ ಪಡೆದರು.

ಬೆಂಗಳೂರಿನ ಪಂದ್ಯ ಲಖನೌಗೆ ಸ್ಥಳಾಂತರ

ದೆಹಲಿ: ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಫೈನಲ್ ಪಂದ್ಯವನ್ನು ಜೂನ್ 3ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಸಲು ಬಿಸಿಸಿಐ ನಿರ್ಧರಿಸಿದೆ. ಕ್ವಾಲಿಫೈಯರ್-2 ಪಂದ್ಯಕ್ಕೂ ಅಹಮದಾಬಾದ್ ಆತಿಥ್ಯ ವಹಿಸಲಿದೆ.

ಬೆಂಗಳೂರಿನಲ್ಲಿ ಕಳೆದ ಮೂರು ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯ ಕಾರಣಕ್ಕೆ ಮೇ 23ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ಮತ್ತು ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ನಡುವಿನ ಪಂದ್ಯವನ್ನು ಲಖನೌನ ಏಕನಾ ಕ್ರಿಕೆಟ್ ಸ್ಟೇಡಿಯಂಗೆ ಸ್ಥಳಾಂತರಿಸಲಾಗಿದೆ.

ಮಳೆ ಸುರಿದ ಕಾರಣದಿಂದಾಗಿ ಈ ಹಿಂದೆ ಮೇ 17ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಿಗದಿಯಾಗಿದ್ದ ಕೆಕೆಆರ್-ಆರ್‌ಸಿಬಿ ನಡುವಿನ ಪಂದ್ಯ ರದ್ದಾಗಿತ್ತು.

ಕ್ವಾಲಿಫೈಯರ್-1 ಮತ್ತು ಎಲಿಮಿನೇಟರ್ ಪಂದ್ಯಗಳು ಪಂಜಾಬ್‌ನ ಮುಲ್ಲನಪುರ ಕ್ರೀಡಾಂಗಣದಲ್ಲಿ ಮೇ 29 ಮತ್ತು ಮೇ 30ರಂದು ನಡೆಯಲಿದೆ.

'ಹವಾಮಾನ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಐಪಿಎಲ್ ಆಡಳಿತ ಮಂಡಳಿಯು ಪ್ಲೇಆಫ್ ಪಂದ್ಯಗಳಿಗೆ ಹೊಸ ತಾಣಗಳನ್ನು ನಿಗದಿಪಡಿಸಿದೆ' ಎಂದು ಬಿಸಿಸಿಐ ಹೇಳಿಕೆಯಲ್ಲಿ ತಿಳಿಸಿದೆ. ಈಗಾಗಲೇ ಈ ಆವೃತ್ತಿಯಲ್ಲಿ 12 ಪಂದ್ಯಗಳನ್ನಾಡಿ 8ರಲ್ಲಿ ಗೆಲುವನ್ನು ಸಾಧಿಸಿರುವ ಆರ್‌ಸಿಬಿ ತಂಡವು ಇದೀಗ ಒಟ್ಟು 17 ಅಂಕಗಳೊಂದಿಗೆ ಪ್ಲೇ ಆಫ್ ಸ್ಥಾನವನ್ನು ಭದ್ರಪಡಿಸಿಕೊಂಡಿದೆ.

ಇಂದು ಹಾರ್ದಿಕ್ ಪಾಂಡ್ಯ-ಅಕ್ಷರ್ ಪಟೇಲ್ ಪಡೆಗಳ ನಡುವಿನ ಕದನ

ಮುಂಬೈಗೆ ಪ್ಲೇ ಆಫ್ ಖಚಿತಪಡಿಸುವ ತವಕ

ಡೆಲ್ಲಿ ತಂಡ
ಅಕ್ಷರ್ ಪಟೇಲ್ (ನಾಯಕ)
ಕೆ.ಎಲ್ ರಾಹುಲ್
ಕರುಣ್ ನಾಯರ್
ಅಭಿಷೇಕ್ ಪೊರೆಲ್
ಟ್ರಿಸ್ಟಿಯನ್ ಸ್ಟಬ್ಸ್
ಕುಲದೀಪ್ ಯಾದವ್
ಟಿ. ನಟರಾಜನ್
ಮಿಚೆಲ್ ಸ್ಟಾರ್ಕ್
ಸಮೀರ್ ರಿಜ್ವಿ
ಅಶುತೋಷ್ ಶರ್ಮಾ
ಫಾಫ್ ಡು ಪ್ಲೆಸಿಸ್
ಮುಖೇಶ್ ಕುಮಾರ್
ದರ್ಶನ್ ನಲ್ಕಂದೆ
ಮಾಧವ್ ತಿವಾರಿ

ಮುಂಬೈ ತಂಡ
ಹಾರ್ದಿಕ್ ಪಾಂಡ್ಯ (ನಾಯಕ)
ರೋಹಿತ್ ಶರ್ಮಾ
ವಿಲ್ ಜ್ಯಾಕ್ಸ್
ಸೂರ್ಯಕುಮಾರ್
ತಿಲಕ್ ವರ್ಮಾ
ನಮನ್ ಧಿರ್
ಮಿಚೆಲ್ ಸ್ಯಾಂಟ್ನರ್
ದೀಪಕ್ ಚಹರ್
ಟ್ರೆಂಟ್ ಬೌಲ್ಟ್
ಅಶ್ವಿನಿ ಕುಮಾರ್
ವಿಘ್ನೇಶ್ ಪುತ್ತೂರು
ರಿಯಾನ್ ರಿಕೆಲ್ಟನ್
ಸತ್ಯನಾರಾಯಣ ರಾಜು
ಅರ್ಜುನ್ ತೆಂಡೂಲ್ಕರ್

ಮುಂಬೈ: ಇಲ್ಲಿನ ವಾಂಖೆಡೆ ಸ್ಟೇಡಿ ಯಂನಲ್ಲಿ ಬುಧವಾರ ನಡೆಯಲಿರುವ ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಅತಿ ಥೇಯ ಮುಂಬೈ ವಿರುದ್ಧ ಡೆಲ್ಲಿ ತಂಡವು ಸೆಣಸಾಡಲಿದೆ. ಈಗಾಗಲೇ 14 ಅಂಕ ಗಳಿಸಿರುವ ಮುಂಬೈ ತಂಡವು ಈ ಪಂದ್ಯದಲ್ಲಿ ಗೆದ್ದರೆ ತನ್ನ ಪ್ಲೇ ಆಫ್ ಅವಕಾಶವನ್ನು ಖಚಿತಪಡಿಸುವ ಸಾಧ್ಯತೆ ಹೆಚ್ಚಿದೆ. ಡೆಲ್ಲಿ ಕ್ಯಾಪಿಟಲ್ಸ್ ತಂಡವು 13 ಅಂಕಗಳನ್ನು ಪಡೆದಿದ್ದು, ಪಂದ್ಯದಲ್ಲಿ ಮುಂಬೈಗೆ ತೀವ್ರ ಪೈಪೋಟಿ ಕೊಡುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ.

ಈ ಐಪಿಎಲ್ ಆವೃತ್ತಿಯ ಆರಂಭದ ಪಂದ್ಯದಲ್ಲಿ ಮುಂಬೈ ತಂಡವು ಚೆನ್ನೈ ವಿರುದ್ಧ ಮುಗ್ಗರಿಸಿತ್ತು, ಆ ನಂತರದ ಪಂದ್ಯದಲ್ಲೂ ಅದು ಗುಜರಾತ್ ವಿರುದ್ಧ ಪರಾಭವವನ್ನು ಅನುಭವಿಸಿತ್ತು. ಆದರೆ ಮುಂಬೈ ತಂಡವು ತನ್ನ ಮೂರನೇ ಪಂದ್ಯದಲ್ಲಿ ಕೋಲ್ಕತ್ತಾ ವಿರುದ್ಧ ಜಯ ಗಳಿಸಿತ್ತು. ನಾಲ್ಕನೇ ಪಂದ್ಯದಲ್ಲಿ ಲಖನೌ ವಿರುದ್ಧ ಮತ್ತು ಐದನೇ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧವೂ ಮುಂಬೈ ಸೋಲು ಅನುಭವಿಸಿತ್ತು.

ಆದರೆ ತನ್ನ ಏಳನೇ ಪಂದ್ಯದಿಂದಾಚೆಗೆ ಮುಂಬೈ ತಂಡವು ಪುಟಿದೆದ್ದು ಸ್ಥಿರ ಪ್ರದರ್ಶನ ನೀಡಲಾರಂಭಿಸಿತು. ಏಪ್ರಿಲ್-13ರಂದು ಡೆಲ್ಲಿ ವಿರುದ್ಧ, ಏಪ್ರಿಲ್-17ರಂದು ಹೈದರಾಬಾದ್ ವಿರುದ್ಧ, ಏಪ್ರಿಲ್-20ರಂದು ಚೆನ್ನೈ ವಿರುದ್ಧ, ಏಪ್ರಿಲ್-23ರಂದು ಮತ್ತೆ ಹೈದರಾಬಾದ್ ವಿರುದ್ಧ, ಏಪ್ರಿಲ್-27ರಂದು ಲಖನೌ ವಿರುದ್ಧ ಮತ್ತು ಮೇ-1ರಂದು ರಾಜಸ್ಥಾನ ವಿರುದ್ಧ ಜಯ ಗಳಿಸಿ ಅಂಕಪಟ್ಟಿಯಲ್ಲಿ 4ನೇ ಸ್ಥಾನ ತಲುಪಿದೆ. ಆದರೆ ಮೇ-6ರಂದು ನಡೆದ ಪಂದ್ಯದಲ್ಲಿ ಗುಜರಾತ್ ವಿರುದ್ಧ ಮುಂಬೈ ಪರಾಭವಗೊಂಡಿತ್ತು.

ಮುಂಬೈ ತಂಡವನ್ನು ಎದುರಿಸಲಿರುವ ಡೆಲ್ಲಿ ಕೂಡಾ ಹೇಗಾದರೂ ಪ್ಲೇ ಆಫ್ ಟಿಕೆಟ್ ಗಿಟ್ಟಿಸಿಕೊಳ್ಳಬೇಕೆಂಬ ಆಶಾವಾದ ದಲ್ಲಿದೆ. ಈ ಆವೃತ್ತಿಯ ಆರಂಭದ ನಾಲ್ಕು ಪಂದ್ಯಗಳಲ್ಲಿ ಸತತವಾಗಿ ಗೆದ್ದು ತನ್ನ ಸಾಮರ್ಥ್ಯವನ್ನು ಜಗಜ್ಜಾಹೀರು ಮಾಡಿತ್ತು. ಲಖನೌ, ಹೈದರಾಬಾದ್, ಚೆನ್ನೈ ಮತ್ತು ಆರ್‌ಸಿಬಿ ವಿರುದ್ಧದ ಆ ನಾಲ್ಕು ಗೆಲುವುಗಳು ಡೆಲ್ಲಿ ತಂಡಕ್ಕೆ ಆತ್ಮವಿಶ್ವಾಸ ತುಂಬಿತ್ತಾದರೂ, ಐದನೇ ಪಂದ್ಯದಲ್ಲಿ ಅದು ಮುಂಬೈ ಎದುರು ಪರಾಭವಗೊಂಡಿತ್ತು. ಆದರೆ ತನ್ನ ಆರನೇ ಪಂದ್ಯದಲ್ಲಿ ಅದು ರಾಜಸ್ಥಾನ ವಿರುದ್ಧ ಗೆಲುವು ಪಡೆಯಿತು.

ಬಳಿಕ ಮುಂದಿನ ಪಂದ್ಯದಲ್ಲಿ ಡೆಲ್ಲಿ ತಂಡವು ಗುಜರಾತ್ ಎದುರು ಸೋತರೂ, ಆ ನಂತರದ ಪಂದ್ಯದಲ್ಲಿ ಲಖನೌ ವಿರುದ್ಧ ಗೆದ್ದಿತು. ಆದರೆ ಕೊನೆಯ ನಾಲ್ಕು ಪಂದ್ಯಗಳಲ್ಲಿ ಡೆಲ್ಲಿ ತಂಡವು ಜಯ ದಾಖಲಿಸದೆ, ತನ್ನ ಪ್ಲೇ ಆಫ್ ಹಾದಿಯನ್ನು ಕಠಿಣವಾಗಿಸಿತು. ಏಪ್ರಿಲ್-27ರಂದು ಆರ್‌ಸಿಬಿ ವಿರುದ್ಧ, ಏಪ್ರಿಲ್-29ರಂದು ಕೋಲ್ಕತ್ತಾ ವಿರುದ್ಧ ಅದು ಸೋತಿತ್ತು. ಮೇ-5ರಂದು ಹೈದರಾಬಾದ್ ವಿರುದ್ಧದ ಪಂದ್ಯವು ಮಳೆಯಿಂದ ನಡೆಯದ ಕಾರಣ ಡೆಲ್ಲಿ ತಂಡವು ಆ ದಿನ ಕೇವಲ ಒಂದು ಅಂಕ ಗಳಿಸಿತ್ತು. ಮೇ-18ರಂದು ನಡೆದ ಪಂದ್ಯದಲ್ಲಿ ಗುಜರಾತ್ ವಿರುದ್ಧ ಗೆಲ್ಲಲಾರದೆ ಡೆಲ್ಲಿ ತಂಡವು ತೀವ್ರ ಮುಖಭಂಗ ಅನುಭವಿಸಿತ್ತು.

ಈಗಾಗಲೇ ಗುಜರಾತ್, ಆರ್‌ಸಿಬಿ ಮತ್ತು ಪಂಜಾಬ್ ತಂಡಗಳು ಪ್ಲೇ ಆಫ್ ತಲುಪಿರುವುದರಿಂದ ಮುಂಬೈ ಇಲ್ಲವೇ ಡೆಲ್ಲಿ ತಂಡಕ್ಕೆ ನಾಲ್ಕನೇ ತಂಡವಾಗಿ ಮುಂದಿನ ಹಂತ ಪ್ರವೇಶಿಸುವ ಉತ್ತಮ ಅವಕಾಶಗಳಿವೆ, ಆ ಕಾರಣಕ್ಕಾಗಿ ಬುಧವಾರ ನಡೆಯಲಿರುವ ಪಂದ್ಯವು ಎರಡೂ ತಂಡಗಳ ಪಾಲಿಗೆ ನಿರ್ಣಾಯಕವೆನಿಸಿಲಿದೆ.

ವಿಟಾಕೀಸ್

ಗೌರಿಶ್ರೀಯ ಆಕ್ರೋಶ

ಕಿರುಚಿತ್ರ ಎಂಬುದು ಅನೇಕ ಪ್ರತಿಭಾವಂತರ ಪ್ರದರ್ಶನಕ್ಕೆ ಉತ್ತಮ ವೇದಿಕೆ. ಅದರಲ್ಲಿ ಅಭಿನಯಿಸಿ ಸೈ ಎನಿಸಿಕೊಂಡವರು ಹಿರಿತೆರೆಯ ಮೇಲೆ ಲೀಲಾಜಾಲವಾಗಿ ಅಭಿನಯಿಸುತ್ತಾರೆ. ಯಶ್ವಂತ್ ಎಂಬ ಯುವನಟ, ಗೌರಿಶ್ರೀ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ 30 ನಿಮಿಷಗಳ ಆಕ್ಟ ಕಿರುಚಿತ್ರದಲ್ಲಿ ನಟಿಸುವ ಮೂಲಕ ಅಭಿನಯ ಆರಂಭಿಸಿದ್ದಾರೆ.

ಜಗದೀಶ್ ವರ್ಮ ನಿರ್ಮಾಣದ ಈ ಕಿರುಚಿತ್ರ ಪ್ರೇಕ್ಷಕರ ಮನಸೂರೆಗೊಂಡಿದೆ. ಹಿರಿಯ ನಿರ್ದೇಶಕರಾದ ಓಂಸಾಯಿಪ್ರಕಾಶ್ ಪುರುಷೋತ್ತಮ್ ಓಂಕಾರ್, ರತ್ನಮಾಲ ಮುಂತಾದವರು ಮುಖ್ಯ ಅ ಆಗಮಿಸಿ ಕಿರುಚಿತ್ರಕ್ಕೆ ಶುಭಕೋರಿದರು.

ನನಗೆ ರತ್ನಮಾಲ ಅವರ ಮೂಲಕ ನಿರ್ಮಾಪಕ ಜಗದೀಶ್ ವರ್ಮ ಪರಿಚಯವಾದರು. ನನ್ನ ಮಗ ಯಶ್ವಂತ್ ನನ್ನು ನಾಯಕನಾಗಿ ಚಿತ್ರರಂಗ ಪ್ರವೇಶ ಮಾಡಿಸಬೇಕೆಂದುಕೊಂಡಿದ್ದೇವೆ. ಹಾಗಾಗಿ ಒಂದು ಸಿನಿಮಾ ಮಾಡೋಣ ಎಂದರು. ನಾನು ಮೊದಲು ಕಿರುಚಿತ್ರ ಮಾಡೋಣ. ಹೊಸ ಹುಡುಗ ಮೊದಲು ನಟನೆ ಕಲಿಯಲಿ. ಆನಂತರ ಸಿನಿಮಾ ಮಾಡೋಣ ಅಂತ ಹೇಳಿದೆ. ಹಾಗಾಗಿ ಮೊದಲು ಕಿರುಚಿತ್ರ ಮಾಡಿದ್ದೇವೆ. ನಾನು ಇದಕ್ಕೂ ಮೊದಲು ಅಮೂಲ್ಯ, ರೀತು,ಜನರಕ್ಷಕ, ಭಾರತಿ ಐಪಿಎಸ್ ಚಿತ್ರಗಳನ್ನು ನಿರ್ದೇಶಿಸಿದ್ದೇನೆ. ಅದರಲ್ಲಿ ಅಮೂಲ್ಯಾ ಹಾಗೂ ಜನರಕ್ಷಕ ಚಿತ್ರಗಳು ತೆರೆಗೆ ಬರಲು ಸಿದ್ಧವಾಗಿದೆ. ಇನ್ನೂ ಆಕ್ರೋಶ ಕಿರುಚಿತ್ರದ ಕಥೆ ಒಂದೇ ದಿನದಲ್ಲಿ ಸಿದ್ಧವಾಯಿತು. ಎರಡೇ ದಿನದಲ್ಲಿ ಚಿತ್ರೀಕರಣ ಕೂಡ ಮಾಡಲಾಯಿತು. ನೂತನ ಪ್ರತಿಭೆ ಯಶ್ವಂತ್ ಈ ಕಿರುಚಿತ್ರದಲ್ಲಿ ಕನ್ನಡ ಕಲಿತು ಅಭಿಯಿಸಿದ್ದಾರೆ. ಸದ್ಯದಲ್ಲೇ ಇವರೆ ನಾಯಕನಾಗಿ ನಟಿಸಲಿರುವ ಹೊಸ ಚಿತ್ರ ಕೂಡ ಆರಂಭವಾಗಲಿದೆ. ಅದಕ್ಕೆ ನಾಂದಿಯಾಗಿ ಈ ಕಿರುಚಿತ್ರ ನಿರ್ಮಾಣವಾಗಿದೆ. ರಾಜಾರವಿ ಛಾಯಾಗ್ರಹಣ, ವಿನು ಮನಸು ಸಂಗೀತ ನಿರ್ದೇಶನ, ಶಿವರಾಜ್ ಮೇಹು ಸಂಕಲನವಿರುವ ಈ ಚಿತ್ರದ ತಾರಾಬಳಗದಲ್ಲಿ ಯಶ್ವಂತ್, ಗುರುರಾಜ್ ಹೊಸಕೋಟೆ, ಭಾಗ್ಯ, ಪ್ರವಲ್ಲಿಕ, ಪ್ರೇಮ ಮಾಲೂರ್ ಮುಂತಾದವರಿದ್ದಾರೆ. ನಾನು ಕೂಡ ಅಭಿನಯಿಸಿದ್ದೇನೆ ಎಂದು ನಿರ್ದೇಶಕಿ ಗೌರಿಶ್ರೀ ತಿಳಿಸಿದರು.

ಆಕ್ರೋಶ ನನ್ನ ಮೊದಲ ಪ್ರಯತ್ನ. ಮುಂದೆ ದೊಡ್ಡಪರದೆಯ ಮೇಲೂ ಅಭಿನಯಿಸಲಿದ್ದೇನೆ. ನಿಮ್ಮೆಲ್ಲರ ಪ್ರೋತ್ಸಾಹವಿರಲಿ ಎಂದರು ನಟ ಯಶ್ವಂಸ್.

ನಿದ್ರಾದೇವಿ ದುನಿಯಾ ವಿಜಯ್ ಸಾಥ್

ಈ ವರ್ಷದ ಬಹುನಿರೀಕ್ಷಿತ ಕನ್ನಡ ಸಿನಿಮಾಗಳಲ್ಲಿ ಒಂದು ನಿದ್ರಾದೇವಿ ನೆಕ್ಸ್ಟ್ ಕೂಡ ಸಿನಿಮಾ ಕೂಡ ಒಂದು. ಈಗಾಗಲೇ ಟೀಸರ್ ಮೂಲಕ ಗಮನಸೆಳೆದ ಈ ಚಿತ್ರದ ಮೊದಲ ಹಾಡು ರಿಲೀಸ್ ಆಗಿದೆ. ದುನಿಯಾ ವಿಜಯ್ ಕುಮಾರ್ ಸ್ಲಿಪ್ ಲೆಸ್ ಆಂಥೆಮ್ ಬಿಡುಗಡೆ ಮಾಡಿ ಇಡೀ ತಂಡಕ್ಕೆ ಶುಭಾಶಯ ತಿಳಿಸಿದರು. ಪ್ರವೀರ್ ಶೆಟ್ಟಿ ನಾಯಕನಾಗಿ ನಟಿಸಿರುವ ಈ ಚಿತ್ರಕ್ಕೆ ಸುರಾಗ್ ಸಾಗರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ದುನಿಯಾ ವಿಜಯ್ ಕುಮಾರ್ ಮಾತನಾಡಿ, ಸಾಂಗ್ ತುಂಬಾ ಚೆನ್ನಾಗಿದೆ. ಹೀರೋ ಕೂಡ ಮುದ್ದಾಗಿ ಕಾಣಿಸುತ್ತಾರೆ. ಹೀರೋಯಿನ್ ಕೂಡ ಚೆನ್ನಾಗಿ ಕಾಣಿಸುತ್ತಾರೆ. ಪ್ರವೀರ್ ಡ್ಯಾನ್ಸ್ ಎನರ್ಜಿ ನೋಡಿ ಖುಷಿಯಾಯ್ತು. ಇಡೀ ತಂಡಕ್ಕೆ ಒಳ್ಳೆಯದಾಗಲಿ ಎಂದ ಅವರು, ಹಾಡಿನ ಸಾಹಿತ್ಯವನ್ನು ಕೇಳಿ ಇಂಡಸ್ಟ್ರಿಯಲ್ಲಿ ನಡೆಯುವ ಸಮಸ್ಯೆಗಳಿಗೆ ಫನ್ನಿಂಗ್ ಯಾಗಿ ಹೋಲಿಕೆ ಮಾಡಿದರು. ಲಿರಿಕ್ಸ್ ತುಂಬಾ ಇಂಟ್ರೆಸ್ಟಿಂಗ್ ಆಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಟ ಪ್ರವೀರ್ ಶೆಟ್ಟಿ ಮಾತನಾಡಿ, ಈ ದಿನಕ್ಕೆ ಬಹಳ ದಿನದಿಂದ ಕಾಯುತ್ತಿದ್ದೆ. ಸಾಂಗ್ ಬಿಡುಗಡೆಯಾಗಿದೆ. ಈ ಸಾಂಗ್ ಹಿಂದೆ ತುಂಬಾ ಜನ ಕಷ್ಟಪಟ್ಟಿದ್ದಾರೆ. ಡೈರೆಕ್ಟರ್, ಅವರ ಪತ್ನಿ, ನಕುಲ್, ಗುಬ್ಬಿ ಎಲ್ಲರೂ ಒಟ್ಟಿಗೆ ಸೇರಿ ಹಾಡು ಮಾಡಿದ್ದಾರೆ. ತಾರಕ್ ಮಾಸ್ಟರ್ ತುಂಬಾ ಚೆನ್ನಾಗಿ ಕೊರಿಯೋಗ್ರಫಿ ಮಾಡಿದ್ದಾರೆ ಎಂದು ಹೇಳಿದರು.

ನಿರ್ಮಾಪಕ ಜಯರಾಮ್ ಮಾತನಾಡಿ, ನಾನು ಲಕ್ಕಿ. ನಾನು ಸಿನಿಮಾ ಮಾಡುವುದು, ಅದನ್ನು ಸಪೋರ್ಟ್ ಮಾಡುವುದು ಒಂದು ಕಡೆಯಾದರೆ, ಸಿನಿಮಾ ಮಾಡಿ ಆದಮೇಲೆ ನಿಜವಾದ ಜರ್ನಿ ಶುರುವಾಗುವುದು. ನಾನು ಈಗ ಆ ಜರ್ನಿ ನೋಡುತ್ತಿದ್ದೇನೆ. ಇದನ್ನು ಜನರಿಗೆ ತಲುಪಿಸುವುದು ಕಷ್ಟ ಅನ್ನುವುದು ಅರಿವಾಗುತ್ತಿದೆ. ಪ್ರತಿ ಹೆಜ್ಜೆಯಲ್ಲಿ ದೊಡ್ಡ ದೊಡ್ಡ ಹೀರೋಗಳು ಸಾಥ್ ಕೊಟ್ಟಿದ್ದಾರೆ. ಹೊಸ ಪ್ರೊಡಕ್ಷನ್ ಹೌಸ್ ಆದರೂ ಬಹಳ ಸಪೋರ್ಟ್ ಸಿಕ್ಕಿದೆ. ಸಿನಿಮಾ ಬಹಳ ಚೆನ್ನಾಗಿ ಬಂದಿದೆ. ಇಡೀ ಸ್ಟಾರ್ ಕಾಸ್ಟ್ ಅದ್ಭುತವಾಗಿ ನಟಿಸಿದ್ದಾರೆ ಎಂದರು.

ನಿರ್ದೇಶಕ ಸುರಾಗ್ ಮಾತನಾಡಿ, ಕಷ್ಟಪಟ್ಟು ಮಾಡಿದ ಸಾಂಗ್ ದೊಡ್ಡ ಸ್ಕ್ರೀನ್ ಮೇಲೆ ನೋಡಲು ಖುಷಿಯಾಯ್ತು. ದುನಿಯಾ ವಿಜಯ್ ಸರ್ ಸಾಂಗ್ ರಿಲೀಸ್ ಮಾಡಿ ಕೊಟ್ಟಿದ್ದಕ್ಕೆ ಧನ್ಯವಾದಗಳು. ನಮ್ಮ ವಿಷನ್ ಗೆ ಸಪೋರ್ಟ್ ಕೊಟ್ಟಿರುವುದು ನಮ್ಮ ಪ್ರೊಡ್ಯೂಸರ್ ಸರ್. ಈ ಸಾಂಗ್ ನಲ್ಲಿ ಪ್ರವೀರ್ ತುಂಬಾ ಕಷ್ಟಪಟ್ಟು ಡ್ಯಾನ್ ಮಾಡಿದ್ದಾರೆ. ಕಾಲು ಕ್ರ್ಯಾಂಪ್ ಆಗಿದ್ದರೂ ಕೂಡ ಬೇಕಿಂಗ್ ಸೋಡಾ ತೆಗೆದುಕೊಂಡು 16 ಗಂಟೆ ಬ್ಯಾಕ್ ಟು ಬ್ಯಾಕ್ ಡ್ಯಾನ್ ಮಾಡಿದ್ದಾರೆ ಎಂದರು.

ಪ್ರವೀರ್ ಭರ್ಜರಿ ಡ್ಯಾನ್ಸ್

ನಿದ್ರಾದೇವಿ ನೆಕ್ಸ್ಟ್ ಡೋರ್ ಸಿನಿಮಾದ ಸ್ಲಿಪ್ ಲೆಸ್ ಆಂಥೆಮ್ ಸಾಂಗ್ ನಲ್ಲಿ ಪ್ರವೀರ್ ಶೆಟ್ಟಿ ಸಖತ್ ಸ್ಟೆಪ್ ಹಾಕಿದ್ದಾರೆ. ನಿದ್ದೆ ಬಾರದ ವ್ಯಕ್ತಿಯ ಪಾಡನ್ನು ವಿವರಿಸುವ ಹಾಡಿಗೆ ಗುಬ್ಬಿ ಮತ್ತು ಸೈಫ್ ಖಾನ್ ಸಾಹಿತ್ಯ ಬರೆದಿದ್ದು, ಧ್ವನಿಯಾಗಿದ್ದಾರೆ. ರ್‍ಯಾಪ್ ಶೈಲಿ ರೀತಿ ಮೂಡಿಬಂದಿರುವ ಗೀತೆಗೆ ನಕುಲ್ ಅಭಯಂಕರ್ ಟ್ಯೂನ್ ಹಾಕಿದ್ದಾರೆ. ಈ ಹಾಡಿನಲ್ಲಿ ಪ್ರವೀರ್ ಅಭಿನಯ ನೋಡಿದ್ರೆ ಅವರು ಚಿತ್ರರಂಗದ ರೈಸಿಂಗ್ ಸ್ಟಾರ್ ಆಗಿ ಕಾಣಿಸಿಕೊಂಡಿದ್ದಾರೆ.

ಪ್ರವೀರ್ ಶೆಟ್ಟಿ ರಿಷಿಕಾ ನಾಯಕ್ ಜೋಡಿಯಾಗಿ ಸಾಥ್ ಕೊಟ್ಟಿದ್ದಾರೆ. ಬಿಗ್ ಬಾಸ್ ಖ್ಯಾತಿಯ ಶೈನ್ ಶೆಟ್ಟಿ ಹಾಗು ಶ್ರುತಿ ಹರಿಹರನ್, ಹಿರಿಯ ನಟ ಕೆ.ಎಸ್.ಶ್ರೀಧರ್, ಸುಧಾರಾಣಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಶ್ರೀವತ್ಸ, ಅನೂಪ್, ಐಶ್ವರ್ಯ ಗೌಡ , ಮಾಸ್ಟರ್ ಸುಜಯ್ ರಾಮ್, ಕಾರ್ತಿಕ್ ಪತ್ತಾರ್ ಮತ್ತು ಅನುರಾಗ್ ಪಾಟೀಲ್ ಸೇರಿದಂತೆ ಇತರರು ತಾರಾಬಳಗದಲ್ಲಿದ್ದಾರೆ. ಸುರಾಗ್ ಅವರಿಗೆ ಅವರ ಪತ್ನಿ ಸಹನಾ ಸಹ ನಿರ್ದೇಶಕರಾಗಿ ಈ ಹಾಡಿಗೆ ಸಾಥ್ ಕೊಟ್ಟಿದ್ದಾರೆ. ಭರತ್ ಪರಶುರಾಮ್ ಸ್ಲಿಪ್ ಲೆಸ್ ಆಂಥೆಮ್ ಸಾಂಗ್ ಹಾಡಿಗೆ ಕ್ಯಾಮೆರಾ ಹಾಡಿದ್ದಾರೆ.

ನಿರ್ಮಾಪಕರಾದ ಜಯರಾಮ್ ದೇವಸಮುದ್ರ ರವರು ತಮ್ಮ ಸುರಮ್ ಮೂವೀಸ್ ಬ್ಯಾನರ್ನಡಿಯಲ್ಲಿ ನಿರ್ಮಿಸಿದು, ಈ ಹಿಂದೆ ಇದೇ ಸಂಸ್ಥೆಯಲ್ಲಿ ರೇವ್ ಪಾರ್ಟಿ ಮತ್ತು ಎಂಗೇಜ್ಮೆಂಟ್ ಚಿತ್ರಗಳನ್ನು ನಿರ್ಮಾಣ ಮಾಡಿದ್ದಾರೆ. ನಿದ್ರಾದೇವಿ ಚಿತ್ರವೂ, ಅವರ ಬ್ಯಾನರ್ನಲ್ಲಿ ಬರುತಿರುವ ಒಂದು ವಿಭಿನ್ನ ಚಿತ್ರ. ಈ ಸಿನಿಮಾಗೆ ನಕುಲ್ ಅಭ್ಯಂಕರ್ ಅವರ ಸಂಗೀತ, ಅಜಯ್ ಕುಲಕರ್ಣಿ ಛಾಯಾಗ್ರಹಣ, ಉಲಾಸ್ ಹೈದೂರ್ ಅವರ ಪ್ರೊಡಕ್ಷನ್ ಡಿಸೈನ್, ಅರ್ಜುನ್ ರಾಜ್ ಅವರ ಸಾಹಸ ನಿರ್ದೇಶನ ಮತ್ತು ಹೇಮಂತ್ ಕುಮಾರ್ ಡಿ ಅವರ ಸಂಕಲನವಿದೆ.



ಸಾಂಸ್ಕೃತಿಕ ನಗರಿಯಲ್ಲಿ ಸನ್ ಆಫ್ ಮುತ್ತಣ್ಣ

ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿರುವ ಪುರಾತನ ಫಿಲಂಸ್ ನಿರ್ಮಾಣದ, ಶ್ರೀಕಾಂತ್ ಹುಣಸೂರು ನಿರ್ದೇಶನದ ಹಾಗೂ ಡೈನಾಮಿಕ್ ಸ್ಟಾರ್ ದೇವರಾಜ್ ಅವರ ದ್ವಿತೀಯ ಪುತ್ರ ಪ್ರಣಂ ದೇವರಾಜ್ ನಾಯಕನಾಗಿ ನಟಿಸಿರುವ ಸನ್ ಆಫ್ ಮುತ್ತಣ್ಣ ಚಿತ್ರಕ್ಕಾಗಿ ಗೀತರಚನೆಕಾರ ಯೋಗರಾಜ್ ಭಟ್ ಬರೆದಿರುವ ಕಮ್ಮಂಗಿ ನನ್ ಮಗನೇ .. ಎಂಬ ಹಾಡು ಸಾಂಸ್ಕೃತಿಕ ನಗರಿ ಮೈಸೂರಿನ ಮಾಲ್ ಆಫ್ ಮೈಸೂರಿನಲ್ಲಿ ಸಾವಿರಾರು ಜನರ ಸಮ್ಮುಖದಲ್ಲಿ ಅದ್ದೂರಿಯಾಗಿ ನೆರವೇರಿತು. ಖ್ಯಾತ ನಟ ಶರಣ್ ಹಾಗೂ ಹೆಸರಾಂತ ಸಂಗೀತ ನಿರ್ದೇಶಕ ವಿ.ಹರಿಕೃಷ್ಣ ಈ ಹಾಡನ್ನು ಅದ್ಭುತವಾಗಿ ಹಾಡಿದ್ದಾರೆ. ನಟ ಶರಣ್ ಹಾಗೂ ನಿರ್ದೇಶಕ ಪವನ್ ಒಡೆಯರ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ನನ್ನ ನೆಚ್ಚಿನ ಊರಿನಲ್ಲಿ ನಾನು ಹಾಡಿರುವ ಹಾಡಿನ ಬಿಡುಗಡೆಯಾಗಿದ್ದು ಖುಷಿಯಾಗಿದೆ. ಯೋಗರಾಜ್ ಭಟ್ ಅವರು ಬರೆದಿರುವ ಈ ಹಾಡಿಗೆ ವಿ. ಹರಿಕೃಷ್ಣ ಅವರು ಸಹ ಧ್ವನಿಯಾಗಿರುವುದು ಖುಷಿಯಾಗಿದೆ. ಸಚಿನ್ ಬಸ್ರೂರ್ ಸಂಗೀತ ಕೂಡ ಸೊಗಸಾಗಿದೆ. ಪುರಾತನ ಫಿಲಂಸ್ ನಿರ್ಮಾಣದಲ್ಲಿ, ಶ್ರೀಕಾಂತ್ ಹುಣಸೂರ್ ನಿರ್ದೇಶನದಲ್ಲಿ ಹಾಗೂ ಪ್ರಣಂ ದೇವರಾಜ್ ಮತ್ತು ರಂಗಾಯಣ ರಘು ಅವರ ಕಾಂಬಿನೇಶನ್ ನಲ್ಲಿ ಮೂಡಿಬಂದಿರುವ ಈ ಚಿತ್ರ ಭರ್ಜರಿ ಯಶಸ್ಸು ಕಾಣಲಿ ಎಂದು ಶರಣ್ ಹಾರೈಸಿದರು.

ನಮ್ಮ ಚಿತ್ರದ ಚಿತ್ರೀಕರಣ ಮೈಸೂರಿನಲ್ಲೇ ಆಗಬೇಕಿತ್ತು. ಅದು ಆಗಲಿಲ್ಲ. ಆದರೆ ನಮ್ಮಿಷ್ಟದ ಮೈಸೂರು ನಮ್ಮನ್ನು ಬಿಡುವುದಿಲ್ಲ. ನಮ್ಮ ಚಿತ್ರದ ಮೊದಲ ಹಾಡು ಮೈಸೂರಿನಲ್ಲೇ ಬಿಡುಗಡೆಯಾಗಿದೆ. ಯೋಗರಾಜ್ ಭಟ್ ಅವರ ಸಾಹಿತ್ಯ, ಶರಣ್ ಹಾಗೂ ಹರಿಕೃಷ್ಣ ಅವರ ಗಾಯನ ಅದ್ಭುತವಾಗಿದೆ. ನಿಮ್ಮೆಲ್ಲರ ಪ್ರೋತ್ಸಾಹ ಸದಾ ಇರಲಿ ಎಂದರು ನಟ ಪ್ರಣಂ ದೇವರಾಜ್.

ನಾನು ಹುಟ್ಟಿ ಬೆಳೆದಿದ್ದು ಮೈಸೂರಿನಲ್ಲಿ. ನನ್ನೂರಿನಲ್ಲಿ ನನ್ನ ನಿರ್ದೇಶನದ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದ್ದು ಸಂತಸ ತಂದಿದೆ ಎಂದು ನಿರ್ದೇಶಕ ಶ್ರೀಕಾಂತ್ ಹುಣಸೂರು ತಿಳಿಸಿದರು.

ಮೈಸೂರಿಗೂ ಕನ್ನಡ ಚಿತ್ರರಂಗಕ್ಕೆ ಅವಿನಾಭಾವ ಸಂಬಂಧವಿದೆ. ಅಂತಹ ಈ ಊರಿನಲ್ಲಿ ಸನ್ ಆಫ್ ದೇವಣ್ಣ ಪುತ್ರ ಪ್ರಣಂ ದೇವರಾಜ್ ಅಭಿನಯದ ಮುತ್ತಣ್ಣ ಚಿತ್ರದ ಹಾಡು ಬಿಡುಗಡೆಯಾಗಿದೆ. ಹಾಡು ಚೆನ್ನಾಗಿದೆ. ನಾನು ಹಾಗೂ ಪ್ರಣಂ ಈ ಚಿತ್ರದಲ್ಲಿ ಅಪ್ಪ - ಮಗನಾಗಿ ನಟಿಸಿದ್ದೇವೆ ಎಂದು ನಟ ರಂಗಾಯಣ ರಘು ತಿಳಿಸಿದರು. ಸಂಗೀತ ನಿರ್ದೇಶಕ ಸಚಿನ್ ಬಸ್ರೂರ್ ಹಾಗೂ ಚಿತ್ರಕ್ಕೆ ಸಂಗೀತ ಸಂಯೋಜಿಸಿದ್ದಾರೆ.

ಈ ಚಿತ್ರವನ್ನು ಪುರಾತನ ಫಿಲಂಸ್ ನಿರ್ಮಾಣ ಮಾಡಿರುತ್ತಾರೆ ಇವರಿಗೆ ಎಸ್ ಆರ್ ಕೆ ಫಿಲಂಸ್ ಸಾಥ್ ನೀಡಿದೆ. ಪ್ರಣಂ ದೇವರಾಜ್ ಅವರಿಗೆ ನಾಯಕಿಯಾಗಿ ದಿಯಾ ಖ್ಯಾತಿಯ ಖುಷಿ ರವಿ ಅಭಿನಯಿಸಿದ್ದಾರೆ. ರಂಗಾಯಣ ರಘು ನಾಯಕನ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸುಚೇಂದ್ರ ಪ್ರಸಾದ್, ಗಿರೀಶ್ ಶಿವಣ್ಣ, ತಬಲ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ, ಅರುಣ್ ಚಕ್ರವರ್ತಿ, ಸಂದೀಪ ಎಂ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸಚಿನ್ ಬಸ್ರೂರು ಸಂಗೀತವಿರುವ ಸನ್ ಆಫ್ ಮುತ್ತಣ್ಣ ಸಿನಿಮಾದ ಹಾಡುಗಳನ್ನು ಯೋಗರಾಜ್ ಭಟ್, ಜಯಂತ್ ಕಾಯ್ಕಿಣಿ, ಪ್ರಮೋದ್ ಮರವಂತೆ ಬರೆದಿದ್ದಾರೆ. ಸ್ಕೇಟಿಂಗ್ ಕೃಷ್ಣ ಛಾಯಾಗ್ರಹಣ ಹಾಗೂ ಹರೀಶ್ ಕೊಮ್ಮೆ ಸಂಕಲನ ಬಹು ನಿರೀಕ್ಷಿತ ಈ ಚಿತ್ರಕ್ಕಿದೆ.